BROWN BOOK

TIGHT BINDING

UNIVERSAL LIBRARY
OU_200079
UNIVERSAL LIBRARY

# ಆಶೀರ್ವಾದ

( ಕಾದಂಬರಿ )

ಅ. ನ. ಕೃ

ಸ್ಟ್ಯಾಂಡರ್ಡ್ ಬುಕ್ ಡಿಪೋ
ಅವೆನ್ಯೂ ರೋಡ್, ಬೆಂಗಳೂರು

ಮೊದಲನೆಯ ಮುದ್ರಣ: ಮಾರ್ಚಿ ೧೯೫೫

ಎರಡನೆಯ ಮುದ್ರಣ: ಆಗಸ್ಟ್ ೧೯೫೫

[All Rights Reserved by the Autho

ಬೆಲೆ: ರೂ. ೧-೮-೦

ಮುದ್ರಣ:

ಶ್ರೀ ಸತ್ಯನಾರಾಯಣ ಪ್ರೆಸ್

ಸಿ-೬೬, ಅರಳೇಪೇಟೆ — ಬೆಂಗಳೂರು-೨



ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ
ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ
ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರಧ್ಯಾನ ಧಾರಣ
ಸಮಾಧ್ಯಷ್ಟಾಂಗ ಯೋಗಾನುಷ್ಠಾನ ನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ
ಗುರುಪರಂಪರಾಪ್ರಾಪ್ತ ಷಡ್ದರ್ಶನ ಸ್ಥಾಪನಾಚಾರ್ಯ
ವ್ಯಾಖ್ಯಾನ ಸಿಂಹಾಸನಾಧೀಶ್ವರ
ಸಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ ಪ್ರತಿಪಾದಕ
ವೈದಿಕಮಾರ್ಗ ಪ್ರವರ್ತಕ
ಸರ್ವತಂತ್ರ ಸ್ವತಂತ್ರಾದಿ ರಾಜಧಾನೀ ವಿದ್ಯಾನಗರ ಮಹಾರಾಜಧಾನೀ
ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯವರ್ಯ
ರಾಜಾಧಿರಾಜ ಗುರುಭೂಮಂಡಲಾಚಾರ್ಯ
ಋಷ್ಯಶೃಂಗ ಪುರವರಾಧೀಶ್ವರ
ತುಂಗಭದ್ರಾತೀರವಾಸಿ
ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀಮಜ್ಜಗದ್ಗುರು ಸಚ್ಚಿದಾನಂದ
ಶಿವಾಭಿನವ ನೃಸಿಂಹಭಾರತೀಸ್ವಾಮಿ ಕರಕಮಲಸಂಜಾತ

**ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ**
ದಿವ್ಯಸ್ಮೃತಿಗೆ
**'ಆಶೀರ್ವಾದ' 'ಅನುಗ್ರಹ'** ಕಾದಂಬರಿಗಳನ್ನು
ಭಕ್ತಿಪೂರ್ವಕವಾಗಿ ಅರ್ಪಿಸುತ್ತೇನೆ.

**ಅ. ನ. ಕೃ**

# ದ್ವಿತೀಯ ಮುದ್ರಣದ ಮುನ್ನುಡಿ

**'ಆಶೀರ್ವಾದ'** ಪ್ರಕಟವಾದ ಐದುತಿಂಗಳಲ್ಲಿ ಪ್ರತಿಗಳು ಮುಗಿದ ಈಗ ಎರಡನೆಯ ಮುದ್ರಣವಾಗುತ್ತಿರುವುದು ಸಂತೋಷದ ವಿಷಯ.

ಭಾರತೀಯ ಧರ್ಮತತ್ತ್ವಗಳು, ಜೀವನಕ್ರಮದಲ್ಲಿ ಭಾರತೀಯರಿಗೇ ನಂಬಿಕೆ, ಶ್ರದ್ಧೆ ಕ್ಷಯಿಸುತ್ತಿರುವಾಗ ಅದನ್ನೇ ಪ್ರತಿಪಾದಿಸುವ **'ಆಶೀರ್ವಾದ'** ಕಾದಂಬರಿಗೆ ದೊರೆತ ಸ್ವಾಗತ ಗಮನಾರ್ಹವಾದುದಾಗಿದೆ.

ಭಾರತೀಯ ಸಂಸ್ಕೃತಿ ಕೇವಲ ಕೌತುಕಕಾರಿಯಾದ ಪ್ರಯೋಗವಾಗಿರದೆ ಅಮರಜೀವವಾಹಿನಿ ಎಂಬ ನಿತ್ಯಸತ್ಯವನ್ನೇ ನಾನು **'ಆಶೀರ್ವಾದ'-'ಅನುಗ್ರಹ'** ಎರಡು ಕಾದಂಬರಿಗಳಲ್ಲಿಯೂ ಚಿತ್ರಿಸಲೆತ್ನಿಸಿದ್ದೇನೆ.

ಈ ಕಾದಂಬರಿಯ ಮೊದಲನೆಯ ಮುದ್ರಣ ಪ್ರಕಟಿಸಿದ ಮೆಸರ್ಸ್ ಸ್ಟ್ಯಾಂಡರ್ಡ್ ಬುಕ್ ಡಿಪೋ ಮಾಲಿಕರಾದ ಶ್ರೀ ಎಚ್. ಕಮಲಾನಾಥರವರೇ ಇದನ್ನೂ ಪ್ರಕಟಿಸಿದ್ದಾರೆ. ಶ್ರೀ ಜಿ. ವಿ. ವೆಂಕಣ್ಣನವರು ತಪ್ಪೋಲೆಗಳನ್ನು ತಿದ್ದಿಕೊಟ್ಟಿದ್ದಾರೆ. ಈ ಗೆಳೆಯರ ವಿಶ್ವಾಸಕ್ಕೆ ನಾನು ಋಣಿಯಾಗಿದ್ದೇನೆ.

೨೨ ಆಗಸ್ಟ್ ೧೯೫೫ — **ಅ. ನ. ಕೃ**

# ಪ್ರಥಮ ಮುದ್ರಣದ ಮುನ್ನುಡಿ

ನಮ್ಮ ವೈಯಕ್ತಿಕ, ಸಾಂಸಾರಿಕ, ಸಾಮಾಜಿಕ, ರಾಷ್ಟ್ರೀಯ ಜೀವನದ ನಾನಾ ಸಮಸ್ಯೆಗಳನ್ನು ಕುರಿತು ಯೋಚಿಸುತ್ತಿರುವಾಗ ನನ್ನ ಚಿತ್ತಫಲಕದ ಮೇಲೆ ಒಂದು ಪ್ರಶ್ನೆ ಅಚ್ಚೊತ್ತಿದಂತೆ ಮೂಡಿತು—ಇಷ್ಟು ಭಿನ್ನ ಭಿನ್ನವಾಗುತ್ತಿರುವ ಜೀವನ ಒಂದುಗೂಡುವ ಬಗೆಯೆಂತು ? ಅನಂತ ವಿಪ್ಲವಕ್ಕೆ ಸಿಕ್ಕಿರುವ ಜೀವನಕ್ಕೆ ಶಾಂತಿ ಎಲ್ಲಿಂದ ಬರಬೇಕು ? ಈ ಪ್ರಶ್ನೆಯನ್ನು ಬಿಡಿಸುವ ಪ್ರಯತ್ನ **'ಆಶೀರ್ವಾದ'**ದಲ್ಲಿ ಮಾಡಿದ್ದೇನೆ. ವಾಸ್ತವದ ಹಾದಿಯಲ್ಲಿ ಆದರ್ಶವನ್ನು ರೂಪಿಸಿಗೊಂಡ ಒಬ್ಬ ವ್ಯಕ್ತಿಯ ಸುಕುಮಾರ ಬಾಳ್ವೆ ಹೇಗೆ ಹಲವರ ಜೀವನದ ಮೇಲೆ ಬೆಳಕು ಚೆಲ್ಲಿ ಮನೆಯನ್ನು, ಹಳ್ಳಿಯನ್ನು, ನಾಡನ್ನು ಮಧುರ ಮೈತ್ರಿಯಲ್ಲಿ ಬೆಸೆಯಲು ಸಮರ್ಥವಾಯಿತೆನ್ನುವುದನ್ನು ಚಿತ್ರಿಸಲು ಪ್ರಯತ್ನಿಸಿದ್ದೇನೆ. ಜೀವನದ ನಾನಾ ವಿಪ್ಲವಗಳನ್ನು ಮಾನವ ನೆದುರಿಸಿದರೂ ಅವನ ಗುರಿ ಸದಾ ದೂರದಲ್ಲಿ ಸೂಕ್ಷ್ಮವಾಗಿ—ಮಸಕು ಮಸಕಾಗಿ ಪ್ರತಿಷ್ಠಿತವಾಗಿರುವ ಅಮರಶಾಂತಿಯ ಕಡೆಗಿರಬೇಕೆಂಬ ತತ್ತ್ವದ ಚಿತ್ರಣವೇ **'ಆಶೀರ್ವಾದ.'**

ಕನ್ನಡದ ಕಾದಂಬರಿ ಕಲೆ ಇಂದು ಸಮೃದ್ಧವಾಗಿ ಬೆಳೆದಿದೆ-ಬೆಳೆಯುತ್ತಿದೆ. ಒಮ್ಮೆ ವಿಹಾರಕ್ಕೆ ಕಾದಂಬರಿ ಒದಗಿದರೆ ಸಾಕು; ಅದು ತತ್ತ್ವ ವಿಮರ್ಶೆ ಮಾಡುವ ಅಗತ್ಯವಿಲ್ಲ ಎಂದು ಕೆಲವರು ವಾದಿಸುತ್ತಿದ್ದಾರೆ. ವಿಹಾರಗಮ್ಯ ಕಾದಂಬರಿಗಳು ಬೆಳೆಯಬೇಕೆಂದು ಬಯಸುವವರು, ವಿಕಾಸಗಮ್ಯ ಕಾದಂಬರಿಗಳು ಬೆಳೆಯಬಾರದೆಂದು ಹೇಳುವುದು ನ್ಯಾಯವಲ್ಲ. ಇಂದು ನಾವು ಶೈಕ್ಷಣಿಕ ಚಿತ್ರಗಳನ್ನು (Educational pictures) ಕೋರುವಂತೆಯೇ ಶೈಕ್ಷಣಿಕ ಕಾದಂಬರಿಗಳನ್ನೂ ಕೋರುತ್ತೇವೆ. ಕಾದಂಬರಿ, ವಾಕ್ಚಿತ್ರ ಎರಡೂ ಜನತಾ ಶಿಕ್ಷಣದ ಪ್ರಬಲ ಸಾಧನಗಳು. ಕಾದಂಬರಿ ತಂತ್ರಸಾಧನ ಬಳಸಿಕೊಂಡು ಜನತೆಗೆ ನಮ್ಮ ದಿವ್ಯಸಂಸ್ಕೃತಿಯ ಪರಿಚಯ ಮಾಡಿಕೊಡುವುದು ಅತ್ಯವಶ್ಯಕವೆಂದು ಈ ಲೇಖಕನ ಋಜುಭಾವನೆ.

ಈ ಕಾದಂಬರಿಗೆ ನಾನು ಉಪನಿಷತ್ತುಗಳು, ಗೀತೆ, ಧರ್ಮಸೂತ್ರಗಳಿಂದ ಧಾರಾಳವಾದ ನೆರವು ಪಡೆದಿದ್ದೇನೆ. ಇದರಲ್ಲಿ ನಾನು ಸಂಕ್ಷೇಪಿಸಿಕೊಟ್ಟಿರುವ 'ಕಠೋಪನಿಷತ್ತಿ'ನ ಓದು, ಹೆಚ್ಚಿನ ವ್ಯಾಸಂಗಕ್ಕೆ, ನನ್ನ ಪಾಠಕರನ್ನು ಪ್ರೇರೇಪಿಸಿದರೆ, ನಾನು ಧನ್ಯನಾಗುತ್ತೇನೆ; ನನ್ನ ಶ್ರಮ ಸಾರ್ಥಕವಾಗುತ್ತದೆ.

ಗೀತೋಪನಿಷತ್ತುಗಳ ವ್ಯಾಖ್ಯಾನಕ್ಕೆ ನಾನು ಈವರೆಗೆ ಇಂಗ್ಲಿಷ್, ಕನ್ನಡದಲ್ಲಿ ಪ್ರಕಟವಾಗಿರುವ ಬಹಳ ಗ್ರಂಥಗಳನ್ನು ನೋಡಿದ್ದೇನೆ. ಅವೆಲ್ಲವುಗಳಿಂದ ಉಪಕೃತನಾಗಿದ್ದೇನೆ. ಅಧ್ಯವಸಾಯದ ಜತೆಗೆ ಸ್ವತಂತ್ರವಿಚಾರ ಹಾಗೂ ತತ್ತ್ವ—ಜೀವನ ಸಾಮರಸ್ಯವೂ ಅಗತ್ಯವೆಂಬುದು ನನ್ನ ಅಭಿಮತ. ಹಲವು ಸಲ ಟೀಕಾಕಾರರ ಮತ್ತು ವ್ಯಾಖ್ಯಾನಗಾರರ ಅತಿಬುದ್ಧಿಯ ಫಲವಾಗಿ ಮೂಲಗ್ರಂಥದ ನಿಶ್ಚಿತಾರ್ಥ ಕಣ್ಮರೆಯಾಗುತ್ತದೆ. ಗೀತಾಭ್ಯಾಸಿ ಬಯಸುವುದು ಶ್ರೀಕೃಷ್ಣನ ವಿಚಾರವಾಣಿಯನ್ನೇ ವಿನಾ ಟೀಕಾಕಾರನ ಬುದ್ಧಿ ಶ್ರೇಣಿಯನ್ನಲ್ಲ!

ಈ ಗ್ರಂಥದಲ್ಲಿ ನಾನು ಬಳಸಿರುವ ಮಂತ್ರ, ಮಂತ್ರಾರ್ಥ ನಿರ್ಣಯಕ್ಕೆ ಶ್ರೀ ವೈ. ಸುಬ್ಬರಾಯರ 'ಉಪನಿಷದ್ಭಾಷ್ಯ', ಶ್ರೀ ರಂ. ರಾ. ದಿವಾಕರರ 'ಉಪನಿಷದ್ಪ್ರಕಾಶ', ಶ್ರೀ ಹೊಸಕೆರೆ ಚಿದಂಬರಯ್ಯನವರ 'ಗೀತೆಯ ಕೈಗನ್ನಡಿ', ಸ್ವಾಮಿ ಶ್ರೀ ಶಂಕರಾನಂದ ಭಾರತಿಯವರ 'ಗೀತಾರ್ಥ ಬೋಧಿನಿ', ಶ್ರೀ ಆರ್. ವ್ಯಾಸರಾಯರ 'ವಿವಾಹಮಂಗಳ' ಮೊದಲಾದ ಗ್ರಂಥಗಳಿಂದ ಹೆಚ್ಚಿನ ಸಹಾಯ ದೊರೆತಿದೆ. ಈ ಗ್ರಂಥಕರ್ತರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುವುದು ನನ್ನ ಆದಿಕರ್ತವ್ಯ.

ಕನ್ನಡ ಗ್ರಂಥ ಪ್ರಕಾಶನದ ಬಗ್ಗೆ ವಿಶೇಷ ಉತ್ಸಾಹಿತರಾಗಿರುವ ಸ್ಟ್ಯಾಂಡರ್ಡ್ ಬುಕ್ ಡಿಪೋ ಮಾಲಿಕರಾದ ಶ್ರೀ ಎಚ್. ಕಮಲಾನಾಥ್ ಬಿ. ಎಸ್‌ಸಿ., ಅವರ ಸತತ ಪ್ರೋತ್ಸಾಹದಿಂದಲೇ ಈ ಕಾದಂಬರಿ ಇಷ್ಟು ಬೇಗ ಬೆಳಕು ಕಂಡುದು. ಅವರ ಉದ್ಯಮ ಯಶಸ್ವಿಯಾಗಿ, ಕನ್ನಡ ಸಾರಸ್ವತ ಪ್ರಪಂಚಕ್ಕೆ ಅವರಿಂದ ವಿಶಿಷ್ಟಸೇವೆ ಸಲ್ಲಲೆಂದು ಹೃತ್ಪೂರ್ವಕ ಹಾರೈಸುತ್ತೇನೆ.

೨–೩–೧೯೫೫      ಅ. ನ. ಕೃ

# ಆಶೀರ್ವಾದ

# ಆಶೀರ್ವಾದ

## ೧

ರುದ್ರಾಕ್ಷಿಪುರಕ್ಕೂ ತುಮಕೂರಿಗೆ ಹತ್ತೆ ಮೈಲಿ. ರುದ್ರಾಕ್ಷಿಪುರದ ಅನೇಕ ಜಮೀನುದಾರರು ತುಮಕೂರಿನಲ್ಲೇ ವಾಸವಾಗಿದ್ದು ನಿತ್ಯ ಬೈಸಿಕಲ್ ಮೇಲೋ, ಬಸ್ಸಿನಲ್ಲೋ, ರುದ್ರಾಕ್ಷಿಪುರಕ್ಕೆ ಬಂದು ತಮ್ಮ ಜಮೀನುಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು.

ರುದ್ರಾಕ್ಷಿಪುರ ಹೋಬಳಿಯಷ್ಟು ಸಣ್ಣದಾಗಿಯೂ ಇರಲಿಲ್ಲ; ತಾಲ್ಲೂಕಿನಷ್ಟು ದೊಡ್ಡದಾಗಿಯೂ ಇರಲಿಲ್ಲ. ಅಲ್ಲಿದ್ದ ಮುನ್ನೂರೈವತ್ತು ಮನೆಗಳಲ್ಲಿ ವೀರಶೈವರದು ನೂರೈವತ್ತುಮನೆ; ಒಕ್ಕಲಿಗರದು ನೂರು ಮನೆ; ಬ್ರಾಹ್ಮಣರದು ಮೂವತ್ತು ಮನೆ; ಉಳಿದ ಎಪ್ಪತ್ತು ಮನೆಗಳು ದೇವಾಂಗದವರು, ಕುರುಬರು, ಹರಿಜನರು, ಮುಸಲ್ಮಾನರಿಗೆ ಸೇರಿದ್ದವು. ಊರಿನ ಭೂಮಿ ಫಲವತ್ತಾಗಿ, ಸಾಕಷ್ಟು ಜಲಾಶಯ ಪಡೆದಿದ್ದುದರಿಂದ ಎಲ್ಲ ವರ್ಗದವರೂ ಅನುಕೂಲವಾಗಿದ್ದರು. ಊರು ಪ್ರವೇಶಿಸುವಾಗಲೇ ಫಲಭರಿತ ತೆಂಗಿನಮರಗಳ ಗರಿಗಳು ತೋಳುಬೀಸಿ ಕರೆಯುತ್ತಿದ್ದವು. ಅಲ್ಲಲ್ಲಿ ಒಂದೊಂದು ಹಣ್ಣಿನ ತೋಟ; ಲೆಕ್ಕವಿಲ್ಲದಷ್ಟು ಬಾಳೆಯ ತೋಟಗಳು. ಕಣ್ಣುನೋಟ ಚಾಚುವಷ್ಟು ದೂರ ಹಸಿರು ಗದ್ದೆಗಳು. ಪ್ರಕೃತಿ ತನ್ನ ಪೂರ್ಣಕಟಾಕ್ಷವನ್ನು ರುದ್ರಾಕ್ಷಿಪುರದ ಮೇಲೆ ಬೀರಿದ್ದಳೆಂಬುದಕ್ಕೆ ಯಾವ ಸಂದೇಹವೂ ಇರಲಿಲ್ಲ.

ಆದರ್ಶಗ್ರಾಮವಾಗುವ ಎಲ್ಲ ಸೌಕರ್ಯಗಳೂ ರುದ್ರಾಕ್ಷಿಪುರಕ್ಕಿದ್ದವು-ರುದ್ರಾಕ್ಷಿಪುರ ಒಂದು ರೀತಿಯಲ್ಲಿ ಆದರ್ಶಗ್ರಾಮವಾಗಿ ದೇಶಾದ್ಯಂತ ಖ್ಯಾತಿಗಳಿಸಿಕೊಂಡಿತ್ತು.

ತುಮಕೂರಿನ ಕೋರ್ಟು ಕಛೇರಿಗಳಿಗೆ, ಲಾಯರುಗಳು, ಗುಮಾಸ್ತರಿಗೆ ರುದ್ರಾಕ್ಷಿಪುರವೇ ಉಗ್ರಾಣ; ರುದ್ರಾಕ್ಷಿಪುರದವರೇ ಅನ್ನದಾತರು. ಸಣ್ಣಪುಟ್ಟ ಕಾರಣಗಳಿಗೆ ರುದ್ರಾಕ್ಷಿಪುರದ ವೀರಶೈವರಿಗೂ, ಒಕ್ಕಲಿಗರಿಗೂ ಜಗಳವಾಗುತ್ತಿದ್ದುದು ತುಮಕೂರಿನ ಲಾಯರುಗಳಿಗೆ ಆಪ್ಯಾಯಮಾನವಾಗಿತ್ತು. ವೀರಶೈವರಲ್ಲಿ ಹೆಚ್ಚು ಜನ 'ರೈತಾಪಿ'ಮಾಡುತ್ತಿದ್ದರೂ, ಕೆಲವರು 'ಸಾಹುಕಾರ'ರಾಗಿ ಲೇವಾದೇವಿ ಮಾಡಿ 'ಜರತಾರಿ ಪೇಟಾ' ಧರಿಸಿ ಧನಾಢ್ಯರೆನಿಸಿಕೊಂಡಿದ್ದರು. ಈ ಶೆಟ್ಟಿ, ಯಜಮಾನರು ತಮ್ಮ ಶ್ರೀಮಂತಿಕೆ ಬೆಳಸುವುದಕ್ಕೆ ಜಾತಿಭೇದವನ್ನೆಣಿಸದೆ ಎಲ್ಲಜನರನ್ನೂ ಏಕಾಪೋಶನ ತೆಗೆದುಕೊಳ್ಳುತ್ತಿದ್ದರು. ವೀರಶೈವ, ಒಕ್ಕಲಿಗ ಘರ್ಷಣೆ ಹೊರಗಣ್ಣಿಗೆ ಜಾತಿಜಗಳವಾಗಿ ಕಂಡುಬಂದರೂ ಅದು ಆರ್ಥಿಕ ಘರ್ಷಣೆಯೇ ಆಗಿತ್ತು.

ಒಕ್ಕಲಿಗರ ಸಂಖ್ಯಾಬಲಕ್ಕೂ ವೀರಶೈವರ ಧನಬಲಕ್ಕೂ ಸದಾ ನಡೆಯುತ್ತಿದ್ದ ಹೋರಾಟವನ್ನು ಇತರರು ನೋಡುತ್ತಾ, ಸಮಯ ಒದಗಿದಂತೆ ತಮ್ಮ ಲಾಭ ಸಾಧಿಸಿಕೊಳ್ಳುತ್ತಿದ್ದರು. ಅವರಲ್ಲಿಲ್ಲದ ಜಗಳ ತಂದಿಟ್ಟು ಇತರರು ತಮ್ಮ ಬೇಳೆ ಬೇಯಿಸುತ್ತಿದ್ದುದೂ ಉಂಟು.

ರುದ್ರಾಕ್ಷಿಪುರದ ವೀರಭದ್ರಸ್ವಾಮಿ ದೇವಾಲಯದ ವಿಷಯದಲ್ಲಿ ವಾದ, ವಿವಾದ ಸತತವಾಗಿ ನಡೆಯುತ್ತಲೇ ಇತ್ತು, ವೀರಭದ್ರಸ್ವಾಮಿಯ ಭವ್ಯಮೂರ್ತಿ ವೆಂಕಟಾಚಲಪತಿಯೆಂದೂ, ಅದನ್ನು ವೀರಶೈವರು ಮತಾಂತರಗೊಳಿಸಿದ್ದಾರೆಂದೂ ಇತರರ ಆರೋಪ. ಅದು ವೀರಭದ್ರಮೂರ್ತಿಯೇ ಎಂದು ಸ್ಥಾಪಿಸಲು ವೀರಭದ್ರಶಾಸ್ತ್ರಿಗಳು ಒಂದು ಗ್ರಂಥವನ್ನೇ ಬರೆದು ತುಮಕೂರು ಜಿಲ್ಲೆಯ ಪ್ರಾಚೀನ ಕವಿಗಳೆಲ್ಲರನ್ನೂ ಸಾಕ್ಷ್ಯಹೇಳಲು ಎಳೆದಿದ್ದರು. ಇತರ ಜಾತಿಯವರ ಪರವಾಗಿ ಕುರುಬರ ಹನುಮಯ್ಯ ಶಾಸ್ತ್ರಿಗಳಿಗೆ ಉತ್ತರವಿತ್ತು ಅದು ವೆಂಕಟಾಚಲಪತಿಯ ವಿಗ್ರಹ ಎಂದು ಸ್ಥಾಪಿಸಲು ಪ್ರಯತ್ನಿಸಿದ್ದ.

ಕುರುಬರ ಹನುಮಯ್ಯ ಉರುಫ್ ಕವಿ ಹನುಮ ಆ ಪ್ರಾಂತ್ಯಕ್ಕೆಲ್ಲಾ

ಹೆಸರಾದ ಬಯಲುನಾಟಕದ ಗುರು. ಸುತ್ತಮುತ್ತಲಿನ ದಿಡ್ಡ, ಕುಂಬಾರ ಹಳ್ಳಿ, ಗೋರಿಪಾಳ್ಯ, ಜನಿವಾರ, ಬಸರೂರು ಮೊದಲಾದ ಗ್ರಾಮದವರೂ ಹನುಮಯ್ಯನನ್ನು ತಮ್ಮ ಗ್ರಾಮಗಳಲ್ಲಿ ನಾಟಕವಾಡಿಸುವುದಕ್ಕೆ ಕರೆದು ಕೊಂಡು ಹೋಗುತ್ತಿದ್ದರು. ಊರಿನವರ ಖರ್ಚಿನಲ್ಲಿ ನಾಟಕ ಆಡಿಸಿ, ತನ್ನ ಚಪಲ ತೀರಿಸಿಕೊಂಡು ಕೈಗೆ ನಾಲ್ಕು ಕಾಸೂ ಮಾಡಿಕೊಳ್ಳುತ್ತಿದ್ದ ಹನುಮಯ್ಯನಿಗೆ ಒಂದು ಸಲ ದುರ್ಬುದ್ಧಿ ಹುಟ್ಟಿತು.

ತುಮಕೂರಿಗೆ ಅವನು ಹೋಗಿದ್ದಾಗ ಜಯಲಕ್ಷ್ಮಿ ನಾಟಕಶಾಲೆಯಲ್ಲಿ ನಡೆಯುತ್ತಿದ್ದ 'ತೃಣಪುರಿ ಕರ್ನಾಟಕ ನಾಟಕ ಸಭೆ'ಯ 'ಮಹಿಷಾಸುರ ಮರ್ಧಿನಿ' ನಾಟಕ ನೋಡಿ ಅವನ ತಲೆಯಲ್ಲಿ ಹುಳು ಹೊಕ್ಕಿತು. ಊರಿಗೆ ಹಿಂದಿರುಗಿದವನೇ ಹಗಲೂರಾತ್ರಿ-ಅನ್ನನೀರು ಬಿಟ್ಟು-ವೀರಶೈವ ಮತೋದ್ಧಾರಕ ಬಸವೇಶ್ವರನ ಮೇಲೆ ಒಂದು ನಾಟಕ ಬರೆದ. ಅದನ್ನು ಆಡಿಸಲು ಗುಂಪುಕಟ್ಟಿದ. ಈ ನಾಟಕದ ವಿಷಯ ಸಾಹುಕಾರ ರುದ್ರಶೆಟ್ಟಿಯ ಹತ್ತಿರ ಪ್ರಸ್ತಾಪಿಸಿದಾಗ ಅವನು ಹನುಮಕವಿಯ ಭುಜತಟ್ಟಿ 'ಆಟ ನೀನಾಡಿಸು ಹನುಮಯ್ಯ. ನಾನು ಎಲ್ಲಾ ಸಾಯ ಮಾಡ್ತೀನಿ' ಎಂದು ಆಶೀರ್ವಾದ ಮಾಡಿದ.

ರುದ್ರಶೆಟ್ಟಿಯ ಆಶೀರ್ವಾದ ನಂಬಿಕೊಂಡು ತನ್ನ ಮೂರು ಎಕರೆ ಗದ್ದೆ ಬಶೆಟ್ಟಪ್ಪನಿಗೆ ಒತ್ತೆಯಿಟ್ಟು ಹನುಮಯ್ಯ ನಾಟಕ ಕಟ್ಟಿದ.

'ವೀರಶೈವರಿಗೆ ಸಂಬಂಧಪಟ್ಟ ನಾಟಕ, ನಮಗೇನು ಸಂಬಂಧ' ಎಂದು ವೀರಶೈವೇತರರು ನಾಟಕಕ್ಕೆ ಬರಲಿಲ್ಲ. 'ಕುರುಬರೋನು ನಮ್ಮ ಬಸವೇಶ್ವರನ ಮೇಲೆ ಏನು ನಾಟಕ ಆಡಿಸಬಲ್ಲ' ಎಂದು ವೀರಶೈವರು ಬರಲಿಲ್ಲ. ಹನುಮ ಕವಿಗೆ ಆಶಾಭಂಗವಾದುದು ಮಾತ್ರವಲ್ಲದೆ, ಮೂರು ಎಕರೆ ಗದ್ದೆಯೂ ಬಶೆಟ್ಟಪ್ಪನ ಪಾಲಾಗಿ ಅವನ ಕಣ್ಣು ಕಣ್ಣು ಬಿಡುವಂತಾಯಿತು. ವೀರಶೈವರು ತನಗೆ ಕೈಕೊಟ್ಟರೆಂದು ಭಾವಿಸಿದ ಹನುಮಕವಿ ಅವರ ಮೇಲೆ ಹಗೆ ತೀರಿಸಿ ಕೊಳ್ಳಲು ಬದ್ಧಕಂಕಣನಾದ.

'ಕುರುಬರ ಅನುಮ ಭಾಳ ಎಗರಲಾಡ್ತನ್ನೆ-ಅವನ ಬಾಲ ಸುಟ್ಟು ಬುಡಬೇಕು' ಎಂದು ರುದ್ರಶೆಟ್ಟಿ, ಬಶೆಟ್ಟಪ್ಪ ಮತ್ತಿತರ ಸಮಾಜಬಂಧುಗಳು ನಿರ್ಧರಿಸಿಕೊಂಡರು.

## ಆಶೀರ್ವಾದ

ರುದ್ರಾಕ್ಷಿಪುರದಲ್ಲಿ ವೀರಭದ್ರಸ್ವಾಮಿಯ ದೇವಸ್ಥಾನವಲ್ಲದೆ ಊರೊಳಗೆ ಶ್ರೀರಾಮದೇವರ ದೇವಸ್ಥಾನ, ಈಶ್ವರ ದೇವಸ್ಥಾನ, ಊರ ಹೊರಗೆ ಬಿಸಿಲು ಮಾರಿ, ಕೋಟಿ ಬಾಗಿಲು ವಿನಾಯಕನ ದೇವಸ್ಥಾನಗಳೂ ಇದ್ದವು.

ವೀರಶೈವರ ದೇವರ ಉತ್ಸವಗಳು ಶ್ರೀರಾಮದೇವರ ದೇವಾಲಯದ ಮುಂದೆ ಹೋಗಕೂಡದೆಂದೂ, ಶ್ರೀರಾಮದೇವರ ಉತ್ಸವ ವೀರಭದ್ರನ ಗುಡಿ ಮುಂದೆ ಹೋಗಕೂಡದೆಂದೂ ಊರವರಲ್ಲಿ ಒಪ್ಪಂದವಾಗಿತ್ತು

ಹನುಮಕವಿಯ ಬಾಲಸುಡಲು ನಿರ್ಧರಿಸಿದ 'ಸಮಾಜ ಬಾಂಧವರು' ಒಂದು ವರ್ಷ ನಂದೀಧ್ವಜ ಸಮೇತ ಬಸವೇಶ್ವರನ ಅಡ್ಡಪಲ್ಲಕ್ಕಿ ಉತ್ಸವವನ್ನು ಶ್ರೀರಾಮದೇವರ ಗುಡಿಯ ಮುಂದೆಯೇ ತೆಗೆದುಕೊಂಡು ಹೋಗಲು ನಿರ್ಧರಿಸಿದರು.

ರಾವಣನ ಮುಖಾವಲೋಕನ ಮಾಡಿದ ಹನುಮಂತ ಕೆರಳಿದಂತೆ ಕವಿಹನುಮ ಕೆರಳಿದ. ತನ್ನನ್ನು ಅಪಮಾನಗೊಳಿಸಲು ಉದ್ದೇಶಪೂರ್ವಕವಾಗಿ ವೀರಶೈವರು ಈ ತುಂಟತನಕ್ಕೆ ಹೊರಟಿದ್ದಾರೆಂದು ಅವನು ಭಾವಿಸಿದ. ರುದ್ರಾಕ್ಷಿಪುರದಲ್ಲಿ ರಾಜಕೀಯದ ಗಾಳಿ ಬಡಿಯದಿದ್ದರೂ ಅವನು ಆಗ್ರಹಗೊಳ್ಳಲು ಕಾರಣವಿತ್ತು.

ಶ್ರೀರಾಮ ಹನುಮಕವಿಯ ಇಷ್ಟದೇವರಾಗಿದ್ದ. ಅವನ ರಾಮಭಕ್ತಿಯನ್ನು ಊರಿನ ಕಟ್ಟಾವೈದಿಕರಾದ ಗುಂಡಾಭಟ್ಟರೂ ಮೆಚ್ಚಿಕೊಂಡಿದ್ದರು. ಹನುಮಕವಿಗೆ ಶ್ರೀರಾಮ ಗುಡಿಯಲ್ಲಿ ಕುಳಿತಿದ್ದ ಶಿಲಾಮೂರ್ತಿಯಾಗಿರಲಿಲ್ಲ. ಮಿತ್ರ, ಬಂಧು, ತಂದೆ, ಗುರು, ದೇವರು ಎಲ್ಲವೂ ಅವನ ಭಾಗಕ್ಕೆ ಶ್ರೀರಾಮನೇ.

ಒಂದು ಸಲ ಗುಂಡಾಭಟ್ಟರು

"ಹನುಮಯ್ಯ, ಯಾವಯಾವದೋ ನಾ ಟ ಕ ಬರೆದು ಆ ಡಿ ಸುತ್ತೀಯಪ್ಪ, ರಾಮಾಯಣ ಬರೆದು ಈ ಸಾರಿ ಶ್ರೀರಾಮನವಮಿಗೆ ಆಡಿಸಿದರೆ ನಿನ್ನ ಜನ್ಮ ಸಾರ್ಥಕವಾಗುತ್ತದೆ, ನೋಡಿದ ನಮಗೂ ಪುಣ್ಯಬರುತ್ತದೆ" ಎಂದರು.

ಹನುಮಯ್ಯ ಕ್ಷಣಕಾಲ ಸುಮ್ಮನಿದ್ದು

"ಅಷ್ಟು ಯೋಗ್ಯತೆ ನನಗೆಲ್ಲಿ ಬಂತು ನನ್ನೊಡೆಯಾ. ಆ ನಮ್ಮಪ್ಪನ

ಮೇಲೆ ನಾಟಕ ಬರೆಯಬೇಕಾದರೆ ನಾನು ಬಹಳ ಜನ್ಮವೆತ್ತಬೇಕು – ಪಾಪಶೇಷ ಕಳೆದುಕೊಳ್ಳಬೇಕು."

"ನಿನಗೆ ನಾನು ಸಹಾಯಮಾಡುತ್ತೇನೆ ಹನುಮಯ್ಯ. ವಾಲ್ಮೀಕಿ ರಾಮಾಯಣದ ಮೂಲಗ್ರಂಥ ನನ್ನಲ್ಲಿದೆ. ನಿನಗೆ ಓದಿ ಹೇಳುತ್ತೇನೆ. ನಿನಗೆ ಯಾವ ಅನುಮಾನ ಬಂದರೂ ಪರಿಹರಿಸುತ್ತೇನೆ."

"ಅದಕ್ಕೆಲ್ಲಾ ಸಂಸ್ಕಾರಬೇಕು ನನ್ನೊಡೆಯಾ ರಾಮಾಯಣ ಕೇಳಿ ಕೊಂಡು ಶ್ರೀರಾಮಚಂದ್ರಸ್ವಾಮಿಯ ಮೇಲೆ ನಾನು ನಾಟಕ ಬರೆದರೆ ಪಾಕಶಾಸ್ತ್ರ ಓದಿಕೊಂಡು ಹೋಳಿಗೆ ಮಾಡುವುದಕ್ಕೆ ಹೊರಟ ಹಾಗಾಗು ತ್ತದೆ.—ಗುಡಿಯಲ್ಲಿ ಪುರಾಣ ಇಡಿಸುತ್ತೇನೆ. ನೀವು ರಾಮಾಯಣ ಪೂರ್ತಿ ಓದಿ ಅರ್ಥ ಹೇಳಿಬಿಡಿ – ಕೇಳಿ ಧನ್ಯನಾಗುತ್ತೇನೆ."

ರಾಮಸೇವಾ ದುರಂಧರ ಹನುಮಯ್ಯ ಭಟ್ಟರ ಪುರಾಣವಿಡಿಸಿ, ಪಟ್ಟಾಭಿಷೇಕ, ಊರಸಂತರ್ಪಣೆ ಮಾಡಿಸುವವರಿಗೆ ನಿದ್ರೆಮಾಡಲಿಲ್ಲ.

ಬಸವೇಶ್ವರನ ಅಡ್ಡಪಲ್ಲಕ್ಕಿ ಉತ್ಸವ ರಾಮದೇವಾಲಯದ ಮುಂದೆ ಬರುವ ಸುದ್ದಿ ಕೇಳಿ ಹನುಮಯ್ಯ ವೀರಭದ್ರಾವತಾರ ತಾಳಿದ.

"ನೋಡೋಣ – ಅದು ಹೇಗೆಬರುತ್ತಾರೊ – ರುದ್ರಾಕ್ಷಿಪುರ ಉರಿದು ಭಸ್ಮವಾದರೂ ಚಿಂತೆಯಿಲ್ಲ – ಉತ್ಸವ ರಾಮದೇವಾಲಯದ ಮುಂದೆ ಬಿಟ್ಟು ಕೊಡುವುದಿಲ್ಲ"

ಎಂದು ವೀರಶಪಥಮಾಡಿಬಿಟ್ಟ.

ಊರು ಭಸ್ಮವಾಗುವುದಕ್ಕೆ ಸಕಲ ಸಿದ್ಧತೆಯಾಗತೊಡಗಿತು. ಉಭಯ ಪಕ್ಷಕ್ಕೂ ಸೇರದ ಕೆಲವರು ರಾಜಿಪ್ರಯತ್ನಮಾಡಿ ವಿಫಲರಾದರು.

ಗುಂಡಾಭಟ್ಟರು ಹನುಮಯ್ಯನನ್ನು ಕರೆಸಿ "ಹೋಗಲಿ ಬಿಡೊ ಹನುಮಯ್ಯ. ಅವರೇ ಹಟ ಸಾಧಿಸಿಕೊಂಡು ಹೋಗಲಿ. ಶ್ರೀರಾಮಚಂದ್ರ ಯಾರಮೇಲೂ ದ್ವೇಷ ಸಾಧಿಸಲಿಲ್ಲ. ರಾಮರಾವಣರ ಯುದ್ಧವಾದಮೇಲೆ ನಡೆದ ಪ್ರಸಂಗ ಜ್ಞಾಪಿಸಿಕೊ. 'ನನ್ನ ಅಣ್ಣ ಅಧರ್ಮಿ. ಸೀತಾಮಾತೆ ಯಂಥ ಲೋಕಪಾವನೆಯನ್ನೇ ಅಪಹರಿಸಿಕೊಂಡು ಬಂದು ಗೋಳುಗುಟ್ಟಿ ಸಲು ಹೇಸದ ಪಾಪಿ, ಅವನಿಗೆ ನಾನು ತರ್ಪಣಕೊಡುವುದಿಲ್ಲ' ಎಂದು ವಿಭೀಷಣ ಹಟಹಿಡಿದಾಗ ಶ್ರೀರಾಮಚಂದ್ರ ಅವನಮೇಲೆ ಅಗ್ರಹಗೊಂಡು

'ನಿನ್ನ ಅಣ್ಣ ರಾವಣ–ಮಹಾವೀರ, ಮಹಾಜ್ಞಾನಿ. ಅವನ ಪ್ರಾರಬ್ಧ ಕರ್ಮದಿಂದ ಅವನು ದುರಾಚಾರಿಯಾದ. ಅದಕ್ಕೆ ಪ್ರಾಯಶ್ಚಿತ್ತ ಅವನು ಅನುಭವಿಸಿಯೂ ಆಯಿತು. ಈಗಲೂ ಅವನಮೇಲೆ ದ್ವೇಷ ಸಾಧಿಸುವುದು ಧರ್ಮವಲ್ಲ. ನೀನು ಅವನಿಗೆ ತರ್ಪಣ ಕೊಡದಿದ್ದರೆ ಚಿಂತೆಯಿಲ್ಲ – ನಾನು ಕೊಡುತ್ತೇನೆ.' ಎಂದು ಹೇಳಲಿಲ್ಲವೇ? ಶ್ರೀರಾಮಚಂದ್ರನ ಮೇಲ್ಪಂಕ್ತಿಯನ್ನು ಅವನ ಪರಮಭಕ್ತ ನೀನು ಅನುಸರಿಸಬೇಕೋ ಇಲ್ಲವೋ?"

"ಹೌದು ನನ್ನೊಡೆಯಾ – ಅನುಸರಿಸಬೇಕು. ದುಷ್ಟ ರಾವಣನನ್ನು ಧ್ವಂಸಮಾಡಿಯೇ ಅಲ್ಲವೇ ಸ್ವಾಮಿ ಅವನಿಗೆ ತರ್ಪಣ ಕೊಡಲುಸಿದ್ಧವಾದುದು."

ಎಂದು ಹೇಳಿ ಗುಂಡಾಭಟ್ಟರ ಬಾಯಿಮುಚ್ಚಿಸಿಬಿಟ್ಟ.

ಕಪಿಹನುಮ ಹೂಡಿದ್ದ ಧರ್ಮಯುದ್ಧಕ್ಕೆ ಸಾಕಷ್ಟು ಜನಬಲವೂ ಇತ್ತು. ಸ್ವಯಂ ಕೆಂಗೇಗೌಡರೇ ಅವನ ಕುಮ್ಮಕ್ಕಿಗೆ ನಿಂತಿದ್ದರು.

ಕೆಂಗೇಗೌಡರನ್ನು ರುದ್ರಾಕ್ಷಿಪುರದ ಜನ ಗೌರವಿಸುತ್ತಿದ್ದುದೇನೂ ಅಚ್ಚರಿಯಲ್ಲ. ಶ್ರೀರಾಮದೇವರ ದೇವಾಲಯ ಜೀರ್ಣೋದ್ಧಾರ ಮಾಡಿಸಿದವರೇ ಅವರು. ಹರಿಜನರಿಗೆ ಕುಡಿಯುವ ನೀರಿಗೆ ಅಭಾವವಾದಾಗ ಅವರಿಗೆ ಸೊಗಸಾದ ಸಿಹಿನೀರಿನ ಭಾವಿ ತೋಡಿಸಿಕೊಟ್ಟವರೇ ಅವರು. ಊರಿಗೆ ಯಾರು ಬಂದರೂ ಅವರಿಗೆ ಆದರೋಪಚಾರ ಮಾಡುತ್ತಿದ್ದವರೇ ಗೌಡರು.

ಒಕ್ಕಲಿಗ ಜನಾಂಗದಲ್ಲಿ ಗೌಡರಿಗಿಂತ ಭಾರೀಕುಳವಾಗಿದ್ದವರು ಯಾರೂ ಇರಲಿಲ್ಲ. ದಾಸೇಗೌಡ ಊರಿನ ಪಟೇಲನಾಗಿದ್ದರೂ ಅಧಿಕಾರ ನಡೆಸುತ್ತಿದ್ದವರು ಕೆಂಗೇಗೌಡರು. ಗೌಡರ ಕೊಡುಗೈ ಸ್ವಜಾತಿಗೇ ಅಡಕವಾಗಿಲ್ಲದಿದ್ದುದರಿಂದ ಊರಿನ ಎಲ್ಲಾ ಮತಸ್ಥರೂ ಅವರನ್ನು ಗೌರವದಿಂದ ಕಾಣುತ್ತಿದ್ದರು.

ಗೌಡರಿಗೆ ಅಕ್ಷರಾಭ್ಯಾಸವೇ ಆಗಿರಲಿಲ್ಲ. ಗುದ್ದಲಿಗೀಟೆ ಅವರ ಸಹಿಯಾಗಿತ್ತು. ನಿರಕ್ಷರಕುಕ್ಷಿಗಳಾಗಿದ್ದ ಗೌಡರು ರಾಮಾಯಣ, ಭಾರತ, ಭಾಗವತ ಕಥೆಗಳನ್ನೂ, ವೇದಾಂತ ತತ್ತ್ವಸಾರ ವಿಮರ್ಶೆಮಾಡುತ್ತಿದ್ದುದನ್ನು ಕಂಡವರು ಬೆರಗಾಗುತ್ತಿದ್ದರು. 'ಗೌಡನದು ಸಂಸ್ಕಾರಹೊಂದಿದ ಜೀವ. ಓದುಬರಹ ಅವನು ಕಲಿಯದಿದ್ದರೇನು. ಅವನಿಗೆ ತಾಯಿ ಶಾರದೆಯ ಅನುಗ್ರಹವಾಗಿದೆ' ಎಂದು ಗುಂಡಾಭಟ್ಟರು ಹೇಳುತ್ತಿದ್ದರು.

ಗೌಡರ ಜೀವನ, ನಂಬಿಕೆಗಳು, ವ್ಯವಹಾರ ಎಲ್ಲವೂ ಕೆಲವು ವ್ಯವಸ್ಥಿತ ಮಾರ್ಗವನ್ನನುಸರಿಸಿದ್ದವು.

'ಭಗವಂತ ನನ್ನನ್ನು ನೆಮ್ಮದಿಯಾಗಿಟ್ಟಿದ್ದಾನೆ. ಅವನು ನನಗೆ ಕೊಟ್ಟಿರುವ ಸಂಪತ್ತನ್ನು ಅವನದೆಂದೇ ನಾನು ಬಳಸಬೇಕು ; ನಾನು ಅದರ ಮೋಕ್ತೇಸರ ಮಾತ್ರವಾಗಿದ್ದೇನೆ. ನಾಲ್ಕು ಜನರ ಕಷ್ಟ, ಸುಖಕ್ಕೆ ನೆರವಾಗಬೇಕು. ಹತ್ತು ಜನಕ್ಕೆ ಅನ್ನ ಹಾಕಬೇಕು.'

ಶ್ರೀರಾಮಚಂದ್ರ ಗೌಡರ ಆರಾಧ್ಯದೇವನೂ ಆಗಿದ್ದ, ಇಷ್ಟ ಮೂರ್ತಿಯೂ ಆಗಿದ್ದ. ಶ್ರೀರಾಮನ ಬಗ್ಗೆ ಯಾರೂ ಲಘುವಾಗಿ ಒಂದು ಮಾತನ್ನೂ ಆಡಲು ಅವರು ಅವಕಾಶ ಕೊಡುತ್ತಿರಲಿಲ್ಲ. ರಾಮನಿಂದೆಯಷ್ಟು ಘೋರ ಪಾತಕ ಜಗತ್ತಿನಲ್ಲಿ ಬೇರೆ ಯಾವದೂ ಇಲ್ಲವೆಂಬ ಭಾವನೆ ದೃಢವಾಗಿ ಅವರ ಮನಸ್ಸಿನಲ್ಲಿ ನೆಟ್ಟಿತ್ತು.

ಒಂದು ಸಲ ಸಾಹುಕಾರ ರುದ್ರಶೆಟ್ಟಿ ವೀರಭದ್ರ ದೇವಾಲಯದಲ್ಲಿ ಪಂಡಿತ ಶಿವದೇವಶಾಸ್ತ್ರಿಗಳ ' ಪ್ರಭುಲಿಂಗಲೀಲೆ ' ಪುರಾಣ ಇಡಿಸಿದ. ರುದ್ರ ಶೆಟ್ಟಿಯೇ ಬಂದು ಆಮಂತ್ರಣವಿತ್ತಾಗ ಗೌಡರು

"ಪುಕಸಟ್ಟೆ ಪುರಾಣ ಮಾಡಿಸಬೇಡ ರುದ್ರಪ್ಪ. ವಿದ್ವಾಂಸರಿಗೆ ಕೈತುಂಬ ಸಂಭಾವನೆಕೊಡೋ ಏರ್ಪಾಡುಮಾಡು. ನಮ್ಮೂರಿನಲ್ಲಿ ಯಾವ ಉತ್ಸವ ವಾದರೂ ಅದು ನಮಗೆಲ್ಲಾ ಸೇರಿದ್ದು. ಪಟ್ಟಿಗೆ ನಂದೂ ಒಂದು ನೂರು ರೂಪಾಯಿ ಸೇರಿಸಿಕೋ" ಎಂದರು.

ಅರಮನೆ ಜರತಾರಿ ಕೆಂಪುಶಾಲು ಹೊದೆದುಕೊಂಡು, ಹಣೆತುಂಬ ವಿಭೂತಿ ಹಚ್ಚಿಕೊಂಡು, ಕೊರಳಿಗೆ ಚಿನ್ನದ ರುದ್ರಾಕ್ಷಿಕಟ್ಟಿಕೊಂಡು ಶಾಸ್ತ್ರಿ ಗಳು ಪುರಾಣ ಆರಂಭಿಸಿದರು.

**ಕಾಳಗದ ಕಥೆಯುಲ್ಲ ವಿಷಯುಗ**
**ಕೇಳಿಗೆಯು ವಿಧಿಯುಲ್ಲ ಹೊಟ್ಟೆಯು**
**ಹೂಳಲಿಕೆ ಹಿಂಸೆಯು ಮಾಡುವ ಹೊಲಬು ತಾನಲ್ಲ ॥**
**ಕಾಳಗವು ಕರಣದಲಿ ಸುರತದ**
**ಕೇಲು ಕುಂಡಲಿಯುಲಿ ತೃಪ್ತಿಯು**
**ದಾಳಿ ಗಗನದೊಳೆಂದು ಹೇಳುವುದೀ ಸುಬೋಧೆಯುಲಿ ॥**

**ಸತ್ತವರ ಕಥೆಯಲ್ಲ ಜನನದ**
**ಕುತ್ತದಲಿ ಕುದಿಕುದಿದು ಕರ್ಮದ**
**ಕತ್ತಲೆಗೆ ಸಿಲ್ಕುವರ ಸೀಮೆಯು ಹೊಲಬು ತಾನಲ್ಲ ॥**
**ಹೊತ್ತು ಹೋಗದೆ ಪುಂಡರಾಲಿಪ**
**ಮತ್ತ ಮತಿಗಳ ಗೋಷ್ಠಿಯಲ್ಲಿದು**
**ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು ॥**

ಆ ಪದ್ಯ ಕೇಳಿದ ಕೂಡಲೆ ಕೆಂಗೇಗೌಡರು "ಅಯ್ನೋರೇ, ಆ ಪದ್ಯ ಇನ್ನೊಂದು ಸಲ ಓದಿ ಅರ್ಥ ಹೇಳಿ" ಎಂದರು.

ಶಾಸ್ತ್ರಿಗಳು ಒಳ್ಳೆ ಅಭಿಮಾನದಿಂದ ಪದ್ಯ ಓದಿ ಅರ್ಥ ವಿವರಿಸಿದರು.

ಕೆಂಗೇಗೌಡರ ಮುಖ ಕೆಂಪಗಾಯಿತು.

"ರಾಮಾಯಣ ಕಳ್ಳತನದ ಕಥೆ–ಮಹಾಭಾರತ ಹಾದರದ ಕಥೆ ಎಂದು ಬರೆದಿರುವವನು ಕವಿಯಲ್ಲ ಮುಠ್ಠಾಳ ಅಯ್ನೋರೇ"

ಎಂದು ಹೇಳಿ ಹೊರಟುಬಿಟ್ಟರು.

ಹೊಗೆಯಾಡುತ್ತಿದ್ದ ವೀರಶೈವ—ಒಕ್ಕಲಿಗ ವೈಷಮ್ಯ ಕಾಲಕ್ರಮೇಣ ಹತ್ತಿಕೊಂಡು ಉರಿಯತೊಡಗಿತು.

ಊರನ್ನು ಅಗ್ನಿಕುಂಡ ಮಾಡುವುದಕ್ಕೆ ಉಭಯ ಪಕ್ಷದವರೂ ಸಕಲಸಿದ್ಧತೆ ಮಾಡಿಕೊಂಡರು. ಗುಂಡಾಭಟ್ಟರ ಶಾಂತಿಸಂಧಾನವೂ ನಿರರ್ಥಕವಾಯಿತು.

'ಮಾಮೂಲು ಹೇಗಿತ್ತು ಹಾಗೆ ಎಲ್ಲರೂ ನಡೆದುಕೊಳ್ಳೋಣ'

ಎಂದರು ಕೆಂಗೇಗೌಡರು.

'ದೇವರ ಉತ್ಸವ ಹೋಗುವುದಕ್ಕೆ ಅಡಚಣೆ ತರುವುದು ಯಾವ ನ್ಯಾಯ? ಕೆಂಗೇಗೌಡನನ್ನು ಇತರರು ಚಿತಾವಣೆ ಮಾಡಿ ನನ್ನ ಮೇಲೆ ಜಗಳಕ್ಕೆ ನಿಲ್ಲಿಸಿದ್ದಾರೆ. ನಿಲ್ಲಲಿ–ನಾವೂ ಒಂದು ಕೈ ನೋಡಿಯೇ ಬಿಡುತ್ತೇನೆ'

ಎಂದ ರುದ್ರಶೆಟ್ಟಿ ತನ್ನ ಮೀಸೆ ಹುರಿಮಾಡುತ್ತ.

ಗುಂಡಾಭಟ್ಟರಿಗೆ ದಿಕ್ಕುಕಾಣದಾಯಿತು.

'ಮೂರ್ಖರು—ಮೂರ್ಖರು ಏನಾದರೂ ಮಾಡಿಕೊಳ್ಳಿ' ಎಂದು ಬೇಸರಪಟ್ಟುಕೊಂಡರು.

# ೨

ಗುಂಡಾಭಟ್ಟರ ತಂದೆ ಸೀತಾರಾಮಭಟ್ಟರ ಕಾಲದಲ್ಲಿ ರುದ್ರಾಕ್ಷಿಪುರ ಮಾದರಿಗ್ರಾಮವೆನಿಸಿಕೊಂಡಿತ್ತು. ಊರಿಗೆ ಆಗ ಬಸ್ ಸೌಕರ್ಯವಿರಲಿಲ್ಲ, ಡೇರಾಸಿನೀಮಾ ಬಂದಿರಲಿಲ್ಲ. ಶ್ರೀಮಂತರಾದ ವೀರಶೈವರು, ಬಹು ಸಂಖ್ಯಾತರಾದ ಒಕ್ಕಲಿಗರೂ ಇತರ ವರ್ಗದವರನ್ನು ಶೋಷಿಸಲು ಅಂಜುತ್ತಿದ್ದರು. ದೇವರಲ್ಲಿ ಜನರಿಗೆ ಅಗಾಧವಾದ ನಂಬಿಕೆಯಿತ್ತು; ಭಯವೂ ಇತ್ತು. ವಾದವಿವಾದಗಳು ಬಂದರೆ ಜನ ಕೋರ್ಟು, ಕಛೇರಿಗಳಿಗೆ ಹೋಗುತ್ತಿರಲಿಲ್ಲ. ಊರ ಪಂಚಾಯಿತಿಯೇ ವಿಚಾರಣೆ ಮಾಡಿ ತೀರ್ಪನ್ನು ಕೊಡುತ್ತಿತ್ತು. ಪಂಚಾಯಿತಿಗೂ ಮೀರಿದ ಪ್ರಶ್ನೆಯಾದರೆ ವೀರಭದ್ರಸ್ವಾಮಿಯ ಮುಂದೆಯೋ, ಶ್ರೀರಾಮನ ಮುಂದೆಯೋ ತೀರ್ಪಿಗೆ ಹೋಗುತ್ತಿತ್ತು.

ತಾಲ್ಲೂಕು ಬೋರ್ಡ್, ಡಿಸ್ಟ್ರಿಕ್ ಬೋರ್ಡ್‌ಗಳ ಸ್ಥಾಪನೆಯೊಂದಿಗೆ ಊರಿನಲ್ಲಿ ಕಲಹ, ವೈಷಮ್ಯ ಆರಂಭವಾಯಿತು. ಇಂಥ ಸಂದರ್ಭಗಳಲ್ಲಿಯೂ ಸೀತಾರಾಮಭಟ್ಟರ ಮಾತು ಯಾರೂ ಮೀರುತ್ತಿರಲಿಲ್ಲ.

ಸೀತಾರಾಮಭಟ್ಟರಿಗಿಂತ ಹೆಚ್ಚು ಗೌರವ ಗುಂಡಾಭಟ್ಟರು ಸಂಪಾದಿಸಿಕೊಳ್ಳುವುದಕ್ಕೆ ಒಂದು ವಿಶೇಷ ಕಾರಣವಿತ್ತು.

ಒಮ್ಮೆ ಸೀತಾರಾಮಭಟ್ಟರು ತಮ್ಮ ಬಂಧುಗಳ ಮನೆಗೆ ತುಮಕೂರಿಗೆ ಹೋಗಿದ್ದಾಗ ಅಲ್ಲಿ ಅವರಿಗೆ ಶೃಂಗೇರಿಮಠದ ಧರ್ಮಾಧಿಕಾರಿಗಳ ಪರಿಚಯವಾಯಿತು. ಭಟ್ಟರ ಸೌಜನ್ಯ, ಸಾತ್ತ್ವಿಕ ಮನೋವೃತ್ತಿಗಳಿಗೆ ಮಾರುಹೋದ ಧರ್ಮಾಧಿಕಾರಿಗಳು ಭಟ್ಟರ ಯೋಗಕ್ಷೇಮ ವಿಚಾರಿಸುತ್ತ

"ನಿಮಗೆಷ್ಟು ಮಕ್ಕಳು" ಎಂದರು.

"ಒಬ್ಬನೇ ಮಗ."

"ಅವನನ್ನು ಓದಿಸುತ್ತಿರುವಿರಾ ?"

"ಮನೆಯಲ್ಲಿಯೇ ನಾನು ಪಾಠ ಹೇಳುತ್ತಿದ್ದೇನೆ."

"ಈಗ ಪಾಠವೆಷ್ಟಾಗಿದೆ ?"

"ಸಾಹಿತ್ಯಮುಗಿದಿದೆ. ಜ್ಯೋತಿಷ್ಯ, ವೈದ್ಯವನ್ನೂ ಅಭ್ಯಾಸಮಾಡಿಸಿದ್ದೇನೆ. ಮುಂದಕ್ಕೆ ಕಾಶಿಗೋ, ಶೃಂಗೇರಿಗೋ ಅವನನ್ನು ಕಳುಹಿಸಬೇಕೆಂದು ಆಸೆ. ಆದರೆ ಅನುಕೂಲವಿಲ್ಲ."

"ಶೃಂಗೇರಿಗೆ ಕಳಿಸಿಕೊಡಿ. ನಾನು ಎಲ್ಲಾ ವ್ಯವಸ್ಥೆಮಾಡುತ್ತೇನೆ."

"ದೊಡ್ಡ ಸ್ಥಳ—ಗುರುಸಾನ್ನಿಧ್ಯ—ಹುಡುಗ ಯಾವ ಲೌಕಿಕವನ್ನೂ ಬಲ್ಲವನಲ್ಲ. ಅವನಿಂದ ಅಪಚಾರವಾದೀತು ಎಂದು ಭಯ."

"ನಿಮ್ಮ ಹಾಗೇ ನಿಮ್ಮ ಮಗನೂ ಇರುವುದಾದರೆ ಭಯಪಡಬೇಕಾದದ್ದಿಲ್ಲ ಸೀತಾರಾಮಭಟ್ಟರೇ. ಜಗದ್ಗುರುಗಳು ಪರಮ ತಪೋಧನರಾಗಿರುವಂತೆ ಅಂತಃಕರಣಿಗಳೂ ಆಗಿದ್ದಾರೆ."

"ನಾನು ಪುಣ್ಯಶಾಲಿ."

"ನವರಾತ್ರೀಗೆ ನೀವೂ ಶೃಂಗೇರಿಗೆ ಬನ್ನಿ. ಶಾರದಾಮ್ಮನೋರ ದರ್ಶನ ಮಾಡಿಕೊಂಡು, ಜಗದ್ಗುರುಗಳ ಆಶೀರ್ವಾದ ಪಡೆದು ಬರುವಿರಂತೆ."

"ನನಗೆ ಆ ಪುಣ್ಯವಿದೆಯೊ ಇಲ್ಲವೋ ಗೊತ್ತಿಲ್ಲ. ನನ್ನ ಮಗನಿಗೆ ಗುರುಕಾರುಣ್ಯವಾದರೆ ಸಾಕು."

ತಂದೆಯವರ ಬಾಯಿಂದ ಈ ಸುದ್ದಿ ಕೇಳಿದ ಗುಂಡಾಭಟ್ಟ ಹಿಗ್ಗಿಹೋದ. ಶುಭಸಮಾಚಾರ ದಾಸಪ್ಪನಿಗೆ ಹೇಳಿದ ಹೊರತೂ ಅವನ ಮನಸ್ಸಿಗೆ ಸಮಾಧಾನವಿಲ್ಲ. ಆದರೆ ತಂದೆಯವರು ಬಿಡಲೊಲ್ಲರು. ಶೃಂಗೇರಿಯ ಮೇಲೆ, ಜಗದ್ಗುರುಗಳು ಶ್ರೀ ನೃಸಿಂಹ ಭಾರತಿ ಸ್ವಾಮಿಗಳವರ ಮೇಲೆ, ದೊಡ್ಡ ಉಪನ್ಯಾಸವನ್ನೇ ಆರಂಭಿಸಿದ್ದರು. ತಂದೆಯ ಉಪದೇಶ ಮುಗಿದ ಮೇಲೆ, ಗುಂಡಾ ಬಂಧವಿಮುಕ್ತನಾದ ಸೆರೆಯಾಳಿನಂತೆ ದಾಸಪ್ಪನ ಬಳಿಗೆ ಓಡಿಬಂದು

"ದಾಸಣ್ಣ—ನಾನು ಶೃಂಗೇರಿಗೆ ಹೋಗುತ್ತೇನೆ" ಎಂದ.

"ಶೃಂಗೇರಿ! ನಿನ್ನ ಹುಚ್ಚು ಮರುಕಳಿಸಿತೇನು ?"

"ಇಲ್ಲಪ್ಪ. ತುಮಕೂರಿನಲ್ಲಿ ತಂದೆಯವರಿಗೆ ಶೃಂಗೇರಿಯ ಧರ್ಮಾಧಿಕಾರಿಗಳ ಪರಿಚಯವಾಯಿತಂತೆ. ನನ್ನನ್ನವರು ಶೃಂಗೇರಿಗೆ ಕರೆದುಕೊಂಡು ಹೋಗಲು ಒಪ್ಪಿದ್ದಾರಂತೆ."

"ನೀನು ತುಂಬ ಭಾಗ್ಯಶಾಲಿ ಗುಂಡಾ."

"ನೀನು ಏನುಮಾಡುತ್ತೀ ದಾಸಣ್ಣ ?"

"ತಂದೆ ದಿನದಿನಕ್ಕೆ ದುರ್ಬಲರಾಗುತ್ತಿದ್ದಾರೆ. ತೋಟದಕಡೆ ಹೋಗಿ ಬರುವುದಕ್ಕೂ ಅವರಿಗೆ ಸಾಧ್ಯವಾಗುತ್ತಿಲ್ಲ. ಮನೆಯ ಜವಾಬ್ದಾರಿ ನಾನೇ ವಹಿಸಿಕೊಂಡು ಅವರಿಗೆ ವಿಶ್ರಾಂತಿ ಕೊಡಬೇಕಾಗಿದೆ. ಪ್ರಾಥಮಿಕ ಶಾಲೆಯಲ್ಲಿ ಒಂದು ಕೆಲಸ ಖಾಲಿಯಿದೆಯಂತೆ. ಅದಕ್ಕೂ ಅರ್ಜಿ ಗುಜರಾಯಿಸುತ್ತೇನೆ. ಇನ್ಸ್‌ಪೆಕ್ಟರ್ ಹೊಂಬೇಗೌಡರಿಗೂ ತಂದೆಯವರಿಗೂ ಚೆನ್ನಾಗಿದೆ. ಕೆಲಸ ಸಿಕ್ಕಿದರೂ ಸಿಕ್ಕಬಹುದು."

"ಹಳೇಸ್ನೇಹಿತನ್ನ ಮರಿಯಬೇಡಪ್ಪಾ. ಆಗಾಗ್ಗೆ ಕಾಗದ ಬರೆಯುತ್ತಿರು."

"ಆ ಮಾತು ನಾನು ಹೇಳಬೇಕು ಗುಂಡಾ. ದೊಡ್ಡಸ್ಥಳಕ್ಕೆ ಹೋಗುತ್ತಾ ಇದ್ದೀ. ನಾಳೆ ಅರಮನೆ ವಿದ್ವಾಂಸನಾಗುತ್ತೀ. ನಿನ್ನ ವಿಶ್ವಾಸ, ಆಶ್ರಯ ನನಗಿರಬೇಕಪ್ಪ."

"ಅರಮನೆ ಸೇರಿ ನನ್ನ ಲೌಕಿಕಪ್ರತಿಷ್ಠೆ ಬೆಳಸಿಕೊಳ್ಳಬೇಕೆಂದು ಸ್ವಲ್ಪವೂ ಇಷ್ಟವಿಲ್ಲ ದಾಸಣ್ಣ. ಚೆನ್ನಾಗಿ ಗುರುಸೇವೆಮಾಡಿ, ಅವರು ಪ್ರಸಾದ ರೂಪವಾಗಿ ಕರುಣಿಸುವ ವಿದ್ಯೆಯನ್ನು ರೂಢಿಸಿಕೊಳ್ಳಬೇಕೆಂದು ಆಸೆ. ಮನೆತನಕ್ಕೆ ಬಂದ ವೈದಿಕವೃತ್ತಿ ಇದ್ದೆ ಇದೆ–ಹೇಗೋ ಹೊಟ್ಟೆಯಪಾಡು ಕಳೆದು ಹೋಗುತ್ತದೆ. ಹತ್ತು ಜನರ ಸೇವೆಯಲ್ಲಿ ಈ ದೇಹ ಸವೆದುಹೊದರೆ ನಾನು ಧನ್ಯನಾಗುತ್ತೇನೆ."

"ಈ ವರ್ಷ ನನಗೆ ಮದುವೆ ಮಾಡಬೇಕೂಂತ ತಂದೆ ಹಟಹಿಡಿದಿದ್ದಾರೆ. ಏನು ಮಾಡಲೋ ಗುಂಡಾ. ಅವರಿಗೆ ಸಂಧಿವಾತ ಬಂದಾರ್ಭಿನಿಂದ ನನ್ನ ಮದುವೆಯ ಯೋಚನೆಯೇ ಆಗಿದೆ."

"ತಂದೆತಾಯಿಯ ಮಾತು ದೇವವಾಕ್ಯಕ್ಕಿಂತ ಪವಿತ್ರವಾದದ್ದು

ದಾಸಣ್ಣ. ತಮ್ಮ ಕಣ್ಣೆದುರಿಗೆ ಮಗನ ಮದುವೆಯಾಗಿ ಹೋಗಲಿ ಎಂದು ನಿಮ್ಮ ತಂದೆ ಬಯಸುವುದು ನ್ಯಾಯವಾಗಿಯೇ ಇದೆ."

"ನಿನ್ನ ಮದುವೆ ಯಾವಾಗ?"

"ಪ್ರಾಯಶಃ ನಾನು ಶೃಂಗೇರಿಯಿಂದ ಹಿಂದಿರುಗಿದ ಮೇಲೆ. ನನ್ನ ಸೋದರಮಾವನ ಮಗಳನ್ನೇ ತಂದೆಯವರು ಗೊತ್ತುಮಾಡಿದ್ದಾರೆ."

"ಆ ಹುಡುಗಿ ಚೆನ್ನಾಗಿಲ್ಲವಲ್ಲೋ ಗುಂಡಾ."

"ಅಪ್ಪಾ, ಚೆನ್ನಾಚಾರ ಕಟ್ಟಿಕೊಂಡು ನನಗೇನು—ತಂದೆಯವರು ಹಸೆಯಮೇಲೆ ಬಾ ಎಂದು ಕರೆದರೆ ಹೋಗುವುದಷ್ಟೇ ನನ್ನ ಕೆಲಸ. ನನ್ನ ಸೋದರಮಾವನೂ ಸಾತ್ತ್ವಿಕರು, ಸಂಪ್ರದಾಯಸ್ಥರು. ಅವರ ಮಗಳು ನನ್ನ ಬಡತನಕ್ಕೆ ಹೊಂದಿಕೊಂಡು ದೇವರಸೇವೆ, ಗುರುಸೇವೆಯಲ್ಲಿ ನನಗೆ ನೆರವಾದರೆ ಸಾಕು."

ಗುಂಡಾಭಟ್ಟ ಶೃಂಗೇರಿ ಹೋದ ವರ್ಷವೇ ದಾಸಪ್ಪನ ಮದುವೆಯಾಗಿ ಹೋಯಿತು. ಸೊಸೆ ಮನೆಗೆ ಬಂದ ಆರು ತಿಂಗಳಲ್ಲಿ ದಾಸಪ್ಪನ ತಂದೆ ಕಣ್ಣುಮುಚ್ಚಿಕೊಂಡರು.

ಐದುವರ್ಷಕಾಲ ಗುಂಡಾಭಟ್ಟನ ಪಾಠಪ್ರವಚನ ಶೃಂಗೇರಿಯಲ್ಲಿ ನಿರಾತಂಕವಾಗಿ ಸಾಗಿತು.

ಆರನೆಯ ವರ್ಷ ತಂದೆಯವರ ಕಾಹಿಲೆಯ ಆರೈಕೆಗೆ ರುದ್ರಾಕ್ಷಿಪುರಕ್ಕೆ ಬಂದ ಗುಂಡಾಭಟ್ಟ ಮರಳಿ ಶೃಂಗೇರಿಗೆ ಹೋಗಲಿಲ್ಲ. ಸೀತಾರಾಮಭಟ್ಟರು ಸಂಸಾರದ ನೊಗವನ್ನು ಮಗನ ಹೆಗಲಮೇಲೆ ಹಾಕಿ ನಿರಾಂತಕವಾಗಿ ಪರಲೋಕಯಾತ್ರೆ ಮಾಡಿದರು.

ಗುಂಡಾಭಟ್ಟ ತಂದೆಗೆ ಮಾತುಕೊಟ್ಟಿದ್ದಂತೆ ತನ್ನ ಸೋದರಮಾವನ ಮಗಳನ್ನೇ ಮದುವೆಯಾದ.

ದೇವಮ್ಮ ರೂಪವತಿಯಾಗಿರಲಿಲ್ಲ. ಬೊಗಸೆಗಂಗಳು, ಕುಟಿಲ ಕುಂತಳ, ಕೃಶಕಟಿ, ರಂಭೋರುಗಳ ಹೆಸರನ್ನು ಅವಳು ಕೇಳಿಯೂ ಅರಿಯಳು. ಸಂಪ್ರದಾಯಬದ್ಧವಾದ ಬಡಕುಟುಂಬದಲ್ಲಿ ಹುಟ್ಟಿ ಬೆಳೆದಿದ್ದ ದೇವಮ್ಮ ಪತಿಸೇವೆ, ಗುರುಹಿರಿಯರಸೇವೆ, ದೇವರ ಸೇವೆಗಳಲ್ಲಿ ಸಕಲೈಶ್ವರ್ಯವನ್ನೂ ಕಾಣುತ್ತಿದ್ದಳು.

ಬೆಳಿಗ್ಗೆ ಎದ್ದ ಕೂಡಲೆ ಗಂಡನಮುಖ ಮೊದಲು ನೋಡಿ, ಅವನ

ಪಾದಗಳಿಗೆ ದೂರದಿಂದಲೇ ನಮಸ್ಕರಿಸಿ, ಸ್ನಾನ ಮುಗಿಸಿ, ತುಳಸೀ ಪೂಜೆ ಮಾಡಿ ತರುವಾಯ ಮನೆಗೆಲಸಗಳನ್ನು ನಿರ್ವಹಿಸುತ್ತಿದ್ದಳು. ಗಂಡ ಮನೆಗೆ ಬಂದು ಊಟ ಮುಗಿಸಿದಲ್ಲದೆ ತಾನು ಬಾಯಿಗೆ ನೀರು ಹಾಕುತ್ತಿರಲಿಲ್ಲ.

ನೆರೆಹೊರೆಯವರಿಗೂ ದೇವಮ್ಮ ಅಚ್ಚುಮೆಚ್ಚಾಗಿದ್ದಳು. ಯಾರ ಮನೆಯಲ್ಲಿ ಅನುವು, ಆಪತ್ತು ಬಂದರೂ ಅವರ ಸೇವೆಗೆ ದೇವಮ್ಮ ಸಿದ್ಧ.

ದೇವಮ್ಮನಿಗೂ ದಾಸಪ್ಪನ ಹೆಂಡತಿ ನರಸಮ್ಮನಿಗೂ ಸಹಜವಾಗಿ ಸ್ನೇಹ ಬೆಳೆದುದಲ್ಲದೆ, ಪಾರ್ವತಿಯೂ ಅವರ ಸ್ನೇಹಕ್ಕೆ ಬೆಸುಗೆ ಹಾಕಿದ್ದಳು. ಒಮ್ಮೊಮ್ಮೆ ನರಸಮ್ಮ ತನ್ನ ಗೆಳತಿಯ ಬಗ್ಗೆ ಮರುಕತೋರುತ್ತ

"ನಿನಗೆ ಮಕ್ಕಳೇ ಆಗಲಿಲ್ಲವಲ್ಲೇ ದೇವೂ—ಗಂಡನ್ನ ಕರ್ಕೊಂಡು ವಿದುರಾಶ್ವತ್ಥಕ್ಕೆ ಹೋಗಿ ಸೇವೆ ಮಾಡಿಕೊಂಡು ಬರಬಾರದೇ ?"

"ದೇವರಸೇವೆ ವಿಷಯದಲ್ಲಿ ನಾವು ವಂಚನೆಮಾಡಿಲ್ಲ ನರಸಾ. ವಿದುರಾಶ್ವತ್ಥದಲ್ಲಿರುವ ಅಶ್ವತ್ಥನಾರಾಯಣ ಇಲ್ಲೂ ಇದ್ದಾನೆ. ನನ್ನ ಭಾಗಕ್ಕೆ ಅವರೇ ಎಲ್ಲಾ ಆಗಿದ್ದಾರೆ ನೋಡು."

"ಮಕ್ಕಳಾಗಲಿಲ್ಲವಲ್ಲ ಎಂದು ನಿನ್ನ ಗಂಡ ವ್ಯಸನಪಡುವುದಿಲ್ಲವೇನೇ ?"

"ಅವರ ಮನಸ್ಸಿನಲ್ಲಿ ಆಸೆ ಇರಬಹುದು. ಆದರೆ ಒಂದು ದಿನವೂ ಆ ಮಾತಾಡಿಲ್ಲ ಕಣೇ ನರಸಾ. ನಾನು ಎಷ್ಟು ಜನ್ಮದ ಪುಣ್ಯ ಮಾಡಿದ್ದೆನೋ–ಅಂಥ ಗಂಡನನ್ನು ಪಡೆಯುವುದಕ್ಕೆ. ನಿರ್ಭಾಗ್ಯಳು–ನನ್ನ ಕೈಹಿಡಿದು ಅವರಿಗೆ ಯಾವ ಸುಖವೂ ಇಲ್ಲ."

"ಅದಕ್ಕೇಕೆ ಕಣ್ಣಲ್ಲಿ ನೀರು ಹಾಕಿಕೊಳ್ಳುತ್ತೀಯಮ್ಮ. ನಿನಗೆ ಮಕ್ಕಳಾಗುವ ಕಾಲ ಮೀರಿಲ್ಲ. ಇಂದಲ್ಲ ನಾಳೆ ಆಗುತ್ತದೆ. ಅಲ್ಲಿಯವರೆಗೆ ಬೇಕಾದರೆ ಪಾತೀನ ನೀನೇ ಸಾಕಿಕೋ."

ನರಸಮ್ಮ ನಿರ್ವ್ಯಾಜ ಅಂತಃಕರಣದಿಂದಲೇ ಆ ಮಾತು ಆಡಿದ್ದಳು. ಅವಳ ಮಾತಿನಲ್ಲಿ ಸ್ವಲ್ಪವಾದರೂ ಕೊಂಕು, ಕುಹಕವಿರಲಿಲ್ಲ.

ತನ್ನ ಗೆಳತಿಯ ಮನೋಭಾವವನ್ನು ದೇವಮ್ಮ ಚೆನ್ನಾಗಿ ಬಲ್ಲಳು. ವಿನೋದಕ್ಕಾಗಿಯೂ ನರಸ ತನ್ನನ್ನು ಹಾಸ್ಯ ಮಾಡುವುದಿಲ್ಲವೆನ್ನುವುದು ದೇವಮ್ಮನಿಗೆ ಚೆನ್ನಾಗಿ ಗೊತ್ತಿತ್ತು.

ಆದರೂ ಅವಳ ಮನಸ್ಸು ಮಮ್ಮಲ ಮರುಗಿತು.

'ನನಗೆ ಮಕ್ಕಳಾಗಿದ್ದರೆ ನರಸ ಈ ಮಾತು ಹೇಳುತ್ತಿದ್ದಳೇ ?'

ಒಂದು ದಿನ ಹಾರೋಹಳ್ಳಿಯಲ್ಲಿ ಒಬ್ಬರ ಮನೆಯ ನಾಮಕರಣ ಮುಗಿಸಿಕೊಂಡು ಬಂದು ಗುಂಡಾಭಟ್ಟರು ಹಜಾರದಲ್ಲಿ ಕುಳಿತರು. ನಿತ್ಯ ಗೆಲಸ ಪೂರೈಸಿದ್ದ ದೇವಮ್ಮನೂ ಬಂದು ಎದುರಿಗೆ ಕುಳಿತಳು.

ಭಟ್ಟರು ನಾಮಕರಣದ ವಿತರಣೆಯನ್ನೆಲ್ಲಾ ವಿವರಿಸಿದ ಮೇಲೆ ದೇವಮ್ಮ ನಿಟ್ಟುಸಿರು ಬಿಟ್ಟು

"ನನ್ನ ಕಟ್ಟಿಕೊಂಡು ನಿಮಗೆ ಸ್ವಲ್ಪವೂ ಸುಖವಿಲ್ಲ" ಎಂದಳು.

ಭಟ್ಟರು ಕತ್ತೆತ್ತಿ ನೋಡಿದರು. ಯಾವುದೋ ಪ್ರಬಲ ಚಿಂತೆ ಹೆಂಡತಿಯ ಮನಸ್ಸನ್ನು ಕೊರೆಯುತ್ತಿದೆಯೆಂದು ತಿಳಿದು.

"ಏಕೆ ದೇವಿ" ಎಂದು ಕೇಳಿದರು.

"ನಿಮ್ಮ ವಿದ್ಯೆವೂ ಅಪೂರ್ಣವಾಯಿತು. ಮಾವನವರು ಕಣ್ಣುಮುಚ್ಚಿ ಕೊಂಡರು. ಕುರೂಪಿ ನಾನು ನಿಮಗೆ ಗಂಟುಬಿದ್ದೆ—ನನ್ನ ದೌರ್ಭಾಗ್ಯಕ್ಕೆ ಮನೆ ಬೆಳಗಿಸುವುದಕ್ಕೆ ಒಂದು...."

"ನೀನು ತುಂಬ ತಿಳುವಳಿಕಸ್ಥೆ ಎಂದು ನಾನು ನಂಬಿದ್ದೆ ದೇವಿ."

"ನಾನು ತಪ್ಪುಮಾಡಿದೆನೇ ?"

"ಹೌದು. ನಿನ್ನ ಮದುವೆಯಾಗಿ ನಾನು ದುಃಖಪಡುತ್ತಿರುವೆ ಎಂದು ಭಾವಿಸಿರುವೆಯಾ ?"

"..............."

"ಮಕ್ಕಳಾಗುವುದು ಬಿಡುವುದು ಪೂರ್ವಾರ್ಜಿತ. ಈಶ್ವರ ಸಂಕಲ್ಪಕ್ಕೆ ನೀನು ಹೊಣೆಯೇ ?– ನೀನು ಕುರೂಪಿಯಲ್ಲ ದೇವಿ. ಶೃಂಗೇರಿಯಲ್ಲಿ ನನಗೊಂದು ವಿಚಿತ್ರ ಅನುಭವವಾಯಿತು. ಅಣ್ಣಯ್ಯ ಕಾಗದ ಬರೆದು ತಾವು ಉಳಿಯುವುದು ದುಸ್ಸಾಧ್ಯವೆಂತಲೂ ನಾನು ನಿನ್ನನ್ನೇ ಮದುವೆಯಾಗ ಬೇಕೆಂತಲೂ ತಿಳಿಸಿದ್ದರು. ನನಗೂ ಸಣ್ಣ ವಯಸ್ಸು—ರೂಪ ಕಂಡು ಮರುಳಾಗುವ ಕಾಲ. ಅಣ್ಣಯ್ಯನ ಕಾಗದದ ವಿಷಯವನ್ನೇ ಕುರಿತು ಚಿಂತಿಸುತ್ತ ಗುರುಗಳ ಮುಂದೆ ಕುಳಿತಿದ್ದೆ. 'ಛಾಂದೋಗ್ಯ' ಪಾಠ ಹೇಳು ತ್ತಿದ್ದ ಅವರು ತಮ್ಮ ದೃಷ್ಟಿಯನ್ನು ನನ್ನ ಕಡೆ ತಿರುಗಿಸಿದರು. ಅವರ ಮುಖ

ನೋಡಿದೆ—ಒಮ್ಮೆ ಅವರ ಮುಖ—ಒಮ್ಮೆ ಶಾರದಾಮ್ನೋರ ಮುಖ—ಒಮ್ಮೆ ನಿನ್ನ ಮುಖ ಕಂಡುಬಂದಿತು.

'ನಾನು ಕುರೂಪಿಯೇ?' ಎಂದು ಗುರುಗಳು ಕೇಳಿದಂತಾಯಿತು. ನಾನು ಕಂಪಿಸುತ್ತ

'ಇಲ್ಲ ಗುರುಸ್ವಾಮಿ' ಎಂದೆ.

ಅವರು ಕೂಡಲೆ 'ತಾಯಿ ಕುರೂಪಿಯೇ?' ಎಂದು ಕೇಳಿದರು.

ಅವರ ವಿಲಕ್ಷಣಪ್ರಶ್ನೆ ಕೇಳಿ ನನಗೆ ನಡುಕವುಂಟಾಯಿತು.

'ನನ್ನ ತಾಯಿ ತ್ರಿಪುರಸುಂದರಿ' ಎಂದೆ.

ಗುರುದೇವರು, ಮುಗುಳ್ನಗೆ ನಕ್ಕು

'ಮಗೂ, ನಿನ್ನ ಕೈಹಿಡಿಯಲಿರುವ ಮಗುವೂ ತಾಯಿಯಷ್ಟೇ ತ್ರಿಪುರ ಸುಂದರಿ—ನನ್ನಷ್ಟೇ ಸುರೂಪಿ' ಎಂದರು. ಗುರ್ವಾಜ್ಞೆಯಾದಮೇಲೆಯೇ ನಾನು ಊರಿಗೆ ಬಂದು ನಿನ್ನನ್ನು ಮದುವೆಯಾದುದು."

ದೇವಮ್ಮನಿಗೆ ದುಃಖ ತಡೆಯದಾಯಿತು. ಎದ್ದು ಬಂದು ಪತಿಯ ಪಾದಗಳನ್ನು ಹಿಡಿದು

"ನಾನು ಮೂಢೆ-ಅಜ್ಞಾನಿ-ಕರ್ಮಿಷ್ಠೆ; ನೀವು ಜ್ಞಾನಿಗಳು. ನನ್ನ ಅಪರಾಧ ಕ್ಷಮಿಸಿ. ಮಕ್ಕಳಿಲ್ಲವೆಂಬ ಚಿಂತೆಯನ್ನು ಮನಸ್ಸಿನಿಂದ ದೂರ ಮಾಡುತ್ತೇನೆ." ಎಂದು ಹೇಳಿದಳು.

ಅಂದಿನಿಂದ ಊರಿನ ಮಕ್ಕಳೆಲ್ಲಾ ದೇವಮ್ಮನ ಮಕ್ಕಳಾದರು. ಪಾತುವಂತೂ ದೇವಮ್ಮನ ಸೊಂಟದಿಂದ ಕೆಳಗಿಳಿಯುತ್ತಿರಲಿಲ್ಲ.

ಒಂಭತ್ತು ವರ್ಷ ಆದರ್ಶಜೀವನ ನಡೆಸಿದ ದೇವಮ್ಮ ಹಾಸಿಗೆ ಹಿಡಿದು ಮಲಗಿದಳು.

ದೇವಮ್ಮ ಉಳಿಯುವುದಿಲ್ಲವೆಂದು ಭಟ್ಟರ ಮನಸ್ಸಿಗೆ ಭಾಸವಾಯಿತು. ತೀರ್ಥೋದಕವೇ ದೇವಮ್ಮನ ಆಹಾರ, ಔಷಧಿಗಳಾದವು.

ಒಂದು ದಿನ ಭಟ್ಟರು ಬಾಯಿಗೆ ತೀರ್ಥಹಾಕಿದಮೇಲೆ ದೇವಮ್ಮ

"ಇನ್ನು ನಿಮ್ಮ ಸೇವೆಮಾಡುವ ಭಾಗ್ಯ ನನಗಿಲ್ಲ" ಎಂದಳು.

"ನಿನ್ನ ಕಾಯಿಲೆ ಗುಣವಾಗುವುದಿಲ್ಲವೆಂದು ತಿಳಿದಿರುವೆಯಾ?"

"ಗುಣವಾಗುವುದಿಲ್ಲ ನಾನು ಬಲ್ಲೆ. ಪಾತೂ ಮದುವೆಯವರೆಗಾದರೂ ಇರಬೇಕೆಂದು ಮನಸ್ಸಿತ್ತು—ದೈವಸಂಕಲ್ಪ....ನಿಮ್ಮ ಯೋಗಕ್ಷೇಮ...."

ಭಗವಂತನ ಸಾನ್ನಿಧ್ಯಕ್ಕೆ ಹೋಗುವಾಗ ಭಗವಂತನ ಧ್ಯಾನ ಮಾಡಬೇಕು. ನರಧ್ಯಾನ ಮಾಡಿದರೆ ಪುನಃ ನರಜನ್ಮ ಲಭಿಸುತ್ತದೆ."

"ನೀವೇ ಪತಿಯಾಗುವುದಿದ್ದರೆ ಎಷ್ಟುಸಾರಿ ಬೇಕಾದರೂ ನರಜನ್ಮವೆತ್ತಲು ನಾನು ಸಿದ್ಧಳಾಗಿದ್ದೇನೆ."

"ನಿನಗೆ ಪುನರ್ಜನ್ಮವಿಲ್ಲ ದೇವಿ—ನೀನು ಜೀವನ್ಮುಕ್ತೆ."

"ನಿಮ್ಮನ್ನಗಲಿದ ಈ ಜೀವಕ್ಕೆ ಮುಕ್ತಿ ಬೇಕಾಗಿಲ್ಲ ಸ್ವಾಮಿ."

"ನನ್ನ ಕರ್ಮ ನಿನ್ನ ಕರ್ಮಕ್ಕಿಂತಲೂ ದೊಡ್ಡದು— ನಾನು ಸ್ವಲ್ಪ ತಡೆದು ಬರುತ್ತೇನೆ" ಎಂದರು.

ದೇವಮ್ಮ ತನ್ನ ಪಾರ್ಥಿವ ಶರೀರ ಕೊಡಹಿಕೊಳ್ಳುವುದಕ್ಕೆ ಬಹು ದಿನ ಹಿಡಿಯಲಿಲ್ಲ.

ಭಟ್ಟರನ್ನು ಸಂತೈಸುವುದಕ್ಕೆ ಬಂದ ಊರಿನವರಿಗೆ

"ಆತ್ಮ ಅವಿನಾಶಿಯೆಂದು ತಿಳಿದಮೇಲೆ ನಾವು ದೇಹಕ್ಷಯಕ್ಕಾಗಿ ಅಳಬೇಕೇ? ಒಂದು ಗೂಡು ಬಿಟ್ಟ ಹಕ್ಕಿ ಇನ್ನೊಂದು ಗೂಡು ಸೇರಿಕೊಳ್ಳುತ್ತದೆ" ಎಂದು ಅವರು ಹೇಳಿದರು.

ತಮ್ಮ ಆಪ್ತಗೆಳೆಯ ದಾಸಪ್ಪ ಮೃತಪಟ್ಟಾಗಲೂ ಭಟ್ಟರು ಇದೇ ನಿಶ್ಚಲತೆ—ಇದೇ ಧೈರ್ಯ ತೋರಿಸಿದರು. ಅವರ ಅನಾಸಕ್ತಿ ಕಂಡು ಕೆಲವರು 'ಭಟ್ಟರಿಗೆ ಹೃದಯವಿದೆಯೋ?' ಎಂದು ಶಂಕಿಸಿದರು.

ನರಸಮ್ಮ, ಅವಳ ಏಕಮಾತ್ರ ಪುತ್ರಿಯ ಸ್ಥಿತಿ ಕಂಡು ಭಟ್ಟರಿಗೆ ಅಪಾರ ವ್ಯಥೆಯಾಗಿತ್ತು.

'ಪಾತೂಗೆ ಗಂಡು ನೋಡಿ ಒಳ್ಳೆಯ ಮನೆ ಸೇರಿಸಿಬಿಡಬೇಕು' ಎಂದು ಭಟ್ಟರು ನಿರ್ಧರಿಸಿಕೊಂಡರು.

# ೩

ಸಂಸ್ಥಾನದ ಆಡಳಿತ ದಕ್ಷತೆಗೇ ತುಮಕೂರು ಕುಠಾರಪ್ರಾಯ ವಾಗುತ್ತಾ ಬಂದಿತು. ಊರಿನ ಒಬ್ಬಿಬ್ಬ ಪುಢಾರಿಗಳ ಕೈಗೆ ಸಿಕ್ಕಿ ಇಡಿಯ ಜಿಲ್ಲೆ ತಳಮಳಿಸುತ್ತಿತ್ತು. ಪೂರ್ವಕಾಲದಲ್ಲಿ ಪಾಳೆಯಗಾರರು ತಲೆಯೆತ್ತಿ ಕೊಂಡು ಜನರನ್ನು ಪೀಡಿಸುತ್ತಿದ್ದಂತೆ ಈಗ ಪುಢಾರಿಗಳು ಪೀಡಿಸಲಾರಂಭಿ ಸಿದ್ದರು. ಜನರ ಮಾನ, ಪ್ರಾಣಗಳಿಗೆ ಯಾವ ರಕ್ಷಣೆಯೂ ಇಲ್ಲದಂತಾಗಿತ್ತು.

ತುಮಕೂರಿನ ಪರಿಸ್ಥಿತಿ ದಿನೇ ದಿನೇ ಕುಲಗೆಟ್ಟು ಹೋಗುತ್ತಿದ್ದುದನ್ನು ಕಂಡು ಸರ್ಕಾರದವರು ಹಾಜಿ ಅಬ್ದುಲ್ ಜಬ್ಬಾರ್ ಅವರನ್ನು ತುಮಕೂರಿನ ಜಿಲ್ಲಾಧಿಕಾರಿಗಳಾಗಿ ನಿಯಮಿಸಿದರು.

ಜಬ್ಬಾರ್ ಸಾಹೇಬರು ತುಮಕೂರಿಗೆ ಬರುವ ವಿಷಯ ಕೇಳಿಯೇ ಪುಢಾರಿಗಳ ಪುಂಡು ಅರ್ಧ ಇಳಿದು ಹೋಯಿತು. ಜಬ್ಬಾರ್ ಸಾಹೇಬರು ಜಿಲ್ಲಾಧಿಕಾರ ವಹಿಸಿಕೊಂಡ ದಿನವೇ ತಮ್ಮ ಮನೋಧರ್ಮ ಪ್ರದರ್ಶಿಸಿದರು.

ತುಮಕೂರಿನಲ್ಲಿ ಕೆಂಪಯ್ಯ, ರೇವಣ್ಣ ಸಿದ್ದಪ್ಪ, ಪ್ಲೀಡರ್ ಭೀಮರಾಯ, ಸತ್ತಾರ್ ಸಾಹೇಬ್ ಹಲವು ಬಗೆಯಲ್ಲಿ ಗಣ್ಯಸ್ಥಾನ ಗಳಿಸಿಕೊಂಡಿದ್ದರು. ಊರಿನ ಸಾರ್ವಜನಿಕ ಸಂಸ್ಥೆಗಳು ಇವರ ಕೈ ಅಥವಾ ಇವರ ಪರಿವಾರದವರ ಕೈಬಿಟ್ಟು ಹೋಗುವಂತಿರಲಿಲ್ಲ. ಅಧಿಕಾರಿಗಳಾಗಿ ಬರುತ್ತಿದ್ದ ರೆವಿನ್ಯೂ ಇನ್ಸ್‌ಪೆಕ್ಟರ್ ಮೊದಲುಗೊಂಡು ಜಿಲ್ಲಾಧಿಕಾರಿಗಳವರೆಗೆ ಎಲ್ಲರೂ ಇವರ ಮರ್ಜಿ ಅನುಸರಿಸುತ್ತಿದ್ದರು. ಆಕಸ್ಮಾತ್ತಾಗಿ ಯಾವನಾದರೂ ಪೋಲೀಸ್ ಅಧಿಕಾರಿಯೋ ರೆವಿನ್ಯೂ ಅಧಿಕಾರಿಯೋ ಇವರ ವಿರುದ್ಧ ನಿಂತರೆ ಅವನ ಮೇಲೆ ನೂರಾರು ಪುಕಾರುಗಳು, ಮೂಗರ್ಜಿಗಳು ಹೊರಟು ಅವನಿಗೆ 'ಎತ್ತಂಗಡಿ'ಯಾಗುತ್ತಿತ್ತು. ಕೆಂಪಯ್ಯ ಕಂಪೆನಿಗೆ ಊರಿನವರೆಷ್ಟು

ಹೆದರುತ್ತಿದ್ದರೋ ಅಧಿಕಾರಿಗಳೂ ಅಷ್ಟೇ ಹೆದರುತ್ತಿದ್ದರು. 'ಮಾಮೂಲು' ಪ್ರಿಯರಾದ ಅಧಿಕಾರಿಗಳಿಗಂತೂ ಕೆಂಪಯ್ಯ ಕಂಪೆನಿಯವರಿಂದ ಅಲ್ಪಸ್ವಲ್ಪ ಲಾಭವೂ ಆಗುತ್ತಿತ್ತು.

ತುಮಕೂರಿಗೆ ಬರುವ ಮುನ್ನ ಅಲ್ಲಿನ ವಿದ್ಯಮಾನಗಳನ್ನರಿತುಕೊಂಡೇ ಜಬ್ಬಾರ್ ಸಾಹೇಬರು ಬಂದರು. ಅವರು ಅಧಿಕಾರವಹಿಸಿಕೊಳ್ಳುವ ದಿನ ಕೆಂಪಯ್ಯ ಕಂಪೆನಿಯವರು ಹಾರ ತುರಾಯಿ, ನಿಂಬೇಹಣ್ಣು, ಹಣ್ಣಿನ ತಟ್ಟೆಗಳನ್ನು ಹಿಡಿದು ಸಾಹೇಬರ ಬಂಗಲೆಯ ವೆರಾಂಡಾದಲ್ಲಿ ಠಾಣ್ಯ ಹೂಡಿದರು.

ಅರ್ಧಗಂಟೆಯಾದರೂ ಡೆಪ್ಯುಟಿ ಕಮಿಷನರ್ ಸಾಹೇಬರ ಸುಳಿವೇ ಇಲ್ಲ. ತನ್ನನ್ನೂ ತನ್ನ ಕಂಪೆನಿಯನ್ನೂ ಹೀಗೆ ಕಾಯಿಸುವ ಈ ಅಧಿಕಾರಿ ಯಾರು—ಇವನ ಪೊಗರೆಷ್ಟು ಎಂದು ಕೆಂಪಯ್ಯ ಒಳಗೇ ಕುದಿಯ ಲಾರಂಭಿಸಿದ.

ಒಂದು ಗಂಟೆ ಕಳೆಯಿತು-ಡೆಪ್ಯುಟಿ ಕಮಿಷನರ್ ಸಾಹೇಬರು ಹೊರಕ್ಕೆ ಬರಲಿಲ್ಲ.

ಕೆಂಪಯ್ಯ ಸಾಹೇಬರ ಆಳನ್ನು ಕರೆದು

"ನಾನು ಬಂದಿರೋದು ಹೇಳಯ್ಯ" ಎಂದ.

"ಹೇಳಿದೆ ಬುದ್ಧಿ."

"ಸಾಹೇಬರು ಏನಂದರು ?"

"ಯಾವದೊ ಫೈಲ್ ನೋಡ್ತವ್ರೆ ಬುದ್ಧಿ."

"ಇನ್ನೊಂದು ಸಲ ಹೇಳು."

ಆಳು ಒಳಕ್ಕೆ ಹೋದ ಹತ್ತು ನಿಮಿಷಗಳ ತರುವಾಯ, ಸಾಹೇಬರು ಕೈಯಲ್ಲಿ ಕನ್ನಡಕ ಹಿಡಿದುಕೊಂಡು ಹೊರಬಂದು

"ಏನ್ರೀ ಬಂದಿದ್ದಿರಿ ?" ಎಂದರು.

ಕೆಂಪಯ್ಯ ದೇಶಾವಾರದ ನಗೆ ಬೀರುತ್ತಾ ಸಾಹೇಬರಿಗೆ ತನ್ನ ಮಿತ್ರ ವರ್ಗದ ಪರಿಚಯಮಾಡಿಕೊಟ್ಟು

"ತಾವು ನಮ್ಮ ಜಿಲ್ಲಾಧಿಕಾರಿಗಳಾಗಿ ಬಂದಿರುವುದು ತುಂಬ ಸಂತೋಷ.

ಹಿಂದಿದ್ದ ಜಿಲ್ಲಾಧಿಕಾರಿಗಳು ನಮ್ಮನ್ನು ನಡೆಸಿಕೊಂಡಂತೆ ತಾವೂ ನಡಸಿಕೊಳ್ಳಬೇಕು."

ಎಂದು ಹೇಳಿ ಹಾರಹಾಕಲು ಹೋದ. ಸಾಹೇಬರು ಹಾರ ನಿರಾಕರಿಸಿ

"ಕೆಂಪಯ್ಯನವರೇ, ಹಿಂದಿದ್ದ ಅಧಿಕಾರಿಗಳಿಗೂ ನನಗೂ ತುಂಬ ವ್ಯತ್ಯಾಸವಿದೆ. ನನಗೆ ಯಾವದು ನ್ಯಾಯ ಎಂದು ತೋರುತ್ತದೆ ಅದನ್ನೇ ನಾನು ಮಾಡುವವನು. ಅಧಿಕಾರಿಗಳ ಮೇಲೆ ನಿಮ್ಮ ಪ್ರಭಾವಬೀರಿ ಅವರ ಕೈಯ್ಯಿಂದ ಕೆಲಸಮಾಡಿಸಿಕೊಳ್ಳುವ ಕಾಲ ಹೋಯಿತು.—ಇನ್ನೊಂದು ಮಾತು–ಇಲ್ಲಿಗೆ ನೀವು ಯಾರೂ ಬರುವ ಅಗತ್ಯವಿಲ್ಲ. ಕಛೇರಿಯ ಕೆಲಸವಿದ್ದರೆ ಅಲ್ಲಿಗೇ ಮೂರರಿಂದ ನಾಲ್ಕಾರ ಒಳಗೆ ಬರಬಹುದು."

ಎಂದು ಹೇಳಿದವರೇ ಒಳಗೆ ಹೊರಟು ಹೋದರು.

ಅಪಮಾನಗೊಂಡ ಕೆಂಪಯ್ಯ, ಅವನ ಮಿತ್ರರು ಹಾರ, ತುರಾಯಿ, ಹಣ್ಣುಗಳನ್ನು ಹೊತ್ತುಕೊಂಡು ಹಿಂದಿರುಗಿದರು.

ಜಿಲ್ಲಾಧಿಕಾರಿಗಳ ದುರಹಂಕಾರಕ್ಕೆ ಬರೆಯೆಳೆಯಬೇಕೆಂದು ಕೆಂಪಯ್ಯ ಅವನ ಮಂಡಳಿ ನಿರ್ಧರಿಸಿಕೊಂಡರೂ ಹೇಗೆಂಬುದನ್ನು ಬಗೆಗಾಣದಾದರು.

ಮಧುಗಿರಿಯಲ್ಲಿ ನಡೆದ ಪ್ರಸಂಗ ಜಬ್ಬಾರ್ ಸಾಹೇಬರ ಕೀರ್ತಿಯನ್ನು ಜಿಲ್ಲೆಯಲ್ಲಿ ಬೆಳಗಿಸಿದುದಲ್ಲದೆ, ಸರ್ಕಾರಕ್ಕೂ ಒಯ್ದು ಮುಟ್ಟಿಸಿತು.

ಜಿಲ್ಲಾಧಿಕಾರಿಗಳು ಜಿಲ್ಲಾಪ್ರವಾಸ ಹೊರಟರು. ಅವರ ಜತೆ ಆಪ್ತಸಚಿವ ಸೂರಪ್ಪ, ಆಳು ತಿಮ್ಮಯ್ಯನೂ ಇದ್ದರು. ಸಾಹೇಬರ ಕಾರು ಕೊರಟಿಗೆರೆಯಿಂದ ಶಿರಾ ಮುಟ್ಟಬೇಕಾದರೆ ಒಂಭತ್ತು ಗಂಟೆಯಾಯಿತು.

ಸೂರಪ್ಪ ಸಾಹೇಬರ ಸಮೀಪಕ್ಕೆ ಬಂದು

"ಊಟಕ್ಕೆ ಇಲ್ಲೇ ವ್ಯವಸ್ಥೆಮಾಡಲೇ" ಎಂದು ಕೇಳಿದ.

"ಇಲ್ಲಿ ಬೇಡ. ಶಿರಾ ಇನ್ಸ್‌ಪೆಕ್ಷನ್ ಮುಗಿಸಿಕೊಂಡು ಮಧುಗಿರಿಗೆ ಹೋಗಿಬಿಡೋಣ. ಅಲ್ಲಿ ಊಟ ಮುಗಿಸಿಕೊಂಡು ನಾವು ಊರಿಗೆ ಹಿಂದಿರುಗಲು ಅನುಕೂಲವಾಗುತ್ತದೆ.—ಟ್ರ್ಯಾವಲರ್ಸ್ ಬಂಗ್ಲೋದಲ್ಲಿ ನಮ್ಮ ಊಟದ ವ್ಯವಸ್ಥೆ ಮಾಡುವಂತೆ ಅಮಲ್ದಾರರಿಗೆ ಫೋನ್ ಮಾಡಿ ತಿಳಿಸಿ" ಎಂದರು.

ಜಿಲ್ಲಾಧಿಕಾರಿಗಳು ಅವರ ಪರಿವಾರ ಮಧುಗಿರಿ ತಲುಪಬೇಕಾದರೆ ಮಧ್ಯಾಹ್ನ ಒಂದುಗಂಟೆಯಾಯಿತು.

ಅಮಲ್ದಾರ ವೆಂಕಟೇಶಯ್ಯನವರಿಗೆ ಊರಿನ ಸಾಹುಕಾರ ನಂಜುಂಡರಾಮಶೆಟ್ಟಿ ಒಂದೇ ಸಮನಾಗಿ ಗಂಟುಬಿದ್ದಿದ್ದ. ಅವನ ಕಾಟ ತಡೆಯಲಾಗದೆ ಅಮಲ್ದಾರರು, ಡಿ. ಸಿ ಸಾಹೇಬರಿಗೂ ಅವರ ಪರಿವಾರಕ್ಕೂ ಪ್ರವಾಸಿಗರ ಬಂಗಲೆಯಲ್ಲಿ ಊಟದ ವ್ಯವಸ್ಥೆಮಾಡುವ ಅಧಿಕಾರ ವಹಿಸಿಬಿಟ್ಟರು.

ಡೆಪ್ಯುಟಿ ಕಮಿಷನರ್ ಸಾಹೇಬರು ಬಂದ ಕೂಡಲೆ ಊರಿನವರ ಅಹವಾಲು ಕೇಳಿಕೊಂಡು ಸುಮಾರು ಮೂರುಗಂಟೆಗೆ ಊಟಕ್ಕೆ ಹೊರಟರು.

ನಂಜುಂಡರಾಮಶೆಟ್ಟಿ ಸೊಗಸಾದ ಔತಣದ ವ್ಯವಸ್ಥೆಮಾಡಿದ್ದುದಲ್ಲದೆ ತನ್ನ ಬಂಧು ಬಾಂಧವರು, ಇಷ್ಟಮಿತ್ರರನ್ನೂ ಊಟಕ್ಕೆ ಕರೆದಿದ್ದ.

ಊಟಮುಗಿದ ಮೇಲೆ ಐದು ಗಂಟೆಯವರೆಗೆ ಸಾಹೇಬರು, ಸಬ್ ಡಿವಿಜನ್ ಆಫೀಸರ್ ಜತೆಯಲ್ಲಿ ಕುಳಿತು ಸರ್ಕಾರಿ ಕೆಲಸ ಮುಗಿಸಿ

"ಇನ್ನು ನಾವು ಹೊರಡಬಹುದೇ ಅಮಲ್ದಾರರೇ" ಎಂದು ಕೇಳಿದರು.

"ಖಾವಿಂದರ ಚಿತ್ತ."

"ಸೂರಪ್ಪನವರು ಏನೆಂದು ನಿಮಗೆ ಫೋನ್ ಮಾಡಿದ್ದರು."

"ತಮಗೂ, ತಮ್ಮ ಪರಿವಾರಕ್ಕೂ ಟಿ.ಬಿಯಲ್ಲಿ ಊಟದ ವ್ಯವಸ್ಥೆ ಮಾಡಬೇಕೆಂದು."

"ಆ ಕೆಲಸ ನೀವು ನಂಜುಂಡರಾಮಶೆಟ್ಟರಿಗೇಕೆ ಒಪ್ಪಿಸಿದಿರಿ."

"ನಾನು ಒಪ್ಪಿಸಲಿಲ್ಲ ಮಹಾಸ್ವಾಮಿ. ಶೆಟ್ಟರು ಬಂದು ನನ್ನನ್ನು ತುಂಬಕಾಡಿದರು. ವಿಧಿಯಿಲ್ಲದೆ ಒಪ್ಪಿಕೊಂಡೆ."

ಡೆಪ್ಯುಟಿ ಕಮಿಷನರ್ ಸಾಹೇಬರು ಕಿಸೆಯಿಂದ ಪರ್ಸ್‌ತೆಗೆದು ಎಪ್ಪತ್ತು ರೂಪಾಯಿಗಳನ್ನೆಣಿಸಿ

"ನಾನು ಲೆಕ್ಕಹಾಕಿ ನೋಡಿದ್ದೇನೆ. ಸುಮಾರು ೩೦-೩೫ ಜನ ಊಟಮಾಡಿದ್ದಾರೆ. ಒಂದೂಟಕ್ಕೆ ಎರಡು ರೂಪಾಯಿನಂತೆ ಖರ್ಚಾಗಿದ್ದರೂ ಎಪ್ಪತ್ತು ರೂಪಾಯಿಗಳಾಗುತ್ತವೆ. ಈ ಹಣ ತೆಗೆದುಕೊಂಡು ನಂಜುಂಡ ರಾಮಶೆಟ್ಟರಿಗೆ ತಲುಪಿಸಿಬಿಡಿ."

ಅಮಲ್ದಾರರು ಗಡಗಡ ನಡಗುತ್ತ ನಿಂತರು. ಅವರ ಬಾಯಲ್ಲಿ ದ್ರವವೇ ಆರಿಹೋಗಿತ್ತು.

"ಈ ಶೆಟ್ಟಿ ಮೋಸಗಾರನೆಂಬುದು ನನಗೆ ತಿಳಿದಿಲ್ಲವೆಂದುಭಾವಿಸಿದ್ದೀರಾ ಅಮಲ್ದಾರರೇ. ತಾಲ್ಲೂಕು ಅಮಲ್ದಾರರಾಗಿರುವ ನೀವು ಇಂಥವರ ಪ್ರಭಾವಕ್ಕೆ ಒಳಗಾಗಿರುವುದು ತುಂಬ ವಿಷಾದಕರ."

ಅಮಲ್ದಾರರು ಡೆಪ್ಯುಟಿ ಕಮಿಷನರ್ ಸಾಹೇಬರ ಪಾದ ಹಿಡಿದು

"ತಪ್ಪಾಯಿತು ಸ್ವಾಮಿ—ಕ್ಷಮಿಸಬೇಕು—ಮಕ್ಕಳೊಂದಿಗ." ಎಂದು ಅಂಗಲಾಚಿಕೊಂಡರು.

ಸಾಹೇಬರು ಸಮಾಧಾನದಿಂದ

"ನೀವು ಮಕ್ಕಳೊಂದಿಗರೆಂದೇ ನಾನು ಉದಾರ ಚಿತ್ತದಿಂದ ನಡೆದು ಕೊಳ್ಳುತ್ತೇನೆ. ನೀವು ಎಕ್ಸಕ್ಯೂಟಿವ್ ಪೋಸ್ಟ್ (Executive post) ನಲ್ಲಿರುವುದಕ್ಕೆ ಲಾಯಖ್ಖಿಲ್ಲ. ನಾಳೆಯೇ ಸಬ್‌ಡಿವಿಜನ್ ಆಫೀಸರಿಗೆ ಚಾರ್ಜುವಹಿಸಿ ತುಮಕೂರಿಗೆ ಬಂದು ನನ್ನನ್ನು ನೋಡಿ."

"ಕೆಲಸದಿಂದ ತೆಗೆದುಹಾಕಬೇಡಿ ಸ್ವಾಮಿ. ಇನ್ನು ಜನ್ಮಜನ್ಮಾಂತ ರಕ್ಕೂ ಇಂಥ ಕೆಲಸ ಮಾಡುವುಲ್ಲ."

"ಒಳ್ಳೆಯದು. ಆಫೀಸಿಗೆ ತೆಗೆದುಕೊಳ್ಳುತ್ತೇನೆ ಬನ್ನಿ" ಎಂದರು.

ಮಧುಗಿರಿ ಅಮಲ್ದಾರರಿಗಾದ ಅನುಭವ ಕೇಳಿ ಜಿಲ್ಲೆಯ ಎಲ್ಲ ಅಮಲ್ದಾರರ ಎದೆ ಬಿಚ್ಚಿಹೋಯಿತು.

ಜಬ್ಬಾರ್ ಸಾಹೇಬರು ತುಮಕೂರಿಗೆ ಡೆಪ್ಯುಟಿ ಕಮಿಷನರಾಗಿ ಬಂದ ಮೇಲೆ ಊರಿನ ಮುಸಲ್ಮಾನರಿಗೆ ಸ್ವಲ್ಪ ರೆಕ್ಕೆ ಪುಕ್ಕ ಬೆಳೆಯಿತು. 'ನಮ್ಮವರು ಜಿಲ್ಲಾ ಧಣಿಗಳಾಗಿದ್ದಾರೆ. ನಾವು ಏನು ಮಾಡಿದರೂ ನಡೆದು ಹೋಗುತ್ತದೆ' ಎನ್ನುವ ಧೈರ್ಯ ಜಟಕಾ ಸಾಹೇಬರಿಂದ ದೊಡ್ಡ ಶ್ರೀಮಂತರವರೆಗೆ ಎಲ್ಲರಿಗೂ ಬಂದಿತ್ತು. ಪುಂಡ ಮುಸಲ್ಮಾನರು ಅಲ್ಲಲ್ಲಿ ಹುಲ್ಲು ಚಿಕ್ಕುವವ ರನ್ನು, ಸೌದೆ ಗಾಡಿ ತರುವ ರೈತರನ್ನು, ಹಾಲು ಮೊಸರು ತರುವ ಹಳ್ಳಿಯ ಹೆಂಗಸರನ್ನು ಪೀಡಿಸುತ್ತಿದ್ದರು. ಇವರ ವಿಷಯದಲ್ಲಿ ತಕ್ಕ ಕ್ರಮ ತೆಗೆದು ಕೊಳ್ಳಲು ಪೋಲೀಸ್ ಖಾತೆಯುವರೂ ಅಂಜುತ್ತಿದ್ದರು. 'ಸಾಬರು ಸಾಬರು

ಎಷ್ಟಾದರೂ ಒಂದು. ನಮಗೇಕಪ್ಪಾ ಗ್ರಹಚಾರ' ಎಂದುಕೊಂಡು ಅವರು ಪುಂಡ ಮುಸಲ್ಮಾನರ ವಿರುದ್ಧ ಕೇಸುಗಳನ್ನೇ ಹಿಡಿಯುತ್ತಿರಲಿಲ್ಲ.

ಜಬ್ಬಾರ್ ಸಾಹೇಬರ ಗಮನಕ್ಕೆ ಆಗಾಗ್ಗೆ ಈ ವಿಷಯ ಬರುತ್ತಿತ್ತು.

ಅವರ ಮನೆಗೆ ಹಾಲು ತಂದುಕೊಡುತ್ತಿದ್ದ ತಿಮ್ಮಕ್ಕ ಒಂದು ದಿನ ಧೈರ್ಯ ತಂದುಕೊಂಡು

"ಈ ಪುಂಡರ ಕಾಟದಾಗ ಮರ್ಯಾದಸ್ತರು ಬಾಳೋದೇ ಕಷ್ಟವಾಗೈತೆ ಬುದ್ಧಿ."

ಎಂದು ತನ್ನ ಅನುಭವ, ತನಗೆ ತಿಳಿದಿದ್ದ ಇತರರ ಅನುಭವಗಳನ್ನು ವಿವರಿಸಿಬಿಟ್ಟಳು.

"ಆಗಲಿ ತಿಮ್ಮಕ್ಕ ನಾನೆಲ್ಲಾ ವಿಚಾರ ಮಾಡ್ತೀನಿ"

ಎಂದಷ್ಟೇ ಸಾಹೇಬರು ಹೇಳಿದರು.

ಈ ಪುಂಡರಲ್ಲಿ ಎಲ್ಲರನ್ನೂ ಮೀರಿಸಿದ್ದವನು ಸತಾರ್ ಸಾಹೇಬರ ಭಾವಮೈದುನ ಅಬ್ದುಲ್ ಸಮ್ಮದ್. ತಾನು ಯಾವ ಪುಂಡಾಟವಾಡಿದರೂ ಸತ್ತಾರ ಸಾಹೇಬರು 'ಬಚಾವ್' ಮಾಡುತ್ತಾರೆಂಬುದೇ ಅವನ ಧೈರ್ಯವಾಗಿತ್ತು. ಹಣಕಾಸಿನ ವಿಷಯದಲ್ಲಿ ಸತ್ತಾರ್ ಸಾಹೇಬರಿಗಿಂತಲೂ ಸಮ್ಮದ್ ಭಾರೀ ಕುಳವಾಗಿದ್ದ. ಅವನ ರೈಸ್ ಮಿಲ್, ನಾಲ್ಕು ಲಾರಿಗಳಿಗೆ ಸ್ವಲ್ಪವೂ ಬಿಡುವಿರಲಿಲ್ಲ. ಕಂತ್ರಾಟು (ಕಂಟ್ರ್ಯಾಕ್ಟ್), ಲೇವಾದೇವಿ ಬೇರೆ ಅವನಿಗೆ ಆದಾಯ ತರುತ್ತಿತ್ತು. ಎಲ್ಲಕ್ಕೂ ಹೆಚ್ಚಾಗಿ—ಸಮ್ಮದ್ ತನ್ನ ರೈಸ್ ಮಿಲ್ಲಿನ ಗೋದಾನಿನಲ್ಲಿ (Godown) ಪ್ರತಿರಾತ್ರಿ ಜೂಜುಕಟ್ಟೆ ನಡೆಸುತ್ತಿದ್ದ. ಸಂತೆಪೇಟೆಯ ಅನೇಕ ಸಾಹುಕಾರರು ಅವನ ಜೂಜು ಕಟ್ಟೆಯ ಭಕ್ತರಾಗಿದ್ದರು. ಪೋಲೀಸಿನವರಿಗೆ ಒಂದು ಪಾಲು ಮಾಮೂಲಾಗಿ ಸಿಕ್ಕುತ್ತಿದ್ದುದರಿಂದ ಅವರು ಆ ದಾರಿಯಲ್ಲೇ ಸುಳಿಯುತ್ತಿರಲಿಲ್ಲ. ಸುತ್ತ ಮುತ್ತ ವಾಸಿಸುತ್ತಿದ್ದವರಿಗೆ ಸಾಹೇಬರ ಜೂಜುಕಟ್ಟೆಯಿಂದ ವಿಪರೀತ ಕಿರುಕುಳವಾಗುತ್ತಿತ್ತು. ಊರಿನ ಪೋಲಿ ಪಟಾಲಮ್ ರಾತ್ರಿಯೆಲ್ಲಾ ಆ ರಸ್ತೆಗಳಲ್ಲಿಯೇ ಗಸ್ತು ತಿರುಗುತ್ತಿತ್ತು. ಸಮ್ಮದನ ಕಾಪಿನ ಭಟರು ಕೇಕೆ ಹಾಕಿಕೊಂಡು, ಹೊಲಸು ಮಾತನಾಡಿಕೊಂಡು ರಾತ್ರಿಯೆಲ್ಲಾ ರೈಸ್

ಡೆಪ್ಯುಟಿ ಕಮಿಷನರು ತಾವೇ ಗುಪ್ತವಾಗಿ ತನಿಖೆ ನಡಸಿ ಜೂಜು ಕಟ್ಟೆಯ ವಿದ್ಯಮಾನಗಳನ್ನರಿತುಕೊಂಡರು. ಸೂರಪ್ಪನೂ ಬೇಕಾದಷ್ಟು ಸಾಕ್ಷ್ಯಸಾಹಿತ್ಯ ಒದಗಿಸಿದ. ಒಂದು ದಿನ ಮಧ್ಯರಾತ್ರಿ ಸಾಹೇಬರ, ಡಿ.ಎಸ್.ಪಿ.ಯವರನ್ನೂ ಪೋಲೀಸ್ ದಳವನ್ನೂ ಬರಮಾಡಿಕೊಂಡು ತಾವೇ ಸಂತೇಪೇಟೆಗೆ ಹೋಗಿ ಸಮ್ಮದ್ ಸಾಹೇಬನ ರೈಸ್ ಮಿಲ್ ಸುತ್ತುಗಟ್ಟಿ ಧಾಳಿ (Raid) ಮಾಡಿದರು. ಸಮ್ಮದ್ ಸಾಹೇಬ, ಸಂತೇಪೇಟೆಯ ನಾಲ್ಕು ಜನ ಸಾಹುಕಾರರು, ಊರಿನ ಇಬ್ಬರು ಗಣ್ಯ ವಕೀಲರು, ಒಬ್ಬ ಖಾಸಗಿ ಡಾಕ್ಟರು, ಒಬ್ಬರು ಹೈಸ್ಕೂಲ್ ಮೇಷ್ಟರು ಸಿಕ್ಕಿಬಿದ್ದರು. ಡಿ.ಸಿ. ಸಾಹೇಬರು ನಿರ್ದಾಕ್ಷಿಣ್ಯವಾಗಿ ಎಲ್ಲರನ್ನೂ ದಸ್ತಗಿರಿ ಮಾಡಿಸಿದರು.

ಆಪಾದಿತರ ಮೇಲೆ ಕೇಸು ಜಾರಿಯಾಗದಂತೆ ಮಾಡಬೇಕೆಂದು ಕೆಂಪಯ್ಯ ಸತ್ತಾರ್ ಭೂಮಿ ಅಂತರಿಕ್ಷ ಒಂದು ಮಾಡಿಬಿಟ್ಟರು. ಡಿ. ಸಿ. ಯವರ ಉದ್ದಕ್ಕೂ ಹಣ ಸುರಿಯಲು ಸಿದ್ಧರಾದರು.

ಜಬ್ಬಾರ್ ಸಾಹೇಬರು ಅಲುಗಾಡಲಿಲ್ಲ. ಅಪಾದಿತರ ಮೇಲೆ ಚಾರ್ಜು ಷೀಟುಗಳು ಸಿದ್ಧವಾಗಿ ಕೇಸೂ ಆಯಿತು. ಸಮ್ಮದ್ ಸಾಹೇಬನಿಗೆ ಮೂರು ಸಾವಿರ ರೂಪಾಯಿ ದಂಡ, ಒಂದು ವರ್ಷ ಕಠಿಣ ಸಜಾ, ಉಳಿದವರಿಗೆ ತಲಾ ಇನ್ನೂರೈವತ್ತು ರೂಪಾಯಿ ದಂಡವಾಯಿತು. ಹೈಕೋರ್ಟು ಅಪೀಲಿನಲ್ಲಿಯೂ ಆಪಾದಿತರು ಸೋತರು.

ಅಂದಿನಿಂದ ತುಮಕೂರಿನಲ್ಲಿ ಪುಂಡ ಮುಸಲ್ಮಾನರ ಹುಟ್ಟಡಗಿ ಹೋಯಿತು. ಸಜ್ಜನರು ಜಬ್ಬಾರ್ ಸಾಹೇಬರನ್ನು ದೇವರೆಂದು ಆರಾಧಿಸ ತೊಡಗಿದರು. ಕೆಂಪಯ್ಯ ಅವನ ಸಂಗಡಿಗರು ಸಾಹೇಬರ ಮೇಲೆ ವಿಷ ಕಾರುತ್ತಾ, ಹೇಗಾದರೂ ಮಾಡಿ ಅವರಿಗೆ ಅಪಯಶಸ್ಸು ತರಲು ಪ್ರಯತ್ನಿಸುತ್ತಿದ್ದರು.

೪

ಗುಂಡಾಭಟ್ಟರು ಜಿಲ್ಲಾಧಿಕಾರಿಗಳನ್ನು ಕಾಣಲು ಅವರ ಕಛೇರಿಗೆ ಬಂದಾಗ ಬಾಗಿಲಲ್ಲಿ ತಿಮ್ಮಯ್ಯ ನಿಂತಿರಲಿಲ್ಲ. ದವಾಲಿ ಧರಿಸಿದ್ದ ಆಳನ್ನು ನೋಡಿ ಭಟ್ಟರು

"ಸಾಹೇಬರು ಒಳಗಿದ್ದಾರೇನಪ್ಪಾ?" ಎಂದರು.

"ಅವ್ರೆ ಬುದ್ದಿ—ಮೀಟಿಂಗ್ ಮಾಡ್ತಾವ್ರೆ."

"ಏನು ಮೀಟಿಂಗ್?"

"ಎಲ್ಲಾ ಅಮಲ್ದಾರರೂ ಬಂದವ್ರೆ. ಅವರ ಜತೆ ಮೀಟಿಂಗ್ ಮಾಡ್ತಾವ್ರೆ."

"ಇನ್ನೂ ಬಹಳ ಹೊತ್ತಾಗುತ್ತದೋ?"

"ಗೊತ್ತಿಲ್ಲ ಬುದ್ದಿ."

"ನಾನು ಬಂದಿದ್ದೇನೆಂದು ಸಾಹೇಬರಿಗೆ ತಿಳಿಸುವೆಯಾ?"

"ಅದ್ಹೆಂಗೆ ಆಗ್ತೈತೆ ಬುದ್ದಿ. ಮೀಟಿಂಗ್‌ನಲ್ಲಿ ಅವರಿರೋವಾಗ ಹೇಳಿದ್ರೆ ಕ್ವಾಪ ಮಾಡಿಕೋಂತಾರೆ. ಇಲ್ಲೇ ಕುಂತುಕೊಳ್ಳಿ ಬುದ್ದಿ—ಮೀಟಿಂಗ್ ಮುಗಿಯುತ್ತಲೂ ಬಂದು ತಿಳಿಸ್ತೇನೆ."

ಆಳು ತೋರಿಸಿದ ಬೆಂಚಿನಮೇಲೆ ಭಟ್ಟರು ಕುಳಿತುಕೊಂಡರು. ಅರ್ಧ ಗಂಟೆ ಕಳೆದಿರಬಹುದು. ಯಾವುದೋ ಫೈಲ್ ತೆಗೆದುಕೊಂಡು ಹೋಗಲು ಬಂದ ತಿಮ್ಮಯ್ಯ

"ಇದೇನ್ಬುದ್ದಿ ಇಲ್ಲಿ ಕುಂತಿದ್ದೀರಿ?" ಎಂದು ಕೇಳಿದ.

"ಸಾಹೇಬರನ್ನು ನೋಡಬೇಕಾಗಿತ್ತು. ಬಂದೆ. ಮೀಟಿಂಗಿನಲ್ಲಿ ಇದ್ದಾರಂತೆ."

"ಅವರಿಗೆ ಹೇಳ್ತೀನಿ ಬುದ್ಧಿ."

ಎಂದು ತಿಮ್ಮಯ್ಯ ಫೈಲ್ ತೆಗೆದುಕೊಂಡು ಒಳಕ್ಕೆ ಹೋದ ಐದು ನಿಮಿಷದಲ್ಲಿ ಜಬ್ಬಾರ್ ಸಾಹೇಬರು ಹೊರಗೆ ಬಂದು

"ಒಳಗೆ ಬನ್ನಿ ಶಾಸ್ತ್ರಿಗಳೇ—ಅಲ್ಲೇಕೆ ಕುಳಿತುಕೊಂಡಿರಿ"

ಎಂದು ಒಳಕ್ಕೆ ಕರೆದೊಯ್ದು ತಮ್ಮ ರೂಮಿನಲ್ಲಿ ಕೂಡಿಸಿ

"ಕಾಲು ಗಂಟೆ ಅವಕಾಶ ಅಪ್ಪಣೆಯಾಗಬೇಕು. ಅಮಲ್ದಾರರ ಮೀಟಿಂಗಿಟ್ಟುಕೊಂಡಿದ್ದೇನೆ. ಮುಗಿಸಿಕೊಂಡು ಬಂದುಬಿಡುತ್ತೇನೆ."

"ಹಾಗೇ ಮಾಡಿ ಸ್ವಾಮಿ. ನನಗೇನೂ ಅವಸರವಿಲ್ಲ."

ಜಬ್ಬಾರ್ ಸಾಹೇಬರು ಅರ್ಧಗಂಟೆಯಲ್ಲಿ ಮೀಟಿಂಗ್ ಮುಗಿಸಿ ತಮ್ಮ ರೂಮಿಗೆ ಬಂದು

"ಕ್ಷಮಿಸಬೇಕು. ತಮ್ಮನ್ನು ತುಂಬ ಕಾಯಿಸಿಬಿಟ್ಟೆ. ಕಂದಾಯ ತುಂಬ ಬಾಕಿ ನಿಂತುಹೋಗಿದೆ. ಮೇಲಿನಿಂದ ತಾಕೀತು ಬಂದಿತ್ತು. ಅಮಲ್ದಾರರನ್ನು ಕರೆಸಿ ಎಚ್ಚರಿಕೆ ಕೊಡಬೇಕಾಯಿತು. ಅಪ್ಪಣೆಯಾಗಲಿ. ಸೇವೆಗೆ ಸಿದ್ಧವಾಗಿದ್ದೇನೆ."

"ಅಂಥ ಮಾತು ತಾವು ಆಡಬಹುದೇ? ತಾವೆಷ್ಟದರೂ ಜಿಲ್ಲೆಯ ಧಣಿಗಳು....ಜಿಲ್ಲೆಯ ಪ್ರಭುಗಳು. ನಾನು ತಮ್ಮ ಪ್ರಜಾವರ್ಗಕ್ಕೆ ಸೇರಿದವನು ಮನೆಯಲ್ಲಿ ಎಲ್ಲರೂ ಆರೋಗ್ಯವಷ್ಟೇ. ಫಾತಿಮಾ ತಾಯಿ ಚೆನ್ನಾಗಿದ್ದಾರೆಯೇ?"

"ಮನೆಗೆ ಬರದೆ ಹೀಗೇ ಹೊರಡುವ ಯೋಚನೆ ಮಾಡುತ್ತಿರುವ ಹಾಗಿದೆ."

"ಈ ಬಾರಿ ಸ್ವಲ್ಪ ತುರ್ತು ಕೆಲಸದ ಮೇಲೆ ಬಂದಿದ್ದೇನೆ. ಸಾಧ್ಯವಾದರೆ ಸಂಜೆಯ ಬಸ್ಸಿಗೆ ಊರಿಗೆ ಹೋಗಿಬಿಡುತ್ತೇನೆ."

"ಏನು ಸಮಾಚಾರ?"

"ನಮ್ಮೂರು ಸ್ಮಶಾನ ಕುರುಕ್ಷೇತ್ರವಾಗಲಿದೆ. ಖಾವಿಂದರ ಗಮನಕ್ಕೆ ಅದನ್ನು ತರಬೇಕೆಂದೇ ನಾನು ಬಂದುದು."

ಎಂದು ಹೇಳಿ ಊರಿನ ವಿದ್ಯಾಮಾನಗಳನ್ನು ವಿವರಿಸುತ್ತಾ

"ದೇವರ ಹೆಸರಿನಲ್ಲಿ ಜನ ಜಗಳಕಾಯುವುದನ್ನು ನೋಡಿದರೆ ನನಗೆ

ನಾಚಿಕೆಯಾಗುತ್ತದೆ. ಹರಿಹರರಲ್ಲಿ ಭೇದವಿಲ್ಲ. ಇಬ್ಬರೂ ಒಂದೇ ಎಂದು ನಮ್ಮ ಧರ್ಮ ಸಾರುತ್ತಿದೆ. ಧರ್ಮಾಭಿಮಾನಿಗಳೆನಿಸಿಕೊಂಡವರೂ ಅಲ್ಪರಂತೆ ಸಣ್ಣಪುಟ್ಟ ಕಾರಣಗಳಿಗೆ ಹೊಡೆದಾಡುತ್ತಾರೆ."

"ಧರ್ಮಕ್ಕಾಗಿ ಯಾರು ಹೊಡೆದಾಡುತ್ತಾರೆ ಶಾಸ್ತ್ರಿಗಳೇ. ಧರ್ಮದ ಹೆಸರಿನಲ್ಲಿ ಮನುಷ್ಯ ತನ್ನ ಸ್ವಾರ್ಥ ಸಾಧಿಸಿಕೊಳ್ಳುತ್ತಾನೆ."

"ತಾವು ದೊಡ್ಡಮನಸ್ಸು ಮಾಡಿ ನಮ್ಮೂರನ್ನು ಕಾಪಾಡಬೇಕು ಸ್ವಾಮಿ."

ಸಾಹೇಬರು ಸ್ವಲ್ಪವೂ ಹಿಂದೆಮುಂದೆ ನೋಡದೆ

"ನಾಳೆ ನಾಲ್ಕು ಗಂಟೆಗೆ ನಾನು ತಮ್ಮ ಊರಿಗೆ ಬರುತ್ತೇನೆ ಶಾಸ್ತ್ರಿಗಳೇ. ಯೋಚನೆ ಮಾಡಬೇಡಿ. ಊರಿನಲ್ಲಿ ಗಲಭೆಯಾಗದಂತೆ ತಕ್ಕ ಬಂದೋಬಸ್ತು ಮಾಡುತ್ತೇನೆ" ಎಂದರು.

ಗುಂಡಾಭಟ್ಟರು ಹೊರಡಲನುವಾಗಿ ಎದ್ದು ನಿಲ್ಲಲು ಸಾಹೇಬರು

"ಮನೆಗೆ ಬರದೆಯೇ ಹೊರಟುಹೋಗುತ್ತೀರೇನು?"

ಎಂದು ಮತ್ತೊಮ್ಮೆ ಕೇಳಿದರು.

"ಮುಂದಿನಸಾರಿ ನಾನು ಬಂದಾಗ ಒಂದು ದಿನವನ್ನೆಲ್ಲಾ ತಮ್ಮ ಮನೆಯಲ್ಲಿಯೇ ಕಳೆಯುತ್ತೇನೆ"

ಎಂದು ಭಟ್ಟರು ಆಶ್ವಾಸನವಿತ್ತರು.

ಸಾಹೇಬರು ರುದ್ರಾಕ್ಷಿಪುರಕ್ಕೆ ಹೋಗುವ ವಿಷಯ ಯಾರಿಗೂ ತಿಳಿಸಲಿಲ್ಲ.

ನಾಲ್ಕು ಗಂಟೆಗೆ ಸೂರಪ್ಪನನ್ನೂ, ತಿಮ್ಮಯ್ಯನನ್ನು ಜತೆಯಲ್ಲಿ ಕರೆದುಕೊಂಡು ನೇರವಾಗಿ ರುದ್ರಾಕ್ಷಿಪುರಕ್ಕೆ ಬಂದು ಚಾವಡಿಯಲ್ಲಿ ಕುಳಿತರು.

ಡಿ. ಸಿ. ಸಾಹೇಬರು ಬಂದಿರುವ ವಿಷಯ ತಿಮ್ಮಯ್ಯ ಊರಿನ ಎಲ್ಲ ಮುಖಂಡರಿಗೂ ತಿಳಿಸಿ ಬಂದ.

ರುದ್ರಶೆಟ್ಟಿ, ಬಶೆಟ್ಟೆಪ್ಪ ಅವರ ಪರಿವಾರ ಬಂದು ಒಂದೆಡೆಯಲ್ಲಿ ಕುಳಿತರು. ಕೆಂಗೇಗೌಡ, ದಾಸೇಗೌಡ, ಕವಿಹನುಮ ಬಂದು ಮತ್ತೊಂದೆಡೆಯಲ್ಲಿ ಕುಳಿತರು. ಗುಂಡಾಭಟ್ಟರು, ಸಣ್ಣಯ್ಯ, ಕಪನೀಪತಿಶಾಸ್ತ್ರಿ ಬಂದು ಬೇರೊಂದೆಡೆಯಲ್ಲಿ ಕುಳಿತರು.

ಡಿ. ಸಿ. ಸಾಹೇಬರು ರುದ್ರಶೆಟ್ಟಿಯನ್ನುದ್ದೇಶಿಸಿ

"ಏನೂ ಶೆಟ್ಟರೇ ಸಮಾಚಾರ?" ಎಂದರು.

"ಏನೂ ಇಲ್ಲ ಮಹಾಸ್ವಾಮಿ."

"ವೀರಭದ್ರ ದೇವಸ್ಥಾನಕ್ಕೆ ಮುಜರಾಯಿ ಗ್ರ್ಯಾಂಟ್ ಇದೆಯಲ್ಲವೇ?"

"ಇದೆ ಮಹಾಸ್ವಾಮಿ."

"ರಾಮದೇವರ ದೇವಾಲಯಕ್ಕೆ?"

"ಅದಕ್ಕೂ ಗ್ರಾಂಟ್ ಇದೆ ಮಹಾಸ್ವಾಮಿ" ಎಂದು ಕೆಂಗೇಗೌಡರು ಹೇಳಿದರು.

"ಎರಡು ಗ್ರ್ಯಾಂಟನ್ನೂ ನಿಲ್ಲಿಸಿಬಿಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ."

"ಏಕೆ ಸ್ವಾಮಿ."

"ಏಕೆಯೆಂದರೆ ನಾನು ಏನು ಹೇಳಲಿ ರುದ್ರಶೆಟ್ಟರೇ. ವೀರಭದ್ರನಿಗೂ ರಾಮನಿಗೂ ವ್ಯಾಜ್ಯವಾದುದು ನಾನು ಕೇಳಿಲ್ಲ. ಅವನ ಭಕ್ತರು ನೀವು ವ್ಯಾಜ್ಯಕಾಯುವುದಕ್ಕೆ ಸಿದ್ಧರಾಗಿದ್ದೀರೆಂದು ತಿಳಿಯಿತು."

"ವ್ಯಾಜ್ಯವೇನೂ ಇಲ್ಲ ಸ್ವಾಮಿ. ನಾವು ನಂದೀಧ್ವಜ, ಬಸವಜಯಂತಿ ಮೆರವಣಿಗೆ ರಾಮದೇವರ ದೇವಸ್ಥಾನದ ಮುಂದೆ ತೆಗೆದುಕೊಂಡು ಹೋಗಕೂಡದೆಂದು ಹನುಮಯ್ಯ, ಕೆಂಗೇಗೌಡರು ಹಟಹಿಡಿದಿದ್ದಾರೆ. ಜಗಳಕ್ಕೆ ಕಾಲುಕೆರೆಯುತ್ತಿರುವವರು ಅವರೇ!"

"ಹೌದೇ ಗೌಡರೇ?"

"ಶೆಟ್ಟರು ತಪ್ಪುಮಾತಾಡುತ್ತಿದ್ದಾರೆ ಮಹಾಸ್ವಾಮಿ. ನಾವು ಶ್ರೀರಾಮದೇವರಿಗೆ ನಡೆದುಕೊಳ್ಳುತ್ತಿರುವಂತೆ ವೀರಭದ್ರದೇವರಿಗೂ ನಡೆದುಕೊಳ್ಳುತ್ತಿದ್ದೇವೆ. ಹಿಂದೆ ವೀರಭದ್ರ ದೇವಸ್ಥಾನದ ಜೀರ್ಣೋದ್ಧಾರವಾಗುವಾಗ ನಾವೂ ಚಂದಾಕೊಟ್ಟಿದ್ದೇವೆ. ಲಾಗಾಯತನಿಂದ ಎಲ್ಲ ಮತಸ್ಥರೂ ಕೂಡಿ ಬಸವಜಯಂತಿ, ರಾಮೋತ್ಸವಗಳನ್ನು ನಡೆಸುತ್ತಾ ಬಂದಿದ್ದೆವು. ಕೆಲವು ವರುಷಗಳ ಹಿಂದೆ ರುದ್ರಶೆಟ್ಟರು ಯಜಮಾನ್ಯ ವಹಿಸಿಕೊಂಡು ನಮ್ಮನ್ನು ಕರೆಯುವುದನ್ನು ಬಿಟ್ಟುಬಿಟ್ಟರು. ಅವರು ನಮ್ಮನ್ನು ಕರೆಯದಿದ್ದರೂ ರಾಮೋತ್ಸವಕ್ಕೆ ನಾವು ಅವರನ್ನು ಕರೆಯುತ್ತಿದ್ದೆವು. ಅವರು ಬರುತ್ತಿರಲಿಲ್ಲ.

ನಮ್ಮ ಊರಿನಲ್ಲಿ ಇಲ್ಲದ ಜಗಳ ಯಾರು ಹುಟ್ಟುಹಾಕುತ್ತಿದ್ದಾರೆನ್ನುವುದನ್ನು ಖಾವಂದರೇ ಪರಾಮರ್ಶಿಸಬೇಕು."

"ಹಳೆಯ ಮಾತು ಬೇಡ ಗೌಡರೇ. ಸದ್ಯದ ವಿಷಯ ಮಾತನಾಡೋಣ. ಬಸವಜಯಂತಿ ಉತ್ಸವ ರಾಮದೇವರ ದೇವಾಲಯದ ಮುಂದೆ ತೆಗೆದು ಕೊಂಡು ಹೋಗುವುದಕ್ಕೆ ನಿಮ್ಮ ಅಭ್ಯಂತರವೇನು ?"

"ಮಾಮೂಲಿಗೆ ವಿರುದ್ಧವಾಗಿ ಹೋಗುವುದು ನ್ಯಾಯವಲ್ಲ."

"ಯಾವದು ಮಾಮೂಲು."

"ರಾಮದೇವರ ದೇವಸ್ಥಾನದ ಮುಂದೆ ವೀರಭದ್ರದೇವರನ್ನು ತೆಗೆದು ಕೊಂಡು ಹೋಗಬಾರದು; ವೀರಭದ್ರದೇವರ ದೇವಾಲಯದ ಮುಂದೆ ರಾಮದೇವರನ್ನು ತೆಗೆದುಕೊಂಡು ಹೋಗಬಾರದೆಂದು ಉಭಯ ಮತಸ್ಥರೂ ಒಪ್ಪಿಕೊಂಡಿದ್ದಾರೆ."

"ಇದಕ್ಕೆ ದಾಖಲೆಯಿದೆಯೇ ?"

"ಸರ್ಕಾರದಲ್ಲಿ ಯಾವ ದಾಖಲೆಯೂ ಇಲ್ಲ. ಆದರೆ ಈ ವ್ಯವಸ್ಥೆ ಅನೇಕ ವರುಷಗಳಿಂದ ಆಚರಣೆಯಲ್ಲಿದೆ."

"ನಿಜವೇ ರುದ್ರಶೆಟ್ಟರೇ ?"

"ನಿಜ ಸ್ವಾಮಿ."

"ಮಾಮೂಲಿಗೆ ವಿರುದ್ಧವಾಗಿ ನೀವು ಹೋಗುವುದಕ್ಕೆ ಕಾರಣ ವೇನು ?"

"ನಮ್ಮ ಜನಗಳ ಒತ್ತಾಯ. ರಾಮದೇವರ ದೇವಾಲಯ ಊರಿನ ನಟ್ಟನಡುವೆ ಇದೆ. ಆ ರಸ್ತೆಯಲ್ಲಿ ನಾವು ಹೋಗದಿದ್ದರೆ ಎರಡು ಫರ್ಲಾಂಗು ಬಳಸಿಕೊಂಡು ಹೋಗಬೇಕು."

"ರಾಮದೇವರ ದೇವಾಲಯದ ರಸ್ತೆಯಲ್ಲಿ ವೀರಶೈವರದು ಎಷ್ಟು ಮನೆಗಳಿವೆ."

"ವೀರಶೈವರು ಅಲ್ಲಿ ಯಾರು ಇಲ್ಲ ಮಹಾಸ್ವಾಮಿ."

ಎಂದು ಕೆಂಗೇಗೌಡರು ಹೇಳಿದರು.

"ನಿಮ್ಮ ಜನ ಇರುವಕಡೆ ನೀವು ಮೆರವಣಿಗೆ ತೆಗೆದುಕೊಂಡು ಹೋಗುವುದು ನ್ಯಾಯ. ಹೋಗಲಿ, ನಾವು ಒಂದು ಒಪ್ಪಂದಕ್ಕೆ ಬರೋಣ.

ಇನ್ನು ಮೇಲೆ ರಾಮದೇವರ ಮೆರವಣಿಗೆ, ವೀರಭದ್ರದೇವರ ಮೆರವಣಿಗೆ ಯಾವ ಅಡ್ಡಿ ಆತಂಕವೂ ಇಲ್ಲದೆ ಎಲ್ಲಾ ರಸ್ತೆಗಳಲ್ಲಿಯೂ ಹೋಗಲಿ."

"ಹಾಗುಂಟೇ ಸ್ವಾಮಿ" ಎಂದರು ರುದ್ರಶೆಟ್ಟರು.

"ಎಲ್ಲಿಯಾದರೂ ಉಂಟೇ ?" ಎಂದರು ಕೆಂಗೇಗೌಡರು.

"ನ್ಯಾಯವಾದ ಒಪ್ಪಂದಕ್ಕೆ ನೀವು ಬರಲಾಗದಿದ್ದರೆ ನಮಗೆ ತಿಳಿದಂತೆ ನಾವು ಆರ್ಡರ್ ಮಾಡಬೇಕಾಗುತ್ತದೆ."

ಉಭಯ ಪಕ್ಷದವರ ತಾಟಸ್ಥ್ಯ ಕಂಡು ಡಿ. ಸಿ. ಸಾಹೇಬರು ಗುಂಡಾಭಟ್ಟರ ಕಡೆ ತಿರುಗಿ

"ಶಾಸ್ತ್ರಿಗಳೇ, ಹೇಗೆ ಮಾಡುವುದು ಸೂಕ್ತವಾಗುತ್ತದೆ ತಾವು ತಿಳಿಸಿ ಎಂದರು.

ಗುಂಡಾಭಟ್ಟರೆದ್ದು ನಿಂತು, ಜಾರುತ್ತಿದ್ದ ತಮ್ಮ ಹಸಿರುಶಾಲನ್ನು ಹೊದೆದುಕೊಂಡು

"ಖಾವಂದಿರಿಗೆ ನಾನು ಹೊಸದಾಗಿ ಹೇಳಬೇಕಾದುದೇನೂ ಇಲ್ಲ. ಈಗ್ಗೆ ಕೆಲವು ವರ್ಷಗಳ ಕೆಳಗೆ ನಾನು ಕರಗ ಮಹೋತ್ಸವ ನೋಡುವುದಕ್ಕೆ ಬೆಂಗಳೂರಿಗೆ ಹೋಗಿದ್ದೆ. ಅರಳೆಯಪೇಟೆ ಮಸ್ತಾನ ಸಾಹೇಬರ ಮಸೀದಿಯ ಮುಂದೆ ನಾನು ನಿಂತಿದ್ದೆ. ಅಲ್ಲಿಗೆ ಕರಗ ಮಹಾಶಕ್ತಿ ಬಿಜಯಮಾಡಿತು. ಶಕ್ತಿದೇವತೆ ಅಲ್ಲಿ ಸ್ವಲ್ಪಕಾಲ ನಿಂತು ಸಹಸ್ರಾರು ಮುಸ್ಲಿಮರ ಸೇವೆ ಸ್ವೀಕರಿಸಿ ಮುಂದಕ್ಕೆ ಹೊರಟಿತು. ಆ ದೃಶ್ಯ ನೋಡಿದಾಗ ನನಗೆ ಆದ ಸಂತೋಷ ವರ್ಣನಾತೀತ. ಆಳುತ್ತಿರುವ ನಮ್ಮ ಮಹಾಸ್ವಾಮಿಯವರು ಮಸೀದಿಗಳಿಗೆ ಇಗರ್ಜಿಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಇದೇ ನಮ್ಮ ಸಂಸ್ಕೃತಿ. ಇದೇ ನಮ್ಮ ಸಂಪ್ರದಾಯ. ಹಿಂದೂ ದೇವರುಗಳ ಬಗ್ಗೆ ಮುಸ್ಲಿಮರು ಗೌರವದಿಂದ ನಡೆದುಕೊಳ್ಳುವುದು ಸಾಧ್ಯವಾಗುವುದಾದರೆ ಹಿಂದುಗಳು ನಡೆದುಕೊಳ್ಳಲು ಸಾಧ್ಯವಿಲ್ಲವೇ ? ತಾವು ಅಪ್ಪಣೆ ಕೊಡಿಸಿದಂತೆ ವೀರಭದ್ರ ದೇವರು, ರಾಮದೇವರುಗಳಿಗೆ ಸಂಚಾರ ಸ್ವಾತಂತ್ರ್ಯ ಇರಬೇಕೆಂದು ನನ್ನ ಅಭಿಪ್ರಾಯ. ಇದಕ್ಕೆ ಉಭಯ ಮತಸ್ಥರು ಒಪ್ಪದಿದ್ದರೆ ಈಗಿರುವ ರೂಢಿಯನ್ನೇ ಮುಂದುವರಿಸಿಕೊಂಡು ಹೋಗುವುದು ಯುಕ್ತ.

ದೇವರುಗಳ ಹೆಸರಿನಲ್ಲಿ ಜಗಳವಾಡುವುದು ವಿಹಿತವೂ ಅಲ್ಲ—ಧರ್ಮವೂ ಅಲ್ಲ."

"ಶಾಸ್ತ್ರಿಗಳು ಕೆಂಗೇಗೌಡರ ಪಕ್ಷದವರು ಸ್ವಾಮಿ. ಅವರ ಮಾತಿಗೆ ತಾವು ಬೆಲೆಕೊಡಬಾರದು"

ಎಂದು ಬಶೈಟ್ಟಪ್ಪ ಉದ್ವಿಗ್ನನಾಗಿ ಹೇಳಿದ.

"ನಾನು ಯಾರ ಪಕ್ಷದವನೂ ಅಲ್ಲ ಬಶೈಟ್ಟಪ್ಪ. ನ್ಯಾಯ ಪಕ್ಷಪಾತಿ. ಈ ಊರಿನಲ್ಲೇ ಇದ್ದುಕೊಂಡು ನಾನು ಜೀವನಮಾಡಬೇಕಾದ ಅಗತ್ಯವೂ ನನಗಿಲ್ಲ. ಇಲ್ಲಿ ನನಗೆ ಹೊಲ ಗದ್ದೆ, ವ್ಯಾಪಾರ, ಲೇವಾದೇವಿ ಇಲ್ಲ. ಇಲ್ಲಿಯೇ ಇದ್ದುಕೊಂಡು ಬಾಳ್ವೆಮಾಡಬೇಕಾಗಿರುವವರು ನೀವು. ನೀವು ಅನ್ಯೋನ್ಯವಾಗಿರಲೆಂದು ನಾನು ಒಂದು ಮಾತು ಹೇಳಿದೆ."

ಎಂದು ಶಾಸ್ತ್ರಿಗಳು ಖಂಡಿತವಾಗಿ ನುಡಿದುಬಿಟ್ಟರು.

ರುದ್ರಶೆಟ್ಟಿ ಪಿಸು ಮಾತಿನಲ್ಲಿ

"ಹಾರವಯ್ಯನ್ನ ತಡವಬೇಡ, ಸುಮ್ಮನಿರು ಬಶೈಟ್ಟಪ್ಪ" ಎಂದ.

"ಮಾಮೂಲಿನಂತೆ ನಡೆದುಕೊಂಡು ಹೋಗುವುದು ಒಳ್ಳೆಯದು ರುದ್ರಶೆಟ್ಟರೆ, ಕೆಂಗೇಗೌಡರೇ."

"ಹಾಗಾಗುವುದಿಲ್ಲ ಮಹಾಸ್ವಾಮಿ" ಎಂದು ರುದ್ರಶೆಟ್ಟಿ ಪ್ರತಿಭಟಿಸಿದ.

"ನಾನು ಹಾಗೆ ಆರ್ಡರ್ ಮಾಡಿದರೆ!"

"ಮೇಲಕ್ಕೆ ಅಪೀಲ್ ಮಾಡುತ್ತೇವೆ. ದಿವಾನ್ ಸಾಹೇಬರಲ್ಲಿ ನಿಯೋಗ ತೆಗೆದುಕೊಂಡು ಹೋಗುತ್ತೇವೆ. ಬೇಕಾದದ್ದಾಗಲಿ ಸ್ವಾಮಿ. ಈ ವರ್ಷ ನಾವು ಬಸವಜಯಂತ್ಯುತ್ಸವವನ್ನು ರಾಮದೇವರ ದೇವಸ್ಥಾನದ ಬೀದಿಯಲ್ಲಿ ತೆಗೆದುಕೊಂಡೇ ಹೋಗುತ್ತೇವೆ."

"ರುದ್ರಶೆಟ್ಟರೇ, ನಾನು ಡೆಪ್ಯುಟಿ ಕಮಿಷನರಾಗಿರುವಂತೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟೂ ಆಗಿದ್ದೇನೆಂಬುದನ್ನು ಮರೆಯಬೇಡಿ."

"ಆಗಲಿ ಸ್ವಾಮಿ. ತಮ್ಮ ಅಧಿಕಾರ ತಾವು ಚಲಾಯಿಸಿ. ನಮ್ಮ ಶಕ್ತಿ ನಾವೂ ತೋರಿಸುತ್ತೇವೆ"

ಎಂದು ಹೇಳಿದವನೇ ರುದ್ರಶೆಟ್ಟಿ ಎದ್ದು ಹೊರಟುಹೋದ. ಅವನ ಪರಿವಾರ ಅವನನ್ನು ಹಿಂಬಾಲಿಸಿತು.

ರುದ್ರಶೆಟ್ಟಿಯ ಉದ್ಧಟತನ ಕಂಡು ಡಿ. ಸಿ. ಸಾಹೇಬರ ಮುಖ ಕೆಂಪಗಾಗಿತ್ತು. ಸಭೆಯಲ್ಲಿ ಗಾಢಮೌನವಾವರಿಸಿತು. ಪರಿಸ್ಥಿತಿ ವಿಕೋಪಕ್ಕೆ ಹೋಯಿತೆಂದು ತಿಳಿದು ಗುಂಡಾಭಟ್ಟರು ಮೆಲ್ಲನೆ ಡಿ. ಸಿ. ಸಾಹೇಬರ ಬಳಿಬಂದು

"ಕೋಪ ಮನುಷ್ಯನ ವಿವೇಚನೆಯನ್ನು ಹಾಳು ಮಾಡುತ್ತದೆ ಖಾವಂದರೇ. ರುದ್ರಶೆಟ್ಟರು ಸ್ವಭಾವತಃ ಒಳ್ಳೆಯ ಮನುಷ್ಯರು. ಈಗ ಕೆಟ್ಟ ಹಟಕ್ಕೆ ಬಿದ್ದು ತಪ್ಪುದಾರಿ ತುಳಿಯುತ್ತಿದ್ದಾರೆ. ಅವರ ಸಣ್ಣ ಮಾತುಗಳನ್ನು ತಾವು ಮರೆತು ಬಿಡಬೇಕು.

"ರುದ್ರಶೆಟ್ಟರು ತಮ್ಮನ್ನು ಅಪಮಾನಗೊಳಿಸಿದರಲ್ಲ ಶಾಸ್ತ್ರಿಗಳೇ."

"ಮಾನಾಪಮಾನಗಳ ಚಿಂತೆಯಿರುವವರಿಗೆ ಅದರ ಯೋಚನೆ. ನನಗೇನಾಗಬೇಕು ಸ್ವಾಮಿ. ಯಾವದು ಸತ್ಯ ಎಂದು ನನಗೆ ತೋರುತ್ತದೊ ಅದನ್ನಾಡುತ್ತೇನೆ. ಯಾರಿಗದು ಪ್ರಿಯವಾದರೇನು, ಅಪ್ರಿಯವಾದರೇನು?"

ಡಿ. ಸಿ. ಸಾಹೇಬರು ಸೂರಪ್ಪನನ್ನು ಕರೆದು

"ಮಾಮೂಲಿನಂತೆ ಎಲ್ಲವೂ ನಡೆದುಕೊಂಡು ಹೋಗಲಿ. ಬಸವ ಜಯಂತಿಯ ದಿನ ಇಲ್ಲಿಗೆ ಒಂದು ಆರ್ಮ್ಡ್ ಪೋಲೀಸ್ ಪಡೆ ಕಳುಹಿಸಿ ದೊಂಬಿಯಾಗದಂತೆ ನೋಡಿಕೊಳ್ಳಲು ಡಿ. ಎಸ್. ಪಿ. ಯವರಿಗೆ ತಿಳಿಸಿ"

ಎಂದು ಹೇಳಿ ಹೊರಟು ನಿಂತರು.

ಸಾಹೇಬರು ಕಾರಿನಲ್ಲಿ ಕುಳಿತಾಗ ಕೆಂಗೇಗೌಡರು ಅವರ ಸಮೀಪಕ್ಕೆ ಬಂದು

"ಖಾವಂದರವರು ನಮ್ಮೂರಿನಲ್ಲಿ ಒಂದು ಲೋಟಾ ಕಾಫಿಯನ್ನೂ ತೆಗೆದುಕೊಳ್ಳಲಿಲ್ಲ" ಎಂದರು.

"ಗೌಡರೇ, ನೀವೂ ರುದ್ರಶೆಟ್ಟರೂ ಒಪ್ಪಂದಮಾಡಿಕೊಂಡು ಅನ್ಯೋನ್ಯವಾಗಿದ್ದರೆ ನನಗೆ ಕಾಫಿ ಕುಡಿದುದಕ್ಕಿಂತ ಹೆಚ್ಚು ಸಂತೋಷವಾಗುತ್ತದೆ. ಈ ಮಾತನ್ನು ನಾನು ಜಿಲ್ಲಾಧಿಕಾರಿಯಾಗಿ ಹೇಳುತ್ತಿಲ್ಲ—ಮನುಷ್ಯನಾಗಿ ಹೇಳುತ್ತಿದ್ದೇನೆ."

"ನಮ್ಮವರು ದುಂಡಾವರ್ತಿಗೆ ಹೋಗದಂತೆ ನಾನು ನೋಡಿಕೊಳ್ಳು ತ್ತೇನೆ ಸ್ವಾಮಿ."

"ಸಂತೋಷ. ದಯೆಯಿಟ್ಟು ಅಷ್ಟು ಮಾಡಿ" ಎಂದರು.

ಕಾರು ತುಮಕೂರು ಮಾರ್ಗ ಹಿಡಿಯಿತು.

ಚಾವಡಿಯಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರ ಎದುರು ನಿಂತು ಮಿಾಸೆತಿರುವಿದ ರುದ್ರಶೆಟ್ಟಿಯನ್ನು ಅವನ ಪರಿವಾರದವರು 'ತಾರೀಫ್' ಮಾಡಿದರು. ಮೊದಲೇ ಹೆಂಡ ಕುಡಿದಿದ್ದ ಕಪಿಗೆ ಅಫೀಮು ತಿನ್ನಿಸಿದಂತಾಯಿತು. ತನ್ನ ಹಟಗೆಲ್ಲದಿದ್ದರೂ ಚಿಂತೆಯಿಲ್ಲ—ಜಬ್ಬಾರ್ ಸಾಹೇಬರಿಗೆ ತುಮಕೂರಿನಿಂದ ಎತ್ತಂಗಡಿ ಮಾಡಿಸಬೇಕೆಂದು ನಿರ್ಧರಿಸಿಕೊಂಡೇ ಅವನು ಬಶೆಟ್ಟಪ್ಪನೊಂದಿಗೆ ತುಮಕೂರಿಗೆ ಬಂದ. ಕೆಂಪಯ್ಯ, ರೇವಣಸಿದ್ದಪ್ಪ, ಸತ್ತಾರ್, ಭೀಮರಾಯರು ಅವನ ಕುಮ್ಮಕ್ಕಿಗೆ ನಿಂತರು.

ದಿವಾನ್ ಸಾಹೇಬರವರಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ರುದ್ರಶೆಟ್ಟಿ ತನ್ನ ಹಾಗೂ ತುಮಕೂರಿನ ಪರಿವಾರ ಕಟ್ಟಿಕೊಂಡು ಬೆಂಗಳೂರಿಗೆ ಬಂದಿಳಿದ.

'ದಿವಾನರೂ ಮುಸಲ್ಮಾನರು, ಜಿಲ್ಲಾಧಿಕಾರಿಗಳೂ ಮುಸಲ್ಮಾನರು. ತಮ್ಮ ದೂರನ್ನು ಅವರು ಕೇಳುವರೇ'

ಎಂದು ಅಧೈರ್ಯಗೊಂಡಿದ್ದ ರುದ್ರಶೆಟ್ಟೀಗೆ ಸತ್ತಾರ್ ಹುರುಪುಕೊಟ್ಟು "ನಾನಿದ್ದೀನಿ—ನಡೆಯಿರಿ" ಎಂದು ಹೇಳಿದ್ದ.

ದಿವಾನ ಸಾಹೇಬರು ತುಮಕೂರಿನ ಮೇಲೆ ಹಾದುಹೋಗುವಾಗಲೆಲ್ಲ ಅವರಿಗೆ ಹಾರ, ತುರಾಯಿ ಒಪ್ಪಿಸಿ ಕೆಂಪಯ್ಯ ಚೆನ್ನಾಗಿ ಪರಿಚಯ ಮಾಡಿಕೊಂಡಿದ್ದ. ಒಂದೆರಡುಬಾರಿ ದಿವಾನರನ್ನು ತನ್ನ ಮನೆಗೆ ಬರ ಮಾಡಿಕೊಂಡು ಆತಿಥ್ಯವನ್ನೂ ನಡೆಸಿದ್ದ. ಎಲ್ಲಕ್ಕೂ ಹೆಚ್ಚಾಗಿ ದಿವಾನ ಸಾಹೇಬರ ವಿರುದ್ಧ ಬಂಡಾಯವೆಬ್ಬಿಸಿದ್ದ ಕಾಂಗ್ರೆಸ್ಸಿನವರನ್ನು ತುಳಿಯಲು ಕೆಂಪಯ್ಯ, ಬದ್ಧಕಂಕಣನಾಗಿದ್ದ.

ಕೆಂಪಯ್ಯ, ಸತ್ತಾರ್ ಇಬ್ಬರ ಸಹಾಯದಿಂದ ತನ್ನ ಕೆಲಸ ಕದ್ದಿ

ಯೆತ್ತಿದಷ್ಟು ಸುಲಭವಾಗಿಯಾಗುತ್ತದೆ ಎನ್ನುವ ವಿಷಯದಲ್ಲಿ ರುದ್ರಶೆಟ್ಟಿಗೆ ಅನುಮಾನವೇ ಇರಲಿಲ್ಲ.

ಮಾಡರ್ನ್ ಹಿಂದೂ ಹೊಟೇಲಿನ ಒಂದು ಕಾಟೇಜಿನಲ್ಲಿ ರುದ್ರಶೆಟ್ಟಿ, ಅವನ ಪರಿವಾರ ತಂಗಿದರು. ಅಂದೇ ಮಧ್ಯಾಹ್ನಾನಂತರ ನಾಲ್ಕುಗಂಟೆಗೆ ದಿವಾನರನ್ನು ಛೇಂಬರಿನಲ್ಲಿ ಬಂದು ಕಾಣಲು ನಿಯೋಗ ಗೋಷ್ಠಿಯವರಿಗೆ ಕರೆಬಂದಿತು.

ದಿವಾನಸಾಹೇಬರು ಎಲ್ಲರನ್ನೂ ವಿಶ್ವಾಸಪೂರ್ವಕವಾಗಿ ಸ್ವಾಗತಿಸಿ ಕುಶಲಪ್ರಶ್ನೆ ಮಾಡಿದರು. ಮಳೆ, ಬೆಳೆ, ಊರಿನ ಆರೋಗ್ಯ, ರೈತರ ಸ್ಥಿತಿ ಗತಿಗಳನ್ನೆಲ್ಲಾ ಕೇಳಿದರು.

ನಿಯೋಗ ಗೋಷ್ಠಿಯ ಪರವಾಗಿ ಭೀಮರಾಯ ಟೈಪುಮಾಡಿಸಿ ತಂದಿದ್ದ ಅರ್ಜಿ ಒಪ್ಪಿಸಿದ. ದಿವಾನಸಾಹೇಬರು ಅರ್ಜಿ ಓದಿಕೊಂಡು

"ಆಗಬಹುದು. ಈ ವಿಷಯ ಡೆಪ್ಯುಟಿ ಕಮಿಷನರೇ ನಿರ್ಧರಿಸಿ ನಿಮಗೆ ಎಂಡಾರ್ಸ್‍ಮೆಂಟ್ (Endorsement) ಕೊಡುತ್ತಾರೆ. ದೇವರ ಉತ್ಸವ ತೆಗೆದುಕೊಂಡು ಹೋಗುವುದಕ್ಕೆ ಯಾರದೇನು ಅಡ್ಡಿ."

"ಊರಿನಲ್ಲಿ ಎರಡು ಪಾರ್ಟಿಯಾಗಿದೆ ಮಹಾಸ್ವಾಮಿ. ಕೆಂಗೇಗೌಡನ ಕಡೆಯವರು ರುದ್ರಶೆಟ್ಟರಿಗೆ ಅಪಮಾನ ಮಾಡಬೇಕೆಂದು ಈ ಹಂಚಿಕೆ ತೆಗೆದಿದ್ದಾರೆ. ಡಿ. ಸಿ. ಸಾಹೇಬರು ಅವರ ಕಡೆ ವಾಲಿದ್ದಾರೆ."

"ಏಕೆ ?"

"ಕೆಂಗೇಗೌಡರು ತುಂಬ ಅನುಕೂಲಸ್ಥರು."

ದಿವಾನಸಾಹೇಬರ ಹುಬ್ಬು ಗಂಟಿಕ್ಕಿತು. ಅವರ ಮನಸ್ಸಿನ ದುಗುಡ ಸ್ಪಷ್ಟವಾಗಿ ಅವರ ಮೂಗಿನ ಹೊಳ್ಳೆಗಳಲ್ಲಿ ಪ್ರತಿಬಿಂಬಿಸಿತು.

"ಏನು ! ಜಬ್ಬಾರ್ ಸಾಹೇಬರು ಕೆಂಗೇಗೌಡರ ಮಾತು ಕೇಳುತ್ತಾರೆಂದಿರಾ ?"

"ಭೀಮರಾಯರು ಹೇಳುವುದು ಸತ್ಯ ಸರ್ಕಾರ್. ಡಿ. ಸಿ. ಸಾಹೇಬರ ಕಿರುಕುಳ ಅನುಭವಿಸುವುದೇ ಕಷ್ಟವಾಗಿದೆ."

ಎಂದು ಸತ್ತಾರ್ ದನಿಗೂಡಿಸಿದ.

"ಜನ ಹೆಚ್ಚುಹೆಚ್ಚಾಗಿ ಕಾಂಗ್ರೆಸ್ ಸೇರುವುದಕ್ಕೆ ಡಿ. ಸಿ. ಸಾಹೇಬರ ದಬ್ಬಾಳಿಕೆಯೂ ಕಾರಣವಾಗಿದೆ ಮಹಾಸ್ವಾಮಿ."

ಎಂದು ಕೆಂಪಯ್ಯ ಪುಳ್ಳೆಯಿಟ್ಟ.

"ನಿಮ್ಮೂರಿನಲ್ಲಿ ಮಾಮೂಲಾಗಿ ಉತ್ಸವ ಹೇಗೆ ನಡೆಯುತ್ತಿತ್ತು."

ಎಂದು ದಿವಾನ ಸಾಹೇಬರು ರುದ್ರಶೆಟ್ಟಿಯನ್ನು ಕೇಳಿದರು.

ಮಾಮೂಲ್ ವಿಷಯ ಹೇಳಿದರೆ ತನ್ನ ಕೆಲಸ ಸಂಪೂರ್ಣವಾಗಿ ಕೆಡುವುದೆಂದು ರುದ್ರಶೆಟ್ಟಿಗೆ ಚೆನ್ನಾಗಿ ಗೊತ್ತಿತ್ತು. ದಿವಾನರ ಪ್ರಶ್ನೆಗೆ ಉತ್ತರ ಹೇಳಲಾಗದೆ ಅವನು ಭೀಮರಾಯನ ಮುಖ ನೋಡಿದ.

"ಮಾಮೂಲಿನಲ್ಲಿ ಒಂದು ತಕರಾರಾಗಿದೆ ಮಹಾಸ್ವಾಮಿ."

"ಏನು ತಕರಾರು ?"

"ಈಗ್ಗೆ ಕೆಲವು ವರ್ಷಗಳ ಕೆಳಗೆ ವೀರಭದ್ರಸ್ವಾಮಿ ಉತ್ಸವ, ನಂದೀ ಧ್ವಜ, ಬಸವಣ್ಣನ ಅಡ್ಡಪಲ್ಲಕ್ಕಿ ರಾಮದೇವರ ಗುಡಿಯ ಮುಂದೆ ಹೋಗುತ್ತಿತ್ತು. ಕೆಂಗೇಗೌಡನ ಕಡೆಯವರು ಒಂದು ವರ್ಷ ಗಲಾಟೆಮಾಡಲು, ಊರಿನಲ್ಲಿ ವೈಷಮ್ಯ ಬರಬಾರದೆಂದು ರುದ್ರಶೆಟ್ಟರೇ ಆ ದಾರಿಯಲ್ಲಿ ಉತ್ಸವ ಹೋಗುವುದನ್ನು ನಿಲ್ಲಿಸಿದರು. ಇದೇ ಮಾಮೂಲೆಂದು ಕೆಂಗೇಗೌಡ ಈಗ ವಾದಿಸುತ್ತಿದ್ದಾನೆ."

"ಈಗ ಹಾಲಿ ಇರುವ ರೀತಿಯಲ್ಲೇ ಏಕೆ ಮುಂದುವರಿಸಿಕೊಂಡು ಹೋಗಬಾರದು ?"

"ರುದ್ರಶೆಟ್ಟರು ಒಪ್ಪಬಹುದು—ಅವರ ಜನ ಒಪ್ಪಬೇಕಲ್ಲ ಮಹಾಸ್ವಾಮಿ. ಶೆಟ್ಟರ ದೊಡ್ಡಗುಣ ಕೆಂಗೇಗೌಡ ಅವನ ಕಡೆಯವರು ಅರ್ಥ ಮಾಡಿಕೊಳ್ಳಲಿಲ್ಲವಲ್ಲ ಎಂದು ಶೆಟ್ಟರ ಕಡೆಯವರಿಗೆ ತುಂಬ ಕೋಪಬಂದಿದೆ."

ದಿವಾನ ಸಾಹೇಬರು ಕ್ಷಣಕಾಲ ಆಲೋಚಿಸಿ

"ಆಗಲಿ—ನೀವು ಊರಿಗೆ ಹೋಗಿ. ನಾನು ಸಂಬಂಧಪಟ್ಟ ರಿಕಾರ್ಡುಗಳನ್ನು ನೋಡಿ ಆರ್ಡರ್ ಪಾಸ್ ಮಾಡುತ್ತೇನೆ" ಎಂದರು.

ರುದ್ರಶೆಟ್ಟಿಯ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಜಬ್ಬಾರ್ ಸಾಹೇಬರು, ಕೆಂಗೇಗೌಡನ ಸಮಾಧಿಯಾಯಿತೆಂದು ಅವನು ಮನಸ್ಸಿನಲ್ಲಿ

ಎಣಿಕೆ ಹಾಕಿಕೊಂಡ. ಆದರೆ ಅವನ ಮನಸ್ಸನ್ನು ಒಂದಳಕು ಊರೆಯು ತ್ತಿತ್ತು.

"ಇಲ್ಲದ್ದೆಲ್ಲಾ ಹೇಳಿಬಿಟ್ಟಿರಲ್ಲಾ ಭೀಮರಾಯರೇ—ಯಾವ ಕಾಲಕ್ಕೂ ರಾಮದೇವರ ಗುಡಿ ಬೀದಿಯಲ್ಲಿ ಮೆರವಣಿಗೆ ಹೋಗುವ ಅಧಿಕಾರ ನಮ ಗಿರಲೇ ಇಲ್ಲ."

"ಇತ್ತು ಎಂದು ಸಿದ್ಧಮಾಡಿಕೊಡುವ ಜವಾಬ್ದಾರಿ ನನಗಿರಲಿ. ಅಷ್ಟು ನನ್ನ ಕೈಯಲ್ಲಾಗದಿದ್ದರೆ ಪ್ಲೀಡರ್‌ಗಿರಿ ನಾನೇಕೆ ಮಾಡಬೇಕು."

"ಸತ್ತಾರ್ ಸಾಹೇಬರು ಒಳ್ಳೆಯ ಸಮಯದಲ್ಲಿ ತುರುಫ್ ಆಡಿದರು."

"ಈ ಹಾಜಿಸಾಹೇಬರನ್ನ ತುಮಕೂರು ಬಿಟ್ಟು ಹೊರಡಿಸದಿದ್ದರೆ ನಾವಿದ್ದು ಏನು ಸಾರ್ಥಕ ರುದ್ರಣ್ಣ — ನನ್ನದೇನು ಮಹಾ, ಐನಾತಿ ತುರುಫ್ ಆಡಿದೋರೊಂದ್ರೆ ಕೆಂಪಯ್ಯನವರು. ಕಾಂಗ್ರೆಸ್ಸಿನವರೆಂದರೆ ದಿವಾನ ಸಾಹೇಬರು ಉರಿದುರಿದು ಬೀಳುತ್ತಾರೆ."

"ಏನಾರಾ ಆಗಲಿ. ನಮ್ಮ ಕೆಲಸ ಆಗುತ್ತಲ್ಲ!"

"ಆದರಲ್ಲಿ ಸಂಶಯವೇ ಇಲ್ಲ. ಈ ಸಲ ಉತ್ಸವ ಮುಗಿದುಹೋಗಲಿ ರುದ್ರಪ್ಪಣ್ಣ—ಕೆಂಗೇಗೌಡನ್ನ ಬಲಿಹಾಕಿಬಿಡುತ್ತೇನೆ" ಎಂದು ಬಕ್ಕೈಟ್ಟಪ್ಪ ಬಡಾಯಿ ಕೊಚ್ಚಿಕೊಂಡ.

## ೫

ಕಾರಿನಲ್ಲಿ ಬೆಂಗಳೂರಿಗೆ ಹೋಗಿ ಬಂದಿದ್ದ ಡೆಪ್ಯುಟಿ ಕಮಿಷನರ್ ಸಾಹೇಬರು ಒಳಗೆ ಬಟ್ಟೆ ತೆಗೆದಿಟ್ಟು, ಪಾಯಿಜಾಮಾ ಧರಿಸಿ ಮನೆಯ ವೆರಾಂಡದಲ್ಲಿ ಶಥಪಥ ತಿರುಗಾಡುತ್ತಿದ್ದರು.

ಗುಂಡಾಭಟ್ಟರು ಬಂದುದನ್ನು ಕಂಡು ಸಾಹೇಬರು ಬಂದು ಅವರಿಗೆ ಸ್ವಾಗತ ಬಯಸಿದರು.

"ಈಗ ತಾನೇ ಬಂದಂತಿದೆ."

"ಹೌದು ಶಾಸ್ತ್ರಿಗಳೇ, ಬೆಂಗಳೂರಿಗೆ ಹೋಗಿದ್ದೆ."

"ವಿಶ್ರಮಿಸಿಕೊಳ್ಳಿ—ಬೆಳಿಗ್ಗೆ ಬಂದು ಕಾಣುತ್ತೇನೆ."

"ಇಲ್ಲ ಬನ್ನಿ, ನಾನು ನಿಮ್ಮ ದಾರಿಯನ್ನೇ ಎದುರುನೋಡುತ್ತಿದ್ದೆ. ನೀವು ಬೆಳಿಗ್ಗೆ ಬಂದಿದ್ದರಂತೆ."

"ಹೌದು, ನೀವು ಬೆಂಗಳೂರಿಗೆ ಹೋದ ವಿಷಯ ಮನೆಯಲ್ಲಿ ತಿಳಿಯಿತು."

"ಅರ್ಜೆಂಟ್ ಫೋನ್ ಕಾಲ್ ಬಂತು—ಹೊರಟುಬಿಟ್ಟೆ."

"ದಿವಾನ್ ಸಾಹೇಬರಿಂದಲೇ ?"

"ಹೌದು."

ಸಾಹೇಬರ ಆಳು ಒಂದು ಕಪ್ ಚಹಾ ತಂದು ಅವರ ಕೈಯಲ್ಲಿತ್ತ.

"ನಿಮಗೆ ನಾವು ಏನನ್ನೂ ಕೊಡುವಂತಿಲ್ಲ."

"ಪರಮಾತ್ಮ ಯಾವ ಮುಖದಲ್ಲಿ ಸ್ವೀಕರಿಸಿದರೂ ಅದು ಒಂದೇ ಉದರಕ್ಕಲ್ಲವೇ ಸೇರುವುದು."

"ಹಣ್ಣು ಸ್ವೀಕರಿಸಬಹುದಲ್ಲ."

"ಕೊಡಿ— ಸ್ನಾನಮಾಡಿ ತಿನ್ನುತ್ತೇನೆ."

ಸಾಹೇಬರು ಚಹಾ ಮುಗಿಸಿ, ಆಳಿನ ಕೈಗೆ ಕಪ್ಪು, ಬಸಿ ಕೊಟ್ಟರು. ಆಳು ಹೋದಮೇಲೆ

"ನಿಮ್ಮೂರಿನ ರುದ್ರಶೆಟ್ಟಿ, ತುಮಕೂರಿನ ಕೆಂಪಯ್ಯ, ಅವನ ಪರಿವಾರ ನನ್ನ ಮೇಲೆ ಯುದ್ಧ ಹೂಡಿದ್ದಾರೆ ಶಾಸ್ತ್ರಿಗಳೇ."

"ತಮ್ಮ ಮೇಲೆ ಯುದ್ಧವೇ?"

"ಹೂ! ಇವರೆಲ್ಲಾ ಸೇರಿ ದಿವಾನ ಸಾಹೇಬರ ಬಳಿ ನಿಯೋಗ ಹೋಗಿ ನನ್ನ ಮೇಲೆ ಚಾಡಿ ಹೇಳಿದ್ದಾರೆ."

"ಏನೆಂದು?"

"ಕೆಂಗೇಗೌಡರಿಂದ ನಾನು ಲಂಚ ತಿಂದು ರುದ್ರಶೆಟ್ಟರ ವಿರುದ್ಧ ವರ್ತಿಸುತ್ತಿದ್ದೇನೆಂದು."

"ದಿವಾನ ಸಾಹೇಬರು ಅವರ ಮಾತು ನಂಬಿದರೇ?"

"ಏನು ಸಂದರ್ಭ ಎಂದು ಕೇಳಿದರು. ನಾನು ಎಲ್ಲವನ್ನೂ ವಿವರಿಸಿದೆ. ಸತ್ತಾರ್ ಸಾಹೇಬರ ಭಾವಮೈದುನ ಅಬ್ದುಲ್ ಸಮ್ಮದ್ ಜೂಜಿನಕಟ್ಟೆ ನಡೆಸುತ್ತಿದ್ದ ವಿಷಯವನ್ನೂ ಅವರ ಗಮನಕ್ಕೆ ತರಬೇಕಾಯಿತು. ಬಲಿಷ್ಠರನ್ನು ಎದುರುಹಾಕಿಕೊಳ್ಳುವುದು ಸರಿಯಲ್ಲ ಎಂದರು."

"ಅದಕ್ಕೆ ತಾವೇನು ಹೇಳಿದಿರಿ?"

"ಅಧರ್ಮಕ್ಕೆ, ಅನ್ಯಾಯಕ್ಕೆ ನಾನು ತಲೆಬಾಗಿಸಲಾರೆ ಸರ್ಕಾರ್. ನಿರಪರಾಧಿಗಳನ್ನು ಹಿಂಸೆ ಮಾಡುವ ಪುಂಡರನ್ನು ನಾವು ಮಟ್ಟ ಹಾಕದಿದ್ದರೆ ಸರ್ಕಾರದ ಬಿಗಿ ಸಡಿಲವಾಗುತ್ತದೆ. ಯೋಗ್ಯರು ಬದುಕುವುದೇ ಕಷ್ಟವಾಗುತ್ತದೆ. ನನ್ನ ಆಡಳಿತ ತಮಗೆ ತೃಪ್ತಿಕರವಾಗಿಲ್ಲದಿದ್ದರೆ ನಾನು ರಾಜೀನಾಮೆ ಕೊಡಲು ಸಿದ್ಧನಾಗಿದ್ದೇನೆ—ಆದರೆ ಡಿಸ್ಟ್ರಿಕ್ಟ್ ಕಛೇರಿಯ ಸೂತ್ರಗಳನ್ನು ಕೆಂಪಯ್ಯ, ಸತ್ತಾರ್ ಸಾಹೇಬರ ಕೈಗೆ ಕೊಡುವುದಕ್ಕೆ ಸಿದ್ಧನಾಗಿಲ್ಲ" ಎಂದು ಹೇಳಿದೆ.

"ರಾಜೀನಾಮೆ ಕೊಡುತ್ತೇನೆಂದಿರಾ?"

"ದಿವಾನ ಸಾಹೇಬರು ನಯವಾಗಿ 'ಜಬ್ಬಾರ್, ನೀವು ಹಜರತ್ ಪೈಗಂಬರರ ನಿಜವಾದ ಶಿಷ್ಯರೆಂಬುದನ್ನು ನಾನು ಬಲ್ಲೆ— ಕೆಂಪಯ್ಯ,

ಸತ್ತಾರ್ ಏತಕ್ಕೆ ನಿಮ್ಮ ಮೇಲೆ ವಿಷ ಕಾರುತ್ತಿರುವರೆಂಬುದೂ ನನಗೆ ಗೊತ್ತಿದೆ. ನಿಮ್ಮಂಥ ಅಧಿಕಾರಿಗಳನ್ನು ಕಳೆದುಕೊಳ್ಳಲು ನಾನು ಮೂಢನೇ? ಈ ವಿಷಯದಲ್ಲಿ ನಿಮಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದೇನೆ. ನಿಮಗೆ ಹೇಗೆ ಸೂಕ್ತ ತೋರುವುದೋ ಹಾಗೆ ಇತ್ಯರ್ಥ ಮಾಡಿ—ನಿಮ್ಮನ್ನಿಲ್ಲಿಗೆ ನಾನು ಕರೆಸಿಕೊಂಡುದು ಈ ವಿಷಯ ಮಾತನಾಡುವುದಕ್ಕಲ್ಲ—ಇಲ್ಲಿ ನೋಡಿ"

ಎಂದು ತಮ್ಮ ಡ್ರಾಯರಿನಿಂದ ಒಂದು ಕಾಗದ ತೆಗೆದು

"ಈ ವರ್ಷದ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ದರ್ಬಾರಿನಲ್ಲಿ ನಿಮಗೆ 'ರುಕ್ನ ಉಲ್ ಮುಲ್ಕ್' ಬಿರುದು ಕೊಡಬೇಕೆಂದು ಶಿಫಾರಸು ಮಾಡಿದ್ದೇನೆ. ಹಾಜಿ ಸಾಹೇಬರು ಬಿರುದು ತೆಗೆದುಕೊಳ್ಳಲು ಒಪ್ಪುವರೋ ಇಲ್ಲವೋ ಕೇಳಲು ಬರಮಾಡಿಕೊಂಡೆ ಎಂದರು. ನಾನು ಎದ್ದು ನಿಂತು 'ಗುಲಾಮನಿಗೇಕೆ ಇಷ್ಟು ಸನ್ಮಾನ ಸರ್ಕಾರ್. ಮಹಾಸ್ವಾಮಿಯವರು ನಮ್ಮೆಲ್ಲರನ್ನೂ ಮಕ್ಕಳಂತೆ ಕಾಪಾಡುತ್ತಿದ್ದಾರೆ. ಅವರ ಸೇವೆ ಮಾಡುವ ಭಾಗ್ಯಕ್ಕಿಂತ ಹೆಚ್ಚೇನು ಬಯಸಬೇಕು' ಎಂದೆ. 'ನೀವು ಒಪ್ಪಿಕೊಳ್ಳದಿದ್ದರೆ ಮಹಾಸ್ವಾಮಿಯವರ ಮನಸ್ಸಿಗೆ ವ್ಯಥೆಯಾಗುತ್ತದೆ. ಒಂದು ಗುಟ್ಟು ಹೇಳುತ್ತೇನೆ. ನಮ್ಮಿಬ್ಬರಲ್ಲೇ ಇರಲಿ—ನಿಮ್ಮ ಹೆಸರನ್ನು ಈ ವರ್ಷದ ಗೌರವದ ಪಟ್ಟಿಯಲ್ಲಿ ಸೇರಿಸಲು ಆಜ್ಞೆ ಮಾಡಿದವರೇ ಮಹಾಸ್ವಾಮಿಯವರು ಎಂದರು. ಇದಕ್ಕೆ ನಾನೇನು ಹೇಳಲಿ ಶಾಸ್ತ್ರಿಗಳೇ—ಒಪ್ಪಿಕೊಂಡೆ."

ಭಟ್ಟರ ಮುಖದಲ್ಲಿ ಹರ್ಷ ತುಂಬಿ ತುಳುಕಿತು.

"ಒಳಗೆ ಅಮ್ಮನವರಿಗೆ ಈ ವಿಷಯ ತಿಳಿಸಿದಿರಾ?"

"ಇಲ್ಲ—ನಿಮಗಲ್ಲದೆ ಇನ್ನು ಯಾರಿಗೂ ಈ ವಿಷಯ ಗೊತ್ತಿಲ್ಲ."

"ಸ್ವಲ್ಪ ತಡೆಯಿರಿ" ಎಂದು ಹೇಳಿ ಭಟ್ಟರು ಒಳಗೆ ಹೋಗಿ ಕಾಲು ಗಂಟೆ ತರುವಾಯ ಫಾತೀಮನೊಂದಿಗೆ ಬಂದರು. ಜಬ್ಬಾರ್ ಸಾಹೇಬರು ಮಗಳನ್ನು ನೋಡಿ

"ಶಾಸ್ತ್ರಿಗಳನ್ನು ಮುಟ್ಟಿಬಿಟ್ಟೆಯಲ್ಲಾ ಫಾತೀ-ಅವರ ಮಡಿ ಕೆಡಿಸಿಬಿಟ್ಟೆ."

"ಇಲ್ಲ ಅಪ್ಪಾಜಾನ್—ಚಚ್ಚಾನೇ ನನ್ನ ಮುಟ್ಟಿದರು."

"ಹೌದು ಖಾವಿಂದ್. ನಾನೇ ನನ್ನ ಮಗಳನ್ನು ಮುಟ್ಟಿದೆ."

ತಂದೆಯ ಬಳಿಗೆ ಮಗಳು ಬಂದು

"ನನಗೆ ಮಿಠಾಯಿ ಬೇಕು ಅಪ್ಪಾಜಾನ್—ತುಂಬ ಬೇಕು—ನನ್ನ ಸ್ಕೂಲಿನಲ್ಲಿ ಎಲ್ಲರಿಗೂ ಕೊಡಬೇಕು."

"ಏಕೆ ಫಾತೀ ?"

"ನಿಮಗೆ ಮಹಾರಾಜರು ಮರ್ಯಾದೆ ಮಾಡುತ್ತಾರಂತೆ !"

"ನಿನ್ನ ಚಚ್ಚಾ ತುಂಬ ಕೆಟ್ಟವರು ಫಾತೀ."

"ಇಲ್ಲ ಅಪ್ಪಾಜಾನ್—ಖುದಾ ಬೇರೆ ಅಲ್ಲ; ಅವರು ಬೇರೆ ಅಲ್ಲ ಎಂದು ಅಮ್ಮಿ ಕೂಡಾ ಹೇಳುತ್ತಾರೆ."

"ನಿಜ—ನಿಜ ಮೇರೀ ನೈನಾ—ನಿನ್ನ ಸ್ಕೂಲಿನವರಿಗೆಲ್ಲಾ ಮಿಠಾಯಿ ಕೊಡುವೆಯಂತೆ—ಆದರೆ ಈಗಲೇ ಅಲ್ಲ—ಸರ್ಕಾರದ ಹುಕುಂ ಬಂದ ಮೇಲೆ ಮಿಠಾಯಿ."

"ಮಿಠಾಯಿ ಕೊಡುವುದಕ್ಕೆ ಸರ್ಕಾರದ ಹುಕುಮೇಕೆ ?"

"ಅದು ಹಾಗೇ ಫಾತೀ—ಶ್ರೀಮನ್ಮಹಾರಾಜರು ನಮ್ಮ ಮಾಬಾಪ್. ಅವರ ಹುಕುಂ ಆಗದೆ ನಾವು ಏನೂ ಮಾಡಬಾರದು."

ಫಾತೀಮಾ ಮುಖ ಚಿಕ್ಕದು ಮಾಡಿಕೊಂಡು ಒಳಗೆ ಹೋದಳು.

"ನೋಡಿದಿರಾ ಶಾಸ್ತ್ರಿಗಳೇ, ನಿಮ್ಮ ಫಾತೀ ಎಷ್ಟು ತುಂಟತನ ಕಲಿತು ಬಿಟ್ಟಿದ್ದಾಳೆ."

"ಭಗವಂತನ ಮಾಯೆ ಬಲು ವಿಚಿತ್ರ ಸ್ವಾಮಿ."

"ಏಕೆ ?"

"ಜಗತ್ತು ಮಾಯೆ. ಮಾಯೆಯ ಹಿಡಿತಕ್ಕೆ ಸಿಕ್ಕಿಕೊಳ್ಳದಿರಬೇಕಾದರೆ ಜಗತ್ತಿನಿಂದ ದೂರವಿರಬೇಕು ಎಂದುಕೊಂಡು ಹೊರಟವನು ನಾನು. ಆಕಾಶ ಮಾರ್ಗದಲ್ಲಿ ಹೋಗುತ್ತಿರುವ ನನ್ನನ್ನು ಇಲ್ಲಿ ಫಾತೀಮಾ, ಅಲ್ಲಿ ಪಾತು ಇಬ್ಬರೂ ಭೂಮಿಗೆ ಜಗ್ಗುತ್ತಿದ್ದಾರೆ."

"ಪಾತು ಯಾರು ?"

"ನನ್ನ ಬಾಲ್ಯಸ್ನೇಹಿತ ದಾಸಪ್ಪನ ಮಗಳು. ಅವನು ವಿಧಿವಶನಾದ ಮೇ ಮನೆಗೆ ಗಂಡು ದಿಕ್ಕಿಲ್ಲದಂತಾಗಿದೆ."

"ಈ ಮಗುವಿಗೆ ಗಂಡು ನೋಡಿರುವಿರಾ ?"

"ಅದೇ ಕೆಲಸದ ಸಲುವಾಗಿ ಇಲ್ಲಿಗೆ ಬಂದಿದ್ದೇನೆ. ಪ್ಲೀಡರ್ ಆದಿಶೇಷಯ್ಯನವರ ಮಗ ಚಂದ್ರಶೇಖರ ಎಂತಾ ಒಬ್ಬ ಹುಡುಗ ಇದ್ದಾರೆ. ಆದಿಶೇಷಯ್ಯನವರು ನನಗೆ ಯಾವದೋ ಬಾದರಾಯಣ ಸಂಬಂಧ ಬೇರೆ."

"ಆದಿಶೇಷಯ್ಯನವರನ್ನು ನಾನು ಬಲ್ಲೆ. ಅವರ ಮಗ ಏನು ಮಾಡುತ್ತಿದ್ದಾನೆ."

"ಅವನೂ ಪ್ಲೀಡರ್ ಪರೀಕ್ಷೆಗೆ ಓದುತ್ತಿದ್ದಾನೆ. ತಮ್ಮಂತೆಯೇ ಮಗನೂ ಲಾಯರಾಗಬೇಕೆಂದು ತಂದೆಯವರ ಇಚ್ಛೆ."

"ನನ್ನಿಂದೇನಾದರೂ ಆಗಬೇಕಾದರೆ ನಿಸ್ಸಂಕೋಚವಾಗಿ ತಿಳಿಸಿ."

"ಆದಿಶೇಷಯ್ಯನವರು ನನ್ನ ಮಾತು ತೆಗೆದು ಹಾಕಲಾರರು. ಋಣಾನುಬಂಧ ಹೇಗಿದೆಯೋ?"

"ತಾವು ಕೈಹಾಕಿದ ಕೆಲಸ ಕೆಡುವುದೆಂದರೇನು ಶಾಸ್ತ್ರಿಗಳೇ!"

"ತಮ್ಮ ಅಭಿಮಾನ ದೊಡ್ಡದು. ನಮ್ಮೂರಿನ ಬಗ್ಗೆ ಏನು ನಿರ್ಧರಿಸಿರುವಿರಿ?"

"ಮಾಮೂಲಿನಂತೆ ನಡೆದುಕೊಂಡು ಹೋಗಲಿ. ಉತ್ಸವದ ದಿನ ಬಂದೋಬಸ್ತಿಗೆ ಪೋಲೀಸರನ್ನು ಕಳಿಸಿಕೊಡುತ್ತೇನೆ—ಈ ಅಧಿಕಾರ ಪದವಿಗಳನ್ನು ಕಂಡು ನನಗೆ ಬಹಳ ಬೇಸರವಾಗುತ್ತಿದೆ ಶಾಸ್ತ್ರಿಗಳೇ. ನಮ್ಮ ಜನಕ್ಕೆ ತಿಳುವಳಿಕೆ ಬರುವುದು ಯಾವಾಗ?—ಧರ್ಮಗಳ ಹೆಸರಿನಲ್ಲಿ ಕಲಹ ಮಾಡುವುದನ್ನು ಇವರು ಯಾವಾಗ ನಿಲ್ಲಿಸುತ್ತಾರೆ ಎಂಬ ಯೋಚನೆ ಒಂದೇ ಸಮನಾಗಿ ನನ್ನನ್ನು ಕಾಡುತ್ತಿದೆ."

"ಜಾತಿಜಗಳ ಉತ್ತರದೇಶದಲ್ಲಿಯೂ ಪ್ರಬಲವಾಗಿದೆಯಂತಲ್ಲ ಸ್ವಾಮಿ."

"ಅಯ್ಯೋ—ಉತ್ತರದೇಶದ ಕಥೆ ಏನೆಂದು ಹೇಳುವಿರಿ. ಜಿನ್ನಾ ಸಾಹೇಬರು ಪಾಕೀಸ್ಥಾನ ಕಟ್ಟಲು ಹೊರಟಿದ್ದಾರೆ. ಮುಸ್ಲಿಮರು ಪ್ರತ್ಯೇಕ ರಾಷ್ಟ್ರವಂತೆ—ಮುಸ್ಲಿಮರು ಅಧಿಕಸಂಖ್ಯಾತರಾಗಿರುವ ಭಾಗಗಳನ್ನೆಲ್ಲಾ ಒಂದುಗೂಡಿಸಿ ಪಾಕಿಸ್ಥಾನ ಮಾಡಿಕೊಡಬೇಕಂತೆ."

"ಪಾಕೀಸ್ಥಾನ ನಿರ್ಮಾಣವಾದರೆ ಇಲ್ಲಿನ ಮುಸಲ್ಮಾನರೆಲ್ಲಾ ಪಾಕಿಸ್ಥಾನಕ್ಕೆ, ಅಲ್ಲಿರುವ ಹಿಂದುಗಳೆಲ್ಲಾ ಭಾರತಕ್ಕೆ ಹೋಗಬೇಕಾಗುತ್ತದೆ."

"ಹಾಗೇ ಆಗಬಹುದು. ಸಾವಿರಾರು ವರ್ಷಗಳಿಂದ ಹಿಂದೂ ಮುಸ್ಲಿಮರು ಅಣ್ಣತಮ್ಮಂದಿರಂತೆ ಬಾಳ್ವೆ ಮಾಡುತ್ತ ಬಂದಿದ್ದೇವೆ. ಈ ಭಾರತ ಹೇಗೆ ಹಿಂದುಗಳ ಮಾತೃಭೂಮಿಯೋ ಹಾಗೆ ನಮ್ಮ ಮಾತೃಭೂಮಿಯೂ ಆಗಿದೆ. ನಮ್ಮ ಜೀವನವೆಲ್ಲಾ ಹಿಂದುಗಳೊಂದಿಗೆ ಹಾಸುಹೊಕ್ಕಾಗಿದೆ. ದೃಷ್ಟಾಂತಕ್ಕೆ ನಮ್ಮ ಸಂಸ್ಥಾನ ತೆಗೆದುಕೊಳ್ಳಿ. ಆಳುವ ಮಹಾಸ್ವಾಮಿಯವರ ಕೃಪಾಚ್ಛತ್ರದ ಕೆಳಗೆ ಹಿಂದುಗಳು, ಮುಸ್ಲಿಮರು, ಕ್ರೈಸ್ತರು, ಹರಿಜನರು ಎಲ್ಲರೂ ಸುಖವಾಗಿದ್ದೇವೆ. ಜಿನ್ನಾ ಸಾಹೇಬರ ಹೂಲಿಯಿಂದ ದೇಶ ಕ್ಷೋಭೆಗೊಳ್ಳುತ್ತದೆ—ವಿನಾಕಾರಣ ವೈಷಮ್ಯ ಹುಟ್ಟುತ್ತದೆ."

"ಉತ್ತರ ದೇಶದಲ್ಲಿ ಹಿಂದುಗಳು ಮುಸ್ಲಿಮರನ್ನು ಪೀಡಿಸುತ್ತಿದ್ದಾರಂತಲ್ಲಾ ಸ್ವಾಮಿ. ಮುಲ್ತಾನಿ, ಮಾರವಾಡಿ, ಸಿಂಧಿಗಳು ಮುಸಲ್ಮಾನರನ್ನು ನಿರ್ಗತಿಕರನ್ನಾಗಿ ಮಾಡಿದ್ದಾರಂತೆ."

"ಆ ಆರೋಪಣೆಯಲ್ಲಿ ಸ್ವಲ್ಪಮಟ್ಟಿನ ಸತ್ಯವಿದೆ. ಪರರಕ್ತೋಪಜೀವಿಗಳಾದ ಮುಲ್ತಾನಿ, ಮಾರವಾಡಿ, ಸಿಂಧಿಗಳು ಅನೇಕ ಮುಸ್ಲಿಮರನ್ನು ನಿರ್ಗತಿಕರನ್ನಾಗಿ ಮಾಡಿದ್ದಾರೆ—ಆದರವರು ಹಿಂದುಗಳನ್ನು ಬಿಟ್ಟಿದ್ದಾರೆಯೇ? ನಮ್ಮ ತುಮಕೂರಿನ ರೇವಣಸಿದ್ದಪ್ಪನನ್ನೇ ನೋಡಿ—ಆತ ವೀರಶೈವ. ಲೇವಾದೇವಿ ಆತನ ಮುಖ್ಯ ಕಸುಬು. ಆಸ್ತಿಯಾಧಾರಮಾಡಿಕೊಳ್ಳದೆ ಅವನು ಯಾರಿಗೂ ಚಿಕ್ಕಾಸು ಸಾಲ ಕೊಡುವುದಿಲ್ಲ. ರೇವಣಸಿದ್ದಪ್ಪ ಎಷ್ಟು ಜನ ವೀರಶೈವೇತರರನ್ನು ನಾಶಮಾಡಿದ್ದಾನೆಯೋ ಅಷ್ಟೇ ಜನ-ಅದಕ್ಕೂ ಹೆಚ್ಚಾಗಿ ವೀರಶೈವರನ್ನೂ ನಾಶಮಾಡಿದ್ದಾನೆ. ಇದು ಆರ್ಥಿಕ ಪ್ರಶ್ನೆಯೇ ವಿನಾ ಜಾತಿಯ ಪ್ರಶ್ನೆಯಲ್ಲ. ಈ ಶೋಷಕವರ್ಗವನ್ನು ನಿರ್ಮೂಲಮಾಡಿದ ಹೊರತೂ ಯಾರಿಗೂ ಕ್ಷೇಮವಿಲ್ಲ."

"ಶೋಷಕವನ್ನು ನಿರ್ಮೂಲಮಾಡುವುದಕ್ಕಿಂತ ಶೋಷಣ ಮನೋಭಾವವನ್ನು ನಿರ್ಮೂಲಮಾಡುವುದು ಅಗತ್ಯವಾಗಿ ಕಾಣುತ್ತದೆ. ಭಗವಂತ ಎಲ್ಲರಿಗೂ ಅನ್ನವಿಟ್ಟಿದ್ದಾನೆ. ಒಬ್ಬರ ಅನ್ನ ಒಬ್ಬರು ಕಿತ್ತುಕೊಳ್ಳಬೇಕಾದ ಕಾರಣವಿಲ್ಲ—ಕಾಳ್ಗಿಚ್ಚಿನಂತೆ ನಮ್ಮ ದೇಶದಲ್ಲಿ ವ್ಯಾಪಿಸುತ್ತಿರುವ ಜಾತಿಯ ಜಗಳ ಎಂದಾದರೂ ಪರಿಹಾರವಾಗಲು ಸಾಧ್ಯವೇ?"

"ದೇಶಕ್ಕೆ ಸ್ವಾತಂತ್ರ್ಯ ಬಂದರೆ ಪರಿಹಾರವಾಗಬಹುದು."

"ಹೇಗೆ ?"

"ಸ್ವಾತಂತ್ರ್ಯ ಊರ್ಜಿತಗೊಳಿಸಲು ಎಲ್ಲರೂ ಸಮವಾಗಿ ನಿಸ್ವಾರ್ಥ ದಿಂದ ದುಡಿಯಬೇಕಾಗುತ್ತದೆ."

"ನಾನು—ನನ್ನ ಜಾತಿ ಎಂಬುದನ್ನು ಮರೆತು ನಮ್ಮ ಜನ ದುಡಿಯುವರೇ ?"

"ಅದನ್ನು ಜೋತಿಷ್ಕರಾದ ತಾವು ಹೇಳಬೇಕು ಶಾಸ್ತ್ರಿಗಳೇ—"

ಎಂದು ಜಬ್ಬಾರ ಸಾಹೇಬರು ನಕ್ಕರು.

ಶಾಸ್ತ್ರಿಗಳೂ ನಕ್ಕರು.

ಅವರ ನಗೆಯಲ್ಲಿ ಹೊಗೆ ಬೆರೆತುಕೊಂಡಿತ್ತು.

ಶಾಸ್ತ್ರಿಗಳು ಎದ್ದು ನಿಂತು

"ಹೊತ್ತಾಯಿತು, ಅಪ್ಪಣೆಯಾದರೆ ಬರುತ್ತೇನೆ."

"ಈಗ ತಾವೆಲ್ಲಿಗೆ ಹೋಗಬೇಕು ?"

"ಆದಿಶೇಷಯ್ಯನವರ ಮನೆಗೆ ಹೋಗುತ್ತೇನೆ. ಬೆಳಗ್ಗಿನ ಬಸ್‌ನಲ್ಲಿ ಊರಿಗೆ ಹೊರಡುತ್ತೇನೆ."

"ನಮ್ಮ ಡ್ರೈವರ್ ಮನೆಗೆ ಹೊರಟುಹೋದ—ಸ್ವಲ್ಪ ಕೂಡಿ, ಗಾಡಿ ತರಿಸಿಕೊಡುತ್ತೇನೆ."

"ಬೇಡಿ ಸ್ವಾಮಿ—ನಾನು ಹೋಗುತ್ತೇನೆ."

ಜಬ್ಬಾರ್ ಸಾಹೇಬರು ತಮ್ಮ ಆಳಿನ ಕೈಯಲ್ಲಿ ಹಣ್ಣಿನ ಬುಟ್ಟಿ ಕೊಟ್ಟು ಶಾಸ್ತ್ರಿಗಳನ್ನು ಮನೆ ತಲುಪಿಸಬೇಕೆಂದು ಅಪ್ಪಣೆ ಮಾಡಿದರು.

## ೬

ಗುಂಡಾಭಟ್ಟರು ಮಧ್ಯದಾರಿಯಲ್ಲೇ ಹಣ್ಣಿನ ಬುಟ್ಟಿಯನ್ನು ಆಳಿನ ಕೈಯಿಂದ ತೆಗೆದುಕೊಂಡು ಅವನನ್ನು ಕಳುಹಿಸಿಬಿಟ್ಟರು.

ಭಟ್ಟರು ಆದಿಶೇಷಯ್ಯನವರ ಮನೆಗೆ ಬಂದಾಗ ನಾಗಮ್ಮ ಊಟಕ್ಕೆ ತಟ್ಟೆ ಹಾಕುವ ಸನ್ನಾಹದಲ್ಲಿದ್ದಳು. ಭಟ್ಟರನ್ನು ನೋಡಿ ಸಂತೋಷಗೊಂಡು

"ಯಾವಾಗ ಬಂದಿರಿ ಮಾವಯ್ಯ" ಎಂದು ಕೇಳಿದಳು.

"ಆಗಲೇ ಬಂದೆನಮ್ಮ—ಸ್ವಲ್ಪ ಕೆಲಸವಿತ್ತು. ಬಸ್ಸಿಗೆ ಹೊತ್ತಾಗಿ ಹೋಯಿತು. ರಾತ್ರಿ ಇಲ್ಲಿದ್ದು ಬೆಳಿಗ್ಗೆ ಹೋಗೋಣಾಂತ ಬಂದೆ."

ನಾಗಮ್ಮ ಹಜಾರದಲ್ಲಿ ಒಂದು ಮಂದಲಿಗೆ ಉರುಳಿಸಿದಳು. ಭಟ್ಟರು ಅದರ ಮೇಲೆ ಕುಳಿತು

"ಯಜಮಾನರೆಲ್ಲಿ ?" ಎಂದು ಕೇಳಿದರು.

"ಒಳಗೆ ಕೈಕಾಲು ಮುಖ ತೊಳೆದುಕೊಳ್ಳುತ್ತಿದ್ದಾರೆ"

ಎಂದಂದು 'ಇಲ್ಲಿ ನೋಡಿ ಯಾರು ಬಂದಿದ್ದಾರೆ' ಎಂದು ಗಂಡನಿಗೆ ಕೂಗಿ ಹೇಳಿದಳು.

ಆದಿಶೇಷಯ್ಯ ಟವಲಿನಲ್ಲಿ ಮುಖ ಒರೆಸಿಕೊಳ್ಳುತ್ತ

"ಇದೇನು ಮಾವಯ್ಯ-ಇವತ್ತು ಸೂರ್ಯ ಪಶ್ಚಿಮದಲ್ಲಿ ಹುಟ್ಟಿದ ನೇನು ?"

"ಹಾಗೇನಿಲ್ಲ."

"ತುಮಕೂರಿಗೆ ಬರುತ್ತಲೇ ಇರುತ್ತೀರಂತೆ — ಮನೆಕಡೆ ಬಂದು ಹೋಗುವುದಕ್ಕೆ ಪುರಸತ್ತು ಆಗಲಿಲ್ಲವೇ ?"

"ಏನೋ ಕೆಲಸ ಕಟ್ಟಿಕೊಂಡೇ ಬರುತ್ತಿದ್ದೆನಪ್ಪಾ—ಮುಗಿದ ಕೂಡಲೇ ಊರಿಗೆ ಹೊರಟುಹೋಗುತ್ತಿದ್ದೆ, ಚಂದ್ರಶೇಖರ, ಪ್ರಭಾಕರ ಎಲ್ಲಿ ?"

"ಚಂದ್ರಶೇಖರ ಒಳಗಿದ್ದಾನೆ. ಪ್ರಭಾಕರ ಅಂಗಡಿಗೆ ಹೋಗಿದ್ದಾನೆ. ಗುರುವಾರ ಅವಳಿಗೊಪ್ಪತ್ತು—ಹಣ್ಣು ತರುವುದಕ್ಕೆ ಹೋಗಿದ್ದಾನೆ."

"ನಾನೂ ಹಣ್ಣು ತಂದಿದ್ದೇನೆ—ಒಳಗಿಟ್ಟುಕೊಳ್ಳಮ್ಮ."

ಆದಿಶೇಷಯ್ಯನವರು ಮಗನನ್ನು ಕೂಗಿ ಕರೆದರು.

ಚಂದ್ರಶೇಖರ ರೂಮಿನಿಂದ ಹೊರಬಿದ್ದ.

ನಾಗಮ್ಮ ಮಗನಿಗೆ

"ಮಾವಯ್ಯನಿಗೆ ನಮಸ್ಕಾರ ಮಾಡಪ್ಪ" ಎಂದರು.

ಚಂದ್ರಶೇಖರ ನಮಸ್ಕರಿಸಿದ.

ಕೈಯಲ್ಲಿ ಒಂದು ಚಿಪ್ಪು ಬಾಳೆಯಹಣ್ಣು, ವೀಳೆಯದೆಲೆ ಹಿಡಿದು ಪ್ರಭಾಕರ ಒಳಕ್ಕೆ ಬರಲು ಭಟ್ಟರು ಅವನನ್ನು ದಿಟ್ಟಿಸಿನೋಡಿ

"ಪ್ರಭಾಕರನಲ್ಲವೇ ?" ಎಂದರು.

"ಹೌದು ಮಾವಯ್ಯ."

"ಎಷ್ಟು ಬೆಳೆದುಬಿಟ್ಟಿದ್ದಾನೆ. ನನಗೆ ಗುರುತೇ ಸಿಕ್ಕಲಿಲ್ಲ."

ತಾಯಿಯ ಆಜ್ಞೆಯಂತೆ ಪ್ರಭಾಕರನೂ ಭಟ್ಟರಿಗೆ ನಮಸ್ಕರಿಸಿದ.

"ಏಳಿ ಮಾವಯ್ಯ—ಸ್ನಾನ ಮಾಡುವ ಹಾಗಿದ್ದರೆ ಮಾಡಿ—ಲೇ, ಮಾವಯ್ಯನಿಗೂ ನಮ್ಮ ಜೊತೆಯಲ್ಲಿ ಎಲೆ ಹಾಕಿಬಿಡು."

"ನಾನು ರಾತ್ರಿ ಊಟ ಮಾಡುವುದಿಲ್ಲ ಆದಿಶೇಷಯ್ಯ."

"ಫಲಹಾರ ಮಾಡಿ."

"ಆಗಲಿ—ನಿಮ್ಮದೆಲ್ಲಾ ಊಟ ಆಗಲಿ. ನಾನು ನಾಗೂ ಜತೆಯಲ್ಲಿ ಹಣ್ಣು ಸ್ವೀಕರಿಸುತ್ತೇನೆ."

"ತಂದೆ, ಮಕ್ಕಳು ಊಟಕ್ಕೆ ಕುಳಿತರು. ನಾಗಮ್ಮ ಬಡಿಸಲಾರಂಭಿಸಿದಳು.

"ಯಶೋಧ ಹೇಗಿದ್ದಾಳೆ ನಾಗಮ್ಮ" ಎಂದು ಭಟ್ಟರು ಕೇಳಿದರು.

"ಚೆನ್ನಾಗಿದ್ದಾಳೆ."

"ಶಿವಮೊಗ್ಗೆಯಲ್ಲಿ ತಾನೇ ಇರೋದು."

"ಹೌದು. ಅಳಿಯಂದಿರಿಗೆ ಅಲ್ಲೇ ಬ್ಯಾಂಕಿನಲ್ಲಿ ಕೆಲಸವಿದೆಯಲ್ಲ ಮಾವಯ್ಯ."

"ನಿಜನಿಜ, ಮರೆತಿದ್ದೆ. ಯಶೋಧನಿಗೆ ಈಚೆಗೇನಾದರೂ ಮಕ್ಕಳೋ?"

"ಇಲ್ಲ ಮಾವಯ್ಯ—ಇದ್ದದ್ದೊಂದು ಹೋಯಿತಲ್ಲ."

ಆ ಪ್ರಶ್ನೆ ತಾವು ಕೇಳಿದುದು ಅನುಚಿತವಾಯಿತೇನೋ ಎಂದು ಭಟ್ಟರಂದುಕೊಂಡರು. ನಾಗಮ್ಮನ ಅಂತರಂಗದಲ್ಲಿ ಮಿಡಿಯುತ್ತಿದ್ದ ವ್ಯಥೆ 'ಇಲ್ಲಾ—ಮಾವಯ್ಯ' ಎಂಬೆರೆಡು ಶಬ್ದಗಳಲ್ಲಿ ತುಂಬಿ ಬಂದಿತ್ತು.

ಭಟ್ಟರು ವಿಷಯಾಂತರ ಮಾಡುತ್ತಾ

"ಮಗನನ್ನೂ ನಿಮ್ಮ ಹಾಗೇ ಲಾಯರ್ ಮಾಡುತ್ತೀರಿ?"

"ಏನಾದರೂ ಮಾಡಬೇಕಲ್ಲ ಮಾವಯ್ಯ-ಮುಂದಕ್ಕೆ ಓದಬೇಕೂಂತ ಅವನಿಗೇನೋ ಇಷ್ಟ. ನನಗೆ ದೇವರು ಅನುಕೂಲ ಕೊಟ್ಟಿಲ್ಲವಲ್ಲ. ಈ ದಿವಸ ದಲ್ಲಿ ಬಿ. ಎ. ಎಂ. ಎ. ಮಾಡಿದರೆ ತಾನೇ ಏನು ಸಾರ್ಥಕ. ಬ್ರಾಹ್ಮಣನಿಗೆ ಯಾವನು ತಾನೇ ಕೆಲಸಕೊಡುತ್ತಾನೆ."

"ಪ್ರಭಾಕರ!"

"ಅವನು ಈ ವರ್ಷ ಎಸ್.ಎಸ್.ಎಲ್.ಸಿ. ಕಟ್ಟುತ್ತಾನೆ. ಚಂದ್ರ ಶೇಖರ ಕುದುರಿಕೊಂಡರೆ ತಮ್ಮನನ್ನು ಓದಿಸಿ ಮುಂದಕ್ಕೆ ತರಬೇಕು."

"ಹುಟ್ಟಿಸಿದ ದೇವರು ಹುಲ್ಲು ಮೇಯಿಸಲ್ಲ ಆದಿಶೇಷಯ್ಯನವರೇ—ಏತಕ್ಕೆ ಯೋಚನೆಮಾಡುವಿರಿ?"

"ಏನು ದೇವರೋ—ಏನು ಮೆಯಿಸುತ್ತಾನೋ? ದೇವರನ್ನು ನಂಬಿ ದವರ ಸ್ಥಿತಿನೋಡಿ ಏನಾಗಿದೆ?"

"ಈ ಮಾತು ನಾನು ಎಲ್ಲರ ಬಾಯಲ್ಲಿಯೂ ಕೇಳುತ್ತಿದ್ದೇನೆ ಆದಿ ಶೇಷಯ್ಯ—ನಿಜವಾಗಿಯೂ ಹೇಳಿ, ದೇವರನ್ನು ನಾವು ತ್ರಿಕರಣಪೂರ್ವಕ ವಾಗಿ ನಂಬಿದ್ದೇವೆಯೇ? 'ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ' ಎನ್ನುವ ಆತ್ಮಾರ್ಪಣ ಭಾವ ನಮ್ಮಲ್ಲಿ ಬೆಳೆದಿದೆಯೇ? ಸಾಹುಕಾರನ್ನ ನಂಬುವಹಾಗೆ ದೇವರನ್ನೂ ನಂಬುತ್ತೇವೆ—ಸ್ವಾರ್ಥದೃಷ್ಟಿ ಯಿಂದ. ನಮ್ಮ ಈಪ್ಸಿತ ಪೂರೈಸದಿದ್ದರೆ ದೇವರನ್ನು ಆಕ್ಷೇಪಿಸುತ್ತೇವೆ."

"ದೇವರ ವಕೀಲರು ನೀವು–ನಿಮ್ಮ ಕೈಯಲ್ಲಿ ವಾದಮಾಡಿ ಜಯಿಸಲು ಸಾಧ್ಯವೇ ?"

ಊಟ ಮುಗಿಯುತ್ತ ಬಂದಿತ್ತು. ನಾಗಮ್ಮ ಬಂದು ಭಟ್ಟರನ್ನು ಸ್ನಾನಕ್ಕೆ ಎಬ್ಬಿಸಿದಳು

ಭಟ್ಟರು ಸ್ನಾನಮಾಡಿ, ಸಂಧ್ಯಾವಂದನೆ ಮುಗಿಸಿ, ದೇವರ ತಲೆಯ ಮೇಲೆ ಹೂವಿಟ್ಟು ನಮಸ್ಕರಿಸಿ, ನಾಗಮ್ಮನೊಂದಿಗೆ ಫಲಾಹಾರ ಮುಗಿಸಿದರು.

ಆದಿಶೇಷಯ್ಯ ಹಜಾರದಲ್ಲಿ ಕುಳಿತು ತಾಂಬೂಲ ಸೇವಿಸುತ್ತ ಭಟ್ಟರಿಗಾಗಿ ಕಾಯುತ್ತಿದ್ದರು.

"ನೈವೇದ್ಯವಾಯಿತೋ ಏನಾದರೂ ತೆಗೆದುಕೊಂಡಿರೋ ಮಾವಯ್ಯ."

"ಹಣ್ಣು ಹಾಲು ಎಲ್ಲಾ ಆಯಿತಪ್ಪ. ಪರಮಾತ್ಮ ಸಂತೃಪ್ತನಾದ."

ಆದಿಶೇಷಯ್ಯನವರು ತಮ್ಮ ಮನಸ್ಸಿನಲ್ಲಿ ಕಟೆಯುತ್ತಿದ್ದ ವಿಷಯವನ್ನೇ ಎತ್ತಿಕೊಂಡು

"ಕಾಲ ಬಹಳ ಕೆಟ್ಟುಹೋಯಿತು ಮಾವಯ್ಯ."

"ಏನಾಯಿತು ?"

"ನಮ್ಮ ವೃತ್ತಿಯ ಸ್ಥಿತಿ ಸ್ವಲ್ಪವೂ ಚೆನ್ನಾಗಿಲ್ಲ. ಜಾತಿವೈಷಮ್ಯ ಹುಟ್ಟಿಕೊಂಡ ಮೇಲೆ ವೀರಶೈವರೆಲ್ಲಾ ವೀರಶೈವ ಲಾಯರುಗಳನ್ನು ಹುಡುಕಿಕೊಂಡು ಹೋಗುತ್ತಾರೆ; ಒಕ್ಕಲಿಗರೆಲ್ಲಾ ಒಕ್ಕಲಿಗ ಲಾಯರನ್ನು ಹುಡುಕಿಕೊಂಡು ಹೋಗುತ್ತಾರೆ."

"ಭೀಮರಾಯರಿಗೆ ಒಕ್ಕಲಿಗರು, ಲಿಂಗಾಯತರು, ಮುಸಲ್ಮಾನರು ಎಲ್ಲರೂ ಕಕ್ಷಿಗಾರರಾಗಿರುವರಲ್ಲಾ ಆದಿಶೇಷಯ್ಯ."

"ಅವರ ದಾರಿಗೆ ನಾವು ಇಳಿಯುವುದಕ್ಕಾಗುತ್ತದೆಯೋ ಮಾವಯ್ಯ. ಕಾಸಿನ ಆಸೆಗೆ ಭೀಮರಾಯ ಏನುಬೇಕಾದರೂ ಮಾಡಲು ಸಿದ್ಧ. ಕೆಂಪಯ್ಯ, ರೇವಣಸಿದ್ದಪ್ಪ ಮಾಡಬಾರದ ಅನ್ಯಾಯ ಮಾಡುತ್ತಾರೆ—ಭೀಮರಾಯ ಅವರನ್ನು ಬಚಾವ್‌ಮಾಡುತ್ತಾನೆ. ಇಂಥ ನೀಚ ಸಂಪಾದನೆ ಜನ್ಮ ಜನ್ಮಾಂತರಕ್ಕೂ ಬೇಡ ಮಾವಯ್ಯ. ನಾನೂ ನನ್ನ ಮಕ್ಕಳೂ ಹಸಿದುಕೊಂಡಿದ್ದರೂ ಚಿಂತೆಯಿಲ್ಲ—ರಂಡೇರು ಮುಂಡೇರ ಆಸ್ತಿ ದಕ್ಕುಹಾಕಿ

ಕೊಂಡು, ದಿಕ್ಕಿಲ್ಲದ ಬಡವರನ್ನು ಪೀಡಿಸಿಕೊಂಡು ಹಾಳುಹೊಟ್ಟೆ ತುಂಬಿಸಿ ಕೊಳ್ಳುವ ಕರ್ಮ ಮಾತ್ರ ಬೇಡ."

"ಈಗತಾನೇ ನನ್ನ 'ದೇವರ ವಕೀಲ' ಎಂದು ಹಾಸ್ಯಮಾಡಿದಿರಿ. ನಿಜವಾಗಿ ನೋಡಿದರೆ ನೀವು ದೇವರ ವಕೀಲರು."

"ನಿಮ್ಮ ಆಶೀರ್ವಾದದಿಂದ ಹೊಟ್ಟೆಯಪಾಡು ಕಳೆದು ಹೋಗುತ್ತಿದೆ. ಇದ್ದ ಒಬ್ಬಳು ಮಗಳ ಮದುವೆಯನ್ನೂ ಮಾಡಿಬಿಟ್ಟಿದ್ದೇನೆ. ಗಂಡು ಮಕ್ಕಳ ಪಾಡು ಹೇಗೋ ಆಗುತ್ತದೆ."

ಆದಿಶೇಷಯ್ಯನವರಿಗೆ ಉತ್ತರಕೊಡದೆ ಭಟ್ಟರು ನಾಗಮ್ಮನ ದಾರಿ ನೋಡಿದರು. ನಾಗಮ್ಮ ಬರುತ್ತಲೇ

"ಕೆಲಸ ಮುಗೀತೇ ನಾಗಮ್ಮ" ಎಂದರು.

"ಇವತ್ತಿನ ಕೆಲಸ ಮುಗಿದಂತಾಯಿತು."

"ನಿಜ ತಾಯಿ, ನಾಳೆಯೂ ಇದೆ, ನಾಡಿದ್ದೂ ಇದೆ. ಕರ್ಮದಿಂದಲೇ ಕರ್ಮಜೀವಿಯಾದ ಮಾನವನ ಮನಸ್ಸು ಪಕ್ವವಾಗಬೇಕು."

ಎದುರಿಗಿದ್ದ ಎಲೆಯಡಿಕೆ ತಟ್ಟೆಯನ್ನು ಆದಿಶೇಷಯ್ಯ ಹೆಂಡತಿಯ ಮುಂದೆ ತಳ್ಳಿದರು. ನಾಗಮ್ಮ ಬಾಯಿಗೆ ಅಡಿಕೆ ಹಾಕಿಕೊಂಡು ಎಲೆಗೆ ಸುಣ್ಣ ಹಚ್ಚುತ್ತ

"ನಾಳೆ ನೀವು ಇಲ್ಲಿದ್ದು ಊಟಮಾಡಿಕೊಂಡೇ ಹೋಗಬೇಕು ಮಾವಯ್ಯ. ಅಪರೂಪಕ್ಕೆ ಬಂದವರು ಒಪ್ಪತ್ತು ಊಟವನ್ನೂ ಮಾಡದೆ ಹೋದರೆ ನನಗೆ ತುಂಬ ಪೇಚಾಟವಾಗುತ್ತದೆ."

"ನಾಳೆ ನಾನು ಊರಿಗೆ ಹೊಗಬೇಕಾಗಿದೆ. ಇನ್ನೊಂದು ಸಾರಿ ಇಲ್ಲಿಗೆ ಬಂದಾಗ ಮೂರುದಿನ ನಿಮ್ಮ ಮನೆಯಲ್ಲೇ ಇದ್ದು ಬಿಡುತ್ತೇನೆ."

"ಸರಿ-ನೀವು ಕಣ್ಣೊರೆಸುವ ಮಾತಾಡುತ್ತಿರುವಿರಿ. ಊರಿಂದ ಬರುವಾಗ ಹೆಗಲುಮೇಲೆ ಹಸಿಬೆಚೀಲ ಹಾಕಿಕೊಂಡು, ಅವಲಕ್ಕಿ ಹೊತ್ತುಕೊಂಡು ಬಂದು, ಅದನ್ನೇ ತಿಂದು ಹೋಗುತ್ತೀರಿ."

"ಇಲ್ಲ ತಾಯಿ, ಮುಂದಿನಸಾರಿ ಖಂಡಿತ ಬರುತ್ತೇನೆ. ಅವಳು ಹೋದ ಮೇಲೆ ಹುಳಿಯನ್ನ ತಿಂದೇಇಲ್ಲ. ಗಾಣದಿಂದ ಎಣ್ಣೆ ತರಿಸಿ ಸೊಗಸಾಗಿ ಹುಳಿಯನ್ನ ಮಾಡು-ಪಟ್ಟಾಗಿ ಹೊಡೆದು ಹೋಗುತ್ತೇನೆ."

ದೇವಮ್ಮನ ನೆನಪುಬಂದು ಭಟ್ಟರ ಮುಖ ತೇಜೋಹೀನವಾಯಿತು.

"ದೇವತ್ತೆ ಹೋದ್ದೇ ಹೊದ್ದು-ನಾವೆಲ್ಲಾ ಅನಾಥರಾದೆವು. ಆ ಮಹಾ ತಾಯಿ ಒಪ್ಪತ್ತು ಬಂದು ಹೋದರೆ ಸಾಕು ಮನೆಯೆಲ್ಲಾ ಬೆಳ್ಳಂಬೆಳ ಕಾಗುತ್ತಿತ್ತು."

ದೇವಮ್ಮನ ಸ್ಮರಣೆ ಭಟ್ಟರ ಮನಸ್ಸನ್ನೂ ಅಲ್ಲಕಲ್ಲೋಲ ಮಾಡಿತ್ತು. ಅವರು ತಮ್ಮ ಒಳವೇದನೆ ತೋರಗೊಡದೆ

"ಒಳ್ಳೆಯ ವಸ್ತುವಿಗೂ ಅಕಾಲಮರಣಕ್ಕೂ ಗಂಟು ನಾಗಮ್ಮ. ಮನುಷ್ಯನ ಬಾಳುವೆ ಅಸ್ಥಿರ, ಕ್ಷಣಿಕ; ಅವನ ಗುರಿ ಅನಂತ-ಅಮರ. ಪ್ರತಿಯೊಬ್ಬರೂ ಅವರ ಕರ್ತವ್ಯದ ಕಡೆಗೆ ಲಕ್ಷ್ಯವಿಟ್ಟು ಅದರ ನಿರ್ವಹಣೆ ಯಲ್ಲಿ ಜಾಗೃತರಾಗಿರಬೇಕು."

"ನಿಮ್ಮ ಮನೋಧಾರ್ಢ್ಯ ಎಲ್ಲರಿಗೂ ಬರಬೇಕೆಂದರೆ ಸಾಧ್ಯವೇ ಮಾವಯ್ಯ."

ಭಟ್ಟರಿಗೆ ಸ್ತುತಿ ಬೇಕಿರಲಿಲ್ಲ. ಆದರೆ ಸದುದ್ದೇಶ ಪೂರಿತವಾಗಿ ಶುದ್ಧಾಂತಃಕರಣದಿಂದ ಬಂದ ಮೆಚ್ಚುಮಾತನ್ನವರು ಮೌನವಾಗಿ ಅಂಗೀ ಕರಿಸಬೇಕಾಯಿತು.

ಭಟ್ಟರು ಆದಿಶೇಷಯ್ಯನವರ ಕಡೆ ತಿರುಗಿ

"ಚಂದ್ರಶೇಖರನಿಗೆ ಇಪ್ಪತ್ತು ತಂಬಿತಲ್ಲವೇ ?"

"ಇಪ್ಪತ್ತು ಯಾಕೆ ಮಾವಯ್ಯ-ಮಾಘಕ್ಕೆ ಇಪ್ಪತ್ತೊಂದು ತುಂಬಿತು. ಈಗವನಿಗೆ ಇಪ್ಪತ್ತೆರಡು ನಡೆಯುತ್ತಿದೆ."

"ಅವನ ಮದುವೆ ಪ್ರಯತ್ನ ಮಾಡಿರುವಿರಾ ?"

"ಬನ್ನೂರಿನವರು ಬಂದು ಜಾತಕ ತೆಗೆದುಕೊಂಡು ಹೋದರು. ಬೆಂಗಳೂರಿನಿಂದಲೂ ಒಬ್ಬರು ಬಂದು ವಿಚಾರಿಸಿಕೊಂಡು ಹೋದರು."

"ಯಾವದೂ ನಿಶ್ಚಯವಾಗಿಲ್ಲ!"

"ನಿಮ್ಮನ್ನು ಕೇಳದೆ ನಿಶ್ಚಯಮಾಡುತ್ತೇವೆಯೇ ?—ಈಗಲೇ ಅವನಿಗೆ ಮದುವೆಗೇನು ಅವಸರ ?"

"ಹಾಗಲ್ಲ ಆದಿಶೇಷಯ್ಯನವರೇ-ಚಂದ್ರಶೇಖರನ ಮದುವೆ ಮುಗಿಸಿದರೆ ಪ್ರಭಾಕರನ ವಿಷಯ ಯೋಚಿಸುವುದಕ್ಕೆ ಅನುಕೂಲವಾಗುತ್ತದೆ."

"ಅವನು ಪರೀಕ್ಷೆ ಪಾಸು ಮಾಡಿಕೊಂಡು, ಪ್ರ್ಯಾಕ್ಟೀಸು (Practice) ಆರಂಭಿಸುವವರೆಗೆ ಮದುವೆ ಮಾಡಬಾರದೆಂದುಕೊಂಡಿದ್ದೇನೆ-ಇನ್ನೂ ಒಂದು ವಿಷಯ ನಿಮ್ಮಲ್ಲಿ ಹೇಳಬೇಕಾಗಿದೆ. ಈ ಕೊಂಪೆಯಲ್ಲಿ ನಾವು ಏಗುವುದು ಬಹಳ ಕಠಿಣವಾಗಿದೆ. ನಾನೇ ಲಾಟರಿ ಹೊಡೆಯುತ್ತಿರುವಾಗ ನನ್ನ ಮಗನ ಗತಿಯೇನು ಎಂಬ ಯೋಚನೆ ಬಂದು ನನ್ನನ್ನು ಹಣ್ಣುಮಾಡುತ್ತಿದೆ. ಸಂಸಾರ ಸಮೇತ ನಾನು ಬೆಂಗಳೂರಿಗೇ ಹೋಗಿ ನೆಲಸುವ ವಿಚಾರವನ್ನೂ ಮಾಡುತ್ತಿದ್ದೇನೆ. ದೊಡ್ಡಪಟ್ಟಣ—ಹೇಗೂ ವಾಸಿ. ಪ್ರಭಾಕರನ ಕಾಲೇಜ್ ಶಿಕ್ಷಣಕ್ಕೂ ಅನುಕೂಲವಾಗುತ್ತದೆ. ನಿಮ್ಮ ಅಭಿಪ್ರಾಯವೇನು ?"

"ತುಮಕೂರಿಗಿಂತ ಬೆಂಗಳೂರು ವಾಸಿ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ನೀವು ಸಂಸಾರಸಮೇತ ಬೆಂಗಳೂರಿಗೆ ಹೋಗುವುದು ನನಗೇನೋ ಸರಿದೋರುವುದಿಲ್ಲ. ನೀವು ಇಲ್ಲೇ ಇದ್ದುಕೊಂಡು ಚಂದ್ರಶೇಖರನನ್ನು ಬೆಂಗಳೂರಿನಲ್ಲಿಡುವುದು ಯೋಗ್ಯ."

"ಆ ಯೋಚನೆಯನ್ನೂ ಮಾಡಿದೆ. ನನ್ನ ಸ್ನೇಹಿತ ಶ್ರೀನಿವಾಸರಾಯ ಬೆಂಗಳೂರಿನಲ್ಲಿ ದೊಡ್ಡ ಲಾಯರಾಗಿದ್ದಾನೆ. ಅವನ ಆಫೀಸಿನಲ್ಲಿ ಚಂದ್ರೂನ ಏತಕ್ಕೆ ಬಿಡಬಾರದೂಂತಾಲೂ ಯೋಚಿಸ್ತಿದ್ದೇನೆ. ಒಂದು ವರ್ಷ ಶ್ರೀನಿವಾಸ ರಾಯನ ಹತ್ತಿರ ನುರುಗಿದಮೇಲೆ ಚಂದ್ರು ಸ್ವತಂತ್ರವಾಗಿ ಆಫೀಸ್ ತೆಗೆದು ಪ್ರ್ಯಾಕ್ಟೀಸ್ ಮಾಡಬಹುದು."

"ಮಾವಯ್ಯ ಹೇಳೋದೇ ಸರಿಯಂದ್ರೆ. ನಮ್ಮ ಆಯುಸ್ಸನ್ನೆಲ್ಲಾ ಇಲ್ಲಿ ಕಳೆದು ಈಗ ಬೆಂಗಳೂರಿಗೆ ಹೋಗಿ ಹೊಸ ಸಂಸಾರ ಹೂಡುವುದೆಂದರೆ ನನಗೆ ಸಾಧ್ಯವಿಲ್ಲ."

"ಚಂದ್ರಶೇಖರನಿಗೆ ಇಪ್ಪತ್ತೆರಡು ನಡೆಯುತ್ತಿದ್ದರೆ ಅವನ ಮದುವೆ ತಡಮಾಡುವುದು ನ್ಯಾಯವಲ್ಲ."

ಭಟ್ಟರ ಮನಸ್ಸಿನಲ್ಲಿದ್ದುದನ್ನು ಗ್ರಹಿಸಿದ ನಾಗಮ್ಮ

"ನಿಮಗೆ ತಿಳಿದಂತೆ ಒಳ್ಳೆಯ ಹೆಣ್ಣು ಯಾವದಿದೆ ಮಾವಯ್ಯ" ಎಂದು ಕೇಳಿದಳು.

"ಒಳ್ಳೆಯ ಹೆಣ್ಣಿದೆ—ಮನೆತನಸ್ಥರ ಮನೆ ಹುಡುಗಿ–ನಿನ್ನ ಸೊಸೆ ಯಾಗುವುದಕ್ಕೆ ಸರಿಯಾದವಳು. ಆದರೆ ಅವರು...."

"ಅವರು...."

"ಅಷ್ಟೇನು ಐಶ್ವರ್ಯವಂತರಲ್ಲ. ಸಾಮಾನ್ಯವಾಗಿ ಮದುವೆ ಮಾಡಿ ಕೊಡುತ್ತಾರೆ. ಹೆಣ್ಣಿಗೂ ಅಷ್ಟೋ ಇಷ್ಟೋ ನಗನಾಣ್ಯ ಇಡುತ್ತಾರೆ."

ಭಟ್ಟರ ವಿವರಣೆ ಆದಿಶೇಷಯ್ಯನವರಿಗೆ ಸಂತೋಷವನ್ನುಂಟುಮಾಡ ಲಿಲ್ಲ. ಒಳ್ಳೆಯ ಸಂಬಂಧ ಕುದುರಿಸಿ, ಚಂದ್ರಶೇಖರನ ಮಾವನ ಸಹಾಯ ದಿಂದ ಅವನ ಭವಿಷ್ಯ ರೂಪಿಸಬೇಕೆಂದುಕೊಂಡಿದ್ದ ಆದಿಶೇಷಯ್ಯನವರಿಗೆ ಸ್ವಲ್ಪ ನಿರಾಶೆಯಾಯಿತು.

"ಹೆಣ್ಣು ಯಾರು ಮಾವಯ್ಯ?" ಎಂದು ನಾಗಮ್ಮ ಕೇಳಿಯೇ ಬಿಟ್ಟಳು.

"ನನ್ನ ಬಾಲ್ಯಸ್ನೇಹಿತ ದಾಸಪ್ಪನ ಮಗಳು ಪಾರ್ವತಿ–ನಾನು ಎತ್ತಿ ಆಡಿಸಿದ ಮಗು. ಅವಳನ್ನು ನೀವು ಚಂದ್ರಶೇಖರನಿಗೆ ತಂದುಕೊಂಡರೆ ನನ್ನ ಮಗಳನ್ನು ತಂದುಕೊಂಡಂತಾಗುತ್ತದೆ. ಪಾರ್ವತಿಯನ್ನು ಒಳ್ಳೆಯ ಮನೆ ಸೇರಿಸುವ ಜವಾಬ್ದಾರಿ ದೇವಿ ನನ್ನ ಹೆಗಲಮೇಲೆ ಹಾಕಿಹೋಗಿದ್ದಾಳೆ– ಪಾರ್ವತಿಗೆ ಮದುವೆಯಾಗಿಬಿಟ್ಟರೆ ನನ್ನ ಮನಸ್ಸಿಗೆ ನೆಮ್ಮದಿಯಾಗುತ್ತದೆ."

"ಪಾರ್ವತಿಯನ್ನು ನಾನು ಮಗುವಿನಲ್ಲಿ ನೋಡಿದ್ದು–ಈಗ ಹೇಗಿ ದ್ದಾಳೆ?"

"ನಾನು ಏನು ಹೇಳಲಿ ನಾಗಮ್ಮ-ಕೈತೊಳೆದುಕೊಂಡು ಮುಟ್ಟ ಬೇಕು. ಪಾರ್ವತಿಯೂ ಪಾರ್ವತಿಯೇ! ನೀವೆಲ್ಲಾ ಹೆಣ್ಣನ್ನು ನೋಡಿ- ಒಪ್ಪಿಗೆಯಾದರೆ ಮುಂದಿನ ಮಾತು."

ಆದಿಶೇಷಯ್ಯನವರ ಮನಸ್ಸು ಹೊಯ್ದಾಡಲಾರಂಬಿಸಿತು.

'ತಂದೆಯಿಲ್ಲದ ಮಗಳು.

ತಾಯಿಯ ಪೋಷಣೆಯಲ್ಲಿ ಬೆಳೆದಿದ್ದಾಳೆ.

ಹೆಚ್ಚಿನ ಅನುಕೂಲವೂ ಇಲ್ಲ.

ಮದುವೆ ಮಾಡಿಕೊಡುವ ಸಾಮರ್ಥ್ಯವೂ ಇದೆಯೋ ಇಲ್ಲವೊ?

ಜತೆಗೆ ಹಳ್ಳಿಯ ಹುಡುಗಿ.

ಚಂದ್ರಶೇಖರನಿಗೆ ಬೆಂಗಳೂರಿನ ಶ್ರೀಮಂತರು ಯಾರಾದರೂ ಹೆಣ್ಣು

ಕೊಡುತ್ತಾರೆ-ವರದಕ್ಷಿಣೆ ಕೊಡುತ್ತಾರೆ-ಅದ್ಧೂರಿಯಾಗಿ ಮದುವೆಮಾಡುತ್ತಾರೆ.

ಆದರೆ...............

ಭಟ್ಟರ ಮಾತು ನಿರಾಕರಿಸುವುದು ಹೇಗೆ?

'ಪಾರ್ವತಿಯನ್ನು ತಂದುಕೊಂಡರೆ ನನ್ನ ಮಗಳನ್ನು ತಂದುಕೊಂಡಂತಾಗುತ್ತದೆ' ಎಂದು ಭಟ್ಟರು ಹೇಳುತ್ತಿದ್ದಾರೆ.

ದಂಪತಿಗಳು ಮೀನಾಮೇಷ ಎಣಿಸುತ್ತಿರುವುದನ್ನು ಕಂಡು ಭಟ್ಟರು

"ನಿಮಗೆ ಇಷ್ಟವಿಲ್ಲದಿದ್ದರೆ ಈ ಮಾತು ಇಲ್ಲಿಗೇ ಬಿಟ್ಟುಬಿಡೋಣ" ಎಂದರು.

ಆದಿಶೇಷಯ್ಯನವರು ತಮ್ಮ ವಕೀಲಿ ಜಾಣ್ಮೆಯನ್ನುಪಯೋಗಿಸಿಕೊಂಡು

"ನಮ್ಮದೇನು ಮಾವಯ್ಯ-ನೀವು ಹೇಗೆ ಹೇಳಿದರೆ ಹಾಗೆ-ಹಿರಿಯರು-ನಿಮ್ಮ ಮಾತು ತೆಗೆದುಹಾಕಲು ಸಾಧ್ಯವೇ?-ವರ ಒಪ್ಪಿಬಿಟ್ಟರಾಯಿತು. ನಮ್ಮ ನಿಮ್ಮ ಕಾಲಕ್ಕೂ ಈ ಕಾಲಕ್ಕೂ ತುಂಬ ವ್ಯತ್ಯಾಸವಿದೆ ಮಾವಯ್ಯ."

"ಸರಿಯಾದ ಮಾತು. ಹಾಗೇ ಆಗಲಿ. ಚಂದ್ರಶೇಖರನ ಜಾತಕ ಕೊಡಿ-ನಾನೇ ನೋಡಿಬಿಡುತ್ತೇನೆ. ಜಾತಕಾನುಕೂಲವಾದರೆ ನೀವೆಲ್ಲಾ ಒಂದುದಿನ ಬಿಡುವು ಮಾಡಿಕೊಂಡು ರುದ್ರಾಕ್ಷಿಪುರಕ್ಕೆ ಬಂದು ಕನ್ಯೆಯನ್ನು ನೋಡಿ. ಒಪ್ಪಿಗೆಯಾದರೆ ಲಗ್ನಪತ್ರಿಕೆ ಬರೆಯೋಣ-ಇನ್ನೊಂದು ವಿಷಯ ಹೇಳಬೇಕಾಗಿತ್ತು ಆದಿಶೇಷಯ್ಯ."

"ಹೇಳಿ."

"ನರಸಕ್ಕನಿಗೆ ಅಲ್ಪಸ್ವಲ್ಪ ಜಮೀನಿದೆ. ರುದ್ರಾಕ್ಷಿಪುರದಲ್ಲಿ ಸ್ವಂತ ಮನೆಯೂ ಇದೆ. ದಾಸಪ್ಪ, ನರಸಕ್ಕ ಹೊಟ್ಟೆಕಟ್ಟಿ ಬಟ್ಟೆಕಟ್ಟಿ ಮಗಳಿಗಾಗಿ ಸ್ವಲ್ಪ ಒಡವೆಯೂ ಮಾಡಿಸಿದ್ದಾರೆ. ಇರುವ ಒಬ್ಬಳು ಮಗಳ ಮದುವೆ ಚೆನ್ನಾಗಿಯೇ ಮಾಡಬೇಕೆಂದುಕೊಂಡಿದ್ದಾಳೆ."

"ಛೆ! ಛೆ! ಆಸ್ತಿಯ ವಿಷಯ ನಾನು ಯೋಚಿಸುತ್ತಿರಲಿಲ್ಲಮಾವಯ್ಯ" ಎಂದು ಆದಿಶೇಷಯ್ಯ ಔಪಚಾರಿಕವಾಗಿ ಹೇಳಿದರೂ ಅವರಿಗೆ ಅಲ್ಪ ಸ್ವಲ್ಪ ಸಮಾಧಾನವಾದುದು ಸ್ವತಃಸಿದ್ಧವಾಗಿತ್ತು.

"ಏನಮ್ಮ ನಾಗಮ್ಮ–ನೀನೇನು ಹೇಳುತ್ತೀ ?"

"ದೊಡ್ಡವರು ನೀವು ಹೇಗೆ ನಿಶ್ಚಯಿಸಿದರೆ ಹಾಗೆ ನಾನು. ಮನೆತನದ ಮರ್ಯಾದೆ ಕಾಪಾಡುವ ಒಳ್ಳೆಯ ಸೊಸೆ ಬರಬೇಕು ಎಂದಷ್ಟೇ ನನ್ನ ಆಸೆ," ಎಂದಳು.

ತಾವು ಬಂದ ಕೆಲಸ ಅಯಶಸ್ವಿಯಾಗಲಿಲ್ಲವೆಂದು ಭಟ್ಟರು ಸಮಾಧಾನಗೊಂಡರು.

## ೭

ಪಾತಿ ಮುರುತುಕೊಂಡೇ ಕೂತಿದ್ದಳು.

ನರಸಮ್ಮ ಹಲವು ಪರಿಯಿಂದ ಮಗಳನ್ನು ಒಲಿಸಿಕೊಳ್ಳಲೆತ್ನಿಸಿದಳು.

"ಹಟ ಮಾಡಬಾರದು ಪಾತೂ. ಈಗಿಷ್ಟು ತಿಂದಿರು ಸಾಕು. ಬೇಗ ಅಡಿಗೆಮಾಡಿ ಪಾಯಸಮಾಡುತ್ತೇನೆ—ಶನಿವಾರ ನಿನಗೂ ತಲೆಯ ಮೇಲೆ ಎರಡು ಚೆಂಬು ನೀರು ಹಾಕುತ್ತೇನೆ ಏಳು."

ಮೂಲೆಹಿಡಿದು, ಮುಸುಡಿ ಊದಿಸಿಗೊಂಡು ಕುಳಿತಿದ್ದ ಪಾತೂ ಅಲುಗಾಡಲಿಲ್ಲ.

ತಾಯಿ ಎದುರಿಗಿಟ್ಟಿದ್ದ ಹುರಿಟ್ಟಿನುಂಡೆಯನ್ನೂ ಮುಟ್ಟಲಿಲ್ಲ.

"ಮೊಂಡುತನ ಮಾಡಿದರೆ ನಿನಗೆ ಊಟಕ್ಕೆ ಹೊತ್ತಾಗತ್ತೆ."

ಪಾತಿ ತನ್ನ ಮುದ್ರೆ ಬದಲಾಯಿಸಲಿಲ್ಲ.

"ನೀನೊಬ್ಬಳು ಹುಟ್ಟಿದೆ ನನ್ನ ಹೊಟ್ಟೆ ಉರಿಸೋಕೆ. ತಂದೆಯಿಲ್ಲದ ಮಗೂಂತ ನೀನು ಹೇಳಿಹೇಳಿದ ಹಾಗೆ ಕುಣಿದದ್ದಕ್ಕೆ ಇದೇ ಲಾಭ. ಕತ್ತೆ ಹಾಗೆ ಬೆಳೆದಿದ್ದಾಳೆ, ಹುರಿಟ್ಟು ಸಾಲದೂಂತ ಮೊಂಡುತನ ಮಾಡುತ್ತಾಳೆ—ಸಾಕು ಏಳೇ ಮೇಲಕ್ಕೆ."

ಹುರಿಟ್ಟಿನುಂಡೆಯಿದ್ದ ಸೀಸದ ಬೋಗುಣಿಯನ್ನೇ ಎತ್ತಿಕೊಂಡು ಪಾತೂ ತಲೆಯಮೇಲೆ ಬಡಿಯಬೇಕೆನ್ನುವಷ್ಟು ನರಸಮ್ಮನಿಗೆ ಕೋಪ ಬಂದಿತು. ಮರುಕ್ಷಣವೇ

'ಅವಳ ತಂದೆ ಬದುಕಿದ್ದರೆ ಎಷ್ಟು ಮೆರೆಸುತ್ತಿದ್ದರೋ ಏನೋ? ನಾನೇಕೆ ಅರೀದ ಮಗು ಮೇಲೆ ಕೈಮಾಡಿ ಪಾಪ ಕಟ್ಟಿಕೊಳ್ಳಲಿ.' ಎಂದುಕೊಂಡಳು.

ಅವಳ ಕಣ್ಣುಗಳಿಂದ ಧಾರಾಳವಾಗಿ ಹನಿಗಳುದುರಿದವು.

"ಹೋಗು—ಕಲಸಿಕೊಂಡು ತಿನ್ನು ಹೋಗು." ಎಂದಳು.

ಪಾತಿ ಕುಳಿತಭಂಗಿ ಬದಲಾಯಿಸಿ ತಾಯಿಯ ಕಡೆ ಸಂಶಯಗ್ರಸ್ತಳಾಗಿ ನೋಡಿದಳು.

"ನೀನೇ ಗೆದ್ದೆ—ಹೋಗು ಕಲಸಿಕೊಂಡು ತಿನ್ನು ಹೋಗು"

ಪಾತಿ ಅರೆಪ್ರಸನ್ನಳಾಗಿ

"ಇವತ್ತು ಕಡಲೆಬೇಳೆ ಪಾಯಿಸ ಮಾಡಬೇಕು." ಎಂದಳು.

"ನಿನ್ನ ಮದುವೆಯೇನೇ ಇವತ್ತು."

"ಹಾಗೆಲ್ಲಾ ಅಂದ್ರೆ ನೋಡು.—"

"ಇಲ್ಲ. ಮಹಾತಾಯಿ—ಮಾಡಿಹಾಕುತ್ತೇನೆ. ತಲೆಯಮೇಲೆ ಒಂದು ಚೆಂಬು ನೀರು ಹಾಕಿಕೊಳ್ಳುತ್ತೀಯೋ ಇಲ್ಲವೋ?"

"ನಾನು ವರಲಕ್ಷ್ಮಿ ಮನೆಗೆ ಆಡೋಕೆ ಹೋಗ್ಬೇಕು."

"ಮಡಿ ಉಟ್ಟುಕೊಂಡು ಹೋಗೇ?"

"ಆಡಿಬಿಟ್ಟು ಬಂದು ಉಟ್ಟುಕೊಳ್ಳುತ್ತೇನೆ."

"ನಿನ್ನಿಷ್ಟ" ಎಂದರು.

'ಈ ಮುಂಡೆಹೆತ್ತದ್ದಕ್ಕೆ ಈ ಸಿಟ್ಟು—ಕೋಪ ಎಲ್ಲಿಂದ ಬಂತೋ ಕಾಣೆನಲ್ಲಾ! ನಮ್ಮ ಮನೆಯಲ್ಲಿ ಯಾರೂ ಹೀಗಿರಲಿಲ್ಲ. ದೂರ್ವಾಸನ ತಂಗಿಯಾಗಿದ್ದಾಳೆ ಪಾರ್ವತಿ'—ನಾಳೆ ಕೈಹಿಡಿದೋನ್ನ, ಇವಳು ಹೇಗೆ ಬಾಳಿಸ್ತಾಳೆಯೋ ಭಗವಂತನಿಗೇ ಗೊತ್ತು.'

ಎಂದು ಲೊಟಗುಟ್ಟುತ್ತ ಸ್ನಾನಕ್ಕೆ ಇಳಿಯಲು ಹೋಗಿ

"ಪಾತೀ" ಎಂದು ಕೂಗಿದಳು.

"ಏನಮ್ಮ?"

"ಈರಬದ್ರಗುಡಿ ರಸ್ತೇಗೆ ಹೋಗ್ಬೇಡಿರೇ—ಏನೋ ಗಲಾಟೆಯಂತೆ! ಊರ ತುಂಬ ಪೋಲೀಸಿನವರಾಗಿದ್ದಾರೆ."

"ಇಲ್ಲಮ್ಮ, ವರಲಕ್ಷ್ಮಿ ಮನೇಲಿ ಆಡಿಕೊಳ್ಳುತ್ತೇನೆ."

"ಬೇಗ ಬಂದು ಬಿಡು—ನಾನು ಮಡೀಲಿರುತ್ತೇನೆ—ಬೀದಿ ಎಂಜಲು ಮೈಲಿಗೆ ತುಳಿದುಕೊಂಡು ನಿನ್ನ ಕರೆಯೋಕೆ ಬರಲಾರೆ."

"ಕಡಲೇಬೇಳೆ ಪಾಯಿಸ ಮಾಡಿದ್ರೆ........"

"ಮಾಡ್ತೀನಿ ಕಣೇ."

"ತುಂಬ ಗೇರುಬೀಜ ಹಾಕಿರಬೇಕು."

"ಹಾಕ್ದೇ ಇದ್ರೆ ನೀನು ಬಿಡುತ್ತೀಯಾ ?"

ತಾಯಿಯ ಮಾತಿನಲ್ಲಿ ಸಿಟ್ಟಿರಲಿಲ್ಲ. ಮಗಳಿಗೆ ಪ್ರಿಯವಾದ ಪಾಯಸ ಮಾಡುವ ಸಂಭ್ರಮ ತುಂಬಿತ್ತು.

ನರಸಮ್ಮನ ಜೀವನ ಸುಖಜೀವನವಾಗಿರಲಿಲ್ಲ. ಹೆಣ್ಣಿಗೆ ಹೆಣ್ಣಾಗಿ, ಗಂಡಿಗೆ ಗಂಡಾಗಿ ದುಡಿದು ಅವಳು ಪಾರ್ವತಿಯನ್ನು ಬೆಳಸಿದ್ದಳು.

ದಾಸಪ್ಪ ಶ್ರೀಮಂತನಲ್ಲದಿದ್ದರೂ ನಿರ್ಗತಿಕನಾಗಿರಲಿಲ್ಲ. ಊರಿಗೆ ಸೇರಿಕೊಂಡಿದ್ದ ಮೂರು ಎಕರೆ ಗದ್ದೆ, ಅರ್ಧ ಎಕರೆ ತೋಟವನ್ನು ಅವನು ಚೆನ್ನಾಗಿ ಪೋಷಿಸಿಕೊಂಡು ಬಂದಿದ್ದ. ಸಂಬಳ, ಮನೆಪಾಠದ ಫೀಸು, ಬ್ರಾಹ್ಮಣಾರ್ಥಗಳಲ್ಲಿ ಬರುತ್ತಿದ್ದ ವರಮಾನದಲ್ಲಿ ಸಂಸಾರ ಸಾಗಿಸಿಕೊಂಡು ಪಾತಿಗೆ ಅಲ್ಪಸ್ವಲ್ಪ ಒಡವೆಯನ್ನೂ ಮಾಡಿಸಿದ್ದ.

ದಾಸಪ್ಪ ಮಧ್ಯವಯಸ್ಸಿನಲ್ಲೇ ತೀರಿಕೊಂಡುದು ನರಸಮ್ಮನ ಜೀವನಕ್ಕೆ ಸಿಡಿಲೆರಗಿದಂತಾಯಿತು. 'ಹೆಣ್ಣುಹೆಂಗಸು ತನ್ನ ಗತಿಯೇನು—ಪಾತೂ ಗತಿಯೇನು' ಎಂದವಳು ತಲ್ಲಣಿಸಿದಳು.

ಬಾಲ್ಯಸ್ನೇಹಿತನಿಗೆ ಧರ್ಮೋದಕ ಬಿಟ್ಟು ಬಂದಿದ್ದ ಗುಂಡಾಭಟ್ಟರು

"ನೀನು ಯೋಚನೆಮಾಡಬೇಡ ನರಸಕ್ಕ. ನೀನು ನನ್ನ ತಂಗಿ ಸಮಾನ. ಯಾವ ಕೆಲಸವಿದ್ದರೂ ನನಗೆ ಹೇಳು—ನಾನು ಮಾಡಿಕೊಡುತ್ತೇನೆ. ದಾಸಣ್ಣನ್ನ ಹಿಂದಕ್ಕೆ ತರುವ ಶಕ್ತಿ ಭಗವಂತ ನನಗೆ ಕೊಟ್ಟಿಲ್ಲ. ಆದರೆ ಅವನ ಹೆಂಡತಿ, ಮಗಳು ಇಲ್ಲಸಲ್ಲದ ಕಷ್ಟಕ್ಕೆ ಸಿಕ್ಕದಂತೆ ನೋಡಿಕೊಳ್ಳುವ ಶಕ್ತಿ ಭಗವಂತ ಕೊಟ್ಟಿದ್ದಾನೆ" ಎಂದು ಧೈರ್ಯ ಹೇಳಿದರು.

ನರಸಕ್ಕನ ನೆರವಿಗೆ ಭಟ್ಟರು ನಿಲ್ಲುವುದು ಅನಿವಾರ್ಯವಾಗಿತ್ತು. ನರಸಕ್ಕನೂ ಸಣ್ಣಾಕೆ-ಜನ ಸಣ್ಣಮಾತು ಆಡಿದರೇನು ಮಾಡುವುದು ಎನ್ನುವ ಭೀತಿ ಭಟ್ಟರನ್ನು ಮುತ್ತಿತು.

'ದುಷ್ಕಾರ್ಯ ಮಾಡುವುದಕ್ಕೆ ಹಿಂದೆಮುಂದೆ ನೋಡಬೇಕು—ಸತ್ಕಾರ್ಯ ಮಾಡುವುದಕ್ಕೇಕೆ ಅನುಮಾನ; ಈ ಜವಾಬ್ದಾರಿಯನ್ನು ನನ್ನ

ತಲೆಯಮೇಲೆ ಹೊರೆಸಿರುವವನು ಭಗವಂತ—ಇದನ್ನು ಇಳುಹುವನೂ, ಅವನೇ! ನಿಮಿತ್ತಮಾತ್ರದವನಾಗಿರುವ ನಾನು ಏಕೆ ಯೋಚನೆ ಮಾಡ ಬೇಕು' ಎಂದು ಮನಸ್ಸು ಗಟ್ಟಿಮಾಡಿಕೊಂಡರು.

ಗುಂಡಾಭಟ್ಟರು ನರಸಕ್ಕನ ಮನೆಗೆ ಬಂದಾಗ ನರಸಕ್ಕ, ಪಾತೂ ಇಬ್ಬರೂ ಭತ್ತದರಳು ಶುದ್ಧಿಮಾಡುತ್ತಿದ್ದರು. ನರಸಕ್ಕ ಭಟ್ಟರನ್ನು ನೋಡಿ ಎದ್ದುನಿಂತು

"ಬನ್ನಿ ಅಣ್ಣಯ್ಯ" ಎಂದು "ಒಂದು ಚಾಪೆ ತಂದು ಹಾಕಮ್ಮ ನಿಮ್ಮ ಮಾವಯ್ಯನಿಗೆ" ಎಂದು ಪಾರ್ವತಿಗೆ ಹೇಳಿದಳು.

ಪಾರ್ವತಿ ಹಾಸಿದ ಚಾಪೆಯ ಮೇಲೆ ಕುಳಿತು ಭಟ್ಟರು

"ಪಾತೂನೂ ಕೆಲಸಕಾರ್ಯ ಮಾಡುತ್ತಾಳೆ" ಎಂದು ಮೆಚ್ಚುಗೆ ವ್ಯಕ್ತಮಾಡಿದರು.

"ಅವಳ ಕೆಲಸವೋ, ಬೊಗಸೆಯೋ—ಏನು ಹೇಳಲಿ ಅಣ್ಣಯ್ಯ. ಏನೋ ಮನಸ್ಸು ಬಂದಿತು—ಇವತ್ತು ಕುಳಿತಿದ್ದಾಳೆ. ಇವಳ ಮೊಂಡುತನ ಸಹಿಸುವುದಕ್ಕಾಗುವುದಿಲ್ಲ. ತಾನು ಹಿಡಿದದ್ದೇ ಹಟ."

"ನೋಡಿ ಮಾವಯ್ಯ, ಅಮ್ಮ ಯಾವಾಗಲೂ ನನ್ನ ಬಯ್ತಾ ಇರೋದು."

"ನೀನೇಕಮ್ಮ ಹಟಮಾಡುತ್ತೀ?"

"ಊ ಹಟವೇನೋ! ನಾನು ಮಾಡಿದ್ದೆಲ್ಲಾ ಅಮ್ಮನಿಗೆ ಮೊಂಡು ತನವೇ!"

"ಹೋಗಲಿ ಹೋಗು—ಆಡಿಕೋ ಹೋಗು."

ಪಾರ್ವತಿ ಹೊರಗೆ ಹೋದ ಮೇಲೆ

"ಇದೇನು ನರಸಕ್ಕ-ಅರಳಿನ ಸಂಭ್ರಮ."

"ಎಲ್ಲಾ ಅಣಿಮಾಡಿಕೊಳ್ಳಬೇಡವೇ-ಸಂಡಿಗೆ ಇಡೋಣಾಂತ ಅರಳು ಹುರಿದೆ, ಪಾತೂಗೆ ಗಂಡು ಗೊತ್ತಾಗಿಹೋದರೆ ನನ್ನ ಚಿಂತೆ ಅರ್ಧ ಪರಿಹಾರ ವಾಗುತ್ತದೆ. ನೀವೇ ನನಗೆ ದಡಕಾಣಿಸಿ ಕನ್ಯಾಸೆರೆ ಬಿಡಿಸಬೇಕು."

"ನಿನ್ನ ಕೆಲಸ ಅರ್ಧಮಾಡಿಕೊಂಡು ಬಂದಿದ್ದೇನೆ ನರಸಕ್ಕ."

"ಅರ್ಧವಾಗಿದೆಯೇ?"

"ಹೂ! ತುಮಕೂರಿನಲ್ಲಿ ಲಾಯರು ಆದಿಶೇಷಯ್ಯನವರಿಗೆ ವಿವಾಹ ವಯಸ್ಕನಾದ ಮಗನಿದ್ದಾನೆ. ನಿನ್ನೆ ಅವರ ಹತ್ತಿರ ಮಾತನಾಡಿದೆ, ಜಾತಕ ಕೊಟ್ಟರು. ನಾನೇ ಎರಡು ಜಾತಕಗಳನ್ನೂ ನೋಡಿದೆ ಗೃಹಮೈತ್ರಿ ದಿವ್ಯ ವಾಗಿದೆ. ನೋಡಬೇಕು, ಋಣಾನುಬಂಧ ಹೇಗಿದೆಯೊ ಏನೋ!"

"ಅವರೇನಂದರು?"

"ಹೆಣ್ಣು ನೋಡುವುದಕ್ಕೆ ಬರಲೊಪ್ಪಿಕೊಂಡಿದ್ದಾರೆ."

"ಜನ ಒಳ್ಳೆಯವರಾಗಿದ್ದರೆ ಸಾಕು."

"ಆ ವಿಷಯ ನೀನು ಯೋಚನೆ ಮಾಡಬೇಕಾಗಿಯೇ ಇಲ್ಲ ನರಸಕ್ಕ."

"ಹುಡುಗ ಹೇಗಿದ್ದಾನೆ?"

"ನೀನೇ ನೋಡುತ್ತೀಯಲ್ಲ!"

"ನನಗೇನು ಗೊತ್ತಾಗತ್ತೆ ಅಣ್ಣಯ್ಯ–ನೀವು ಹೇಳಿಬಿಟ್ಟರಾಯಿತು."

"ಚಂದ್ರಶೇಖರ ಗಂಡನಾಗಿ ದೊರೆತರೆ ಪಾತು ಪುಣ್ಯವಂತೆ ಎಂದೇ ಹೇಳಬೇಕು. ಹುಡುಗ ಮನ್ಮಥ ಇದ್ದ ಹಾಗಿದ್ದಾನೆ."

"ನನಗೆ ಈ ಪಾತೀದೇ ದೊಡ್ಡ ಯೋಚನೆಯಾಗಿ ಕುಳಿತಿದೆ."

"ಯೋಚನೆ ಬಗೆಹರಿಯುವ ಕಾಲ ಬಂದಿತಲ್ಲ."

"ಅದಲ್ಲ ಅಣ್ಣಯ್ಯ, ಈ ಮೊಂಡುಮೂದೇವಿ ಹುಟ್ಟಿದ ಮನೇಗೆ ಎಲ್ಲಿ ಅಪಕೀರ್ತಿ ತರುತ್ತದೆಯೋ ಎಂದು ಹೆದರಿಕೆಯಾಗಿದೆ."

"ನೋಡು ನರಸಕ್ಕ—ಮಕ್ಕಳು ಮೊಂಡುತನ ಮಾಡದೆ ನೀನೂ ನಾನೂ ಮಾಡುವುದಕ್ಕಾಗುತ್ತದೆಯೇ. ಸಂಸಾರಭಾರ ಹೆಗಲಮೇಲೆ ಬಿದ್ದರೆ ತಾನೇ ಎಲ್ಲಾ ಸರಿಹೋಗುತ್ತದೆ."

"ಸದ್ಯ ನಿಮ್ಮ ಬಾಯ ಹರಕೆಯಿಂದ ಅಷ್ಟಾದರೆ ಸಾಕು."

"ನರಸಕ್ಕ, ಒಂದು ವೇಳೆ ಆದಿಶೇಷಯ್ಯ ಹೆಣ್ಣು ನೋಡುವುದಕ್ಕೆ ಬಂದವರು ಒಪ್ಪಿಬಿಟ್ಟರೆ ಏನುಮಾಡುತ್ತೀ?"

"ಒಳ್ಳೆಯ ಸಂಬಂಧ ಕಳೆದುಕೊಳ್ಳುವುದಕ್ಕಾಗುತ್ತದೆಯೇ!"

"ಅದಲ್ಲಮ್ಮ—ದುಡ್ಡೂ ಕಾಸಿಗೇನು ಮಾಡುತ್ತೀ?"

"ಪಾತೂ ಮದುವೆಗೇಂತಾಲೆ ಮಹಾರಾಯರು ಹಣ ಇಟ್ಟಿದ್ದಾರೆ ಅಣ್ಣಯ್ಯ—ನನ್ನ ಬಡತನಕ್ಕೆ ಸರಿಯಾಗಿ ಮದುವೆಮಾಡಿಕೊಡುತ್ತೇನೆ."

"ಸಾಲದೆ ಬಂದರೆ ನನಗೊಂದು ಮಾತು ತಿಳಿಸಮ್ಮ."

"ನಿಮಗೆ ತೊಂದರೆ ಕೊಡಲೇ?"

"ಬೇಡ—ಎಲ್ಲಾ ಜವಾಬ್ದಾರಿ ನೀನೇ ವಹಿಸಿಕೊಂಡು ಬಿಡು. ಹೆಣ್ಣು ಹೆಂಗಸು ನಿನ್ನೊಬ್ಬಳನ್ನು ಮುಂದಕ್ಕೆ ತಳ್ಳಿ ನಾವೆಲ್ಲಾ ತಮಾಷೆ ನೋಡುತ್ತಾ ನಿಲ್ಲುತ್ತೇವೆ."

"ಇಲ್ಲ ಅಣ್ಣಯ್ಯ—ನಿಮ್ಮನ್ನು ಬಿಟ್ಟು ನನಗೆ ಯಾರು ದಿಕ್ಕು. ಸ್ನೇಹಿತ ಹೋದ ಮೇಲೂ ಅವನ ಮನೆ ಉಳಿಯಲಿ ಎಂದು ನಿಮ್ಮ ಹಾಗೆ ಯಾರು ಬಯಸುತ್ತಾರೆ."

"ನೀನು ಹೀಗೆ ಮಾತನಾಡುವ ಹಾಗಿದ್ದರೆ ನಾನು ಇತ್ತ ಬರುವುದೇ ಇಲ್ಲ ನರಸಕ್ಕ."

"ಇವತ್ತು ಅಡಿಗೆ ಏನು ಮಾಡಿಕೊಂಡಿದ್ದಿರಿ?"

"ಹಿತ್ತಲಲ್ಲಿ ನಾಲ್ಕು ಬೆಂಡೇಕಾಯಿ ಸಿಕ್ಕಿತು-ಅದನ್ನೇ ಸಾರಿಗೆ ಹಾಕಿದ್ದೆ. ಅನ್ನ ಮಾಡಿಕೊಂಡಿದ್ದೆ."

"ಪಾತೀನ ನೀವೇಕೆ ವಹಿಸಿಕೊಳ್ಳುತ್ತೀರಿ ಎನ್ನುವುದು ನನಗೆ ಈಗ ಅರ್ಥವಾಯಿತು."

"ಏನರ್ಥವಾಯಿತು?"

"ಅವಳ ಹಾಗೆ ನೀವೂ ಮೊಂಡು—ಈ ವಯಸ್ಸಿನಲ್ಲಿ ಕೈಬಾಯಿ ಸುಟ್ಟುಕೊಂಡು ಅಡಿಗೆಮಾಡಿಕೊಳ್ಳುತ್ತೀರಲ್ಲಾ-ನೀವೊಬ್ಬರು ಊಟಕ್ಕೆ ಬಂದರೆ ನನಗೆ ಬಡತನ ಬಂದು ಬಿಡುತ್ತದೆಯೇ?"

"ನರಸಕ್ಕ, ಈ ವಿಷಯ ನಾವು ಬೇಕಾದಷ್ಟು ಚರ್ಚಿಸಿದ್ದೇವಲ್ಲಾ. ಆಡಿದ್ದೇ ಮಾತು ಪುನಃ ಪುನಃ ಆಡಿದರೇನು ಸಾರ್ಥಕ?"

"ಈಗಲೂ ನನ್ನ ಮಾತಿಗೆ ಕಿವಿಕೊಡಿ. ಬಾಯಿ ಉಪಚಾರಕ್ಕೆ ನನ್ನ 'ತಂಗಿ' ಎಂತಾ ಕರೆಯಬೇಡಿ. ನೀವು ಮಾಡುವ ಒಪ್ಪತ್ತೂಟಕ್ಕೆ ಏಕೆ ತೊಂದರೆ ಪಟ್ಟುಕೊಳ್ಳುತ್ತೀರಿ."

ಭಟ್ಟರು ಮೆಲ್ಲನೆದ್ದು

"ಬೀಗರು ಬರೋ ದಿನ ಮೊದಲೇ ತಿಳಿಸ್ತೇನೆ ನರಸಕ್ಕ." ಎಂದು ಹೇಳಿ ಹೊರಟುಬಿಟ್ಟರು.

"ನಿಮ್ಮ ಹೊಟ್ಟೆ ತಣ್ಣಗಿರಲಿ ನಮ್ಮಪ್ಪ" ಎಂದು ನರಸಕ್ಕ ತನ್ನಷ್ಟಕ್ಕೇ ನುಡಿದುಕೊಂಡಳು.

೮

ರುದ್ರಾಕ್ಷಿಪುರದ ಪರಿಸ್ಥಿತಿ ಹತೋಟಿಗೆ ಬಂದಿತ್ತು.

ಸಶಸ್ತ್ರ ಪೋಲೀಸಿನವರು ಊರಲ್ಲಿ ಶಾಂತಿಸ್ಥಾಪಿಸಿದ್ದರು.

ರುದ್ರಶೆಟ್ಟಿ, ಬಶೆಟ್ಟೆಪ್ಪ ಅವರ ಬಳಗದವರು ವೀರಭದ್ರನಗುಡಿಯ ಆವರಣದಲ್ಲಿಯೇ ಬಸವಜಯಂತಿಯನ್ನಾಚರಿಸಿ ಕರ್ತವ್ಯ ಕೊನೆಗಾಣಿಸಿದ್ದರು.

ಪರಿಸ್ಥಿತಿ ಇಷ್ಟುದೂರ ಹೋದುದಕ್ಕೆ ಕೆಂಗೇಗೌಡರಿಗೆ ಹಿಗ್ಗೆನಿಸಲಿಲ್ಲ. ಆದರೆ ರುದ್ರಶೆಟ್ಟಿಯ ಮುಖಭಂಗವಾದುದಕ್ಕೆ ಅವರಿಗೆ ಸಂತೋಷವೇ ಆಗಿತ್ತು.

ವಿಜಯೋನ್ಮಾದದಿಂದ ಊರಿನಲ್ಲಿ ಮೆರೆದವನು ಕವಿಹನುಮ. ಅವನ ಹಾರಾಟ ಗಾಯಕ್ಕೆ ಉಪ್ಪುಹಾಕಿದಂತಾಗಿತ್ತು. ರುದ್ರಶೆಟ್ಟಿ ಒಳಗೇ ಬೇಯುತ್ತ ಪ್ರತಿಭಟಿಸಲಾಗದ ಅಸಾಮರ್ಥ್ಯದಿಂದ ಕೊರಗುತ್ತಿದ್ದ.

ಬಸವಜಯಂತಿ ಮುಗಿದಮೇಲೆ ಗುಂಡಾಭಟ್ಟರು ಕೆಲವು ದಿನ ಯಾರ ಕೈಗೂ ಸಿಕ್ಕಲಿಲ್ಲ. ಪಾರ್ವತಿ ಮದುವೆ ಸಾಧಿಸುವ ಪ್ರಯತ್ನದಲ್ಲಿ ಅವರಿಗೆ ಊರಿನ ವ್ಯವಹಾರದಲ್ಲಿ ಆಸಕ್ತಿವಹಿಸಲು ಸಾಧ್ಯವಾಗಲಿಲ್ಲ.

ಆದಿಶೇಷಯ್ಯ ಹೆಂಡತಿ, ಮಕ್ಕಳೊಡನೆ ಬಂದು ಪಾರ್ವತಿಯನ್ನು ನೋಡಿಕೊಂಡು ಹೋದರು.

ಭಟ್ಟರು ತುಮಕೂರಿಗೆ ಹೋಗಿ ಆದಿಶೇಷಯ್ಯನವರ ಒಪ್ಪಿಗೆ ಪಡೆದು ಬಂದ ಮೇಲೇ ಅವರ ಮನಸ್ಸಿಗೆ ಸಮಾಧಾನ.

ಒಂದು ಘಟ್ಟ ದಾಟಿದಂತೆ ಆಗಿತ್ತು; ಎರಡನೆಯ ಘಟ್ಟ ದಾಟಿದ ಮೇಲೆ ಭಟ್ಟರಿಗೆ ಪೂರ್ಣಶಾಂತಿ.

ತೃಪ್ತಿಕರವಾಗಿ ಮದುವೆಮಾಡಿ ಬೀಗರನ್ನು ಸಂತೋಷಗೊಳಿಸುವುದು ಅನಿವಾರ್ಯವಾಗಿತ್ತು. ಭಟ್ಟರ ಮಾತು ತೆಗೆದುಹಾಕಲಾಗದೆ ಆದಿಶೇಷಯ್ಯನವರು ಈ ಸಂಬಂಧಕ್ಕೆ ಒಪ್ಪಿಗೆಗೊಟ್ಟಿದ್ದರು — ಮಗನ ಮುಖಾಂತರ ಅವರಿಗೆ ಬರುವ ಲಾಭವನ್ನೂ ತಾವು ತಪ್ಪಿಸಿದಂತೆ ಆಗಿತ್ತು. ಈ ಕಿನಿಸು ಆದಿಶೇಷಯ್ಯನವರ ಮನಸ್ಸಿನಲ್ಲಿ ಉಳಿಯದಂತೆ ಅದ್ಧೂರಿಯಿಂದ ಮದುವೆಮಾಡಿ ಅವರ ಮನಸ್ಸಂತೋಷಪಡಿಸಬೇಕೆಂದು ಭಟ್ಟರು ನಿರ್ಧರಿಸಿದ್ದರು.

ನರಸಕ್ಕನ ಸ್ಥಿತಿಗತಿ ಯಾವ ವೈಭವಪ್ರದರ್ಶನಕ್ಕೂ ಅವಕಾಶ ಕೊಡುತ್ತಿರಲಿಲ್ಲ.

ಭಟ್ಟರಂತೂ ಹೇಳಿಕೇಳಿ ಸರಸ್ವತೀಭಕ್ತರು—ಲಕ್ಷ್ಮಿ ಅವರ ಬಳಿಗೂ ಸುಳಿಯುವಂತಿರಲಿಲ್ಲ.

ಹಗಲೂ ರಾತ್ರಿ ವಿಚಾರಮಾಡಿ, ಪೂರ್ವಾಪರಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಒಂದು ದಿನ ಭಟ್ಟರು ರುದ್ರಶೆಟ್ಟಿಯನ್ನು ನೋಡಲು ಹೋದರು.

ಮರ್ಯಾದೆಗೆ ಕೊರತೆಯಾಗದಂತೆ ರುದ್ರಶೆಟ್ಟಿ ಭಟ್ಟರಿಗೆ ಸ್ವಾಗತ ಬಯಸಿದರೂ ಪೂರ್ವದ ಹಾರ್ದಿಕತೆ ಇಲ್ಲದುದನ್ನು ಭಟ್ಟರು ಕಂಡುಕೊಂಡರು.

"ಏನು – ಸ್ವಾಮಿಗಳು ಇಷ್ಟುದೂರ ಪಾದ ಬೆಳಸಿದ್ದು" ಎಂದು ರುದ್ರಶೆಟ್ಟಿ ಠೀವಿಯಿಂದಲೇ ಕೇಳಿದ.

"ಒಂದೂರಿನಲ್ಲಿದ್ದ ಮೇಲೆ ಒಬ್ಬರನ್ನೊಬ್ಬರು ನೋಡದೆ ಇರುವುದಕ್ಕಾಗುತ್ತದೆಯೇ ರುದ್ರಣ್ಣ."

"ಹೌದು ಸ್ವಾಮಿ—ನಮಗೆ ಕಷ್ಟ ಬಂದಾಗ ಯಾರೂ ನಮಗಾಗುವುದಿಲ್ಲ."

"ನಿನಗೆ ಕಷ್ಟ ಬರುವುದೆಂದರೇನಪ್ಪ!"

"ಬಸವಜಯಂತಿಯಲ್ಲಿ ನಮಗಾದ ಮರ್ಯಾದೆ ನೋಡಿದಿರೋ ಇಲ್ಲವೋ? ಇನ್ನು ಈ ಊರಲ್ಲಿ ನಾವು ಮುಖವೆತ್ತಿಕೊಂಡು ತಿರುಗುವುದು ಹೇಗೆ ಸ್ವಾಮಿ."

"ರುದ್ರಣ್ಣ—ಮೊನ್ನೆ ನಡೆದ ಪ್ರಕರಣದಲ್ಲಿ ನ್ಯಾಯ, ಧರ್ಮ ನಿನ್ನ ಕಡೆ ಇರಲಿಲ್ಲ. ಹೋಗಲಿ—ಆದ್ದು ಆಯಿತು—ಕೆಟ್ಟ ಘಳಿಗೆ—ನೀನೂ ಹಟಕ್ಕೆ ಬಿದ್ದೆ—ಈಗಲಾದರೂ ಇದನ್ನು ಮರೆತುಬಿಡು. ನೀನೂ ಕೆಂಗೇಗೌಡರೂ ಈ ಊರಿನ ಎರಡು ಕಲಶಗಳಿದ್ದ ಹಾಗೆ. ನೀವು ಅನ್ಯೋನ್ಯವಾಗಿದ್ದರೆ ಊರು ಬದುಕಿಕೊಳ್ಳುತ್ತದೆ. ನೀವು ಕಾದಾಡಿದರೆ ಊರು ನಾಶವಾಗುತ್ತಪ್ಪಾ."

"ಕೆಂಗೇಗೌಡನ ಜತೆ ನಾನು ರಾಜಿಮಾಡಿಕೊಳ್ಳಬೇಕೇ?"

"ನೀನು ಮಾಡಿಕೊಳ್ಳಬೇಡ—ನಾನು ಮಾಡಿಸುತ್ತೇನೆ. ಗೌಡರ ಮನಸ್ಸು ಒಳ್ಳೆಯದು ಎಂದು ನೀನೇ ಎಷ್ಟೋ ಸಲ ಹೇಳಿದ್ದೆ."

"ಅದೆಲ್ಲಾ ಹಳೇಮಾತಾಯಿತು ಸ್ವಾಮಿ. ನಾನು ಗೌಡನ ಜತೆ ರಾಜಿ ಮಾಡಿಕೊಂಡರೆ ನಮ್ಮ ಜನ ಬಿಟ್ಟಾರಾ?"

"ನಿಮ್ಮ ಜನ ಮೆಚ್ಚಿಸೋಕೆ ನೀನು ಊರನ್ನು ಬಲಿಕೊಡುವುದಕ್ಕೆ ಸಿದ್ಧವಾಗಿದ್ದೀ ಅನ್ನು—ನೋಡು ರುದ್ರಣ್ಣ—ನನಗೆ ಮಕ್ಕಳಿಲ್ಲ ಮರಿಯಿಲ್ಲ. ನನ್ನ ಕಾಲ ಎಂದೋ ಮುಗಿದುಹೋಯಿತು. ನಾಳೆ ಬಾಳಿ ಬದುಕಿ ಮಾಡಬೇಕಾದವರು ನಿನ್ನ ಮಕ್ಕಳು—ಕೆಂಗೇಗೌಡರ ಮಕ್ಕಳು. ಹಿರಿಯರಾದ ನೀವು ವಿಷಬೀಜ ಬಿತ್ತುಹೋದರೆ ಅದರ ವಿಷಫಲ ಉಣ್ಣುವವರು ನಿಮ್ಮ ಮಕ್ಕಳೇ ಎನ್ನುವುದನ್ನು ಮರೆಯಬೇಡ. ರುದ್ರಾಕ್ಷಿಪುರದವರ ಅವಿವೇಕಕ್ಕಾಗಿ ನಮ್ಮ ದೇಶದವರೆಲ್ಲಾ ಪಶ್ಚಾತ್ತಾಪಪಡಬಾರದು."

"ಆ ಮಾತು ಬಿಟ್ಟುಬಿಡಿ ಸ್ವಾಮಿ. ಇನ್ನೇನಾದರೂ ಇದ್ದರೆ ಹೇಳಿ."

'ಹೇಳಲೋ ಬೇಡವೋ' ಎಂದು ಭಟ್ಟರು ಕ್ಷಣಕಾಲ ಆಲೋಚಿಸುತ್ತ ಕುಳಿತರು. ರುದ್ರಶೆಟ್ಟಿ ಭಟ್ಟರ ಆಂದೋಲನ ನೋಡಿ

"ನಿಮ್ಮ ವಿಷಯದಲ್ಲಿ ನಾವು ಯಾರೂ ತಪ್ಪು ನಡೆಯುವುದಿಲ್ಲ. ಸ್ವಾಮಿ. ನೀವು ದೇವರಂಥ ಮನುಷ್ಯರು."

"ನಾನು ಒಂದು ಕೆಲಸವಿಟ್ಟುಕೊಂಡೇ ನಿನ್ನ ಹತ್ತಿರ ಬಂದೆ—ನೀನಿನ್ನೂ ಖಾರವಾಗಿರುವುದನ್ನು ನೋಡಿ ಹೇಳಲೋ ಬೇಡವೋ ಎಂದು ಅನುಮಾನಿಸುತ್ತಾ ಇದ್ದೇನೆ."

"ನೀವೂ ನಮ್ಮ ಕೈಬಿಡ್ತುವ ಹಾಗಿದ್ದರೆ ಬಿಟ್ಟುಬಿಡಿ ಸ್ವಾಮಿ."

"ನಿನ್ನ ಕೈಬಿಡುವಹಾಗಿದ್ದರೆ ನಿನ್ನ ಹುಡುಕಿಕೊಂಡು ಇಲ್ಲಿಯವರೆಗೆ ಏಕೆ ಬರುತ್ತಿದ್ದೆನಯ್ಯಾ ?"

"ಹಾಗಾದರೆ ಹೇಳಿ ಸ್ವಾಮಿ."

"ದಾಸಪ್ಪನ ಮಗಳು ಪಾರ್ವತಿ ಮದುವೆ ನಿಷ್ಕರ್ಷೆಯಾಗಿದೆ."

"ಯಾರು ವರ ?"

"ತುಮಕೂರ ಲಾಯರು ಆದಿಶೇಷಯ್ಯರವರ ಮಗ ಚಂದ್ರಶೇಖರ."

"ಒಳ್ಳೆ ಕೆಲಸವಾಯಿತು ಬಿಡಿ. ತಂದೆಯಿಲ್ಲದ ಮಗು–ಎಲ್ಲಿಯಾದರೂ ಒಳ್ಳೆಯ ಕಡೆ ಸೇರಿದರೆ ಸಾಕು."

"ದಾಸಪ್ಪ ಹೋದ ಮೇಲೆ........"

"ಹೌದು ಸ್ವಾಮಿ—ನಮ್ಮಗ ಬೇರೆಯಲ್ಲ ಪಾರ್ವತವ್ವ ಬೇರೆ ಅಲ್ಲ. ನಮ್ಮ ಹುಡುಗಿ ಶಿವಮ್ಮನೂ ಪಾರ್ವತವ್ವನೂ ತುಂಬ ಸ್ನೇಹಿತರು ಸ್ವಾಮಿ. ಶಿವೂ ಈ ವಿಷಯ ನನಗೆ ಹೇಳಲೇ ಇಲ್ಲವಲ್ಲ."

"ಪಾರ್ವತಿಗೇ ಸರಿಯಾಗಿ ಗೊತ್ತಿಲ್ಲ ರುದ್ರಣ್ಣ."

"ನನ್ನಿಂದೇನಾಗಬೇಕು ಸ್ವಾಮಿ."

"ಏನಾಗಬೇಕೂಂದ್ರೆ — ನೀನೇ ಯಜಮಾನಿಕೆ ವಹಿಸಿ ಈ ಶುಭ ಕಾರ್ಯ ಆಗುಮಾಡಿಕೊಡಬೇಕು."

"ನೀವು ಏನು ಹೇಳಿದರೂ ಮಾಡೋಕೆ ನಾನು ಸಿದ್ಧ."

"ಏನು ಹೇಳಿದರೂ ಮಾಡುತ್ತೀಯಾ ರುದ್ರಣ್ಣ."

"ಗೌಡನ ಜತೆ ರಾಜಿ ಮಾಡಿಕೊಳ್ಳುವ ವಿಷಯ ಒಂದುಬಿಟ್ಟು.—"

ಭಟ್ಟರು ಅಳವಳಿಗೊಂಡು ಮನೆ ತಲುಪಿದರು. ಊರಿನ ಇಬ್ಬಣ ಗಳನ್ನು ಕೂಡಿಸಿ ಸೌಹಾರ್ದ ಬೆಳಸುವುದು ಹೇಗೆಂಬುದೇ ಅವರಿಗೆ ದೊಡ್ಡ ಯೋಚನೆಯಾಯಿತು.

ಭಟ್ಟರಿಗೆ ಯಾರೊಡನೆಯೂ ಅಂದು ಮಾತುಕತೆ ಬೇಕಾಗಿರಲಿಲ್ಲ. ವ್ಯಕ್ತಿದ್ವೇಷ ಕೋಮುವಾರು ಭಾವನೆ ತಳೆದು ಊರನ್ನೇ ಕಬಳಿಸಲು ಹವಣಿ ಸುತ್ತಿತ್ತು. ಶತಮಾನಗಳಿಂದ ಅಣ್ಣತಮ್ಮಂದಿರಂತೆ ಬೆಳೆದು ಬಂದಿದ್ದ ವಿವಿಧ ಮತಸ್ಥರು ಕ್ಷುಲ್ಲಕಾರಣಕ್ಕಾಗಿ ಹೋರಾಡಲು ಸಿದ್ಧರಾಗಿದ್ದರು. ಈ ಪರಿಸ್ಥಿತಿ

ಯನ್ನು ಹೇಗೆ ಸುಧಾರಿಸುವುದೆನ್ನುವುದೇ ಭಟ್ಟರಿಗೆ ದೊಡ್ಡ ಸಮಸ್ಯೆ ಯಾಯಿತು.

ಕವಿಹನುಮ ಬಂದಾಗ ಅಪ್ರಾರ್ಥಿತವಾಗಿ ಭಟ್ಟರ ಮುಖದ ಮೇಲೆ ಅಸಮಾಧಾನ ವ್ಯಕ್ತವಾಯಿತು. ಈಚೆಗೆ ದೊರೆತ ಗೆಲುವನ್ನು ಮೆರೆಸು ವುದಕ್ಕೆ ಹನುಮಯ್ಯ ಬಂದಿದ್ದಾನೆಂದು ಭಟ್ಟರು ಭಾವಿಸಿಕೊಂಡೇ

"ಏನು ಬಂದೆ ಹನುಮಯ್ಯ" ಎಂದು ಕೇಳಿದರು.

"ನಿಮ್ಮನ್ನು ನೋಡುವುದಕ್ಕೆ ಬಂದೆ ಗುರುಗಳೇ."

"ಏನು ಗುರುವೋ—ಏನು ಶಿಷ್ಯರೋ!"

"ಏಕೆ ಗುರುಗಳೇ?"

"ಗುರುವಿನ ಮಾತು ಶಿಷ್ಯರು ಕೇಳುವ ಕಾಲ ಹೋಯಿತಪ್ಪಾ—ಈಗ ಗುರು ಶಿಷ್ಯರ ಮಾತು ಕೇಳಿಕೊಂಡು ತನ್ನ ಗುರುತ್ವ ಉಳಿಸಿಕೊಳ್ಳ ಬೇಕಾಗಿದೆ."

"ನಿಮ್ಮ ಮಾತು ಯಾರು ಕೇಳೋದಿಲ್ಲ ಗುರುಗಳೇ."

"......................."

"ನಾನು ಒಂದು ವಿಷಯ ಕೇಳೋಕೆ ಬಂದೆ ಗುರುಗಳೇ."

"ಕೇಳು."

"ನೀವು ಇವತ್ತು ರುದ್ರಶೆಟ್ಟಿ ನೋಡೋದಿಕ್ಕೆ ಹೋಗಿದ್ದಿರಾ?"

"ಹೋಗಿದ್ದೆ—ಊರಿಗೆಲ್ಲಾ ಸುದ್ದಿ ಬಡಿದುಬಿಟ್ಟದೆ!"

"ನಮ್ಮವರಾಗಿ ನೀವು ರುದ್ರಶೆಟ್ಟಿ ನೋಡಬಹುದೇ ಗುರುಗಳೇ-ನೀವು ಏನು ಹೇಳಿದರೆ ತಾನೆ ನಾವು ಮಾಡುವುದಿಲ್ಲಾಂತೀವಿ."

"ರುದ್ರಣ್ಣನೂ ನನಗೆ ಬೇಕಾದವನು ಹನುಮಯ್ಯ. ಈಚೆಗೆ ಅವನು ಒಂದು ವಿಷಯದಲ್ಲಿ ತಪ್ಪುಹಾದಿ ತುಳಿದಯೆಂದು ಅವನನ್ನು ದೂರ ಮಾಡುವುದಕ್ಕಾಗುತ್ತದೆಯೇ—ನಾನೇ ಈಗ ಗೌಡರನ್ನು ಕಂಡು ರುದ್ರಣ್ಣ ನನ್ನ ನೋಡಿದ ವಿಷಯ ಹೇಳಬೇಕೊಂತಿದ್ದೆ. ನೀನು ಬಂದದ್ದು ಒಳ್ಳೆ ಯದೇ ಆಯಿತು. ನನಗೆ ಎಲ್ಲರೂ ಬೇಕು ಹನುಮಯ್ಯ. ಒಂದೇ ಕಣ್ಣಿ ನಿಂದ ದೇಹವ್ಯಾಪಾರ ಮುಂದುವರಿಸಬಹುದು. ಎರಡು ಕಣ್ಣಿದ್ದರೆ ಪ್ರಯಾಸ

ವಿರುವುದಿಲ್ಲ. ಇದೇ ಮಾತು ರುದ್ರಣ್ಣನಿಗೂ ಹೇಳಿ ಅವನಿಗೂ ನಿಮಗೂ ರಾಜಿಮಾಡಿಸುವುದಕ್ಕೇ ನಾನು ಅವನಲ್ಲಿಗೆ ಹೋಗಿದ್ದುದು."

"ರುದ್ರಶೆಟ್ಟಿ ಏನು ಹೇಳಿದ ?"

"ನೀನು ಏನು ಹೇಳುತ್ತಿದ್ದೀಯೋ ಅದನ್ನೇ ಅವನೂ ಹೇಳಿದ. ಅವನೂ ಹಟ ಬಿಡುವುದಿಲ್ಲ—ನೀವೂ ಹಟ ಬಿಡಲೊಲ್ಲಿರಿ. 'ಗಂಡಹೆಂಡಿರ ಜಗಳದಲ್ಲಿ ಮಗು ಮೆತ್ತಗಾಯಿತು' ಅಂದಹಾಗೆ ಆಗಿದೆ."

ಆದಷ್ಟು ಬೇಗ ಈ ವಿಷಯದ ಸಿಕ್ಕಿನಿಂದ ಪಾರಾಗಲೆತ್ನಿಸಿ ಹನುಮಯ್ಯ

"ಪಾತವ್ವನ ಲಗ್ನ ನಿಶ್ಚಯವಾಯಿತಂತೆ !"

"ಹೌದು ನಿಶ್ಚಯವಾಗಿದೆ. ಊರಿನವರೆಲ್ಲಾ ಸೇರಿ ಸಂತೋಷವಾಗಿ ಈ ಮಂಗಳಕಾರ್ಯ ಮುಗಿಸಬೇಕೆಂದು ನನ್ನ ಇಚ್ಛೆ. ಮದುವೆ ಸಂದರ್ಭದಲ್ಲಿ ನಿಮಗೂ ರುದ್ರಣ್ಣನ ಕಡೆಯವರಿಗೂ ರಾಜಿಯಾಗಿ ಬಿಟ್ಟರೆ ನನಗೆ ಪರಮ ಸಂತೋಷವಾಗುತ್ತದೆ."

"ಪಾತವ್ವ ನಮ್ಮೂರ ಮಗು ಸ್ವಾಮಿ—ಅವಳು ಸಂತೋಷವಾಗಿ ಗಂಡನಮನೆ ಸೇರಿದರೆ ನಮಗೂ ಶ್ರೇಯಸ್ಸು."

ಕ್ಷಣಕಾಲ ಸುಳಿದ ಆಸೆಯ ಮಿಂಚು ಭಟ್ಟರ ಮನಸ್ಸನ್ನು ಪ್ರಫುಲ್ಲಗೊಳಿಸಿತು.

"ನಮ್ಮ ಜನದಲ್ಲಿ ಕೆಟ್ಟತನಕ್ಕಿಂತ ಅಜ್ಞಾನ ಹೆಚ್ಚಾಗಿದೆ ಹನುಮಯ್ಯ. ಕೆಂಗೇಗೌಡರ ಮನಸ್ಸು ಸಮುದ್ರದಷ್ಟು ವಿಸ್ತಾರವಾದುದು—ರುದ್ರಣ್ಣನ ಮನಸ್ಸೂ ಒಳ್ಳೆಯದೇ! ಆದರೆ ಇಬ್ಬರೂ ಯಾವದೋ ಮಾಯಾಪಾಶಕ್ಕೆ ಕಟ್ಟುಬಿದ್ದು ತಮ್ಮ ಆಸುರೀಸ್ವಭಾವ ಪ್ರಕಟಿಸುತ್ತಿದ್ದಾರೆ. ಆಸುರೀಸ್ವಭಾವ ದಮನಮಾಡದಿದ್ದರೆ ದೈವಶಕ್ತಿ ಹೇಗೆ ವಿಕಾಸವಾಗುತ್ತದೆ ? ದೇವನೊಬ್ಬನೇ, ಅವನ ನಾಮ ರೂಪಗಳು ಮಾತ್ರ ವ್ಯತ್ಯಾಸವಾಗುತ್ತವೆ ಎನ್ನುವ ಮಾತನ್ನು ಎಲ್ಲರೂ ಹೇಳುತ್ತೇವೆ–ಯಾರೂ ನಂಬುವುದಿಲ್ಲ. 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂದು ಉಪನಿಷತ್ತು ಹೇಳುತ್ತದೆ; 'ದೇವನೊಬ್ಬ ನಾಮ ಹಲವು' ಎಂದು ವಚನ ಹೇಳುತ್ತದೆ; ದೇವನೊಬ್ಬನೇ ಎಂದು ಮುಸಲ್ಮಾನ ಧರ್ಮ ಕೂಡ ಹೇಳುತ್ತದಂತೆ. ದೇವನೊಬ್ಬ ಎನ್ನುವ

ಮಾತನ್ನು ನೀವೂ, ವೀರಶೈವರೂ ಒಪ್ಪುವ ಹಾಗಿದ್ದರೇ ವೀರಭದ್ರದೇವರಿಗೂ, ರಾಮದೇವರಿಗೂ ವ್ಯತ್ಯಾಸಮಾಡುವ ಸಂದರ್ಭವೇ ಬರುತ್ತಿರಲಿಲ್ಲ. ನಮ್ಮ ನಂಬಿಕೆಗೂ ಆಚರಣೆಗೂ ಯಾವ ವೈತ್ರಿಯೂ ಇಲ್ಲ ಹನುಮಯ್ಯ. ಜೀವನ ಪೂರ್ಣವಾಗಬೇಕಾದರೆ–ನಿರ್ಮಲವೂ ಅನಂತವೂ ಆದ ಶಾಂತಿ ಲಭಿಸಬೇಕಾದರೆ ವೈತ್ರಿಯಿರಬೇಕು — ಸಮನ್ವಯವಿರಬೇಕು — ಆಚಾರ ವಿಚಾರಗಳು ಸಮರಸವಾಗಬೇಕು."

ಭಟ್ಟರ ಹೃದಯದಿಂದುಕ್ಕಿಬಂದ ಮಾತು ಹನುಮಯ್ಯನನ್ನು ಮಂತ್ರ ಮುಗ್ಧನನ್ನಾಗಿ ಮಾಡಿತು.

"ನಿಮ್ಮ ಜತೆ ಜಗಳವಾಡಬೇಕೆಂದು ನಾನು ಬಂದೆ ಸ್ವಾಮಿ."

"ಜಗಳವಾಡು—ನಾನು ಬೇಡವೆಂದೆನೆ?"

"ನೀವು ಬಾಯಿಗೆ ಬಟ್ಟೆ ಹಾಕಿದ ಮೇಲೆ ನಾನೇನು ಮಾತನಾಡಲಿ."

"ಮಾತು ಕಡಿಮೆಯಾಗಬೇಕು—ಕೃತಿಹೆಚ್ಚಾಗಬೇಕು ಹನುಮಯ್ಯ"

ಎಂದು ಭಟ್ಟರಾಡಿದ ಮಾತು ಹನುಮಯ್ಯನ ಹೃದಯದಲ್ಲಿ ಶಲ್ಯದಂತೆ ನೆಟ್ಟಿತು.

## ೬

ಚಂದ್ರಶೇಖರನ ಮದುವೆ ನಿಶ್ಚಯವಾದುದನ್ನು ಕಂಡು ಗರುಡಾಚಾರೀಗೆ ಆಶ್ಚರ್ಯವಾಗಲಿಲ್ಲ; ನಂಜುಂಡಶೆಟ್ಟೀಗೆ ಆಶ್ಚರ್ಯವೂ ಆಗಿತ್ತು, ಅಸಮಾಧಾನವೂ ಆಗಿತ್ತು.

ವ್ಯವಹಾರ ಪ್ರಪಂಚದಲ್ಲಿಯೇ ಹುಟ್ಟಿ ಬೆಳೆದಿದ್ದ ನಂಜುಂಡಶೆಟ್ಟಿ ಹಣವೇ ಜೀವನದ ಸರ್ವಸ್ವ ಎಂದು ತಿಳಿದುಕೊಂಡಿದ್ದ. ಹೆಚ್ಚು ಅನುಕೂಲಸ್ಥರಲ್ಲದ ಆದಿಶೇಷಯ್ಯನವರೇಕೆ ಮಗನ ಮದುವೆಗೆ ಆತುರಪಡುತ್ತಿದ್ದಾರೆಂಬುದು ನಂಜುಂಡಶೆಟ್ಟೀಗೆ ಬಗೆಹರಿಯಲಿಲ್ಲ.

"ನಿನ್ನ ಕಾಲುಮೇಲೆ ನೀನು ನಿಂತುಕೊಂಡು ಮದುವೆ ಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿತ್ತು ಚಂದ್ರಶೇಖರ" ಎಂದು ಶೆಟ್ಟಿ ಸ್ಪಷ್ಟವಾಗಿ ಹೇಳಿದ.

"ಮನೆಯಲ್ಲಿ ನನ್ನ ಮಾತು ಯಾರು ಕೇಳುತ್ತಾರಯ್ಯಾ?"

"ಊರಿಗೆಲ್ಲಾ ಉಪದೇಶಮಾಡುವ ನಿಮ್ಮ ತಂದೆಯವರಿಗೆ ಇಷ್ಟು ತಿಳಿಯಲಿಲ್ಲವೇ?"

"ತಿಳಿಯತ್ತೆ. ಈಗ ನನಗೆ ಮದುವೆಮಾಡುವುದಕ್ಕೆ ತಂದೆಯವರಿಗೂ ಇಷ್ಟವಿಲ್ಲ. ತಾಯಿ ಹಟ ಹಿಡಿದಿದ್ದಾರೆ. ರುದ್ರಾಕ್ಷಿಪುರದ ಗುಂಡಾಭಟ್ಟರು ಪುಳ್ಳೆಯಿಟ್ಟುಬಿಟ್ಟರು. ತಾಯಿಗಂತೂ ಅವರ ಮಾತೆಂದರೆ ವೇದವಾಕ್ಯ."

"ಯಾವತ್ತಾದರೂ ಮದುವೆಮಾಡಿಕೊಳ್ಳಲೇಬೇಕು. ಒಂದು ದಿನ ಹಿಂಚೆನು ಮುಂಚೇನು" ಎಂದು ಗರುಡಾಚಾರಿ ನಾಗಮ್ಮನವರ ಪಕ್ಷ ವಹಿಸಿ ಮಾತನಾಡಿದ.

"ನಿನಗೇನಯ್ಯಾ—ನಿಮ್ಮಪ್ಪ ಕೈತುಂಬ ಸಂಪಾದಿಸುತ್ತಿದ್ದಾರೆ. ನಿಮ್ಮಣ್ಣನೂ ಸಂಪಾದಿಸುತ್ತಿದ್ದಾನೆ. ಮನೆಗೆ ನೀನು ಪ್ರೇಮಪುತ್ರ—ಹೇಗೆ ಮಾಡಿದರೂ ನಡೆದುಹೋಗುತ್ತದೆ-ನಾವು ಆಯ್ದುಕೊಂಡು ತಿನ್ನುವ ಕೋಳಿಗಳು-ನಮ್ಮ ಕಾಲುಕಟ್ಟಿದರೆ ಗತಿ ?"

"ನಾಲ್ಕು ಜನ ತಿನ್ನುವ ಮನೆಯಲ್ಲಿ ಇನ್ನೊಂದು ಪ್ರಾಣಿಗೆ ಅನ್ನವಿಲ್ಲವೇನಯ್ಯಾ ?"

"ಅನ್ನದ ವಿಷಯ ದೊಡ್ಡದಲ್ಲ ಗರುಡಾಚಾರಿ—ತಂದೆ ನನ್ನನ್ನು ಬೆಂಗಳೂರಿಗೆ ಕಳಿಸಬೇಕೆಂದಿದ್ದಾರೆ. ತುಮಕೂರಿನಲ್ಲಿ ಒಂದು ಮನೆ-ಬೆಂಗಳೂರಿನಲ್ಲಿ ಒಂದು ಮನೆ. ಖರ್ಚು ಎಷ್ಟಾಗುತ್ತದೆ ನೋಡು. ಈ ಹಳ್ಳಿ ಹುಡುಗಿ ಕಟ್ಟಿಕೊಳ್ಳುವುದು ನನಗೆ ಸ್ವಲ್ಪವೂ ಇಷ್ಟವಿಲ್ಲ—ತಂದೆಯವರಿಗೂ ಇಷ್ಟವಿಲ್ಲ."

"ಹಳ್ಳಿ ಹುಡುಗಿಯರು ಪೇಟೆಗೆ ಬಂದಮೇಲೆ, ಪೇಟೆ ಹುಡುಗಿಯರಿಗಿಂತಲೂ ಪೊಗದಸ್ತಾಗುತ್ತಾರೆ ಚಂದ್ರಶೇಖರ. ನನ್ನ ಅತ್ತಿಗೆಯನ್ನೇ ನೋಡು-ಅವಳು ನುಗ್ಗೇಹಳ್ಳಿಯಿಂದ ಬಂದಾಗ ಸರಿಯಾಗಿ ಮುಖತೊಳೆದುಕೊಳ್ಳುವುದಕ್ಕೂ ಬರುತ್ತಿರಲಿಲ್ಲ. ಈಗ ಅಪ್-ಟು-ಡೇಟ್ (up-to-date)—ನಿನಗೆ ಬೇಕಾದಹಾಗೆ ಹೆಂಡತಿಯನ್ನು ತಿದ್ದಿಕೊಂಡರೆ ಆಯಿತು."

"ಆದಿಶೇಷಯ್ಯನವರು ಸ್ವಲ್ಪ ಪ್ರಯತ್ನಿಸಿದ್ದರೆ ನಾಲ್ಕೈದು ಸಾವಿರ ರೂಪಾಯಿ ವರದಕ್ಷಿಣೆ ಕೊಡುವವರು ಯಾರಾದರೂ ಸಿಕ್ಕುತ್ತಿದ್ದರು."

"ನೀನು ಸರಿಕಣೋ ಶೆಟ್ಟಿ—ಯಾವಾಗಲೂ ಲೆಕ್ಕದಲ್ಲಿಯೇ ಇರುತ್ತೀ. ಕನ್ಯಾಸೊತ್ತಿಗೆ ಕೈನೀಡುವವನು ಮರ್ಯಾದೆಯಾಗಿ ಬಾಳುವುದು ಸಾಧ್ಯವೇನಯ್ಯಾ !"

"ಈಗ ನಾವೆಲ್ಲಾ ಬಾಳುತ್ತಿಲ್ಲವೇ ?—ವರದಕ್ಷಿಣೆಯಿಲ್ಲದೆ ನಮ್ಮಲ್ಲಿ ಮಾತೇ ಇಲ್ಲಪ್ಪ."

"ಎಲ್ಲರೂ ನಿಮ್ಮಂತೆ ಆಗಿಬಿಟ್ಟರೆ ಹೆಣ್ಣು ಹೆತ್ತವರು ಉದ್ಧಾರವಾದಂತೆಯೇ ಆಯಿತು."

"ವರದಕ್ಷಿಣೇಂತ ತೆಗೆದುಕೊಳ್ಳದಿದ್ದರಾಯಿತು—ಹೆಣ್ಣಿನವರು ವರನಿಗೆ

"ಮನೆಮಠ ಎಲ್ಲಾ ಒತ್ತೆಯಿಟ್ಟು! ನೀನು ಹೇಳುವುದು ಅಳಿಯ ಅಲ್ಲ, ಮಗಳ ಗಂಡ ಎಂದ ಹಾಗಾಗುತ್ತದೆ. ನಮ್ಮ ಸಮಾಜದ ಈ ಕೆಲವು ದುಷ್ಟ ಪದ್ಧತಿಗಳನ್ನು ಕಂಡರೆ ನನಗೆ ಮೈಯೆಲ್ಲಾ ಉರಿಯುತ್ತದೆ. ಹೆಣ್ಣು ಕಡಿಮೆ–ಗಂಡು ಹೆಚ್ಚು ಎಂದೇಕಯ್ಯಾ ಭಾವಿಸಬೇಕು. ಹೆಣ್ಣಿಗೆ ಗಂಡೆಷ್ಟು ಅವಶ್ಯಕವೋ ಅಷ್ಟೇ ಗಂಡಿಗೆ ಹೆಣ್ಣು ಅವಶ್ಯಕ. ಹೆಣ್ಣಿನ ಕಡೆಯವರು ಗಂಡಿನ ಕಡೆಯವರನ್ನು ಎಷ್ಟು ಆಶ್ರಯಿಸಬೇಕು–ಅವರಿಗೆ ಎಷ್ಟು ಬೆಣ್ಣೆ ಖರ್ಚುಮಾಡಬೇಕು! ಎರಡು ಸಂಸಾರಗಳ ಸಂಬಂಧ ಸ್ನೇಹದಲ್ಲಿ ಸಾಧನೆ ಯಾಗಬೇಕು."

"ಮದುವೆ ಖರ್ಚನ್ನೂ ಗಂಡಿನವರೇ ವಹಿಸಬೇಕೂನ್ನು."

"ಏಕಾಗಬಾರದು. ಗಂಡಿನವರು ಅನುಕೂಲಸ್ಥರಾಗಿ ಹೆಣ್ಣಿನವರು ಅನುಕೂಲಸ್ಥರಲ್ಲದಿದ್ದರೆ ಹಾಗೂ ಏಕೆ ಮಾಡಬಾರದು."

"ನಮ್ಮ ದೇಶದಲ್ಲಿ ಅವೆಲ್ಲಾ ಸಾಧ್ಯವಿಲ್ಲಮ್ಮ. ಬಹಳ ಕಾಲದಿಂದ ನಡೆದು ಬಂದಿರುವ ಸಂಪ್ರದಾಯಗಳನ್ನೂ ಯಾರು ಬದಲಾಯಿಸಲು ಸಾಧ್ಯವಿಲ್ಲ."

"ಬದಲಾಯಿಸಲು ಸಾಧ್ಯವಿದೆ. ಆದರೆ ನಾವು ಮನಸ್ಸು ಮಾಡು ವುದಿಲ್ಲ."

"ನಾವು ಎಂದರೆ ಯಾರು?"

"ನೀನು, ನಾನು, ಚಂದ್ರಶೇಖರ."

"ನೂರಾರು—ಸಾವಿರಾರು ಜನಗಳ ವಿರುದ್ಧ ನಾವು ಹೋರಾಡುವುದ ಕ್ಕಾಗುತ್ತದೆಯೇ?"

"ಜಗತ್ತಿನ ಇತಿಹಾಸರೂಪಿಸಿದವರು ಕೆಲವರೇ ಅಲ್ಲವೇ?"

"ಗರುಡಪಕ್ಷಿ ಆದರ್ಶದ ರೆಕ್ಕೆಗಳನ್ನು ಕಟ್ಟಿಕೊಂಡು ಇನ್ನೂ ಆಕಾಶ ದಲ್ಲಿಯೇ ಹಾರಾಡುತ್ತಿದೆ ನಂಜುಂಡ—ಲೋಕದ ಕಷ್ಟ ಸುಖ ಇವನಿಗಿನ್ನೂ ಅರ್ಥವಾಗಿಲ್ಲ" ಎಂದು ಚಂದ್ರಶೇಖರ ಹೇಳಿದ. ಗರುಡಾಚಾರಿ ಬಾಯಲ್ಲಿ ಮಾತು ಹೊರಡಲಿಲ್ಲ. ವಿಚಾರಪರವಶನಾಗಿದ್ದ ನಂಜುಂಡಶೆಟ್ಟಿ

"ಈ ಹೆಣ್ಣು ನಿನಗೆ ಸ್ವಲ್ಪವೂ ಒಪ್ಪಿಗೆಯಿಲ್ಲವೆಂದು ಹೇಳಿದೆಯಾ ಚಂದ್ರಶೇಖರ?"

"ಹೌದು."

"ಒಪ್ಪಿಗೆಯಿಲ್ಲದ ಹೆಣ್ಣನ್ನು ಮದುವೆಯಾಗಲು ನೀನು ಸಮ್ಮತಿಸ ಬಾರದಾಗಿತ್ತು."

"ತಾಯಿಯ ಮಾತು ಮೀರುವುದು ಹೇಗೆ? ಮನೆಯಲ್ಲಿ ಇದೇ ದೊಡ್ಡ ರಾದ್ಧಾಂತವಾಗಿಬಿಡುತ್ತದೆ. ಗುಂಡಾಭಟ್ಟರ ಮಾತನ್ನು ತೆಗೆದು ಹಾಕಲು ಅಮ್ಮ ಸಿದ್ಧವಾಗಿಲ್ಲ."

"ಭಟ್ಟರು ತುಂಬಾ ಪ್ರಭಾವಶಾಲಿಗಳೆಂದು ಕಾಣುತ್ತದೆ" ಎಂದು ಗರುಡಾಚಾರಿ ಸೂಚಿಸಿದ.

"ಅವರ ಆಳವೇ ಗೊತ್ತಾಗುವುದಿಲ್ಲ ಗರುಡ. ನಮ್ಮನ್ನು ಕಂಡರೆ ಅವರಿಗೆ ತುಂಬ ವಿಶ್ವಾಸ. ನಮಗವರು ಯಾವುದೋ ಬಾದರಾಯಣ ಸಂಬಂಧವಂತೆ. ಇಷ್ಟಾದರೂ ಅವರನ್ನು ಒಪ್ಪತ್ತು ಊಟಮಾಡಲು ಒಪ್ಪಿಸಬೇಕಾದರೆ ಸಾಕು ಸಾಕಾಗಿ ಹೋಗುತ್ತದೆ. ಕೋರ್ಟು ಕಛೇರಿ ಕೆಲಸಕ್ಕೆ ಇಲ್ಲಿಗೆ ಅವರು ಆಗಾಗ್ಗೆ ಬರುತ್ತಿರುತ್ತಾರೆ. ಹಸಿಬೆಚೀಲದಲ್ಲಿ ಅವಲಕ್ಕಿ ಹಾಕಿಕೊಂಡು ಬಂದು ಅದನ್ನೇ ತಿಂದು ತೃಪ್ತರಾಗುತ್ತಾರೆ. 'ಹೀಗೇಕೆ ಮಾಡುವಿರಿ. ನಮ್ಮ ಮನೆ ಇಲ್ಲವೇ? ಬಂದು ಊಟಮಾಡಿಕೊಂಡು ಹೋಗಬಾರದೇ?' ಎಂದು ತಂದೆಯವರೊಮ್ಮೆ ಕೇಳಿದುದಕ್ಕೆ ಭಟ್ಟರು 'ನೋಡಿ ಆದಿಶೇಷಯ್ಯ, ಪರಾನ್ನಕ್ಕೆ ಬ್ರಾಹ್ಮಣ ಕೈಯೊಡ್ಡುವ ತನಕ ಅವನನ್ನು ಯಾರುಅಲುಗಾಡಿಸಲಾರರು. ಬ್ರಾಹ್ಮಣ ಯಾವಾಗ ಆಸೆಯ ದಾಸನಾಗುತ್ತಾನೋ ಆಗವನು ಅಂತ್ಯಜನಾಗುತ್ತಾನೆ. ಬ್ರಾಹ್ಮಣನ ಕೈ ಯಾವಾಗಲೂ ಕೊಡುವ ಕೈಯಾಗಿರಬೇಕೇ ವಿನಾ ಬೇಡುವ ಕೈಯಾಗಿರಬಾರದು' ಎಂದರು."

"ನಿಜ ಚಂದ್ರಶೇಖರ—ನಮ್ಮ ತಂದೆಯವರು ಹೀಗೇ ಹೇಳುತ್ತಾರೆ. ರುದ್ರಾಕ್ಷಿಪುರದಲ್ಲಿ ಮೊನ್ನೆ ಹುಟ್ಟಿದ ವೈಮನಸ್ಯ ಬೆಳೆದು ರಕ್ತಪಾತವಾಗದಿರುವುದಕ್ಕೆ ಭಟ್ಟರ ಪ್ರಭಾವವೇ ಕಾರಣವೆಂದು ತಂದೆಯವರು ಕೊಂಡಾಡಿದರು. ಭಟ್ಟರು ಹಾಕಿದಗೆರೆ ಡಿ. ಸಿ. ಸಾಹೇಬರು ದಾಟುವುದಿಲ್ಲವಂತೆ!"

"ಇವರಿಗೂ ಸಾಹೇಬರಿಗೂ ಗೋಕುಲಾಷ್ಟಮಿಗೂ ಸಂಬಂಧ ಹೇಗೆ ಸಾಧ್ಯ?" ಎಂದು ನಂಜುಂಡಶೆಟ್ಟಿ ಕುತೂಹಲಗ್ರಸ್ತನಾದ.

"ಆ ವಿಷಯ ಯಾರಿಗೂ ಗೊತ್ತಿಲ್ಲಪ್ಪ. ಭಟ್ಟರೂ ಯಾರಲ್ಲಿಯೂ ಬಾಯಿ ಬಿಟ್ಟಿಲ್ಲ."

"ನೀನು ಬೆಂಗಳೂರಿಗೆ ಹೋಗುವುದು ಖಂಡಿತವೆನ್ನು."

"ಸದ್ಯಕ್ಕೆ ಖಂಡಿತ. ನನ್ನ ಮದುವೆ ಮುಗಿದ ಮೇಲೆ ವಿಷಯ ಇತ್ಯರ್ಥವಾಗುತ್ತದೆಂದು ಕಾಣುತ್ತದೆ."

"ಹಳೆಯ ಸ್ನೇಹಿತರನ್ನು ಮರೆಯಬೇಡ ಚಂದ್ರೂ."

"ಎಂದೆಂದಿಗೂ ನಾನು ಹೊಟ್ಟೆಗಿಲ್ಲದ ಲಾಯರು—ನೀನು ಭಾರೀ ಶ್ರೀಮಂತ. ವಣಿಕ ಚಕ್ರವರ್ತಿ. ನೀನು ಮರೆಯದಿರಬೇಕಪ್ಪ."

"ಮದುವೆ ಒಬ್ಬಟ್ಟು ಬೇಗ ಹಾಕಿಸಿಬಿಡಪ್ಪಾ."

"ಅದಕ್ಕೇನು ಕೊರತೆಯಿಲ್ಲ ಸುಮ್ಮನಿರು. ರುದ್ರಾಕ್ಷಿಪುರದಲ್ಲಿ ಬೇಕಾದಷ್ಟು ತೆಂಗಿನತೋಟಗಳಿವೆ."

ಗೆಳೆಯನ ಮಾತುಕೇಳಿ ನಂಜುಂಡಶೆಟ್ಟಿ, ಗರುಡಾಚಾರಿ ಗಹಗಹಿಸಿ ನಕ್ಕರು.

## ೧೦

ಭಟ್ಟರ ಸಮಸ್ಯೆ ಪರಿಹಾರವಾಗಿರಲಿಲ್ಲ.

ರುದ್ರಶೆಟ್ಟಿ, ಕೆಂಗೇಗೌಡರ ಬಣಗಳಿಗೆ ಮೈತ್ರಿಕಲ್ಪಿಸಬೇಕೆಂಬ ಅವರ ಪ್ರಯತ್ನ ಸಫಲವಾಗಿರಲಿಲ್ಲ.

ಹನುಮಯ್ಯನನ್ನು ಒಲಿಸಿಕೊಂಡಷ್ಟು ಸುಲಭವಾಗಿ ಕೆಂಗೇಗೌಡರನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ಭಟ್ಟರು ಬಲ್ಲರು. ಗೌಡರು 'ಕೊಟ್ಟರೆ ವರ ಇಟ್ಟರೆ ಶಾಪ' ಸ್ವಭಾವದವರಾಗಿದ್ದರು. ಆತ್ಮ ಗೌರವದ ಪ್ರಶ್ನೆ ಬಂದರೆ ಅವರು ಯಾರನ್ನೂ ಲಕ್ಷಿಸುತ್ತಿರಲಿಲ್ಲ.

ಹನುಮಯ್ಯ ತತ್ತ್ವಕ್ಕಾಗಿ ಹೊಡೆದಾಡುತ್ತಿರಲಿಲ್ಲ. ಬಸವೇಶ್ವರ ನಾಟಕ ಮಾಡಹೇಳಿ ಹುರಿದುಂಬಿಸಿ ಕೈ ಕೊಟ್ಟುದಕ್ಕಾಗಿ ರುದ್ರಶೆಟ್ಟಿಯ ಮೇಲೆ ಅವನು ಸೇಡುತೀರಿಸಿಕೊಳ್ಳಲು ಹೊರಟಿದ್ದ. ಗೌಡರು ಸೇಡಿಗಾಗಿ ಹಾತೊರೆಯುತ್ತಿರಲಿಲ್ಲ. ಶ್ರೀರಾಮನನ್ನು ಅಪಮಾನಗೊಳಿಸಲು ಪ್ರಯತ್ನಿಸಿದ್ದ ರುದ್ರಶೆಟ್ಟಿಯನ್ನು ಶಿಕ್ಷಿಸಬೇಕೆಂಬುದೇ ಅವರ ಆಕಾಂಕ್ಷೆಯಾಗಿತ್ತು.

ಗೌಡರ ಜತೆಯಲ್ಲಿ ಈ ವಿಷಯ ಮನಸ್ಸು ಬಿಚ್ಚಿ ಮಾತನಾಡಿ ಊರಿನ ಸಮಸ್ಯೆಯನ್ನು ಬಗೆಹರಿಸಲು ಭಟ್ಟರು ನಿಶ್ಚಯಿಸಿದರು.

ಗೌಡರ ಮನೆಗೆ ಭಟ್ಟರು ಬಂದಾಗ ಗೌಡಿತಿಯೇ ಸ್ವಾಗತ ಬಯಸಿದಳು. ಮೂಲೆಯಲ್ಲಿ ಸುತ್ತಿಟ್ಟಿದ್ದ ಮಂದಲಿಗೆ ಹಾಸಿ, ಭಟ್ಟರು ಕುಳಿತಮೇಲೆ, ತಾನು ನಿಂತಿದ್ದಲ್ಲಿಯೇ ನೆಲಮುಟ್ಟಿ ನಮಸ್ಕರಿಸಿ

"ಗುರುಗೋಳು ಭಾಳದೂರ ಪಾದ ಬೆಳಸಿಬುಟ್ರೇ" ಎಂದಳು.

"ಗೌಡರನ್ನು ನೋಡಬೇಕೆಂದು ಬಂದೆ ದೊಡ್ಡಮ್ಮ."

"ಓಲದ ತಾವ ಓಗವ್ರೆ. ಆಳು ಕಳಿಸ್ಲೇ?"

"ಹೂ—ಕಳಿಸು."

ದೊಡ್ಡಮ್ಮ ಆಳು ಕಳುಹಿಸಿ ಬಂದು ಸ್ವಸ್ಥಾನದಲ್ಲಿ ಗಂಭೀರವಾಗಿ ನಿಂತು

"ಗುರುಗೋಳ ಅತ್ರ ವ್ಯಾಜ್ಯ ಕಾಯಬೇಕೆಂತಿನ್ನಿ !"

"ಯಾಕೆ ತಾಯಿ."

ಪಾತಪ್ಪನ ಲಗ್ಣನಿಶ್ಚಯ ಮಾಡಿದ್ದು ನಮಗೆ ಒಂದು ಮಾತು ಏಳಬಾರದಾಗಿತ್ತಾ ?—ನಮಕಿಂತ ರುದ್ರಶೆಟ್ಟಿ ಬೇಕಾದವನಾದ್ನಾ ಬುದ್ದಿ."

"ಹಾಗಲ್ಲ ದೊಡ್ಡಮ್ಮ. ನೀನೂ ನನ್ನ ತಪ್ಪು ತಿಳಿದುಕೊಂಡರೆ ಹೇಗೆ ಹೇಳು. ಈಗ ಗೌಡರ ಕೈ ಮೇಲುಗೈ, ರುದ್ರಶೆಟ್ಟಿ ಕೈ ಕೆಳಗೈ. ಅವನಿಗೆ ಸಮಾಧಾನ ಹೇಳುವುದು ಅಗತ್ಯವಲ್ಲವೇ ?"

"ಅವನ ಮನೆ ಬಾಕಿಲಿಗೆ ನೀವ್ಯಾಕೆ ಓಗಬೇಕಾಗಿತ್ತು ಬುದ್ದಿ."

"ಅದೂ ನನ್ನ ಮನೆಯೇ ದೊಡ್ಡಮ್ಮ. ಈ ಬ್ರಾಹ್ಮಣನಿಗೆ ಒಂದು ಸ್ವಂತಮನೆ ಕೊಟ್ಟರೆ ಇವನಿಗೆ ಸ್ವಾರ್ಥ ಬೆಳೆಯಬಹುದೆಂದು ಭಗವಂತ, ನಿಮ್ಮೆಲ್ಲರ ಮನೆಯನ್ನೂ ನನಗೆ ಒಪ್ಪಿಸಿದ್ದಾನೆ."

"ಓಗಿ ಬುದ್ದಿ—ನಿಮ್ಮಮ್ಯಾಕೆ ಕ್ವಾಪ ಮಾಡಿಕೊಳ್ಳಬೇಕೂಂತ ಅಂದುಕೊಳ್ತೀನಿ— ನಿಮ್ಮ ಮಾತು ಕೇಳಿಬುಟ್ರೆ ಎಲ್ಲಾ ಮರ್ತು ಓಗ್ತೈತೆ."

"ಅದೇ ಸರಿ ತಾಯಿ. ಹೆಣ್ಣು ಸ್ನೇಹಮಯಿ—ಸಹನಶೀಲೆ. ಅವಳೇ ಲೋಕರಕ್ಷಕಳು. ಗಂಡು ಮಾಡುವ ನೂರೆಂಟು ಅಪರಾಧಗಳನ್ನು ಹೆಣ್ಣು ಹೊಟ್ಟೆಗೆ ಹಾಕಿಕೊಳ್ಳದಿದ್ದರೆ ಜಗತ್ತು ಉಳಿಯುವುದೇ ?—ಈಗ ನಿನಗೊಂದು ಕೆಲಸ ಒಪ್ಪಿಸಲು ಬಂದಿದ್ದೇನೆ ದೊಡ್ಡಮ್ಮ."

"ನಿಮ್ಮ ಮಾತಿಗೆ ನಾನು ಎದುರು ಏಳ್ತೀನಾ ಬುದ್ಧಿ."

"ನನ್ನ ಮಾತಿಗೆ ನೀನು ಪ್ರತಿ ಹೇಳುವುದಿಲ್ಲವೆಂಬುದನ್ನು ಬಲ್ಲೆ ದೊಡ್ಡಮ್ಮ. ಈಗ ನೀನು ಸಾಧಿಸಬೇಕಾಗಿರುವ ಕೆಲಸ ಅದಕ್ಕೂ ಹೆಚ್ಚಿನದು."

"ಏಳಿ ಬುದ್ಧಿ."

"ಪಾತಮ್ಮನ ಲಗ್ನ ನಿಶ್ಚಯಿಸಿರುವ ವಿಷಯ ನಿನಗೆ ಗೊತ್ತೇ ಇದೆಯಲ್ಲ. ತಂದೆಯಿಲ್ಲದ ಮಗು–ನರಸಮ್ಮ ಹೆಣ್ಣು ಹೆಂಗಸು–ಅವಳೊಬ್ಬಳೇ

ನಿಭಾಯಿಸುವ ಕೆಲಸವಲ್ಲ ಇದು. ಊರಿನವರು ನೀವೆಲ್ಲಾ ಸಹಾಯಮಾಡಿ ಈ ಕೆಲಸ ಆಗುಮಾಡಿಕೊಡಬೇಕು."

"ಪಾತವ್ವನೂ ನಮ್ಮ ಮಗಾನೆ ಬುದ್ಧಿ. ಸಂತೋಸವಾಗಿ ಅವಳ ಲಗ್ನ ವಾಗ್ದೇ ಇದ್ರೆ ನಮ್ಮ ಮರ್ವಾದೆ ಚಿಕ್ಕಾಸಿಗಿಂತ ಕಡೆಯಾಗಾಕಿಲ್ವಾ?"

"ಈ ಮದುವೆ ಸಂದರ್ಭದಲ್ಲಿ ಗೌಡರಿಗೂ ರುದ್ರಶೆಟ್ಟೀಗೂ ರಾಜಿ ಮಾಡಿಸಿ, ಊರಲ್ಲಿ ಶಾಂತಿ ನೆಲಸುವಂತೆ ಮಾಡಬೇಕೆಂದು ನನ್ನ ಇಚ್ಛೆ. ಇಬ್ಬರೂ ಹಟಕ್ಕೆ ಬಿದ್ದಿದ್ದಾರೆ—ಗೌಡರಿಗೆ ವಿವೇಕ ಹೇಳಿ, ಅವರನ್ನು ದಾರಿಗೆ ತರುವುದು ನಿನ್ನ ಭಾರ."

"ಗೌಡರು ಅನ್ಯಾಯಕ್ಕೆ ಹೋಗೋರಲ್ಲ ಬುದ್ಧಿ."

"ಅದನ್ನು ನಾನು ಚೆನ್ನಾಗಿ ಬಲ್ಲೆ ತಾಯಿ. ಗೌಡರಲ್ಲಿ ಧರ್ಮವಿಲ್ಲ ದಿದ್ದರೆ ನಾನು ಅವರ ಪಕ್ಷದಲ್ಲಿ ನಿಲ್ಲುತ್ತಿದ್ದೆನೇ? ನಮ್ಮ ಮಾನ, ಮರ್ಯಾದೆ, ಗೌರವ, ಪ್ರತಿಷ್ಠೆಗಿಂತಲೂ ಊರಿನ ಹಿತ ದೊಡ್ಡದು ಎಂದು ಭಾವಿಸ ಬೇಕಮ್ಮ. ವಿಷಬೀಜ ನೆಡುವುದು ಸುಲಭ. ಅದು ಬೇರು ಬಿಟ್ಟು, ಮರವಾಗಿ ಬೆಳೆದುಬಿಟ್ಟರೆ ಕಿತ್ತುಹಾಕುವುದು ಸಾಧ್ಯವಾಗುವುದಿಲ್ಲ. ನಮ್ಮ ಜನ್ಮ ಶಾಶ್ವತವಲ್ಲ. ಆದರೆ ನಾವು ಹಾಕುವ ಮೇಲ್ಪಂಕ್ತಿ ಶಾಶ್ವತವಾಗು ತ್ತದೆ. ಅದು ಯೋಗ್ಯವಾದುದಾದರೆ ಲೋಕಕ್ಕೆ ಕಲ್ಯಾಣವಾಗುತ್ತದೆ; ಅಯೋಗ್ಯವಾದುದಾದರೆ ಲೋಕ ನಾಶವಾಗುತ್ತದೆ.—ಮುಂದಿನ ತಲೆಮಾರಿ ನವರು ನಮಗೆ ಹಿಡಿಶಾಪ ಹಾಕಬಾರದು.—ಗೌಡರ ಹತ್ತಿರ ಈ ವಿಷಯ ನಾನೇ ಪ್ರಸ್ತಾಪಿಸುತ್ತೇನೆ. ನೀನು ನನ್ನ ಪಕ್ಷದಲ್ಲಿದ್ದರೆ ಸಾಕು."

"ಹಂಗೇ ಆಗಲಿ ನನ್ನೊಡೆಯಾ. ಗೌಡರ ಅತ್ತಿರ ನೀವು ಮಾತಾಡಿ."

ಮನೆಯೊಳಗೆ ಪ್ರವೇಶಿಸುತ್ತಲೇ ಕೆಂಗೇಗೌಡರು

"ಅಡ್ಡ ಬಿದ್ದೆ ನನ್ನೊಡೆಯಾ" ಎಂದರು.

"ನಿಮ್ಮ ಕೆಲಸ ಕೆಡಿಸಿದೆನೇ ಗೌಡರೇ."

"ಕೆಲಸ ಎಲ್ಲಿ ಹೋಗುತ್ತೆ ಬುದ್ಧಿ-ನೀವು ಬರೋದೂಂದ್ರೆ ಶಬರಿ ಮನೆಗೆ ಆ ನಮ್ಮಪ್ಪ ಬಂದಹಾಗೆ."

ಎಂದು ಹೆಂಡತಿಯ ಕಡೆ ತಿರುಗಿ

"ಬುದ್ಧೋರಿಗೆ ಒಸಿ ಹಣ್ಣು ಹಾಲು ಕೊಡಬಾರ್ದ" ಎಂದರು.

"ಬೇಡಿ ಗೌಡರೇ ಮಾಧ್ಯಾಹ್ನಿಕದ ವೇಳೆಯಾಯಿತು. ಊಟಕ್ಕೆ ಹೋಗ್ತೇನೆ" ಎಂದರು.

ಭಟ್ಟರೆದುರಿಗೆ ನೆಲದಮೇಲೆ ಕುಳಿತು ಗೌಡರು

"ಏನ್ಬುದ್ಧಿ, ಇಷ್ಟುದೂರ ಪಾದ ಬೆಳಸಿದ್ದು" ಎಂದು ಕೇಳಿದರು.

ಪಾರ್ವತಿಯ ಲಗ್ನದ ಮಾತಿನಿಂದಲೇ ಆರಂಭಿಸಿ ಭಟ್ಟರು ರಾಜೀ ಸಂಧಾನಕ್ಕೆ ಬಂದು

"ನಾನು ಆಗಾಗ್ಗೆ ತುಮಕೂರಿಗೆ ಹೋಗಿಬರಬೇಕಾಗುತ್ತದೆ. ತುಮಕೂರಿನಲ್ಲಿದ್ದರೂ ನನಗೆ ಊರಿನ ಚಿಂತೆ ಬಾಧಿಸುತ್ತಿರುತ್ತದೆ. ನೀವಿಬ್ಬರೂ ಒಮ್ಮತಿಸಮ್ಮತಿಯಿಂದಿರುವುದಾದರೆ ನನ್ನ ಮನಸ್ಸಿಗೆ ನೆಮ್ಮದಿಯಾಗುತ್ತದೆ."

ಗೌಡರು ಮೌನತಳೆದು ಕುಳಿತುಬಿಟ್ಟರು.

ಗೌಡಿತಿ ಮೆಲ್ಲನೆ

"ದೊಡ್ಡೋರು ಕೇಳೋದಿಕ್ಕೆ ಜವಾಬು ಏಳಬಾರ್ದ" ಎಂದಳು.

ಗೌಡರು ಕತ್ತೆತ್ತಿ ಹೆಂಡತಿಯ ಕಡೆನೋಡಿ

"ಏನು ಹೇಳ್ಲಿ ದೊಡ್ಡಾ ?"

"ಅರೀದಮುಕ್ಕ ನಾನು ನಿಮ್ಗೆ ಪಾಟ ಏಳಿಕೊಡಬೇಕಾ?–ಊರು ಸಂದಾಕಿರ್ಬೇಕೂತ ಬುದ್ಧ್ಯೋರು ಅಪ್ಪಣೆ ಮಾಡುತಾವ್ರೆ–ನಮುಗಾದ್ರೂ ಯಾಸಾಟೇಕೆ ಯಾಜ್ಯ–ಜಗಳ."

ಭಟ್ಟರು ಕೃತಜ್ಞತೆಯಿಂದ ಗೌಡಿತಿಯ ಕಡೆ ನೋಡಿ

"ಸರಿಯಾಗಿ ಹೇಳಿದೆ ನಮ್ಮವ್ವ" ಎಂದರು.

"ಯಾವಾಗಿದ್ದರೂ ನಾನು ನಿಮ್ಮಗ ಬುದ್ಧಿ–ನಿಮ್ಮ ಮಾತು ತೆಗೆದು ಹಾಕೊ ಧೈರ್ಯ ನನಗಿಲ್ಲ—ರುದ್ರಶೆಟ್ಟಿ ಇಲ್ಲದ ಷರತ್ತು ಹಾಕಿದರೆ ಏನು ಮಾಡೋದು."

"ಡೆಪ್ಯುಟಿ ಕಮಿಷನರ್ ಸಾಹೇಬರ ಸಮ್ಮುಖದಲ್ಲಿ ರಾಜಿಯಾಗಲಿ. ಇಬ್ಬರಿಗೂ ಅಸಮಾಧಾನವಾಗದ ರೀತಿ ಒಪ್ಪಂದ ಮಾಡೋಣ."

"ದೊಡ್ಡ ಸಾಹೇಬರು ನಮ್ಮೂರಿಗೆ ಬರ್ತಾರಾ ಸ್ವಾಮಿ."

"ಏಕೆ ಬರಬಾರದು ?"

"ಇಲ್ಲಿಯ ಸಂದರ್ಭ ನೋಡಿ ಅವರಿಗೆ ಬೇಜಾರಾಗಿರಬೇಕು."

"ತುಂಬಾ ಬೇಜಾರಾಗಿದೆ. ಜಬ್ಬಾರ್‌ಸಾಹೇಬರು ಧರ್ಮಾಭಿಮಾನಿಗಳು, ಧರ್ಮದಲ್ಲಿ ವೈಷಮ್ಯಕ್ಕೆ, ದ್ವೇಷಕ್ಕೆ ಸ್ಥಾನವಿರಬಾರದೆಂದು ನಂಬುತ್ತಾರೆ. ನಿಮಗೂ ರುದ್ರಶೆಟ್ಟರಿಗೂ ರಾಜಿಯಾದುದನ್ನು ಕಂಡರೆ ಅವರಿಗೆ ಅಪಾರ ಸಂತೋಷವಾಗುತ್ತದೆ."

"ಸಾಬೇಬ್ರು ತುರುಕರಾದರೂ ಭೋ ಒಳ್ಳೆವರು ಸ್ವಾಮಿ."

"ಸಾಹೇಬರು ಒಮ್ಮೊಮ್ಮೆ ತಮ್ಮ ಧರ್ಮಗ್ರಂಥ-ಪವಿತ್ರ ಕೊರಾನಿನ ಬಗ್ಗೆ ನನಗೆ ಹೇಳುತ್ತಾರೆ ಗೌಡರೇ. ನಾವು ದೇವರಿಗೆ ಹಲವು ಹೆಸರು ಕೊಟ್ಟಿರುವಂತೆ ಅವರೂ ಕೊಟ್ಟಿದ್ದಾರೆ. ಅದರಲ್ಲಿ ಕರುಣಾಳು, ದಯಾಮಯ, ಪ್ರೇಮಿ ಹೆಸರುಗಳು ಭಗವಂತನಿಗೆ ಬಹುಪ್ರಿಯವಂತೆ."

ಗೌಡರು ಕೃತಕ ಗಾಂಭೀರ್ಯ ತಳೆದು ಗೌಡಿತಿ ಕಡೆಗೆ ತಿರುಗಿ

"ಕೇಳಿದೆಯಾ ದೊಡ್ಡಾ-ಸಾಹೇಬರು ಮೆಲ್ಲಗೆ ನಮ್ಮ ಸ್ವಾಮಿಯೋರ್ನ ಮುಸಲ್ಮಾನ ಜಾತಿಗೆ ಸೇರಿಸಿಬಿಡುತ್ತಾರೆಂದು ಕಾಣುತ್ತದೆ " ಎಂದರು.

ಗೌಡಿತಿ ಗಹಗಹಿಸಿ ನಗುತ್ತಾ

"ಅಂಗಲ್ಲ—ಸೋಮಿಯೋರು, ಸಾಹೇಬ್ರಿಗೆ ಜನಿವಾರ ಆಕಿಸಿಬಿಡ್ತಾರೇಂತ ಕಾಣುತ್ತೆ" ಎಂದಳು.

"ಎರಡೂ ಅಗತ್ಯವಿಲ್ಲ ಗೌಡರೇ, ದೊಡ್ಡಮ್ಮ. ಸಾಹೇಬರು ಒಳ್ಳೆಯ ಮುಸಲ್ಮಾನರಾಗಿದ್ದರೆ ನಾನು ಒಳ್ಳೆಯ ಬ್ರಾಹ್ಮಣನಾಗಿದ್ದರೆ ಸಾಕು. ಮತಾಂತರವಾಗದೆಯೂ ಒಬ್ಬರಲ್ಲಿ ಒಬ್ಬರು ಗೌರವ, ಪ್ರೀತಿ, ಅಭಿಮಾನ ತಳೆದಿರಬಹುದು—ನಾನು ಊರಿನಲ್ಲಿರುವುದಿಲ್ಲ ಗೌಡರೇ. ತುಮಕೂರಿಗೆ ಹೋಗಿ ಬಟ್ಟೆ, ಒಡವೆ ವ್ಯವಸ್ಥೆಮಾಡಬೇಕಾಗಿದೆ. ಪಾತವ್ವನ ಲಗ್ನವಾಗಿ ಹೋದರೆ ನಾನು ಗೆದ್ದೆ."

"ಸಣ್ಣ ಸಂಸಾರ ಬೇಡವೆಂದು ದೊಡ್ಡ ಸಂಸಾರ ಕಟ್ಟಿಕೊಂಡು ನೀವು ಈಗಲೇ ಎಲ್ಲಿ ಗೆಲ್ಲುತ್ತೀರಿ ಸ್ವಾಮಿಗಳೇ. ಸಂತೋಷವಾಗಿ ಹೋಗಿ ಬನ್ನಿ—ಶ್ರೀ ರಾಮ ಕಾಪಾಡುತ್ತಾನೆ. ಪಾತವ್ವನ ಲಗ್ನದ ವಿಷಯ ಯಾವಯೋಚನೆಯನ್ನೂ ಇಟ್ಟುಕೊಳ್ಳಬೇಡಿ. ಈ ನಿಮ್ಮ ಮಗ ನೋಡಿಕೊಳ್ಳುತ್ತಾನೆ."

ಎದ್ದು ನಿಂತ ಭಟ್ಟರಿಗೆ ದಂಪತಿಗಳು ನಮಸ್ಕರಿಸಿದರು. 'ನಿಮ್ಮ ಮನೆ ನಂದಗೋಕುಲದ ಹಾಗೆ ಬೆಳೆಯಲಿ' ಎಂದು ಭಟ್ಟರು ಆಶೀರ್ವದಿಸಿದರು.

ಭಟ್ಟರಿಗೆ ಅಶ್ವಮೇಧಯಾಗಮಾಡಿದಷ್ಟು ಸಂತೋಷವಾಗಿತ್ತು. ಮಧ್ಯಾನ್ಹ ಗಾಯತ್ರಿ ಜಪಕ್ಕೆ ಕುಳಿತಾಗ

'ಕೊನೆಗೂ ನೀನೇ ಗೌಡಿತಿಯಾಗಿ ಬಂದು ಎಲ್ಲಾ ಸರಿಮಾಡಿದೆಯಾ ತಾಯಿ' ಎಂದುಕೊಂಡರು.

## ೧೧

ಹನುಮಕವಿಗೆ ಸ್ವಲ್ಪವೂ ಬಿಡುವಿರಲಿಲ್ಲ. ತನ್ನ ಮನೆಯ ಸಮಾರಂಭಗಳಿಗೆ ಅವನು ಅಷ್ಟು ಉತ್ಸಾಹ ವಹಿಸಿರಲಿಲ್ಲ. ಮಾತಾಡಿಸಿದವರಿಗೆ 'ಗುರುಗಳ ಮನೆಯ ಕಾರ್ಯ—ಪುರುಸೊತ್ತಿಲ್ಲ' ಎಂದು ಹೇಳುತ್ತಿದ್ದ.

ಹೊರಗಿನ ಕೆಲಸಗಳ ಜವಾಬ್ದಾರಿ ಹನುಮ ಹೊತ್ತುಕೊಂಡಂತೆ ಒಳಗಿನ ಕೆಲಸಗಳ ಜವಾಬ್ದಾರಿ ದೊಡ್ಡಮ್ಮ ಹೊತ್ತುಕೊಂಡಳು. ಅಕ್ಕಿ, ಬೇಳೆ, ರವೆ, ಜೀರಿಗೆ, ಮೆಣಸು, ಸಾಸವೆಗಳನ್ನು ಶುದ್ಧಿಮಾಡಿಕೊಡುವ ಕೆಲಸ ಅವಳದಾಗಿತ್ತು.

ಮಡಿಯಲ್ಲಿ ಮಾಡಬೇಕಾಗಿದ್ದ ಹಪ್ಪಳ, ಸಂಡಿಗೆ, ಶಾವಿಗೆ, ಅವಲಕ್ಕಿಯ ಅಣಿಗೆ ನಿಂಗಕ್ಕ, ಚೆನ್ನಮ್ಮ ನೆರವಾದರು.

ಮದುವೆ ಅದ್ಧೂರಿಯಿಂದ ನಡೆಯುವ ವಿಷಯದಲ್ಲಿ ಯಾರಿಗೂ ಅನುಮಾನವಿರಲಿಲ್ಲ.

ರುದ್ರಾಕ್ಷಿಪುರದಲ್ಲಿ ಸ್ವಯೂಥ ಕಲಹ ಹೊಗೆಯಾಡುವ ಮುನ್ನ ಗೌಡಿತಿ ದೊಡ್ಡಮ್ಮನೂ, ರುದ್ರಶೆಟ್ಟಿ ಹೆಂಡತಿ ತಿಪ್ಪಮ್ಮನೂ ಗೆಳತಿಯರಾಗಿದ್ದರು. ಅನುವು, ಆಪತ್ತಿನಲ್ಲಿ ಒಬ್ಬರಿಗೊಬ್ಬರು ನೆರವಾಗುತ್ತಿದ್ದರು. ಪರಸ್ಪರ ಕಷ್ಟಸುಖ ಹೇಳಿಕೊಳ್ಳುತ್ತಿದ್ದರು. ಬಸವಜಯಂತಿ ಪ್ರಕರಣವಾದ ಮೇಲೆ ಅವರಲ್ಲಿ ವಿರಸ ಹುಟ್ಟಿಕೊಂಡಿತು. ಗಂಡಸರಲ್ಲಿ ಹುಟ್ಟಿಕೊಂಡಿದ್ದ ವೈಷಮ್ಯ ಹೆಂಗಸರಿಗೂ ವ್ಯಾಪಿಸಿತು. ಸ್ವಲ್ಪ ಬಾಯಾಳಿಯಾದ ತಿಪ್ಪಮ್ಮ ಗೌಡಿತಿಯ ಬಗ್ಗೆ ಶಕ್ತಿಮೀರಿ ಅಪಪ್ರಚಾರ ಮಾಡಿದ್ದಳು. ಗೌಡಿತಿ ಸ್ವಯಂ ಅದಕ್ಕೆ ಪ್ರತಿಕ್ರಿಯೆ ಮಾಡಲು ಹೋಗಲಿಲ್ಲ. ಅವಳ ಪಕ್ಷದವರು ಕೈಗೊಂಡಿದ್ದ ವಿರುದ್ಧ ಅಪಪ್ರಚಾರವನ್ನು ಅವಳು ತಡೆಗಟ್ಟಲು ಯತ್ನಿಸಲಿಲ್ಲ. ಗೌಡಿತಿಯ

ಪಕ್ಷದವರ ಬಾಯಿಗೆ ಬಿದ್ದು ರುದ್ರಶೆಟ್ಟಿಯ ರಹಸ್ಯವೆಲ್ಲಾ ಬಯಲಿಗೆ ಬಿದ್ದಿತ್ತು. ಅವನು ತುಮಕೂರಿನಲ್ಲಿ 'ದ್ವಿತೀಯ ಸಂಸಾರ' ನಡೆಸುತ್ತಿರುವ ವಿಷಯವೂ ಡಂಗುರ ಸಾರಲ್ಪಟ್ಟಿತ್ತು. ಕೆಂಗೇಗೌಡನ ದರ್ಪವೆಲ್ಲಾ ಬಾಯಿದರ್ಪ. ಅವನ ಕೈಯಲ್ಲಿ ಮೂರು ಕಾಸೂ ಇಲ್ಲ. ಮೈತುಂಬ ಸಾಲ. ರಾಮದೇವರ ಹೆಸರಿನಲ್ಲಿ ಅವನು ಊರಿನಲ್ಲಿ ಭಿಕ್ಷವೆತ್ತಿ ಹೊಟ್ಟೆ ಹೊರೆಯುತ್ತಿದ್ದಾನೆಂದು ತಿಪ್ಪಮ್ಮ ಸಾರಿದ್ದಳು.

ಒಂದು ದಿನ ನರಸಮ್ಮನನ್ನು ಕಾಣಲು ಬಂದ ತಿಪ್ಪಮ್ಮ ಗರಹೊಡೆದವಳಂತೆ ಬಾಗಿಲಲ್ಲೇ ನಿಂತಳು. ನರಸಮ್ಮನೇ ಹೊರಗೆ ಎದ್ದು ಬಂದು

"ಒಳಕ್ಕೆ ಬಾ ತಿಪ್ಪಕ್ಕ" ಎಂದಳು.

"ಒಳಕ್ಕೆ ಬರಬೇಕೂಂತಲೇ ಬಂದೆ—ಆದರೆ...."

"ಈಗ ಆದದ್ದೇನು ?"

"ಆ ಕೆಟ್ಟ ಮುಕದ ಗೌಡಿತಿ ಕುಂತೈತೆ."

"ಗಂಡಸರು ವ್ಯಾಜ್ಯ ಕಾದುಕೊಂಡರೆ ನಿಮಗಾದದ್ದೇನು. ಒಳಕ್ಕೆ ಬಾರವ್ವಾ."

ಹಜಾರದಲ್ಲಿ ಅಕ್ಕಿ ಕೇರುತ್ತಿದ್ದ ದೊಡ್ಡಮ್ಮ

"ಯಾರವ್ವಾ ಅದು !" ಎಂದು ಕೇಳಿದಳು.

"ಯಾರೂ ಇಲ್ಲ ದೊಡ್ಡವ್ವ—ನಮ್ಮ ತಿಪ್ಪಕ್ಕ."

"ತಲೆಬಾಕಿಲ್ನಲ್ಲಿ ನಿಂತು ಮಾತಾಡೋದು ಮರ್‍ವಾದೇನಾ! ಒಳಕ್ಕೆ ಬಾಂತ ಏಳಿ."

ಗೌಡಿತಿಯಿಂದಲೇ ಆಹ್ವಾನ ಬಂದರೂ ತಿಪ್ಪಮ್ಮ ಸ್ವಲ್ಪ ತಡೆದು, ಯೋಚಿಸಿ, ಅನುಮಾನಿಸುತ್ತಲೇ ಒಳಕ್ಕೆ ಪ್ರವೇಶಿಸಿದಳು.

ಗೌಡಿತಿ ಮರುಮಾತನಾಡದೆ ತನ್ನ ಮುಂದೆ ಗುಡ್ಡೆ ಬಿದ್ದಿದ್ದ ನುಚ್ಚಕ್ಕಿಯನ್ನು ತಿಪ್ಪಕ್ಕನ ಕಡೆ ಸರಿಸಿ

"ಕುಂತ್ಕೊಂಡು ಒಸಿ ಕಲ್ಲು ಆರಿಸಿ ಕೊಡವ್ವಾ" ಎಂದಳು.

ಗೌಡಿತಿ ಸೌಜನ್ಯಯುತವಾಗಿಯೇ ನುಡಿದಿದ್ದರೂ ಅವಳ ಮಾತಿನಲ್ಲಿ ದರ್ಪವಿಲ್ಲದಿರಲಿಲ್ಲ. ಗೌಡಿತಿಯ ಬೆನ್ನ ಹಿಂದೆ ಜನ ಹತ್ತು ಮಾತು ಆಡಿಕೊಳ್ಳುತ್ತಿದ್ದರೂ ಆಕೆಯ ಎದುರು ನಿಂತು ಚಕಾರ ಶಬ್ದವನ್ನೆತ್ತುವ

ಧೈರ್ಯ ಯಾರಿಗೂ ಇರಲಿಲ್ಲ. ಅವಳ ಜಾಯಮಾನಕ್ಕೇ ಬಂದಿದ್ದ ಸಹಜ ಗಾಂಭೀರ್ಯ ಎಲ್ಲರನ್ನೂ ಅರೆಮೂಕರನ್ನಾಗಿಸುತ್ತಿತ್ತು.

ತಿಪ್ಪಕ್ಕ ನುಚ್ಚಕ್ಕಿಗೆ ಕೈಹಾಕದೆ ವಿಧಿಯೇ ಇರಲಿಲ್ಲ.

ದೊಡ್ಡಮ್ಮ ತುಟಿ ಪಿಟಕ್ಕೆನ್ನದೆ ಅಕ್ಕಿ ಕೇರುತ್ತಿದ್ದಳು.

ತಿಪ್ಪಕ್ಕ ಕತ್ತು ಬಗ್ಗಿಸಿಕೊಂಡು ಅಕ್ಕಿ ಆಯುತ್ತಿದ್ದಳು.

ನರಸಮ್ಮ ಒಳಗಿನಿಂದ ಎರಡು ದೊನ್ನೆಗಳಲ್ಲಿ ಹೆಸರುಬೇಳೆ ಕೋಸುಂಬರಿ, ಎರಡು ಲೋಟಾಗಳಲ್ಲಿ ಬೇಲದ ಹಣ್ಣಿನ ಪಾನಕ ತಂದು ಅವರ ಮುಂದಿಟ್ಟು

"ತಗೋಳ್ರವ್ವಾ—ಬಿಸಲು ರಣರಣ ಎಂತಾ ಸುಡುತ್ತಿದೆ"

ಎಂದು ಉಪಚರಿಸಿದಳು.

ದೊಡ್ಡಮ್ಮ ದೊನ್ನೆಯನ್ನು ಕೈಗೆತ್ತಿಕೊಂಡು ತಿಪ್ಪಕ್ಕನ ಕಡೆ ತಿರುಗಿ ನೋಡಿದಳು. ತಿಪ್ಪಕ್ಕನ ಮನದಲ್ಲಿ ಮೂಡಿದ್ದ ಅನುಮಾನವನ್ನು ಕ್ಷಣಾರ್ಧ ದಲ್ಲಿ ಗ್ರಹಿಸಿ

"ತೊಗೋಳವ್ವಾ—ಅವ್ವಾವರ ಮನೆಯಲ್ಲಿ ತಿಂದರೆ ಜಾತಿಯೇನೂ ಕೆಡಾಕಿಲ್ಲ" ಎಂದಳು.

ತಿಪ್ಪಕ್ಕ ದೊನ್ನೆಗೆ ಕೈಹಾಕಿ ಅದನ್ನು ಬರಿದುಮಾಡಿ ಪಾನಕ ಕುಡಿದಳು. ನರಸಮ್ಮ ಇಬ್ಬರನ್ನೂ ನೋಡುತ್ತ

"ಸವತೀರ ಹಾಗೆ ಕಾದಾಡ್ತೀರಲ್ಲೇ ನೀವಿಬ್ಬರು"

ಎಂದು ಗಹಗಹಿಸಿ ನಕ್ಕಳು.

ದೊಡ್ಡಮ್ಮನಿಗೂ ತಡೆಯುಲಾರದಷ್ಟು ನಗು ಬಂದಿತು. ಹೆಸರುಬೇಳೆ ನೆತ್ತಿಗೇರಿ ಅವಳಕಣ್ಣು ಮೂಗಿನಲ್ಲಿ ನೀರುಬರಿಸಿತು. ನರಸಮ್ಮ ನಸುನಗುತ್ತಾ

"ಗೌಡರು ನೆನಸಿಕೊಳ್ಳುತ್ತಿದ್ದಾರೆ ದೊಡ್ಡಮ್ಮ" ಎಂದಳು.

"ಓಗ್ರವ್ವಾ! ನಿಮುಗದೇ ಸುಮಾನ"

ಎಂದನ್ನುತ್ತಾ ನೆತ್ತಿ ತಟ್ಟಿಕೊಂಡು ಸಮಾಧಾನ ತಂದುಕೊಂಡಳು.

ನರಸಮ್ಮ ತನ್ನ ಚಿಂತನೆಯನ್ನೇ ಮುಂದುವರಿಸುತ್ತಾ

"ನೀವಿಬ್ಬರೂ ಮುಖ ಪೂರ್ವ ಪಶ್ಚಿಮಕ್ಕೆ ತಿರುಗಿಸಿಕೊಂಡಿರುವುದು ಸರಿಯಲ್ಲವ್ವ. ಗೌಡರಿಗೂ, ಶೆಟ್ಟರಿಗೂ ವಿರಸ ಹುಟ್ಟಿದಮೇಲೆ ಊರಿನ ಕಳೆಯೇ ಕೆಟ್ಟುಹೋಯಿತು. ಗಂಡಸರು ತಪ್ಪಿ ನಡೆದರೆ ಅವರಿಗೆ ವಿವೇಕ ಹೇಳಬೇಕಾದ್ದು ಹೆಂಗಸರು—ನಮ್ಮ ಕರ್ತವ್ಯ. ನಾವೂ ಅವರ ಹಾಗೆ ಕಾದಾಡುತ್ತ ಕುಳಿತರೆ ಲೋಕ ಉಳಿಯುತ್ತದೆಯೇ ?"

"ಇದರಲ್ಲಿ ನನ್ದೇನು ತಪ್ಪವ್ವಾ !"

ಎಂದು ತಿಪ್ಪಕ್ಕ ಕೇಳಿದಳು.

"ತಪ್ಪು ನಿನ್ದೂ ಅಲ್ಲ—ನನ್ದೂ ಅಲ್ಲ—ಸಂದರ್ಭ ಹಾಗೆ ಬಂತು. ಅವ್ವಾವರು ನ್ಯಾಯವಾಗಿ ಮಾತಾಡ್ತವ್ರೆ ತಿಪ್ಪಕ್ಕ—ಅಟ್ಟೆಯಾಕೆ ಒಂದು ಪಾಯಸ ಮಾಡಿದ್ರೆ ನಿನ್ನ ನೆನಪು ಬತ್ತಾ ಇತ್ತು. ನಿಜ ಏಳಿದ್ರು ನಂಬ್ತಿ—ಸುಳ್ಳು ಏಳಿದ್ರು ನಂಬ್ತಿ-ಇಂಗಿರೋದು ನಂಗೆ ಸಂತೋಸವಾಗಿಲ್ಲ ತಿಪ್ಪಕ್ಕ-ನಾನೆಂಗೆ ಕೊರಗ್ತೀನೋ ಅಂಗೇ ಗೌಡರೂ ಕೊರಗ್ತವ್ರೆ—ಒಂದಿವ್ಸ ನಿಮ್ಮ ಮನ್ಯಾಕೆ ಯಾವ್ದೋ ಅಬ್ಬವಂತೆ! ಶೆಟ್ಟರು ಊರಿಗೆ ಹೋಗಿದ್ದವ್ರು ಅಬ್ಬಕ್ಕೆ ಬತ್ತೀನೀಂತ ಏಳಿದ್ರೂ ಬಂದಿರಲಿಲ್ಲವಂತೆ! ನಿಮ್ಮ ಮನೆ ತಾವ ಗೌಡರು ಶೆಟ್ಟರನ್ನ ಉಡಿಕ್ಕೊಂಡು ಬಂದ್ರಂತೆ. ನೀನು ಕಣ್ಣೀರು ಬುಟ್ಟದ್ದನ್ನ ನೋಡಿ 'ಯಾಕವ್ವಾ' ಎಂತಾ ಕೇಳಿದ್ರಂತೆ!-ಯುಜಮಾನ್ರು ಬರ್ನಿಲ್ಲ-ಮನೇಲಿ ಅಬ್ಬ—ಮಕ್ಳೆಲ್ಲಾ ಅಸುಕೊಂಡವ್ರೆ ಎಂತಾ ನೀನು ಏಳಿದೆಯಂತೆ! ಗೌಡರು ಒಳಿಕೆ ಬಂದು 'ಹುಚ್ಚವ್ವಾ—ಅಬ್ಬದ ದಿವಸ ಯುಜಮಾನಿದ್ರೆ ಚೆನ್ನ—ಶೆಟ್ರು ಯಾವ್ದೋಕೆಲಸದ ಮ್ಯಾಕೆ ಓಗವ್ರೆ; ಕೆಲಸ ಮುಗಿದಿಲ್ಲ; ಅವರು ಬರ್ನಿಕ್ಕಾಗ್ನಿಲ್ಲ.—ಅದಕ್ಕೆ ಅತ್ಗೋತ ಮಕ್ಕಳ್ನ ಉಪವಾಸ ಕೆಡವಿದರೆ ಶಿವಾ ಮೆಚ್ತಾನಾ—ನಡೀ, ಉಣ್ಣಾಕಿಕ್ಕೇಳು—ನಾನು ನಿಮ್ಮಣ್ಣ—ಮಕ್ಕಳ ಜತೆ ಉಣ್ತೇನಿ ಅಂತಾ ಏಳಿದರಂತೆ!"

"ಔದಕ್ಕಾ—ಔದು."

"ನೀನು ಭೋ ಸಂತೋಷಪಟ್ಟೆಯಂತೆ!"

"ಔದಕ್ಕಾ—ಔದು. ತವರುಮನೇಲಿ ನನಗೆ ಅಣ್ಣ ಇರಲಿಲ್ಲ—ಗಂಡನ್ನ ಮನೇಲಿ ಅಣ್ಣ ಸಿಕ್ಕಿದಾಂತ ಸಂತೋಸಪಟ್ಟೆ."

"ಅದನ್ನ ನೆನಸಿಕೊಂಡು ಗೌಡರು ಕಣ್ಣೀರಲ್ಲಿ ಕೈತೊಳೀತವ್ರೆ."

"ನಾನೊಬ್ಬಳು ಇವೇಕವಿಲ್ದ ಮೂಳಿಯಕ್ಕ—ನಿನ್ನ, ಗೌಡರ್ನ ದುಕ್ಕ ಪಡಿಸಿದೆ."

ಎಂದು ಬಿಕ್ಕಿಬಿಕ್ಕಿ ಅಳುವುದಕ್ಕುಪಕ್ರಮಿಸಿದಳು. ದೊಡ್ಡಮ್ಮ ಮೆಲ್ಲನೆ ಸರಿದು ತಿಪ್ಪಕ್ಕನ ಬಳಿ ಬಂದು ಕುಳಿತು, ಅವಳನ್ನು ಸಮಾಧಾನಪಡಿಸುತ್ತಾ

"ಅವ್ವಾವರ ಮನೆ ಬೋನದಲ್ಲಿ ಅಮೃತ ಐತೆ ತಿಪ್ಪಕ್ಕ-" ಎಂದಳು.

"ನನ್ನ ಬೋನದಲ್ಲಿ ಅಲ್ಲ ತಾಯಿ-ನಿನ್ನ ಹೃದಯದಲ್ಲಿ"

ಎಂದು ನರಸಮ್ಮ ಮರುನುಡಿದು

"ಅವ್ವಾ-ನಾನೊಬ್ಬಳು ದಿಕ್ಕಿಲ್ಲದ ಪರದೇಶಿ. ನನ್ನ ಸ್ವಾಮಿ ಎಂದು ಪರಂಧಾಮ ಸೇರಿದರೋ ಅವತ್ತೇ ನನ್ನ ಸಮಸ್ತ ಭಾಗ್ಯ, ಸೌಖ್ಯ, ಮಂಗಳ ಮುಗಿದುಹೋಯಿತು. ಪಾತೂ ಲಗ್ನ ಮಾಡಿ, ಅವಳನ್ನು ಸರಿಯಾದ ಕಡೆ ಸೇರಿಸಿಬಿಟ್ಟರೆ ನನ್ನ ಕರ್ತವ್ಯ ತೀರಿತು-ನನ್ನ ಕುಲದೇವರೇ ಭಟ್ಟರ ಸ್ವರೂಪದಲ್ಲಿ ಬಂದು ನನ್ನ ಕಾಪಾಡುತ್ತಿದೆ. ಗಂಡು ಗೊತ್ತುಮಾಡುವುದಕ್ಕೆ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅವರು ಆರಂಭಿಸಿರೋ ಕೆಲಸ ನೀವು ನಗುನಗುತ್ತಾ ಮುಗಿಸಿಕೊಡಬೇಕು. ನನಗೆ ನೀವೇ ಅಕ್ಕತಂಗಿಯರು...."

ದೊಡ್ಡಮ್ಮ, ತಿಪ್ಪಕ್ಕ ಇಬ್ಬರೂ ಏಕಕಂಠದಿಂದ

"ಆಗನ್ನ ಬೇಡ್ರವ್ವಾ—ನಾವು ನಿಮ್ಮ ಮಕ್ಕಳು." ಎಂದರು.

## ೧೨

ಪಾತೂ ಮದುವೆಯ ವ್ಯಾಜ್ಯದಲ್ಲಿ ರುದ್ರಾಕ್ಷಿಪುರ ಶುಭ್ರವಾಗಿ ಬೆಳಗ ತೊಡಗಿತು. ಒಂದೆಡೆ ಗೌಡರು— ಒಂದೆಡೆ ರುದ್ರಶೆಟ್ಟಿ ಎಲ್ಲರಿಗೂ 'ತಾಕೀತು' ಮಾಡಿದ್ದರು. ಊರಿನ ರಸ್ತೆಗಳಲ್ಲಿನ ಕೊರಕಲುಗಳು ನೇರ ವಾದುದಲ್ಲದೆ, ತುಮಕೂರು—ರುದ್ರಾಕ್ಷಿಪುರದ ರಸ್ತೆಯೂ ಪಾಕಾಯಿತು.

ಮುಖಾಮುಖಿಯಾಗಿ ಸಂಧಿಸುವ ಸಂದರ್ಭಗಳನ್ನು ಗೌಡರು, ರುದ್ರಶೆಟ್ಟಿ ಇಬ್ಬರೂ ತಪ್ಪಿಸುತ್ತಿದ್ದರು. ಚಪ್ಪರಕ್ಕೆ ರುದ್ರಶೆಟ್ಟಿ ಸಂಗ್ರಹಿಸಿದ್ದ ಅಡಿಕೆ ಮರಗಳು ಸಾಲದೆನಿಸಿದರೆ ಗೌಡರು ಮತ್ತಷ್ಟು ಅಡಿಕೆ ಮರಗಳನ್ನು ಕಡಿಸಿ ತಂದು ಪೇರಿಸುತ್ತಿದ್ದರು. ಗೌಡರು ಮಾಡಿಸಿದ್ದ ಕೆಲಸದಲ್ಲಿ ಓರೆ ಕೋರೆ ಇದ್ದರೆ ಶೆಟ್ಟಿ ಮಾತಾಡದೆ ತಿದ್ದುತ್ತಿದ್ದ. ಒಬ್ಬರ ಕೆಲಸದಲ್ಲಿ ಒಬ್ಬರು ಆಗಾಗ್ಗೆ ನಿರ್ವಾಹವಿಲ್ಲದೆ ಕೈಹಾಕುತ್ತಿದ್ದರೂ, ಪರಸ್ಪರ ಘರ್ಷಣೆ ಯೊದಗದಂತೆ ಎಚ್ಚರವಾಗಿದ್ದರು.

ಮದುವೆಯ ಸಂಭ್ರಮ ನೋಡಿ ಭಟ್ಟರು ಆನಂದಭರಿತರಾಗಿ 'ದಾಸಪ್ಪ ಪುಣ್ಯವಂತ–ಭಗವಂತನೇ ನಿಂತು ಅವನ ಮಗಳ ಮದುವೆ ಮಾಡಿ ಸುತ್ತಿದ್ದಾನೆ' ಎಂದರು.

ಬೀಗರು ಇಳಿದುಕೊಳ್ಳುವುದಕ್ಕೆ ಪ್ರಾಥಮಿಕ ಶಾಲೆ ಅಣಿಮಾಡ ಲ್ಪಟ್ಟಿತು. ತುಮಕೂರಿನಿಂದ ಪೆಟ್ರೋಮ್ಯಾಕ್ಸ್ ದೀಪಗಳನ್ನು ತರಿಸಿ, ಶಾಲೆ ಯನ್ನು ಬೆಳಗಿಸಲು ರುದ್ರಶೆಟ್ಟಿ ಒಪ್ಪಿಕೊಂಡ. ಬೀಗರ ಮನೆಗೆ ಬೇಕಾಗುವ ಲವಾಜಮೆ ಗೌಡರ ಮನೆಯಿಂದ ಹೋಯಿತು.

ಮದುವೆಯ ದಿನ ಸಮೀಪಿಸುತ್ತ ಬಂತು. ಒಂದು ಸಂಜೆ ಭಟ್ಟರು ಹನುಮನೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತ ಶಾಲೆಯ

ಮುಂದಣ ಕಲ್ಲುಬೆಂಚಿನ ಮೇಲೆ ಕುಳಿತಿದ್ದರು. ಅವರ ಮನಸ್ಸು ಪ್ರಫುಲ್ಲ ವಾಗಿತ್ತು. ಪ್ರಕೃತಿ ಆ ಸಂತೋಷದಲ್ಲಿ ಭಾಗಿಯಾಗಿ ನಸುನಗುತ್ತಿದ್ದಳು.

ಗೋಮಾಳದಿಂದ ಹಿಂದಿರುಗುತ್ತಿದ್ದ ಗೋವುಗಳನ್ನು ನೋಡುತ್ತ, ಗೋಪಾಲರನ್ನು ಒಂದೊಂದೇ ಹಿತವಚನದಿಂದ ಮಾತನಾಡಿಸುತ್ತ ಭಟ್ಟರು ಕುಳಿತಿದ್ದಂತೆ ರಂಗ ಬಂದು ಎದುರು ನಿಂತ.

"ಯಾಕೋ ರಂಗಾ, ನಿನ್ನ ಹಸು ಸ್ವಲ್ಪ ಕುಂಟುತ್ತೆ ?" ಎಂದು ಭಟ್ಟರು ಕೇಳಿದರು.

"ವಾದವಾರ ಮಾಲಿಂಗಪ್ಪನ ಕಾಳಿಜತೆ ಗುದ್ದಾಡಿ ಕೊರಕಲಿಗೆ ಬಿದ್ದು ಬುಡ್ತು ಬುದ್ಧಿ—ಕಾಲಿಗೆ ಒಸಿ ಗಾಯ ಆಯ್ತು—ಹಸಿರು ಕಟ್ಟೆನ್ನಿ."

ಭಟ್ಟರು ನಗುತ್ತಾ

"ಗೌಡರು, ಶೆಟ್ಟರ ವ್ಯಾಜ್ಯ ದನಗಳವರೆಗೂ ಹಬ್ಬಿತು" ಎಂದರು.

ರಂಗ ಸ್ವಲ್ಪ ಧೈರ್ಯ ತಂದುಕೊಂಡು

"ಪಾರೋತವ್ವ ಲಗ್ನದಾಗ ನಮಗೆ ಪರಮಾನ್ನ ಆಕಸಲ್ವಾ ಬುದ್ಧಿ" ಎಂದ.

ಭಟ್ಟರು ಕ್ಷಣಕಾಲ ಆಲೋಚಿಸಿ

"ಹಾಕಿಸುತ್ತೇನೆ ಹೋಗು—ನೀನೂ, ನಿನ್ನ ಹೆಂಡತಿ ಮಕ್ಕಳು ತಿನ್ನೋಅಷ್ಟು ಹಾಕಿಸುತ್ತೇನೆ" ಎಂದರು.

ರಂಗ ಸಂತುಷ್ಟನಾಗಿ ಹೋದಮೇಲೆ ಹನುಮ ಭಟ್ಟರ ಕಡೆ ತಿರುಗಿ

"ದ್ರೌಪತಿ ಅಕ್ಷಯಪಾತ್ರೆ ರುದ್ರಾಕ್ಷಿಪುರದಲ್ಲಿಲ್ಲ ಗುರುಗಳೇ" ಎಂದ.

"ಯಾಕಿಲ್ಲ ಹನುಮಣ್ಣ—ಅಕ್ಷಯಪಾತ್ರೆ ಕಥೆ ದ್ವಾಪರಕ್ಕೇ ಮುಗಿದು ಹೋಗಿದ್ದರೆ ಅದು ಅಕ್ಷಯಪಾತ್ರೆಯಲ್ಲ—ಕ್ಷಯಪಾತ್ರೆ."

"ಇದು ಕಲಿಗಾಲ ಗುರುಗಳೇ."

"ಹೌದು—ಅದಕ್ಕೇ ಈಗ ಭಗವಂತ ಅಕ್ಷಯಪಾತ್ರೆಯನ್ನು ಯಾರ ಕೈಗೂ ಕೊಟ್ಟಿಲ್ಲ—ಎಲ್ಲರ ಮನದಲ್ಲೂ ಇಟ್ಟಿದ್ದಾನೆ."

"ನಿಮ್ಮ ಧೈರ್ಯವೇ ಧೈರ್ಯ!"

"ರಂಗನಿಗೆ ನಾನು ಕೊಟ್ಟ ಮಾತು ಉಳಿಸೋದು ನಿಮ್ಮ ಭಾರ. ನನಗೇನು ಚಿಂತೆ! ನನ್ನ ಕೌದಿ ತೆಗೆದು ನಿಮ್ಮ ಹೆಗಲಿನ ಮೇಲೆ ಹಾಕಿ

ಬಿಡುತ್ತೀನೆ—ನೋಡು ಹನುಮಣ್ಣ, ನಾನೂ ಯೋಚಿಸುತ್ತಾ ಇದ್ದುದನ್ನೇ ರಂಗ ಹೇಳಿದ. ಮದುವೆ ಸಂದರ್ಭದಲ್ಲಿ ಊರಿನವರಿಗೆಲ್ಲಾ ಔತಣವಾಗ ಬೇಕಯ್ಯ. ಆವತ್ತು ಯಾರ ಮನೆಯಲ್ಲಿಯೂ ಒಲೆ ಹೊತ್ತಿಸಕೂಡದು. ನೂರಾರು ಜನ ಒಟ್ಟಿಗೆ ಕುಳಿತು ಊಟಮಾಡಿದ್ದು ನೋಡಿದರೆ ನನಗೆ ಬ್ರಹ್ಮಾನಂದವಾಗುತ್ತದೆ. ಈಚೆಗೆ ಊರಿನಲ್ಲಿ ಕಲಹ ಹುಟ್ಟಿಕೊಂಡ ಮೇಲೆ ಇಂಥ ಸಂತರ್ಪಣೆಯೇ ನಡೆದಿಲ್ಲ. ಭೂತತೃಪ್ತಿಯಾದರೆ ಭಗವಂತನೂ ಮೆಚ್ಚಿಕೊಳ್ಳುತ್ತಾನೆ–ವಧೂವರರಿಗೂ ಮಂಗಳವಾಗುತ್ತದೆ."

"ನಿಮ್ಮ ಬಾಯಲ್ಲಿ ಬಂದದ್ದು ಕುರ್ತೇಟಿನಂತೆ ಆಗಿಹೋಗುತ್ತೆ ಗುರುಗಳೆ."

"ಅಡಿಗೆ ಚೆನ್ನಾಗಿ ಮಾಡಿಸಬೇಕಯ್ಯಾ—ಲಾಡು ಸಂತರ್ಪಣೆಯಾದರೆ ಇನ್ನೂ ಚೆನ್ನ. ನಮ್ಮೂರಿನ ಹರಿಜನರು, ಮುಸಲ್ಮಾನರಿಗೂ ಊಟ ಹಾಕಬೇಕು. ಅದನ್ನು ನೋಡಿದರೆ ಡೆಪ್ಯುಟಿ ಕಮೀಷನರ್ ಸಾಹೇಬರೂ ಸಂತೋಷಪಡುತ್ತಾರೆ."

"ಸಾಹೇಬರನ್ನೂ ಇಲ್ಲೇ ಊಟಕ್ಕೆ ನಿಲ್ಲಿಸಿಕೊಳ್ಳಬೇಕು."

"ಆ ಜವಾಬ್ದಾರಿ ನನಗಿರಲಿ."

"ಮಿಕ್ಕದ್ದು ನನಗೆ ಬಿಡಿ ಗುರುಗಳೇ."

"ನೀನು ಪ್ರಚಂಡ ಕಣೋ ಹನುಮ."

"ರಾಮಭಂಟ ಎಂದ ಮೇಲೆ ಹ್ಯಾಪಮೋರೆ ಹಾಕಿಕೊಂಡಿದ್ದರಾಗುತ್ತ ದೆಯೇ ಗುರುಗಳೇ?"

"ಊರೇನೋ ಒಂದು ಹದ್ದುಬಸ್ತಿಗೆ ಬರ್‍ತಾಯಿದೆ—ನೀನು ಮತ್ತೆ ಕಿತಾಪತಿ ಹಚ್ಚಬೇಡ ಮಾರಾಯ,"

"ಅಪಖ್ಯಾತಿ ನನ್ನ ಮೇಲೇ ಹೊರಿಸುತ್ತೀರಲ್ಲಾ ಗುರುಗಳೇ— ಇದ್ಯಾವ ನ್ಯಾಯ."

"ನಿನ್ನ ಆಕ್ಷೇಪಿಸಿದರೆ ಕೇಳುತ್ತೀ–ನೀನು ನನ್ನ ಶಿಷ್ಯ. ನಿನ್ನ ಅನ್ನುವ ಹಾಗೆ ಗೌಡರನ್ನ, ರುದ್ರಶೆಟ್ಟೀನ ಅನ್ನೋದಿಕ್ಕೆ ಆಗುತ್ತದೆಯೇ?"

"ಶಿಷ್ಯ–ಶಿಷ್ಯಾಂತೀರಿ, ಶಿಷ್ಯನನ್ನು ಅನುಗ್ರಹಿಸುವುದಿಲ್ಲವಲ್ಲಾ ಗುರುಗಳೇ"

"ನಿನಗೆ ಅನುಗ್ರಹವಾಗಿದೆ-ಆದರೆ ಕೋಪ, ರೋಷ, ಹಟ ಮೊದಲಾದ ಶತ್ರುಗಳು ಅನುಗ್ರಹ ಫಲಿಸದಂತೆ ಮಾಡಿವೆ. ತಾಳ್ಮೆ ತಂದುಕೊಳ್ಳಬೇಕಪ್ಪಾ."

"ಬಹಳ ದಿವಸಗಳಿಂದ ಒಂದು ಸಮಸ್ಯೆ ನನ್ನ ಕಾಡುತ್ತಿದೆ ಗುರುಗಳೇ."

"ಹೇಳು—ಪರಿಹಾರ ಹುಡುಕೋಣ."

"ನೀವು ಒಬ್ಬರಮನೆ ಬಾಗಿಲಿಗೆ ಹೋಗುವವರಲ್ಲ-ಕೈನೀಡಿ ಒಬ್ಬರನ್ನು ಬೇಡುವವರಲ್ಲ. ಶ್ರೀಮಂತರು, ಅಧಿಕಾರಿಗಳು ಇರುವ ದಿಕ್ಕಿಗೆ ನೀವು ದಿಂಬು ಹಾಕಿಕೊಂಡು ಮಲಗುವುದೂ ಇಲ್ಲ—ನಿಮಗೂ ಡೆಪ್ಯುಟಿ ಕಮಿಷನರ್ ಸಾಹೇಬರಿಗೂ ಇಷ್ಟು ವಿಶ್ವಾಸ ಹೇಗೆ ಬೆಳೆಯಿತು ಎನ್ನೋದು ನನಗೆ-ನನಗೇಕೆ ಊರಿಗೇ-ಸೋಜಿಗವಾಗಿದೆ."

ಭಟ್ಟರ ಮುಖ ಗಂಭೀರವಾಯಿತು. ಕೆಲ ನಿಮಿಷಗಳು ಅವರು ಮೌನವಾಗಿ ಕುಳಿತು

"ಆ ವಿಷಯ ನೀನು ತಿಳಿಯಲೇಬೇಕೇ ಹನುಮಣ್ಣ."

"ತಾವು ಸಂತೋಷವಾಗಿ ಅಪ್ಪಣೆಕೊಡಿಸಿದರೆ........"

"ಪ್ರತಿಯೊಂದು ಮಾತು, ಘಟನೆಗೂ ದೈವನಿಮಿತ್ತವಿರುತ್ತದೆ. ಜಗನ್ನಾಟಕ ಸೂತ್ರಧಾರಿ ನಮ್ಮನ್ನು ಬೊಂಬೆಗಳಂತೆ ಕುಣಿಸುತ್ತಿರುತ್ತಾನೆ. ಹಿನ್ನೆಲೆಯಲ್ಲಿ ಭಾಗವತರು ನಿಂತುಕೊಂಡು ರಾಮದೇವರ ಮಾತು, ರಾವಣನ ಮಾತು, ಸೀತಾಮ್ನೋರ ಮಾತು, ಶೂರ್ಪನಖಿ ಮಾತು ಆಡುತ್ತಾರೆ. ನಾವು ಪಾತ್ರಗಳೇ ಆ ಮಾತುಗಳನ್ನಾಡುತ್ತವೆ ಎಂದು ಭ್ರಾಂತರಾಗುತ್ತೇವೆ. ಈಗ ನಾನು ಹೇಳುವುದನ್ನು ಹೇಳಿಸುವವನೂ ಅವನೇ, ಹೇಳುವವನೂ ಅವನೇ. ಆದರೆ ಈ ವಿಷಯ ಗೋಪ್ಯವಾಗಿರಬೇಕು—ಯಾರೊಂದಿಗೂ ನೀನು ಬಾಯಿ ಬಿಡುವುದಿಲ್ಲವೆಂದರೆ ನಾನು ಹೇಳಲು ಸಿದ್ಧನಾಗಿದ್ದೇನೆ."

"ಶ್ರೀರಾಮದೇವರ ಪಾದದಾಣೆಗೂ ನಾನು ಯಾರಲ್ಲಿಯೂ ಹೇಳುವುದಿಲ್ಲ ಗುರುಗಳೇ."

"ಕರ್ಪೂರದ ಹಳ್ಳಿ ಮಲ್ಲೇಗೌಡನನ್ನು ಬಲ್ಲೆಯಷ್ಟೆ!"

"ಬಲ್ಲೆ."

"ಅವನು ಒಮ್ಮೆ ಒಂದು ಪೇಚಿಗೆ ಸಿಕ್ಕಿಕೊಂಡ. ಮಲ್ಲೇಗೌಡನ

ತಂದೆಗೂ ನನ್ನ ತೀರ್ಥರೂಪರವರಿಗೂ ಸ್ನೇಹವಿತ್ತು. ಮಲ್ಲಯ್ಯ ಒಂದು ದಿನ ನನ್ನ ಹತ್ತಿರ ಬಂದು ಗೊಳೋ ಎಂದು ಅಳುವುದಕ್ಕೆ ಮೊದಲು ಮಾಡಿದ. ಕಾರಣವಿಷ್ಟೆ—ಕರ್ಪೂರದ ಹಳ್ಳಿ ಹರಿಜನರಿಗೆ ಒಂದು ಭಾವಿ ತೋಡಿಸಿಕೊಡಲು ಅವನು ಐದು ಸಾವಿರ ರೂಪಾಯಿಗಳಿಗೆ ಒಂದು ಕಂಟ್ರ್ಯಾಕ್ಟ ಹಿಡಿದಿದ್ದ. ಓವರ್‌ಸೀರರಿಗೆ ಮಾಮೂಲು ಸಲ್ಲಿಸಲಿಲ್ಲಾಂತ ಕೋಪಬಂತು. ಅವರು ಅಮಲ್ದಾರರನ್ನು ಒಳಹಾಕಿಕೊಂಡು ಮಲ್ಲಯ್ಯನ ಮೇಲೆ ಪಿತೂರಿ ಮಾಡಿ ಡಿ. ಸಿ. ಸಾಹೇಬರಿಗೆ ಅರ್ಜಿಕೊಟ್ಟರು. ಮಲ್ಲಯ್ಯ ನಿಗೆ ಹಣ ಕೊಡಲು ಸಾಹೇಬರು ನಿರಾಕರಿಸಿದರು. ಮಲ್ಲಯ್ಯನ ಮನೆ ಹಾಳಾಗುವ ಪರಿಸ್ಥಿತಿಯೊದಗಿತು. ನಾನು ಡಿ. ಸಿ. ಸಾಹೇಬರ ಹತ್ತಿರ ಹೋಗಿ ನಿಜಸ್ಥಿತಿ ತಿಳಿಸಿ ತನ್ನನ್ನು ಕಾಪಾಡಬೇಕೂಂತ ಮಲ್ಲಯ್ಯ ಪ್ರಾರ್ಥಿಸಿದ. ನನಗೆ ಬಹಳ ಕಷ್ಟಕ್ಕಿಟ್ಟುಕೊಂಡಿತು. ಮಲ್ಲಯ್ಯ ಸಂಭಾವಿತ, ಧರ್ಮಿಷ್ಠ ಎನ್ನುವುದು ನನಗೆ ಚೆನ್ನಾಗಿ ಗೊತ್ತಿತ್ತು. ಅವನಿಗೆ ಸಹಾಯ ಮಾಡಬೇಕೆಂತಲೂ ಮನಸ್ಸಾಯಿತು. ಆದರೆ....? ಹೇಗೆ?....ಡಿ. ಸಿ. ಸಾಹೇಬರು ತುಂಬ ಖಂಡಿತವಾದಿಗಳು ಎಂದು ಕೇಳಿದ್ದೆ. ನನಗೆ ಅವರ ವ್ಯಕ್ತಿಪರಿಚಯವೂ ಇರಲಿಲ್ಲ. ಮಲ್ಲಯ್ಯನ ವಿಷಯ ನಾನು ಹೇಳುವು ದನ್ನು ಅವರು ನಂಬಿದರಂತೂ ಸರಿ—ನಂಬದಿದ್ದರೆ! ಮಲ್ಲಯ್ಯನ ಕೆಲಸ ಮತ್ತಷ್ಟು ಕೆಡುವುದಲ್ಲ ಎಂದು ಯೋಚಿಸಿದೆ. ಕೊನೆಗೆ ಶ್ರೀರಾಮದೇವರ ಮೇಲೆ ಭಾರಹಾಕಿ, ಶ್ರೀರಾಮತಾರಕಮಂತ್ರ ಜಪಮಾಡಿಕೊಂಡು ಸಾಹೇ ಬರ ಬಂಗಲೆಗೆ ಮಲ್ಲಯ್ಯನನ್ನು ಕರೆದುಕೊಂಡು ಹೋದೆ.

ನಾನು ಹೋದ ಘಳಿಗೆ ಅಷ್ಟೇನೂ ಪ್ರಶಸ್ತವಾಗಿರಲಿಲ್ಲ. ಹಿಂಡು ಹಿಂಡು ಜನ ಅವರ ದರ್ಶನಕ್ಕೆ ಕಾಯುತ್ತಿದ್ದರು. ನಾನೂ ಮಲ್ಲಯ್ಯ ಒಂದು ಒಂದೂವರೆ ಗಂಟೆ ಕಾದು ಸಾಹೇಬರ ಕೈಗೆ ಅರ್ಜಿ ಕೊಟ್ಟೆವು. ಅದನ್ನವರು ಓದಿಕೊಂಡು 'ಆಗಲಿ, ಎಂಡಾರ್ಸ್‌ಮೆಂಟ್ ಬರುತ್ತೆ' ಎಂದರು.

"ಹಾಗಾದರೆ ನೀವು ಹೋದ ಕೆಲಸವಾಗಲಿಲ್ಲ."

"ಅವಸರ ಪಡಬೇಡ–ಮುಂದೆ ಕೇಳು. ನಾನು ಮುಂದುವರಿದು ಮಲ್ಲಯ್ಯನ ಪರವಾಗಿ ಎರಡುಮಾತು ಹೇಳಲು ಪ್ರಯತ್ನಿಸಿದೆ. ಸಾಹೇಬರು

'ಆಗಲಿ, ಆಗಲಿ' ಎನ್ನುತ್ತಾ ಎದ್ದು ಒಳಕ್ಕೆ ಹೋದರು. ನನಗೆ ಮುಖ ಭಂಗವಾಯಿತು—ಮಲ್ಲಯ್ಯನಂತೂ ಕುಸಿದೇಹೋದ.

ಸುಮಾರು ಒಂದುವಾರ ಕಳೆದಿರಬಹುದು. ಮಲ್ಲಯ್ಯ ನಮ್ಮೂರಿಗೆ ಬಂದು 'ಸ್ವಾಮಿ ನಾಳೆ ಬೆಳಿಗ್ಗೆ ಎಂಟು ಗಂಟೆಗೆ ಹೋದರೆ ಸಾಹೇಬರನ್ನು ಕಂಡು ಮಾತನಾಡಬಹುದು. ತಾವು ದೊಡ್ಡ ಮನಸ್ಸುಮಾಡಿ ನನ್ನ ಜತೆ ಹೊರಡಬೇಕು' ಎಂದು ಹೇಳಿದ.

"ನಾನು ಬಂದೇನು ಸಾರ್ಥಕ ಮಲ್ಲಯ್ಯ. ಸಾಹೇಬರು ನಮ್ಮ ಅಹವಾಲನ್ನು ಕಿವಿಯ ಮೇಲೇ ಹಾಕಿಕೊಳ್ಳುವುದಿಲ್ಲ"—'ಅವತ್ತು ಅವರು ತುಂಬ ಗಡಿಬಿಡಿಯಲ್ಲಿದ್ದರು. ನಾಳೆ ಪುರಸತ್ತಾಗಿರುತ್ತಾರೆ ಸ್ವಾಮಿ. ತಾವು ದೊಡ್ಡ ಮನಸ್ಸು ಮಾಡಿದರೆ ಬಡವ ಬದುಕಿಕೊಳ್ಳುತ್ತೇನೆ' ಎಂದ.

ಆಗಲೆಂದು ಒಪ್ಪಿಕೊಂಡು ಅವನ ಜತೆ ಹೊರಟೆ. ಮಾರನೆಯ ಬೆಳಿಗ್ಗೆ ಎಂಟು ಗಂಟೆಗೆ ಮುಂಚೆಯೇ ಇಬ್ಬರೂ ಸಾಹೇಬರ ಬಂಗಲೆಗೆ ಹೋದೆವು. ನಾವು ಹೋದ ಕಾಲುಗಂಟೆಯಲ್ಲಿ ಬಂಗಲೆಯೊಳಗಿನಿಂದ ಡಾಕ್ಟರು ಹೊರಬಿದ್ದರು. ಅವರನ್ನು ಹಿಂಬಾಲಿಸಿ ಬಂದ ಸಾಹೇಬರ ಮುಖದಲ್ಲಿ ಚಿಂತೆ, ಆತಂಕ ಸ್ಪಷ್ಟವಾಗಿ ಮೂಡಿದ್ದವು. ನಾವು ಬಂದದ್ದು ಅನುಚಿತವಾಯಿತೆಂದುಕೊಂಡು ಹೊರಡುವ ಸನ್ನಾಹದಲ್ಲಿದ್ದಾಗ ಸಾಹೇಬರೇ ಮಾತನಾಡಿಸಿ 'ಏನು ಶಾಸ್ತ್ರಿಗಳೇ ಬಂದಿದ್ದಿರಿ?" ಎಂದು ಕೇಳಿದರು. ನಿಂತಿದ್ದ ನನ್ನನ್ನು ಕೂಡಲು ಹೇಳಿ, ತಾವೂ ಕುಳಿತುಕೊಂಡರು. ನಾನು ಕೂಲಂಕಷವಾಗಿ ಮಲ್ಲಯ್ಯನ ಪರಿಸ್ಥಿತಿ ವರ್ಣಿಸಿ ಅವನಿಗೆ ಸಹಾಯ ಮಾಡಬೇಕೆಂದು ಪ್ರಾರ್ಥಿಸಿದೆ. ಸಾಹೇಬರು ಫೈಲ್ ತರಿಸಿಕೊಂಡು ನೋಡಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಾಗಿ ಭರವಸೆಯಿತ್ತರು. ಮಲ್ಲಯ್ಯ ಕೈಮುಗಿದು ಹೊರಗೆ ಹೋಗಿ ನಿಂತ. ನಾನು ಲೋಕಾಭಿರಾಮ ವಾಗಿ 'ಮನೆಯಲ್ಲಿ ಯಾರಾದರೂ ಕಾಹಿಲೆಯೇ ಸ್ವಾಮಿ' ಎಂದು ಕೇಳಿದೆ. ಸಾಹೇಬರ ಮುಖ ವಿವರ್ಣವಾಯಿತು. ಅವರ ಹೃದಯದಲ್ಲಿ ಹುದುಗಿದ್ದ ಅಪಾರ ದುಃಖ ಮುಖದ ಮೇಲೆ ಹರಡಿಕೊಂಡಿತು. ಉಕ್ಕಿ ಬರುತ್ತಿದ್ದ ದುಃಖ ಅಡಗಿಸುತ್ತಾ, ಕಣ್ಣುತುಂಬಿ ಬರುತ್ತಿದ್ದ ಶೋಕಾಶ್ರುಗಳನ್ನು ಹತ್ತಿಕ್ಕುತ್ತ

12

'ನನ್ನ ಒಬ್ಬಳೇ ಮಗಳು—ನನ್ನ ಕಣ್ಣಿನ ಬೆಳಕು ಹಾಸಿಗೆ ಹಿಡಿದು ಮಲಗಿಬಿಟ್ಟಿದ್ದಾಳೆ ಶಾಸ್ತ್ರಿಗಳೇ' ಎಂದರು.

'ಏನಾಗಿದೆ ಸ್ವಾಮಿ.'

'ಬಾಲಗ್ರಹವೆಂದು ಡಾಕ್ಟರು ಹೇಳಿದರು. ಬಲಭಾಗ ನಿಶ್ಚೇತನ ವಾಗಿದೆ. ಕೈಕಾಲುಗಳು ಅಲುಗಾಡಿಸಲೂ ಸಾಧ್ಯವಿಲ್ಲ. ಮುಖದ ಬಲ ಭಾಗ ಸ್ವಲ್ಪ ವಿರೂಪವಾಗಿದೆ.'

'ನಾನು ಮಗುವನ್ನು ನೋಡಬಹುದೇ ?'

'ತಮಗೆ ವೈದ್ಯ ಬರುತ್ತದೆಯೋ ?'

'ಅಲ್ಪ ಸ್ವಲ್ಪ!'

'ಬನ್ನಿ, ಎಂದು ಒಳಗೆ ಕರೆದೊಯ್ದು ಮಗುವನ್ನು ತೋರಿಸಿದರು. ಸಾಹೇಬರು ಹೇಳಿದುದರಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆಯಿರಲಿಲ್ಲ. ಚಂದ್ರಕಳೆಗೆ ರಾಹುಗ್ರಸ್ತವಾದಂತಿತ್ತು. ಮಗುವಿನ ಕರುಣಾರ್ದ್ರ ಸ್ಥಿತಿ ನೋಡಿ ನನ್ನ ಕರುಳು ಕಿತ್ತುಬಂತು.

ಅಲ್ಲಿಂದ ಹಿಂದಿರುಗುವಾಗ ಸಾಹೇಬರು ಹೇಳಿದರು.

'ನಿನ್ನೆ ರಾತ್ರಿ ಒಂದು ಪ್ರಬಲಘಟ್ಟ ದಾಟಿದೆವು. ಕಣ್ಣುಮುಚ್ಚಿದ ಕೂಡಲೆ ಮಗು ಬೆಚ್ಚುತ್ತಿತ್ತು—ಐದೈದು ನಿಮಿಷಕ್ಕೆ ಯಾವದೋ ಕ್ರೂರ ಶಕ್ತಿ ಅವಳ ದೇಹವನ್ನು ಹಿಂಡುತ್ತಿತ್ತು. ಕೈಗಳನ್ನು ತಿರುವಿ ಚಿಟ್ಟನೆ ಚೀರುತ್ತಿದ್ದಳು. ಇಡಿಯ ರಾತ್ರಿಯೆಲ್ಲಾ ನಾನು ಅವಳ ಕೈ ನನ್ನ ಕುಟುಂಬ ಅವಳ ಕಾಲು ಹಿಡಿದುಕೊಂಡೇ ಕಾಲನೂಕಿದೆವು. ಬೆಳಗಾದೀತೇ ಎಂದು ಕಾಯುತ್ತಿದ್ದೆವು.

'ಬೆಳಿಗ್ಗೆ ಮಗು ಕಣ್ಣುಬಿಟ್ಟಿತು. ನಿಶ್ಯಕ್ತಿಯಿಂದ ಘಾತೀಮಾ ಬಾಯಲ್ಲಿ ಮಾತೇ ಹೊರಡುವುದು ಕಷ್ಟವಾಗಿತ್ತು. ಅವಳ ತಾಯಿ ಮೆಲ್ಲನೆ ಸ್ವಲ್ಪ ಬಿಸಿ ಚಹಾ ಕುಡಿಸಿದರು. ಘಾತೀ ನಮ್ಮಿಬ್ಬರ ಕಡೆ ನೋಡಿ 'ನಿನ್ನೆ ನಿಮಗೆಷ್ಟು ಕಷ್ಟಕೊಟ್ಟೆ ಅಪ್ಪಾಜಾನ್—ಅಮ್ಮಿಯನ್ನು ಅಳಬೇಡವೆಂದು ಹೇಳಿ—ನೀವೂ ಅಳುತ್ತಿರುವಿರಲ್ಲಾ ಅಪ್ಪಾಜಾನ್—ದೊಡ್ಡವರೂ ಅಳುತ್ತಾ ರೆಂದು ನನಗೆ ಗೊತ್ತೇ ಇರಲಿಲ್ಲ' ಎಂದಳು. ನನಗೆ ಡಾಕ್ಟರುಗಳಲ್ಲಿ ನಂಬಿಕೆ ಸಾಲದು ಶಾಸ್ತ್ರಿಗಳೇ. ದೇಶೀ ಚಿಕಿತ್ಸೆಯೇನಾದರೂ ನಿಮಗೆ ಗೊತ್ತಿದ್ದರೆ

ತಿಳಿಸಿ. ಯಾರಾದರೂ ದಕ್ಷರಾದ ವೈದ್ಯರಿದ್ದರೆ ದಯೆಯಿಟ್ಟು ಕರೆದು ಕೊಂಡು ಬನ್ನಿ—ಅವರೆಷ್ಟು ಹಣ ಕೇಳುತ್ತಾರೋ ಕೊಡಲು ಸಿದ್ಧವಾಗಿ ದ್ದೇನೆ. ಹೇಗಾದರೂಮಾಡಿ ನನ್ನ ಮಗಳನ್ನು ಉಳಿಸಿಕೊಡಿ.'

ನನ್ನ ಮನಸ್ಸು ಕಲಕಿಹೋಗಿತ್ತು. ಹೆರವರಿಂದ ಧೈರ್ಯ ಹೇಳಿಸಿ ಕೊಳ್ಳುವ ಸ್ಥಿತಿಯಲ್ಲಿ ನಾನೇ ಇದ್ದೆ. ವಿಚಾರಮಾಡಿ 'ಸ್ವಾಮಿ, ನಿಮ್ಮ, ನಿಮ್ಮ ಮಗಳ ಜನ್ಮದಿನ, ಹೊತ್ತು ಗುರುತುಹಾಕಿಕೊಡಿ. ನಾನು ನಾಳೆ ಬಂದು ಕಾಣುತ್ತೇನೆ.' ಎಂದು ಹೇಳಿದೆ.

ಸಾಹೇಬರು ಗುರುತು ಹಾಕಿಕೊಟ್ಟ ತಾರೀಖುಗಳ ಚೀಟಿ ತೆಗೆದು ಕೊಂಡು ಮನೆಗೆ ಬಂದೆ.

ಅವರಿಬ್ಬರ ಜಾತಕಗಳನ್ನೂ ರಚಿಸಿ, ಗುಣಿಸಿ ನೋಡುವಲ್ಲಿ ಸಾಹೇಬ ರಿಗೆ ರಾಹುಭುಕ್ತಿ ನಡೆಯುತ್ತಿತ್ತು, ಆದರೆ ಗುರು ಉಚ್ಚಸ್ಥಾನದಲ್ಲಿದ್ದುದ ರಿಂದ ಅವರಿಗೆ ಯಾವ ಹಾನಿಯೂ ಆಗಲಿಲ್ಲ. ಸಾಹೇಬರ ಮೇಲೆ ತನ್ನ ಪ್ರಭಾವ ಬೀರಲಾಗದ ರಾಹು ಅವರ ಮಗಳಮೇಲೆ ದರ್ಪತೋರಿದ್ದ.

ಮಾರನೆಯ ದಿನ ನಾನು ಸಾಹೇಬರನ್ನು ಕಂಡು

'ಒಂದು ಸೂಕ್ಷ್ಮ ವಿಷಯ ನಾನು ಅರಿಕೆಮಾಡಿಕೊಳ್ಳಬೇಕಾಗಿದೆ. ನಾನು ಹೇಳುವುದು ತಮಗೆಷ್ಟು ಪಥ್ಯವಾಗುವುದೋ ಕಾಣೆ' ಎಂದೆ.

'ನನ್ನ ಮಗಳಿಗೆ ಗುಣವಾಗುವುದಾದರೆ ನೀವು ಏನು ಹೇಳಿದರೂ ಮಾಡಲು ಸಿದ್ಧವಾಗಿದ್ದೇನೆ ಶಾಸ್ತ್ರಿಗಳೇ.'

'ಗ್ರಹಬಾಧೆ ಇದೆ-ರಾಹು ಕ್ರೂರವಾಗಿದ್ದಾನೆ. ಇದಕ್ಕೆ ಕೆಲವು ಪೂಜೆ ಪುರಸ್ಕಾರಗಳಾಗಬೇಕು.'

'ಮಾಡಿಸಿ, ಎಷ್ಟೇ ಹಣ ಖರ್ಚಾದರೂ ಕೊಡಲು ನಾನು ಸಿದ್ಧವಾಗಿ ದ್ದೇನೆ.'

'ಹಣ ಬೇಕಿಲ್ಲ. ನಾನು ಊರಿಗೆ ಹೊರಟದ್ದೇನೆ. ಪ್ರತಿ ದಿನ ತಾವು ಇಲ್ಲಿಂದ ಯಾರಾದರೊಬ್ಬರನ್ನು ಕಳಿಸಿದರೆ ತೀರ್ಥಪ್ರಸಾದ ಕಳಿಸುತ್ತೇನೆ. ತಾವೂ ಅಮ್ಮಾವರೂ ಸ್ನಾನಮಾಡಿ ತೀರ್ಥಪ್ರಸಾದ ಭಕ್ತಿಯಿಂದ ಸ್ವೀಕರಿಸಿ, ಮಗುವಿಗೂ ಪ್ರಸಾದ ಕೊಟ್ಟು ಊಟ ಮಾಡಿ. ನಲವತ್ತೆಂಟು ದಿವಸ

ಹೀಗೆ ನಡೆಯಬೇಕಾಗುತ್ತದೆ—ತಾವು ಮುಸಲ್ಮಾನರು, ಇವುಗಳಲ್ಲಿ ತಮಗೆ ನಂಬಿಕೆ ಇದೆಯೋ ಇಲ್ಲವೋ?'

'ಇಸ್ಲಾಂ ಧರ್ಮವೂ ಭಗವದ್ಭಕ್ತಿಯನ್ನೇ ಬೋಧಿಸುತ್ತದೆ ಶಾಸ್ತ್ರಿಗಳೇ. ಹಜರತ್ ಮುಹಮುದ್ ಪೈಗಂಬರರು (ಅವರ ಆತ್ಮಕ್ಕೆ ಶಾಂತಿಯಿರಲಿ) ಮಹಾ ತಪಸ್ವಿಗಳು. ಪೂಜೆ, ಪ್ರಾರ್ಥನೆಗೆ ಅವರ ಅನುಯಾಯಿಗಳಾದ ನಾವು ತುಂಬ ಲಕ್ಷ್ಯ ಕೊಡುತ್ತೇವೆ.'

ಸಾಹೇಬರ ಆಶ್ವಾಸನೆ ನನಗೆ ಆಶ್ಚರ್ಯವನ್ನುಂಟುಮಾಡಿತು. ಅವರ ಭಕ್ತಿಪರಾಯಣತೆಯಿಂದ ನನ್ನ ಕೆಲಸ ಹಗುರವೂ ಸುಗಮವೂ ಆಯಿತು.

ನಾನು ಊರಿಗೆ ಹಿಂದಿರುಗಿದವನೇ ಪಾರಾಯಣ, ಪೂಜೆ ಆರಂಭಿಸಿದೆ. ಪ್ರತಿನಿತ್ಯ ತುಮಕೂರಿನಿಂದ ಒಬ್ಬ ಬ್ರಾಹ್ಮಣ ಒಂದು ತೀರ್ಥಪ್ರಸಾದ ಗಳನ್ನು ತೆಗೆದುಕೊಂಡು ಹೋಗುತ್ತಿದ್ದ.

ಕಾಲುಮಂಡಲ (ಹನ್ನೆರಡು ದಿನ) ಕಳೆಯುವಲ್ಲಿ ಸಾಹೇಬರ ಮಗಳಿಗೆ ಸ್ವಲ್ಪ ಅನುಕೂಲವಾಗಿದೆಯೆಂದು ತಿಳಿದುಬಂತು. ಅರ್ಧ ಮಂಡಲದ ವೇಳೆಗೆ ಹುಡುಗಿ ಎದ್ದು ಕುಳಿತುಕೊಂಡು ಸ್ವಲ್ಪ ಪ್ರಯಾಸದಿಂದ ಕೈಕಾಲು ಗಳನ್ನು ಅಲುಗಾಡಿಸುತ್ತಿದ್ದಳು. ನಾನು ತುಮಕೂರಿಗೆ ಬರಬೇಕೆಂದು ಸಾಹೇಬರು ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದರೂ ನಾನು ಹೋಗಲಿಲ್ಲ.

ನಲವತ್ತು ದಿನಗಳು ಕಳೆದವು. ಒಂದು ಸಂಜೆ ಸಾಹೇಬರೇ ಮೋಟಾರಿ ನಲ್ಲಿ ತಮ್ಮ ಮಗಳೊಂದಿಗೆ ರುದ್ರಾಕ್ಷಿಪುರಕ್ಕೆ ಬಂದು ನನಗೆ ಹೇಳಿಕಳಿಸಿದರು. ಊರ ಹೊರಗೆ ಅವರ ಭೆಟ್ಟಿ ತೆಗೆದುಕೊಂಡೆ. ಸಾಹೇಬರ ಆನಂದಕ್ಕೆ ಪಾರವೇ ಇರಲಿಲ್ಲ; ನನ್ನ ಆನಂದಕ್ಕೆ ಪಾರವುಂಟೆ?—ಫಾತೀಮಳಿಗೆ ತಕ್ಕ ಮಟ್ಟಿಗೆ ಗುಣವಾಗಿತ್ತು. ಸ್ವಲ್ಪ ಪ್ರಯಾಸದಿಂದ ಅವಳು ಎದ್ದು ಓಡಿ ಯಾಡುತ್ತಿದ್ದಳು.

'ಭಗವಂತ ದೊಡ್ಡವನು ಸ್ವಾಮಿ.'

'ನಮ್ಮ ಭಾಗಕ್ಕೆ ನೀವೇ ಭಗವಂತ ಶಾಸ್ತ್ರಿಗಳೇ!'

'ಛೆ! ಎಲ್ಲಿಯಾದರೂ ಉಂಟೆ?'

ನೋಟುಗಳು ತುಂಬಿದ ಒಂದು ಲಕೋಟಿಯನ್ನು ಸಾಹೇಬರು ನನ್ನ ಕೈಯಲ್ಲಿಡಲು ಪ್ರಯತ್ನಿಸಿದರು.

'ಇದೇಕೆ?' ಎಂದು ಕೇಳಿದೆ.

'ನಿಮ್ಮ ಶ್ರಮ ನಿಷ್ಫಲವಾಗಬೇಕೆ?'

'ಇದು ಕಾವ್ಯಕರ್ಮವಲ್ಲ!'

'ತಾವು ಸ್ವೀಕರಿಸಿ ನನ್ನ ಮನಸ್ಸಂತೋಷಪಡಿಸಬೇಕು.'

'ನಾನು ಮಾಡಿರುವ ಪೂಜೆಯನ್ನು ನಿಸ್ಸ್ವಾರ್ಥಕ ಮಾಡಲಿಚ್ಛಿಸುವಿರಾ?'

'ಏಕೆ?'

'ಪ್ರತಿಫಲಾಪೇಕ್ಷೆಯಿಂದ ಮಾಡುವ ಸೇವೆ ನೀರಿನಲ್ಲಿ ಹೋಮ ಮಾಡಿದಂತೆ!'

'ನಿಮ್ಮ ಖರ್ಚನ್ನಾದರೂ ಸ್ವೀಕರಿಸಿ.'

'ವನದೇವತೆ ನನಗೆ ಹೂಗಳನ್ನು ಮಾರಿಲ್ಲ. ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಆ ತಾಯಿ ನೀಡಿದ ಹೂಗಳನ್ನು ಅವಳ ಪಾದಕ್ಕೆ ಒಪ್ಪಿಸಿದ್ದೇನೆ.'

'ನನ್ನಿಂದ ತಾವು ಏನೂ ಸ್ವೀಕರಿಸುವುದಿಲ್ಲವೇ?'

'ಸ್ವೀಕರಿಸುತ್ತೇನೆ. ತಮ್ಮ ನಿರ್ಮಲಾಂತಃಕರಣವನ್ನು!'

'ನನ್ನ ಕಣ್ಣನ್ನು ನಾನೇ ನಂಬಲಾರೆ.'

'ಏಕೆ?'

'ಈ ದಿನದಲ್ಲಿಯೂ ಇಂಥ ವೈರಾಗ್ಯ, ತ್ಯಾಗವಿದೆಯೇ?'

'ಲೋಕ ವ್ಯಾಪಾರ ನಡೆಯುವುದೇ ತ್ಯಾಗದ ಪ್ರಭಾವದಿಂದ. ಒಂಭತ್ತು ತಿಂಗಳು ನಮ್ಮನ್ನು ಹೊರುವ ತಾಯಿ ತ್ಯಾಗದ ಆದಿಮೂರ್ತಿ. ಗರ್ಭದಲ್ಲಿರುವ ಪಿಂಡಕ್ಕೆ ಎಲ್ಲಿ ಬಾಧೆಯಾಗುವುದೋ ಎಂದವಳು ಎಂಥ ನಿಸ್ಸೀಮ ತ್ಯಾಗ ತೋರುತ್ತಾಳೆ. '**ಬೇಕು**' ಎನ್ನುವವರಿಗೆ ಯಾವುದೂ ಲಭಿಸುವುದಿಲ್ಲ; '**ಸಾಕು**' ಎನ್ನುವವರ ಪಾದದಡಿ ಲೋಕದ ಸಂಪತ್ತು ಬಂದು ಬೀಳುತ್ತದೆ. ಧರ್ಮ ಎಂದು ನಾವೆಲ್ಲಾ ಹೇಳುವುದು ಈ '**ಬೇಕು—ಸಾಕು**' ಗಳ ಅಂತರವನ್ನು ನಿರ್ದೇಶಿಸುವ ಸಾಧನವಲ್ಲವೇ?'

ನನ್ನ ಸ್ಪಷ್ಟೋಕ್ತಿ ಸಾಹೇಬರಿಗೆ ಎಷ್ಟು ಪ್ರಿಯವಾಯಿತೋ ಹೇಳಲಾರೆ. ಅವರು ಸ್ವಲ್ಪ ಖಿನ್ನರಾಗಿಯೇ ಊರಿಗೆ ಹಿಂದಿರುಗಿದರು."

"ಅವರ ಮಗಳ ಆರೋಗ್ಯ ?"

"ಕಾಲಾನುಕ್ರಮದಲ್ಲಿ ಅವಳಿಗೆ ಪೂರ್ಣವಾಗಿ ಗುಣವಾಯಿತು. ಈಗ ಹತ್ತು ಜನರಂತೆ ಆ ಮಗುವೂ ಓಡಿಯಾಡಿಕೊಂಡಿದೆ."

ಹನುಮಯ್ಯನ ಮುಖದ ಮೇಲೆ ಸ್ಪಷ್ಟವಾದ ಸೋಜಿಗದ ಚಿಹ್ನೆ ಕಂಡು ಬಂದಿತು. ಭಟ್ಟರಲ್ಲದೆ ಮತ್ತೆ ಯಾರಾದರೂ ಈ ವೃತ್ತಾಂತ ಹೇಳಿದ್ದರೆ ಅವನು ನಂಬುತ್ತಿರಲಿಲ್ಲ. ಅವನ ಮನಸ್ಸಿನಲ್ಲಿದ್ದುದನ್ನು ಗ್ರಹಿಸಿದ ಭಟ್ಟರು

"ನಂಬುವುದು ಕಷ್ಟವಲ್ಲವೇ ?" ಎಂದು ಕೇಳಿದರು.

"ತಮ್ಮ ಮಾತಿನಲ್ಲಿ ನಾನು ಸಂಶಯಪಡುತ್ತೇನೆಯೇ ಗುರುಗಳೇ ?"

"ವಿಷಯ ಹಾಗಿದೆ—ಯಾರಾದರೂ ಸಂದೇಹಗ್ರಸ್ತರಾಗಬಹುದು."

"ಇದರ ರಹಸ್ಯ ವಿವರಿಸುವಿರಾ ಗುರುಗಳೇ ?"

"ರಹಸ್ಯವೇನು ಬಂತು! ಶ್ರದ್ಧೆ ಮತ್ತು ಭಕ್ತಿ. ಎಲ್ಲ ಸತ್ಕಾರ್ಯಗಳಿಗೂ ಕ್ರತುಶಕ್ತಿಯನ್ನೊದಗಿಸುವುದು ಸಂಕಲ್ಪ. ಒಂದು ಸಾಧಿಸಬೇಕೆಂದು ಮನುಷ್ಯ ಸಂಕಲ್ಪ ಮಾಡಬೇಕು. ಅದನ್ನೇ ಕುರಿತು ಧ್ಯಾನ ಮಾಡಬೇಕು. ತ್ರಿಕರಣಗಳನ್ನೂ ಅದಕ್ಕೆ ಮೀಸಲಾಗಿಡಬೇಕು. ಸರ್ವಚೇತವನ್ನೂ ಅದಕ್ಕೆ ನಿವೇದಿಸಿ ಸಂಕಲ್ಪ ಸಾಧಿಸಬೇಕು."

"ಸಂಕಲ್ಪ ಸಾಧಿಸುವುದು ಹೇಗೆ ?"

"ಭಕ್ತಿಯಿಂದ. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ'—ಇದು ಭಕ್ತಿಯನ್ನು ಪರೀಕ್ಷಿಸುವ ಮಾನದಂಡ. ಭಗವಂತನಲ್ಲಿ ಭಕ್ತನಿಗೆ ನಿಶ್ಚಲ, ನಿರ್ವ್ಯಾಜ, ನಿರ್ಹೇತುಕ ಅನುರಾಗವಿದೆಯೇ ?—ಭಗವಂತನಿಗಾಗಿ ಭಕ್ತ ಸರ್ವಸ್ವವನ್ನೂ ಅರ್ಪಿಸಲು ಸಿದ್ಧನಾಗಿದ್ದಾನೆಯೇ ?—ಭಗವಂತ ಒಲಿಯುವನೋ ಒಲಿಯನೋ ಎಂಬ ಚಿಂತೆಯೊಂದೇ ಅವನನ್ನು ಆವರಿಸಿದೆಯೇ ? ಎನ್ನುವುದೇ ಕಸೋಟಿ. ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಯಾವನೋ ಜಾಣ ಈ ಕಥೆ ಹೆಣೆದು ರಾಮಾಯಣಕ್ಕೆ ಜೋಡಿಸಿದ್ದಾನೆ—ಚಿಂತೆಯಿಲ್ಲ, ಕಥೆ ಚೆನ್ನಾಗಿದೆ ಕೇಳು. ಲಂಕಾಯುದ್ಧ ಮುಗಿಸಿಕೊಂಡು

ಶ್ರೀರಾಮಚಂದ್ರ ಅಯೋಧ್ಯೆಗೆ ಹಿಂದಿರುಗಿದ್ದಾನೆ. ಒಂದು ದಿನ ಶ್ರೀರಾಮ ಚಂದ್ರ ಮಾರುತಿಯನ್ನು ಕೇಳಿದನಂತೆ—ಸೇತುಬಂಧನ ಕಾಲದಲ್ಲಿ ನಿನ್ನ ಕರಸ್ಪರ್ಶಗೊಂಡ ಬೆಟ್ಟಗುಡ್ಡಗಳು ಸಮುದ್ರದಲ್ಲಿ ತೇಲಿದುವಂತೆ. ಇದನ್ನು ಹೇಗೆ ಸಾಧಿಸಿದೆ?—ಸ್ವಾಮಿ, ಶ್ರೀರಾಮನ ಹೆಸರು ಹೇಳಿದರೆ ಮೂಲೋಕ ತೇಲುತ್ತದೆ. ಬೆಟ್ಟಗುಡ್ಡಗಳು ತೇಲುವುದೊಂದಚ್ಚರಿಯೇ?—ಈಗಲೂ ಅವು ತೇಲುತ್ತವೆಯೇ?—ಈಗಲೂ ತೇಲುತ್ತವೆ ಎಂದು ಹೇಳಿ ಹನುಮಂತ ಕೆಲವು ಬಡೆಗಳನ್ನು ಕಿತ್ತು ಅವುಗಳ ಮೇಲೆ ಶ್ರೀರಾಮ ಎಂದು ಬರೆದು ನದಿಯಲ್ಲಿ ಬಿಟ್ಟನಂತೆ—ಶ್ರೀರಾಮನಿಗೂ ಆಶ್ಚರ್ಯವಾಗುವಂತೆ ಅವು ನದಿಯಲ್ಲಿ ತೇಲಿದವು. ಪರಿಹಾಸಕ್ಕೆ ಶ್ರೀ ರಾಮ ಬಂದು ಬಂಡೆಯನ್ನೆತ್ತಿ ಕೊಂಡು ನದಿಯಲ್ಲಿ ಬಿಡಲು, ಅದು ಸಹಜಧರ್ಮದಂತೆ ಮುಳುಗಿತು. ಶ್ರೀರಾಮ ಆಂಜನೇಯನ ಮುಖ ನೋಡಿ 'ಇದಕ್ಕೇನು ಹೇಳುವೆ' ಎಂದು ಕೇಳಿದ. ಭಕ್ತ ಮಾರುತಿಯ ಸಂಕಷ್ಟ ನೋಡಲಾಗದೆ ಲೋಕಮಾತೆ ಸೀತಾದೇವಿ 'ಸ್ವಾಮಿ, ಶ್ರೀರಾಮನಲ್ಲಿ ಮಾರುತಿಗಿರುವ ಭಕ್ತಿ ನಿಮಗಿಲ್ಲ. ಆದರಿಂದಲೇ ನೀವು ಬಿಟ್ಟ ಕಲ್ಲು ಮುಳುಗಿತು' ಎಂದು ಹೇಳಿದಳಂತೆ.

"ನಾನು ಸಾಧಿಸಿರುವುದು ಅತ್ಯಲ್ಪ ಹನುಮಣ್ಣ. ಇದಕ್ಕೂ ಹಿರಿದಾದು ದನ್ನು ನೀನು—ಎಲ್ಲರೂ ಸಾಧಿಸಬಹುದು. ಅದಕ್ಕೆ ನಿಷ್ಠೆಯ ಹಾದಿಯಲ್ಲಿ ನಡೆದು ಭಕ್ತಿಯನ್ನು ಬೆಳಸಿಕೊಳ್ಳಬೇಕು. ಎದೆ ಕಲ್ಲುಮಾಡಿಕೊಂಡು ಬರುವ ಕಷ್ಟನಷ್ಟಗಳನ್ನು ಅನುಭವಿಸಬೇಕು—ಎದುರಿಸಬೇಕು—ಗೆಲ್ಲಬೇಕು ಸಾಧಕನ ಈ ಸ್ಥಿತಿಯನ್ನು ಗಮನಿಸಿಯೇ ಉಪನಿಷತ್ತಿನ ಋಷಿ 'ನಾಯ ಮಾತ್ಮ ಬಲಹೀನೇನ ಲಭ್ಯಃ' ಎಂದು ಹೇಳಿದ್ದು. ಬಲಹೀನನಿಗೆ ಇಹವೂ ಇಲ್ಲ, ಪರವೂ ಇಲ್ಲ. ಆದರೆ ಇಲ್ಲಿ 'ಬಲ' ಶಬ್ದವನ್ನು ಋಷಿ 'ರಾಕ್ಷಸ ಬಲ'ಕ್ಕೆ ಉಪಯೋಗಿಸಿಲ್ಲ. ಆತ್ಮ ವಿಕಾಸಕ್ಕೆ ನೆರವಾಗುವ ಸಾತ್ವಿಕ ಬಲವನ್ನೇ ಋಷಿ 'ಬಲ'ವೆಂದು ಕರೆದಿರುವುದು.

'ಸರ್ವಂ ಖಲ್ವಿದಂ ಬ್ರಹ್ಮ' ಎಂದು ಹೇಳಿದ ಋಷಿ ಸುಳ್ಳಾಡಲಿಲ್ಲ. ಪ್ರತಿಯೊಂದು ಆತ್ಮವೂ ಬ್ರಹ್ಮಸ್ವರೂಪ. ಮೂಲೋಕವನ್ನು ಅಲುಗಾಡಿ ಸುವ, ಸೂರ್ಯಚಂದ್ರರನ್ನು ಅಚಲರನ್ನಾಗಿಮಾಡುವ, ಅಷ್ಟದಿಕ್ಪಾಲಕ

ರನ್ನು ಅಂಕುಶಕ್ಕೊಳಗಾಗಿಸುವ ಮಹಾಶಕ್ತಿ ಪ್ರತಿಯೊಂದು ಜೀವಿಯಲ್ಲಿಯೂ ಸುಪ್ತವಾಗಿ ಅಡಗಿ ಕುಳಿದಿದೆ. ಸುಪ್ತಚೇತನ ಜಾಗೃತವಾಗಬೇಕು. ಕಿಡಿ ಕವರಬೇಕಾದರೆ ಗಾಳಿ ಬೇಕು. ಆ ಗಾಳಿಯನ್ನೇ ನಾನು ಸಾಧನವೆನ್ನುವುದು."

ಹನುಮಯ್ಯ ಗಂಭೀರವಾಗಿ

"ನಿಮ್ಮ ಮಾತು ಕೇಳಿದರೆ ಭಯವಾಗುತ್ತದೆ ಗುರುಗಳೇ—ನನ್ನಂಥ ಅಜ್ಞಾನಿಗಳಿಗೆ ಮುಕ್ತಿಯುಂಟೆ ?"

"ಎಲ್ಲರಿಗೂ ಮುಕ್ತಿಯಿದೆ ಹನುಮಣ್ಣ. ಸಾಧನ ಲೋಕವ್ಯಾಪಾರದ ಹೊರಗೆ ನಿಂತಿರುವ ಒಂದು ಚಮತ್ಕಾರವಲ್ಲ-ಪವಾಡವಲ್ಲ. ಅದು ಮಾನವನ ರೀತಿನೀತಿ, ನಡತೆ, ಮಾತುಕತೆ-ಲೋಕವ್ಯಾಪಾರದಲ್ಲಿಯೇ ಸಮಾವೇಶಗೊಂಡಿದೆ. ನೀನು ಮಾಡುವ ಪ್ರತಿಯೊಂದು ಕೆಲಸವೂ ಸಾತ್ವಿಕಮನೋವೃತ್ತಿಯಿಂದ ಪ್ರೇರಿತವಾಗಿರಬೇಕು-ಅದನ್ನು ಭಗವದ್ಸೇವೆ ಎಂದು ಮಾಡುತ್ತ ಹೋಗಬೇಕು—ಇಷ್ಟೇ ಸಾಧನೆಯ ರಹಸ್ಯ."

ಹನುಮಯ್ಯ ವಿಚಾರಪರವಶನಾಗಿ

"ಮಲ್ಲಯ್ಯನ ಅಹವಾಲು ಏನಾಯಿತು ?" ಎಂದು ಕೇಳಿದ.

"ಅವನಿಗನುಕೂಲವಾಗಿಯೇ ಆಯಿತು. ಪುಂಡ ಅಧಿಕಾರಿಗಳಿಗೆ ಶಿಕ್ಷೆಯೂ ಆಯಿತು."

"ಅದಕ್ಕೋ ನೀವು ನಿಯೋಜನೆಯಿಂದ ಊರ ಸಂತರ್ಪಣೆ ಮಾಡಿಸಬೇಕೆಂದದ್ದು !"

"ಇಲ್ಲ ಹನುಮಣ್ಣ. ಸಾಹೇಬರಿಂದ ಹಣ ತಂದು ನಾನು ಸಂತರ್ಪಣೆ ಮಾಡಿಸುವುದಿಲ್ಲ. ನಾನು ಹಾಗೆ ಮಾಡಿದರೆ ನಮ್ಮೂರಿಗೆ ಅಪಖ್ಯಾತಿ ಬರುತ್ತದೆ. ರುದ್ರಾಕ್ಷಿಪುರದ ಜನ ಉದಾರಿಗಳು, ಧರ್ಮಶೀಲರು."

'ಉದಾರಿಗಳು—ಧರ್ಮಶೀಲರು' ಎಂದು ಕವಿ ಹನುಮ ಗೊಣಗಿಕೊಂಡ. ಬಸವೇಶ್ವರ ನಾಟಕದ ಇತಿಹಾಸ ಅವನ ಸ್ಮರಣೆಗೆ ಬಂದು ಅವನ ಮನಸ್ಸನ್ನು ಕದಡಿತು.

ಭಟ್ಟರು ಥಟ್ಟನೆ

"ಆಗಿಹೋದುದನ್ನು ಮರೆತುಬಿಡು ಹನುಮಣ್ಣ—ನನ್ನ ರಾಮಚಂದ್ರ ರಾಜಾರಾಮಚಂದ್ರ—ನಿನಗವನು ಯಾವ ಕೊರತೆಯನ್ನೂ ಉಂಟು ಮಾಡುವುದಿಲ್ಲ" ಎಂದರು.

ಭಟ್ಟರ ಆಶೀರ್ವಚನವನ್ನು ಕವಿ ಹನುಮ ತಲೆಬಾಗಿಸಿ ಅತ್ಯಂತ ವಿನಯದಿಂದ ಸ್ವೀಕರಿಸಿದ.

೧೩

ರುದ್ರಾಕ್ಷಿಪುರಕ್ಕೆ ಉತ್ಸವದ ಕಳೆ ಬಂದುಬಿಟ್ಟಿತು. ಊರಿನ ಹಿರಿಯರು ನಿಂತುಕೊಂಡು ರಸ್ತೆಗಳನ್ನು ಸ್ವಚ್ಛಮಾಡಿಸಿದರು. ಮನೆಮನೆಗೆ ಸಾರಣೆಕಾರಣೆಯಾಯಿತು. ಎಲ್ಲೆಲ್ಲಿಯೂ ಮಾವಿನ ತೋರಣ. ದೇವಾಲಯಗಳಲ್ಲಿ ವಿಶೇಷ ಪೂಜೆ.

ಮದುವೆಗಾಗಿ ಹಸಿರುವಾಣಿ ಚಪ್ಪರ ರಚನೆಯಾಯಿತು. ಗೊನೆ ಹೊತ್ತ ಬಾಳೆಯ ಕಂಬಗಳು ಮಹಾದ್ವಾರದಲ್ಲಿ ವಿರಾಜಿಸಿದವು.

ಆದಿಶೇಷಯ್ಯ ಅವರ ಪರಿವಾರವನ್ನು ಗ್ರಾಮರಕ್ಷಕ ಗಣಪತಿಯ ದೇವಾಲಯದ ಬಳಿ ಎದುರುಗೊಂಡು ಕೊಂಬು, ಕಹಳೆಗಳ ಗೌರವದೊಂದಿಗೆ ಊರಿಗೆ ಕರೆತರಲಾಯಿತು. ಪ್ರಾಥಮಿಕ ಶಾಲೆಯಲ್ಲಿ ಬೀಗರ ಬಿಡಾರವಾಯಿತು.

ಭಟ್ಟರ ಯಾಜಮಾನ್ಯದಲ್ಲಿ ಕಾರ್ಯಕ್ರಮ ಆರಂಭವಾಯಿತು. ಬೀಗರು ವಿಶ್ರಮಿಸಿಕೊಂಡು, ಉಪಹಾರ ತೀರಿಸಿಕೊಂಡಮೇಲೆ ತುಮಕೂರಿನಿಂದ ಬಂದಿದ್ದ ಪೆಟ್ರೋಮ್ಯಾಕ್ಸ್ ದೀಪಗಳ ಬೆಳಕಿನಲ್ಲಿ ವರನ ಮೆರವಣಿಗೆಯಾಗಿ ವಿವಾಹಮಂಟಪದಲ್ಲಿ ವರಪೂಜೆಯಾಯಿತು.

ಮಾರನೆಯ ದಿನ ಶಾಸ್ತ್ರೋಕ್ತವಾಗಿ ಇಟ್ಟ ಲಗ್ನಕ್ಕೆ ಸರಿಯಾಗಿ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಪಾರ್ವತಿ—ಚಂದ್ರಶೇಖರರ ವಿವಾಹ ವಿಜೃಂಭಣೆಯಿಂದ ನೆರವೇರಿತು.

ಭಟ್ಟರೇ ನಿಂತುಕೊಂಡು ದಕ್ಷತೆಯಿಂದ ಪೌರೋಹಿತ್ಯ ನಡೆಸಿದರು. ಪ್ರತಿಮಂತ್ರವನ್ನೂ ಬಿಡಿಸಿ ನುಡಿದು, ಅದರರ್ಥವನ್ನು ವಧೂವರರಿಗೆ ವಿವರಿಸಿದರು.

"ಮಂತ್ರಗಳಲ್ಲಿ ಅರ್ಥೌಚಿತ್ಯ ಮಾತ್ರವಲ್ಲದೆ ದಿವ್ಯಶಕ್ತಿಯೂ ಅಡಕವಾಗಿದೆ. ಗಿಳಿ ಪಾಠ ಮಾಡಿದಂತೆ ಅದನ್ನೊಪ್ಪಿಸಿದರೆ ಅವು ನಿರರ್ಥಕವಾಗುತ್ತವೆ. ಮಂತ್ರಗಳ ಅರ್ಥಜ್ಞಾನ ಪಡೆದು, ಧ್ಯಾನಪೂರ್ಣವಾಗಿಯೇ ಅವುಗಳನ್ನು ಉಚ್ಚರಿಸಬೇಕು" ಎಂದು ಹೇಳಿದರು.

ವಧೂವರರ ಪ್ರಥಮದರ್ಶನವಾಗುವಾಗ :

**ಸಮಂಜಂತು ವಿಶ್ವೇದೇವಾಃ**
**ಸಮಾಪೋ ಹೃದಯಾನಿ ನೌ**
**ಸಂ ಮಾತರಿಶ್ವಾ ಸಂಧಾತಾ**
**ಸಮುದೇಷ್ಟ್ರೀ ದಧಾತು ನೌ ||**

ಸಕಲ ದೇವತೆಗಳೂ ನಮ್ಮಿಬ್ಬರನ್ನೂ ಜೋಡಿಸಲಿ, ನೀರು ನಮ್ಮಿಬ್ಬರನ್ನೂ ಒಂದು ಮಾಡಲಿ, ವಾಯುವು ನಮ್ಮಿಬ್ಬರನ್ನೂ ಒಂದು ಮಾಡಲಿ, ಸದುಪದೇಶಕಾರಿಣಿಯಾದ ಸರಸ್ವತಿಯು ನಮ್ಮಿಬ್ಬರಿಗೂ ಏಕಭಾವವನ್ನೀಯಲಿ.

ವರಕನ್ಯೆಯರ ಶುಭದೃಷ್ಟಿಯ ಕಾಲದಲ್ಲಿ :

**ಆನಃಪ್ರಜಾಂ ಜನಯತು ಪ್ರಜಾಪತಿಃ**
**ಆಜರಸಾಯ ಸಮನಕ್ತ್ವರ್ಯಮಾ**
**ಅದುರ್ಮಂಗಲೀಃ ಪತಿಲೋಕಮಾವಿಶ**
**ಶಂನೋ ಭವ ದ್ವಿಪದೇ ಶಂ ಚತುಷ್ಪದೇ ||**

**ಅಘೋರ ಚಕ್ಷುರಪತಿಘ್ನ್ಯೇಧಿ**
**ಶಿವಾ ಪಶುಭ್ಯಃ ಸುಯಮಾಃ ಸುವರ್ಚಾಃ**
**ವೀರಸೂರ್ದೇವಕಾಮಾ ಸ್ಯೋನಾ**
**ಶಂನೋ ಭವ ದ್ವಿಪದೇ ಶಂ ಚತುಷ್ಪದೇ ||**

**ಇಮಾಂ ತ್ವಂ ಇಂದ್ರಮೀಢ್ವಃ**
**ಸುಪುತ್ರಾಂ ಸುಭಗಾಂ ಕೃಣು**
**ದಶಾಸ್ಯಾಂ ಪುತ್ರಾನಾಧೇಹಿ**
**ಪತಿಮೇಕಾದಶಂ ಕೃಧಿ ||**

ಪ್ರಜಾಪತಿಯು ಇವಳ ಮುಖಾಂತರ ಮಕ್ಕಳನ್ನು ಸೃಷ್ಟಿಸಲಿ, ಐಶ್ವರ್ಯ ಮತ್ತು ರತ್ನಗಳನ್ನು ಅಯುಶವನು ಇವಳಲ್ಲಿ ಉಂಟುಮಾಡಲಿ.

ನೀನು ಸೌಮ್ಯನೋಟವುಳ್ಳವಳಾಗು, ಅಪತಿಘಾತಿನಿಯಾಗು, ನೀನು ದನಕರುಗಳಿಗೆ ಮಂಗಳವನ್ನುಂಟುಮಾಡು, ನಿಯಮಿತಚಿತ್ತಳಾಗು ಮತ್ತು ತೇಜಸ್ವಿನಿಯಾಗು. ನೀನು ವೀರಪುತ್ರರನ್ನು ಪ್ರಸವಿಸು, ಉತ್ತಮಗಳಾದ ಆಶೆಗಳನ್ನು ಪಡೆ, ನಮ್ಮಿಬ್ಬರಿಗೂ ಕಲ್ಯಾಣವನ್ನುಂಟುಮಾಡು, ನಮ್ಮ ದ್ವಿಪದ ಚತುಷ್ಪದಗಳಿಗೆ ಮಂಗಳವನ್ನು ತರುವವಳಾಗು.

ಎಲೈ ಇಂದ್ರನೆ, ಇವಳನ್ನು ಸುಪುತ್ರವಂತಳಾಗಿಯೂ ಮಂಗಳಾಂಗಿಯನ್ನಾಗಿಯೂ ಮಾಡು. ಹತ್ತು ಮಕ್ಕಳನ್ನು ಕೊಡು. ಗಂಡನನ್ನು ಹನ್ನೊಂದನೆಯವನನ್ನಾಗಿ ಮಾಡು.

ಕನ್ಯಾದಾನಮಾಡಿದ ಮೇಲೆ ತಂದೆಯು ವರನನ್ನು ಪ್ರಾರ್ಥಿಸುತ್ತಾನೆ:

**ಧರ್ಮೇಚಾರ್ಥೇ ಕಾಮೇಚ**
**ನಾತಿಚರಿತವ್ಯಾ ತ್ವಯೇಯಮ್ ||**

ನೀನು ಧರ್ಮ, ಅರ್ಥ, ಕಾಮಗಳಲ್ಲಿ ಇವಳನ್ನು ಮೀರಿ ನಡೆಯಬೇಡ.

ವರನ ಸ್ವೀಕಾರ:

**ನಾತಿ ಚರ್ಯಾಮಿ |**

ನಾನು ಮೀರುವುದಿಲ್ಲ.

ಪಾಣಿಗ್ರಹಣ ಹೋಮದಲ್ಲಿ ವರನು ಕನ್ಯೆಯ ಕೈಹಿಡಿಯುವಾಗ:

**ಗೃಹ್ಣಾಮಿ ತೇ ಸೌಭಗತ್ವಾಯ ಹಸ್ತಂ**
**ಮಯಾ ಪತ್ಯಾ ಜರದಷ್ಟಿರ್ಯಥಾಸಃ**
**ಭಗೋ ಆರ್ಯಮಾ ಸವಿತಾ ಪುರಂಧಿ್ರ**
**ರ್ಮಹ್ಯಂ ತ್ವಾ ದುರ್ಗಾರ್ಹಪತ್ಯಾಯ ದೇವಾಃ ||**

ನಾನು ಸೌಭಾಗ್ಯಕ್ಕಾಗಿ ನಿನ್ನನ್ನು ಕೈಹಿಡಿಯುತ್ತಿದ್ದೇನೆ. ನಾನು ನಿನ್ನ ಗಂಡ, ನೀನು ನನ್ನೊಡನೆಯೇ ಮುದುಕಿಯಾಗು. ನಿನ್ನ ಮೂಲಕ ನಾನು ಗೃಹಸ್ವಾಮಿಯಾಗಲೆಂದು ಆರ್ಯಮಾ, ಸವಿತಾ, ಪುರಂಧ್ರಿ (ಪೂಷಾ) ದೇವತೆಗಳು ನಿನ್ನನ್ನು ನನಗೆ ಕೊಡುತ್ತಲಿದ್ದಾರೆ.

ನಾವಿಬ್ಬರೂ ಪರಸ್ಪರ ಪ್ರೀತಿಯುಕ್ತರಾಗೋಣ, ಉಜ್ವಲರಾಗೋಣ, ಪ್ರಸನ್ನಚಿತ್ತ ರಾಗೋಣ.

**ಪಶ್ಯೇಮ ಶರದಃ ಶತಂ, ಜೀವೇಮ**
**ಶರದಃ ಶತಂ, ಶೃಣುವಾಮ ಶರದಃ ಶತಂ ||**

ನಾವು ನೂರು ವರ್ಷಗಳವರೆಗೂ ಒಬ್ಬರನ್ನೊಬ್ಬರು ನೋಡುವಂತೆಯೂ ನೂರು ವರ್ಷಗಳ ತನಕ ಬದುಕಿರುವಂತೆಯೂ ನೂರು ವರ್ಷಗಳ ತನಕ ಪರಸ್ಪರ ಸಂಭಾಷಣೆ ಮಾಡುವಂತೆಯೂ ಅನುಗ್ರಹವಾಗಲಿ.

ಸಪ್ತಪದಿಯನ್ನು ನಡೆಯುವಾಗ:

ಓಂ ಇಷೇ ಏಕಪದಾ ಭವ
ಸಾ ಮಾಮನುವ್ರತಾಭವ
ಊರ್ಜೇ ದ್ವಿಪದಾ ಭವ,
ಸಾ ಮಾಮನುವ್ರತಾಭವ
ರಾಯಸ್ಪೋಷಾಯ ತ್ರಿಪದಾ ಭವ,
ಸಾ ಮಾಮನುವ್ರತಾಭವ
ಮಾಯೋ ಭವಾಯ ಚತುಷ್ಪದಾ ಭವ
ಸಾ ಮಾಮನುವ್ರತಾಭವ
ಪ್ರಜಾಭ್ಯಃ ಪಂಚಪದಾ ಭವ
ಸಾ ಮಾಮನುವ್ರತಾಭವ
ಋತುಭ್ಯಃ ಷಟ್ಪದಾ ಭವ
ಸಾ ಮಾಮನುವ್ರತಾಭವ
ಸಖೇ ಸಪ್ತಪದಾ ಭವ
ಸಾ ಮಾಮನುವ್ರತಾಭವ ||

ಅನ್ನಕ್ಕಾಗಿ ಒಂದು ಹೆಜ್ಜೆಯನ್ನಿಡು ಮತ್ತು ಅದರಲ್ಲಿ ನನ್ನನ್ನು ಅನುಸರಿಸುವಳಾಗು.
ಬಲದ ಅಭಿವೃದ್ಧಿಗಾಗಿ ಒಂದು ಹೆಜ್ಜೆಯನ್ನಿಡು, ಇದರಲ್ಲಿ ನನ್ನನ್ನು ಅನುಸರಿಸುವವಳಾಗು.

ದನದ ಹೆಚ್ಚಿಗೆಗಾಗಿ ಮೂರನೆಯ ಹೆಜ್ಜೆಯನ್ನು ಇಡು, ಇದರಲ್ಲಿ ನನ್ನನ್ನು ಅನುಸರಿಸುವವನಾಗು.

ಮಮತೆಯುಂಟಾಗುವುದಕ್ಕಾಗಿ ನಾಲ್ಕನೆಯ ಹೆಜ್ಜೆಯನ್ನು ಇಡು, ಇದರಲ್ಲಿ ನನ್ನನ್ನು ಅನುಸರಿಸು.

ಸಂತಾನಲಾಭಕ್ಕಾಗಿ ಐದನೆ ಹೆಜ್ಜೆಯನ್ನು ಇಡು, ಇದರಲ್ಲಿ ನನ್ನನ್ನು ಅನುಸರಿಸು.

ಅನುಕೂಲ ಋತುಗಳಿಗಾಗಿ (ಒಳ್ಳೆಯ ಕಾಲಕ್ಕಾಗಿ) ಆರನೆಯ ಹೆಜ್ಜೆಯನ್ನು ಇಡು, ಇದರಲ್ಲಿ ನನ್ನನ್ನು ಅನುಸರಿಸು.

ನಮ್ಮ ಪರಸ್ಪರ ಸ್ನೇಹಕ್ಕಾಗಿ ಏಳನೇ ಹೆಜ್ಜೆಯನ್ನು ಇಡು, ಇದರಲ್ಲಿ ನನ್ನನ್ನು ಅನುಸರಿಸು.

ಹೆಣ್ಣಿಗೆ ಆಶೀರ್ವಾದ :

ಸ್ಯೋನಾ ಭವ ಶ್ವಶುರೇಭ್ಯಃ
ಸ್ಯೋನಾ ಪತ್ಯೋ ಗೃಹೇಭ್ಯಃ
ಸ್ಯೋನಾಸ್ಯೈ ಸರ್ವಸ್ಯೈ ವಿಶೆ
ಸ್ಯೋನಾ ಪುಷ್ಟಾಯೈಷಾಂ ಭವಂ ||

ನೀನು ಅತ್ತೆಮಾವಂದಿರಿಗೆ ಸುಖವನ್ನುಂಟುಮಾಡುವವಳಾಗು, ನೀನು ನಿನ್ನ ಗಂಡನ ಮನೆಗೆ ಸೌಖ್ಯವನ್ನುಂಟುಮಾಡುವವಳಾಗು, ಈ ಸಮಸ್ತ ಜನಗಳಿಗೂ ಸುಖವನ್ನುಂಟು ಮಾಡುವವಳಾಗು, ನೀನು ಇವರ ಪುಷ್ಟಿಗಾಗಿ ಸುಖವನ್ನು ತರುವವಳಾಗು.

ಆಶೀರ್ವಾದ :

ಇಹೇಮಾನಿಂದ್ರ ಸಂನೂದ ಚಕ್ರವಾಕೇವ ದಂಪತೀ
ಪ್ರಜಯೈನಾ ಸ್ವಸ್ತಕೌ ವಿಶ್ವಮಾಯುರ್ವ್ಯಶ್ನುತಾಮ್||

ಎಲೈ ಇಂದ್ರನೆ, ಚಕ್ರವಕ್ಕಿಗಳಂತೆ ಈ ದಂಪತಿಗಳನ್ನು ಜೋಡಿಸುವವನಾಗು. ಇವರಿಬ್ಬರೂ ಸಂತಾನ ಲಾಭವನ್ನು ಪಡೆಯಲಿ. ಇವರ ಮನೆಯು ಉತ್ತಮವಾದುದ್ದಾಗಲಿ ಮತ್ತು ಇವರಿಗೆ ಪೂರ್ಣಾಯುಸ್ಸು ದೊರೆಯಲಿ.

ಊರಿಗೆ ಊರೇ ವಧೂವರರ ಮೇಲೆ ಮಂತ್ರಾಕ್ಷತೆ ಎರಚಿ ಆಶೀರ್ವದಿಸಿದರು.

ಮಂಗಳವಾದ್ಯಗಳು ಮೊಳಗಿದವು.

ಆಮಂತ್ರಿತರಾಗಿ ಬಂದಿದ್ದ ಹೆಣ್ಣುಮಕ್ಕಳು ನಾಗಸ್ವರದ ಶೃತಿಯ ಮೇಲೆ ಧ್ವನಿಯೇರಿಸಿ ಹಾಡುತ್ತಿದ್ದರು, ಮದುವೆಮಂಟಪ ಸಂಭ್ರಮ, ಸಂರಾವದಿಂದ ತುಂಬಿಹೋಯಿತು.

ಅಲ್ಲಲ್ಲಿ ಸಣ್ಣ ಮಕ್ಕಳು ಅರಳುಂಡೆ, ಕಡಲೆಕಾಯಿ ಬೀಜದ ಉಂಡೆಗಳಿಗಾಗಿ ಪುಟ್ಟ ಕದನ ನಡೆಸುತ್ತಿದ್ದರು.

ಚಂಡಿಹಿಡಿದಿದ್ದ ಮಕ್ಕಳನ್ನು ತಾಯಂದಿರು ಬಡಿದು ಎತ್ತಿಕೊಳ್ಳುತ್ತಿದ್ದರು. ಅವು ತಾಯ ಮೊಲೆಯೂಡುತ್ತಾ ಸಮಾಧಾನ ತಂದುಕೊಳ್ಳುತ್ತಿದ್ದವು.

ಗೌಡರು, ರುದ್ರಶೆಟ್ಟಿ ಅವರ ಪರಿವಾರಗಳು ಗಂಭೀರವಾಗಿ ಕುಳಿತು ವಿವಾಹವಿಧಿಯನ್ನು ಭಕ್ತಿಯಿಂದ ನೋಡುತ್ತಿದ್ದರು.

ಪೂರ್ವಸುಮಂಗಲಿಯಾದ ನರಸಮ್ಮ ಎಲ್ಲರೊಂದಿಗೆ ಬಂದು ಕುಳಿತುಕೊಳ್ಳುವಂತಿರಲಿಲ್ಲ. ವಿವಾಹಮಂಟಪದ ಎದುರಿದ್ದ ಬಾಗಿಲಿನ ಪಕ್ಕದಲ್ಲಿ ನಿಂತು ಅಳಿಯ, ಮಗಳನ್ನು ನೋಡಿನೋಡಿ ಆನಂದಭಾಷ್ಪ ಸುರಿಸುತ್ತಿದ್ದಳು.

ನೂರಾರು ಜನಗಳು ಒಟ್ಟಿಗೆ ಕುಳಿತು ಊಟಮಾಡುತ್ತಿದ್ದುದನ್ನು ಕಂಡು ಭಟ್ಟರಿಗೆ ಪರಮಾನಂದವಾಯಿತು. ಯಾರಿಗೂ ಕೊರತೆಯಾಗದಂತೆ ಧಾರಾಳವಾಗಿ ಬಡಿಸಬೇಕೆಂದು ಭಟ್ಟರು ಸ್ವಯಂಸೇವಕರಿಗೆ ಎಚ್ಚರಕೊಡುತ್ತಿದ್ದರು. ಪರಮಾನ್ನ ಬಡಿಸುವವರೊಂದಿಗೆ ತಾವೇ ಹೊರಟು, ಅವರ ಕೈಯಿಂದ ಸೌಟು ಕಸಿದುಕೊಂಡು ಬಡಿಸಲಾರಂಭಿಸಿದರು. ಕಂಠಪೂರ್ತಿ ಹೊಡೆದಿದ್ದ ರಂಗ.

"ಸಾಕು ಬುದ್ದಿ–ಪರಮಾತ್ಮ ದಣಿದುಬುಟ್ಟವ್ನೆ" ಎಂದ.

"ದುಡಿಯೋರು ಚೆನ್ನಾಗಿ ತಿನ್ನಬೇಕಪ್ಪ–ತೊಗೋ ಇನ್ನೊಂದು ಸೌಟು ಪಾಯಸ ಹೊಡಿ" ಎಂದು ಉಪಚರಿಸುತ್ತಾ ಭಟ್ಟರು ಬಡಿಸಿದರು. ರಂಗ ಸ್ವಲ್ಪ ಪ್ರಯಾಸದಿಂದಲೇ ಪಾಯಸ ಒಳಕ್ಕಿಳಿಸಿದ.

ಒಬ್ಬಟ್ಟು (ಹೋಳಿಗೆ) ವಿನಿಯೋಗಕ್ಕೂ ಭಟ್ಟರೇ ಸಿದ್ಧವಾದರು. ಯೂಸುಫ್, ಕರೀಮ್, ಖಲಂದರ್ ಅವರನ್ನು ಉಪಚರಿಸಿ ನಾಲ್ಕು ನಾಲ್ಕು ಜತೆ 'ಹೋಳಿಗೆ' ಅವರಿಗೆ ಬಡಿಸಿ, ಗೋಮುಖದಿಂದ ತುಪ್ಪ ಸುರಿಸಿದರು.

"ಇದ್ದಂಗೆ ತಿನ್ನೋದು ಮಾರಾಜಾ" ಎಂದು ಖಲಂದರ್ ಕೇಳಿದ.

"ನಿಮಗೆಲ್ಲಾ ಸಿಹಿಯೆಂದರೆ ಇಷ್ಟ. ನಿಧಾನವಾಗಿ ಊಟಮಾಡು ಖಲಂದರ್–ನೂರು ಬಾಯಲ್ಲಿ ಮನದಣಿಯ ಉಂಡರೇ ಭಗವಂತನಿಗೆ ಪ್ರೀತಿ."

ಡಿ. ಸಿ. ಸಾಹೇಬರು ಎಲ್ಲವನ್ನೂ ನೋಡುತ್ತ ಅವಾಕ್ಕಾದರು. ಎಂಥ ಸೌಜನ್ಯ! ಎಂಥ ಸಂಸ್ಕೃತಿ!! ಬ್ರಾಹ್ಮಣನಾಗಲಿ ಬ್ರಾಹ್ಮಣೇತರನಾಗಲಿ, ಹಿಂದುವಾಗಲಿ ಮುಸ್ಲಿಮನಾಗಲಿ ಒಂದು ಎಂದು ಭಾವಿಸುವ ಗುಣ ಎಷ್ಟು ದೊಡ್ಡದು!!! ಈ ಭಾವನೆಯೇ ನಮ್ಮ ದೇಶದಲ್ಲೆಲ್ಲಾ ಬೆಳೆಯಬಾರದೇ? ಸಕಲ ಜೀವಕೋಟಿಯೂ ಭಗವದ್ಸಂತಾನಕ್ಕೆ ಸೇರಿದವು ಎಂಬ ತತ್ತ್ವ ನಿತ್ಯ ವಾಗಬಾರದೇ? ಎಂದು ಹಾರೈಸಿದರು.

ಸಂತರ್ಪಣೆ ಮುಗಿಯುವವೇಳೆಗೆ ಸಂಜೆ ಐದು ಗಂಟೆಯಾಯಿತು.

ಸಂಧ್ಯೆ ಅದೇ ಮೆಲ್ಲಮೆಲ್ಲನೆ ಜಾರಿ ಇರುಳಿಗೆಡೆಗೊಡುತ್ತಿತ್ತು. ಆಕಾಶ ದಲ್ಲಿ ಅಸ್ಪಷ್ಟವಾಗಿದ್ದ ತಾರೆಗಳು ಸ್ಪಷ್ಟವಾಗಿ ತಮ್ಮ ಅನೂನ ನೀಲಪ್ರಭೆ ಯನ್ನು ಬೀರುತ್ತಿದ್ದವು. ಹಸಿರುಡಿಗೆ ಧರಿಸಿ ವಿರಾಜಿಸುತ್ತಿದ್ದ ನಿಸರ್ಗರಮಣಿ ಚೆಂಗುಲಾಬಿ ವರ್ಣದ ಕುಪ್ಪಸ ಧರಿಸಿದಂತಿತ್ತು. ನಕ್ಷತ್ರಗಳೇ ಅವಳ ಮುಡಿ ಮಲ್ಲಿಗೆಯಾಗಿದ್ದವು. ಹಕ್ಕಿಪಕ್ಕಿಗಳ ಮೆಲ್ಲುಲಿ ಈ ವಾತಾವರಣಕ್ಕೆ ತಕ್ಕ ಹಿನ್ನೆಲೆ ಕಲ್ಪಿಸಿದ್ದವು. ಕಂಬ, ಬೋದಿಗೆಗಳಿಲ್ಲದೆ ತೂಗುತೊಟ್ಟಿಲಿನಂತೆ ನಿಂತಿದ್ದ ನೀಲಾಕಾಶ ಶಾಂತಿಗಾಯತ್ರಿಯನ್ನು ಜಪಿಸುತ್ತಿತ್ತು.

ಅಮೃತಭೋಜನದಿಂದ ಸಂತುಷ್ಟರಾಗಿದ್ದ ರುದ್ರಾಕ್ಷಿಪುರದ ಜನತೆ ಕಂಡು ಪ್ರಕೃತಿಯೂ ತುಷ್ಟಿ ಕಳೆದಂತಿತ್ತು.

ಊರಿನವರು ಒಬ್ಬೊಬ್ಬರಾಗಿ ಚಾವಡಿಯಲ್ಲಿ ಸೇರಲಾರಂಭಿಸಿದರು. ಸಭೆ ತುಂಬಿದ ಮೇಲೆ ಹನುಮಯ್ಯ ಹೋಗಿ ಡಿ. ಸಿ. ಸಾಹೇಬರನ್ನು ಕರೆದು ಕೊಂಡು ಬಂದ. ಸಾಹೇಬರು ಬಂದವರೇ 'ಶಾಸ್ತ್ರಿಗಳೆಲ್ಲಿ' ಎಂದು ಕೇಳಿ ದರು. 'ಈಗಲೇ ಬರುತ್ತಾರೆ' ಎಂದು ಗೌಡರು ಉತ್ತರಿಸಿದರು.

ಸಾಹೇಬರು ರೈತರ ಕಷ್ಟಸುಖಗಳನ್ನು ವಿಚಾರಿಸಿದರು. ಗೊಬ್ಬರ ವಿನಿಯೋಗಮಾಡುವ ಸಂದರ್ಭದಲ್ಲಿ ಕಛೇರಿಯ ನೌಕರರು ಮಾಡುವ ಅನ್ಯಾಯಗಳನ್ನು ರೈತರು ವರ್ಣಿಸಿದರು. ಭೂಮಿಗೆ ದರಖಾಸ್ತು ಹಾಕಿ

ಕೊಂಡಿದ್ದ ಕೆಲವರು ತಮ್ಮ ಪರಿಸ್ಥಿತಿಯನ್ನು ನಿವೇದಿಸಿಕೊಳ್ಳುತ್ತಿದ್ದರು. ಡಿ. ಸಿ. ಸಾಹೇಬರು ಎಲ್ಲವನ್ನೂ ಶಾಂತಿಯಿಂದ ಕೇಳುತ್ತ ಸೌಹಾರ್ದ ವ್ಯಕ್ತಪಡಿಸುತ್ತಿದ್ದರು.

ಭಟ್ಟರು ಬರುತ್ತಲೆ ಸಭೆಯೆದ್ದು ನಿಂತು ಅವರನ್ನು ಗೌರವಪೂರ್ವಕ ವಾಗಿ ಸ್ವಾಗತಿಸಿತು. 'ತಡವಾಯಿತು ಕ್ಷಮಿಸಬೇಕು' ಎಂದು ಭಟ್ಟರು ಪ್ರಾರ್ಥಿಸಿ ಕುಳಿತುಕೊಂಡರು. ಡಿ. ಸಿ. ಸಾಹೇಬರು ಮೆಲ್ಲನೆ

"ನಿಮ್ಮ ಊಟವಾಯಿತೇ ?" ಎಂದು ಕೇಳಿದರು.

"ಆಯಿತು ಸ್ವಾಮಿ."

ಭಟ್ಟರು ಸುತ್ತ ನೋಡಿ ಎಲ್ಲರೂ ಬಂದಿರುವರೆಂಬುದನ್ನು ಖಚಿತ ಪಡಿಸಿಕೊಂಡು

"ನಮ್ಮೂರಿನ ಜಗಳ ಇಂದು ಖಾವಂದಿರ ಸಮ್ಮುಖದಲ್ಲಿ ಇತ್ಯರ್ಥ ವಾಗಿಬಿಡಬೇಕು" ಎಂದರು.

"ನಾನು ಡಿ. ಸಿ. ಎನ್ನುವುದನ್ನು ನೀವೆಲ್ಲರೂ ಮರೆತು ಹೃದಯಬಿಚ್ಚಿ ಮಾತನಾಡಿ."

"ದೇವಸ್ಥಾನಗಳ ಮುಂದೆ ಮೆರವಣಿಗೆ ಬರುವ ವಿಷಯ ಇತ್ಯರ್ಥ ವಾದರೆ ಎಲ್ಲವೂ ಸರಿಹೋಗುತ್ತದೆ"

ಎಂದು ಹನುಮಯ್ಯ ನಿವೇದಿಸಿದ.

"ಮಾಮೂಲಿನಂತೆ ನಡೆದುಕೊಂಡರೆ ವೈಷಮ್ಯಕ್ಕೆ ಅವಕಾಶವಿರುವು ದಿಲ್ಲ"

ಎಂದು ಡಿ. ಸಿ. ಸಾಹೇಬರು ಹೇಳಿದರು.

"ನಾವು ಮಾಮೂಲಿಗೆ ವಿರುದ್ಧವಾಗಿ ಹೋಗಿಲ್ಲಸ್ವಾಮಿ" ಎಂದು ಕೆಂಗೇಗೌಡರು ಸ್ವಲ್ಪ ಗಟ್ಟಿಯಾಗಿಯೇ ನುಡಿದರು.

"ಮಾಮೂಲು ಯಾರು ಮುರಿದರು–ಇದರಲ್ಲಿ ತಪ್ಪಿತಸ್ಥರು ಯಾರು ಎನ್ನುವ ವಿಷಯದಲ್ಲಿ ಚರ್ಚೆ ಅನಗತ್ಯವೆಂದು ಕಾಣುತ್ತದೆ. ಈಗ ನಾವು ಸೇರಿರುವುದು ಪರಸ್ಪರ ದೋಷಾರೋಪಣೆಮಾಡಿ ಉರಿಯುತ್ತಿರುವ ವೈಮನಸ್ಯದ ಅಗ್ನಿಗೆ ಆಜ್ಯ ಹುಯ್ಯುವುದಕ್ಕಲ್ಲ. ಅಗ್ನಿಯನ್ನು ಹೇಗೆ

ಉಪಶಮನಮಾಡಿ ಊರಿನಲ್ಲಿ ಶಾಂತಿಯನ್ನು ನೆಲೆಗೊಳಿಸಬೇಕೆಂಬುದೇ ಪ್ರಶ್ನೆ. ಅದನ್ನೇ ಉಭಯ ಪಕ್ಷದವರೂ ಗಮನಿಸುವುದೊಳ್ಳೆಯದು"

ಎಂದು ಭಟ್ಟರು ಹೇಳಿದರು.

ಡಿ. ಸಿ. ಸಾಹೇಬರು ಎದ್ದು ನಿಂತು

"ಊರಿನ ಜಗಳ ಮನೆಜಗಳವಿದ್ದಂತೆ. ಮನೆಯ ಗುಟ್ಟನ್ನು ಎಷ್ಟು ಭದ್ರವಾಗಿ, ಗೋಪ್ಯವಾಗಿ ಕಾಯ್ದಿಡಬೇಕೋ ಊರಿನ ಗುಟ್ಟನ್ನು ಹಾಗೇ ರಕ್ಷಿಸಬೇಕು. ನನ್ನ ಅಧಿಕಾರ ಚಲಾಯಿಸಿ ನಿಮ್ಮೂರಿನಲ್ಲಿ ಶಾಂತಿ ನೆಲೆಗೊಳಿಸುವ ಪ್ರಸಂಗ ಬಂದುದಕ್ಕೆ ನಾನು ತುಂಬ ವ್ಯಸನಪಡುತ್ತೇನೆ. ನಿಮ್ಮೂರಿನಲ್ಲಿ ಒಕ್ಕಲಿಗರು, ಲಿಂಗಾಯಿತರು, ಬ್ರಾಹ್ಮಣರು, ಕುರುಬರು, ಮುಸಲ್ಮಾನರು ಇದ್ದೀರಿ. ನೀವೆಲ್ಲಾ ಒಂದು ಮನೆಯವರಂತೆ ನಡೆದುಕೊಂಡರೇ ಊರು ಬದುಕಿ ಬಾಳಿ, ಬೆಳೆಯಲು ಸಾಧ್ಯ.

ನನ್ನ ಅಧಿಕಾರವ್ಯಾಪ್ತಿಯೊಳಗೆ ಅಡಕವಾಗಿರುವ ಎಲ್ಲ ಪ್ರದೇಶಗಳಲ್ಲಿಯೂ ಶಾಂತಿಯನ್ನು ರಕ್ಷಿಸುವುದು ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಿರುವ ನನ್ನ ಕರ್ತವ್ಯ. ಈ ಕೆಲಸ ನಿರ್ವಹಿಸಲು ಸರ್ಕಾರದವರು ನನಗೆ ಸಂಬಳಕೊಡುತ್ತಾರೆ.

ಶಾಂತಿ, ಸೌಹಾರ್ದಸ್ಥಾಪನೆಯಲ್ಲಿ ನಾನು ಡಿ. ಸಿ. ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಿರುವುದರಿಂದ ಮಾತ್ರ ಉತ್ಸುಕನಾಗಿಲ್ಲ. ನಾನು ನಿಮ್ಮ ಹಾಗೆ ಮನುಷ್ಯನೂ, ನಾಗರಿಕನೂ, ಈ ಪುಣ್ಯಭೂಮಿಯ ಪುತ್ರನೂ ಆಗಿದ್ದೇನೆ. ನಮ್ಮ ಜನ ಅಣ್ಣತಮ್ಮಂದಿರಂತೆ ಬಾಳಿ ಲೋಕಕ್ಕೆ ಮಾದರಿಯಾಗಿರಬೇಕೆಂಬುದು ನನ್ನ ಉತ್ಕಟಾಕಾಂಕ್ಷೆ." ಎಂದು ಕೆಂಗೇಗೌಡರ ಕಡೆ ತಿರುಗಿ "ನಿಮ್ಮ ಅಭಿಪ್ರಾಯವೇನು ಗೌಡರೇ" ಎಂದು ಕೇಳಿದರು.

ಗೌಡರು ಎದ್ದು ನಿಂತು ಗಂಭೀರವಾಗಿ

"ಜಿಲ್ಲೆಯ ದಣಿಗಳಾದ ತಾವು, ನಮ್ಮ ಗುರುಸ್ವರೂಪರಾದ ಸ್ವಾಮಿಗಳು ಅಪ್ಪಣೆಕೊಡಿಸಿರುವುದಕ್ಕೆ ಚಾಚೂ ತಪ್ಪದಂತೆ ನಡೆದುಕೊಳ್ಳಲು ನಾನು ಸಿದ್ಧವಾಗಿದ್ದೇನೆ. ಹಳೆಯ ಕಿನಿಸನ್ನೇ ಮನಸ್ಸಿನಲ್ಲಿಟ್ಟುಕೊಂಡು ದ್ವೇಷ ಸಾಧಿಸುವುದು ಶ್ರೇಯಃಪ್ರದವಲ್ಲ. ಈಗಿನ ಸಂದರ್ಭದಲ್ಲಿ ನಾವು ಏನು ಮಾಡಬೇಕು—ದೇವರ ಮೆರವಣಿಗೆ ವಿಷಯ ಹೇಗೆ ಇತ್ಯರ್ಥಮಾಡ

ಬೇಕೆಂಬುದನ್ನು ರುದ್ರಶೆಟ್ಟರೇ ಹೇಳಲಿ. ಅವರು ಏನು ಹೇಳಿದರೂ ಒಪ್ಪಿ ಕೊಳ್ಳಲು ನಾನು ಸಿದ್ದವಾಗಿದ್ದೇನೆ" ಎಂದರು.

ಗೌಡರ ಕಡೆಯವರಿಗೆ ತುಸು ಅಸಮಾಧಾನವಾಯಿತು. ಗೌಡರು ಇಷ್ಟು ತಗ್ಗಿ ನಡೆಯುತ್ತಿರುವುದು ಅನುಚಿತವೆಂದು ಕೆಲವರು ಭಾವಿಸಿದರು.

ರುದ್ರಶೆಟ್ಟೀಗೆ ಪ್ರಾಣಸಂಕಟಕ್ಕಿಟ್ಟುಕೊಂಡಿತು. ಹಳೆಯ ಒಪ್ಪಂದ ಅವನು ಅನುಮೋದಿಸುವಂತಿರಲಿಲ್ಲ; ಹೊಸ ಒಪ್ಪಂದ ಸೂಚಿಸಲು ಅವನು ಸಿದ್ಧವಾಗಿರಲಿಲ್ಲ.

"ಹೇಳಿ ರುದ್ರಶೆಟ್ಟರೇ" ಎಂದು ಡಿ. ಸಿ. ಸಾಹೇಬರು ಒತ್ತಾಯ ಪಡಿಸಲು ರುದ್ರಶೆಟ್ಟಿ

"ನನಗೆ ಹತ್ತು ನಿಮಿಷ ಅವಕಾಶಕೊಡಬೇಕು ಸ್ವಾಮಿ. ನಮ್ಮ ಜನಗಳನ್ನು ಒಂದು ಮಾತು ಕೇಳಿ ನನ್ನ ಅಭಿಪ್ರಾಯ ತಿಳಿಸುತ್ತೇನೆ" ಎಂದ.

"ಆಗಬಹುದು" ಎಂದು ಡಿ. ಸಿ. ಸಾಹೇಬರು ಒಪ್ಪಿಕೊಂಡರು. ರುದ್ರ ಶೆಟ್ಟಿ ಅವನ ಬಳಗ ಸಭೆಯನ್ನು ಬಿಟ್ಟು ಹೊರಗೆ ಹೋದರು.

ರುದ್ರಶೆಟ್ಟಿ ಅವನ ಪರಿವಾರ ಹತ್ತು ನಿಮಿಷಗಳಲ್ಲಿ ಹಿಂದಿರುಗಲಿಲ್ಲ. ಒಂದು ಗಂಟೆ ಕಳೆದರೂ ಅವರ 'ಪಂಚಾಯಿತಿ' ಮುಗಿದಿರಲಿಲ್ಲ. ಹನುಮಯ್ಯ ಗೊಣಗಿದುದನ್ನು ಕಂಡು ಕೆಂಗೇಗೌಡರು 'ದೊಡ್ಡೋರೆದುರಿಗೆ ಹುಚ್ಚುಹುಚ್ಚಾಗಿ ಆಡಬಾರದು—ಸುಮ್ಮನಿರು ಹನುಮಣ್ಣ' ಎಂದು ಗದರಿಕೊಂಡರು.

ರುದ್ರಶೆಟ್ಟಿ ಪರಿವಾರದೊಂದಿಗೆ ಹಿಂದಿರುಗಲು ಎಲ್ಲರ ನೋಟವೂ ಅವನ ಕಡೆ ತಿರುಗಿತು.

"ಇತ್ಯರ್ಥವಾಯಿತೇ ರುದ್ರಶೆಟ್ಟರೇ" ಎಂದು ಡಿ. ಸಿ. ಸಾಹೇಬರು ಕೇಳಿದರು.

ರುದ್ರಶೆಟ್ಟಿ ಎದ್ದುನಿಂತು

"ಆಯಿತು ಮಾಸ್ವಾಮಿ. ಮಾಮೂಲಿನಂತೆ ನಡೆಯುವುದೇ ಒಳ್ಳೆಯ ದೆಂದು ನಮ್ಮ ಜನ ಅಭಿಪ್ರಾಯಪಡುತ್ತಾರೆ."

"ಈ ವಿಷಯದಲ್ಲಿ ಮತ್ತೆ ಗಲಭೆಯಾದರೆ ನಾನು ನಿಮ್ಮನ್ನೂ ಕೆಂಗೇ ಗೌಡರನ್ನೂ ಆಕ್ಷೇಪಿಸುತ್ತೇನೆ."

"ಸ್ವಾಮಿಯ ಚಿತ್ತ. ಗಲಭೆಗೆ ಅವಕಾಶವಿಲ್ಲದಂತೆ ನಾವು ನೋಡಿ ಕೊಳ್ಳುತ್ತೇವೆ."

"ಇದು ನಿಮಗೆ ಸಮ್ಮತವೋ ಗೌಡರೇ ?"

"ಸಮ್ಮತ ಸ್ವಾಮಿ" ಎಂದರು.

ಉಭಯ ಪಕ್ಷದ ನಾಯಕರಿಗೂ ಭಟ್ಟರು ವೀಳೆಯ ಕೊಡಿಸಿ, ಹೂ ಮಾಲೆ ಹಾಕಿದರು. ಕೆಂಗೇಗೌಡರು, ರುದ್ರಶೆಟ್ಟರು ಪರಸ್ಪರ ಅಪ್ಪಿಕೊಂಡು, ಭಟ್ಟರ ಪಾದಮುಟ್ಟಿ ನಮಸ್ಕರಿಸಿದರು.

ಭಟ್ಟರ ಕಣ್ಣುಗಳಿಂದ ಧಾರಾಕಾರವಾಗಿ ಆನಂದಬಾಷ್ಪ ಒಸರುತ್ತಿತ್ತು. ತಮ್ಮ ಉದ್ವೇಗಕ್ಕೆ ತಡೆಹಾಕಿ ಅವರು

"ಸ್ವಾಮಿ – ಭಗವಂತನ ಆಶೀರ್ವಾದ, ತಮ್ಮ ವಿಶ್ವಾಸದಿಂದ ಈ ದಿವಸ ದೊಡ್ಡ ಕೆಲಸ ಸಾಧನೆಯಾಯಿತು. ಗೌಡರಿಗೂ, ರುದ್ರಶೆಟ್ಟರಿಗೂ ಇದ್ದ ವೈಮನಸ್ಯ ತೊಲಗಿ, ಅವರಲ್ಲಿ ಪೂರ್ವದ ವಿಶ್ವಾಸ ಮೊಳಗಬೇಕೆಂದು ನಾನು ಆಶಿಸುತ್ತಿದ್ದೆ. ಅದು ಸಾರ್ಥಕವಾದುದು ನನ್ನ ಪ್ರಯತ್ನದಿಂದಲ್ಲ. ಈ ಕೀರ್ತಿ ಪೂರ್ಣವಾಗಿ ಗೌಡರ ಸೌಭಾಗ್ಯವತಿ ದೊಡ್ಡಮ್ಮನಿಗೂ, ಶೆಟ್ಟರ ಸೌಭಾಗ್ಯವತಿ ತಿಪ್ಪಮ್ಮನಿಗೂ ಸೇರಬೇಕು. ಭಗವತಿಯೇ ಅವರ ರೂಪಿನಲ್ಲಿ ಬಂದು ಗೌಡರಿಗೂ ಶೆಟ್ಟರಿಗೂ ಅನ್ಯೋನ್ಯ ಬೆಳಸಿದ್ದಾಳೆ. ಇದು ಶಾಶ್ವತ ವಾಗಿ—ಸಾರೋದ್ಧಾರವಾಗಿ ನಡೆಯಬೇಕೆಂಬುದೇ ನನ್ನ ಮಹದಾಶಯ.

ತಾವು ಈ ದಿನ ಇಲ್ಲಿಗೆ ದಯಮಾಡಿಸದಿದ್ದರೆ ಈ ಕೆಲಸ ಇಷ್ಟು ಸುಲಲಿತವಾಗಿ ಸಾಧ್ಯವಾಗುತ್ತಿರಲಿಲ್ಲ. ನಮ್ಮ ದೇಶದ ಅಧಿಕಾರಿಗಳೆಲ್ಲಾ ತಮ್ಮಂತೆ ಧರ್ಮಾಭಿಮಾನಿಗಳೂ ಜನಪ್ರಿಯರೂ ಆಗಿದ್ದರೆ ನಮ್ಮ ಪುಣ್ಯಕ್ಕೆ ಎಣೆಯುಂಟೇ ?

ಹತ್ತು ಜನ ಬಾಳುವ ಹಳ್ಳಿ, ನೂರು ಜನ ಬಾಳುವ ಪಟ್ಟಣದಲ್ಲಿ ಭಿನ್ನಾಭಿಪ್ರಾಯ, ವಿರಸ, ಪರಸ್ಪರ ಅಪನಂಬಿಕೆ ಹುಟ್ಟುವುದು ಸಹಜ. ಒಂದು ಸಂಸಾರದಲ್ಲಿಯೇ ಒಡಕುಗಳು ಹುಟ್ಟುವಾಗ ಭಿನ್ನಭಿನ್ನ ಜಾತಿ, ಮತ, ಪಂಥ, ವಿಚಾರಗಳಿಗೆ ಬದ್ಧರಾದ ಜನರಲ್ಲಿ ಭಿನ್ನಾಭಿಪ್ರಾಯ ಹುಟ್ಟು ವುದರಲ್ಲಿ ಆಶ್ಚರ್ಯವೇನು ? ಆದರೆ ಇದನ್ನೇ ದೊಡ್ಡದು ಮಾಡಿಕೊಂಡು, ಸಮಷ್ಟಿಯ ಕಲ್ಯಾಣಕ್ಕೆ ಘಾತವಾಗುವ ರೀತಿಯಲ್ಲಿ ವರ್ತಿಸುವುದು

ಅನುಚಿತ. ವ್ಯಕ್ತಿ ತನ್ನ ಓರೆಕೋರೆಗಳನ್ನು ತಿದ್ದಿಕೊಳ್ಳಲು ಸದಾ ಪ್ರಯತ್ನ ನಡೆಸಬೇಕು; ಸಮಾಜ ಅವನ ಪ್ರಯತ್ನವನ್ನು ಸಹಾನುಭೂತಿಯಿಂದ ನೋಡಬೇಕು. ಅವನು ಜಯಗಳಿಸುವುದಕ್ಕೆ ನೆರವಾಗಬೇಕು.

ನಾನು ವೈಯಕ್ತಿಕವಾಗಿ ಕೆಂಗೇಗೌಡರಿಗೂ, ರುದ್ರಶೆಟ್ಟರಿಗೂ ಅಪಾರ ಕೃತಜ್ಞತೆ ಅರ್ಪಿಸಬೇಕಾಗಿದೆ. ಕೆಲವು ವರ್ಷಗಳ ಹಿಂದೆ ಗತಿಸಿದ ನನ್ನ ಆಪ್ತಸ್ನೇಹಿತ ದಾಸಪ್ಪ, ದೊಡ್ಡ ಜವಾಬ್ದಾರಿಯೊಂದನ್ನು ನನ್ನ ಮೇಲೆ ಹೊರೆಸಿದ. ಪಾರ್ವತಿಗೆ ವಿವಾಹವಾಗಿ ಅವಳು ಯೋಗ್ಯರೊಬ್ಬರ ಮನೆ ಸೇರುವವರೆಗೆ ನನಗೆ ನೆಮ್ಮದಿಯಿರಲಿಲ್ಲ. ಇದರಿಂದ ನನ್ನ ಪೂಜೆ, ಅನುಷ್ಠಾನಗಳೂ ನಿಂತುಹೋಗಿದ್ದವು. ಗೌಡರು, ಶೆಟ್ಟರು ನನ್ನ ಮನಸ್ಸಿನಿಂದ ದೊಡ್ಡ ಹೊರೆ ಇಳಿಸಿ ಮಹೋಪಕಾರಮಾಡಿದ್ದಾರೆ.

ನನಗೂ ವಯಸ್ಸಾಗುತ್ತ ಬಂದಿತು. ಇನ್ನು ಉಳಿದಿರುವ ಅಲ್ಪಾಯುಷ್ಯವನ್ನು ಭಗವತ್ಸೇವೆ, ಗುರುಸೇವೆಯಲ್ಲಿ ಕಳೆದು ಈ ಜನ್ಮ ಸಾರ್ಥಕಪಡಿಸಿಕೊಳ್ಳಬೇಕೆಂದಿದ್ದೇನೆ—ಶೃಂಗೇರಿಗೆ ನಾನು ಹೋಗಲು ತಮ್ಮೆಲ್ಲರ ಅನುಮತಿ ಬೇಡುತ್ತೇನೆ. ನಾನು ಎಲ್ಲೇ ಇದ್ದರೂ ನಿಮ್ಮ ಶ್ರೇಯಸ್ಸನ್ನೇ ಕೋರುತ್ತಿರುತ್ತೇನೆಂಬುದನ್ನು ನಂಬಿ. ನಮ್ಮೂರಿನ ಜನ ನನ್ನ ಬಗ್ಗೆ ಅಪಾರ ಪ್ರೇಮತೋರಿದ್ದಾರೆ. ಅಲ್ಪನಾದ ನನ್ನನ್ನು ಗುರುಸ್ಥಾನಕ್ಕೇರಿಸಿದ್ದಾರೆ. ಯಾರನ್ನು ಪರಮಗುರುವೆಂದು ನಾನು ಅಂಗೀಕರಿಸಿದ್ದೇನೆಯೋ ಅವರು ಲೋಕಕಲ್ಯಾಣಕ್ಕಾಗಿ ಘೋರ ತಪಸ್ಸನ್ನಾಚರಿಸುತ್ತಿದ್ದಾರೆ. ಅವರ ತೇಜಸ್ಸಿನ ದಿವ್ಯ ಬೆಳಕು ನಿಮ್ಮನ್ನು ಸದಾ ರಕ್ಷಿಸಲಿ.

**ಓಂ ಸಹ ನಾವವತು**
**ಸಹ ನೌ ಭುನಕ್ತು**
**ಸಹ ವೀರ್ಯಂ ಕರವಾವಹೈ**
**ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ**
**ಓಂ ಶಾಂತಿಃ ಶಾಂತಿಃ ಶಾಂತಿಃ ||"**

ಭಟ್ಟರು ಮಾತು ಮುಗಿಸಿ ಕುಳಿತೊಡನೆಯೇ ಸಭೆಗೆ ಸಭೆಯೇ ಅವರನ್ನು ಸುತ್ತುಗಟ್ಟಿತು. ರುದ್ರಶೆಟ್ಟಿ ಕಣ್ಣೀರುಗರೆಯುತ್ತಾ

"ನನ್ನ ಮೇಲೆ ಬೇಜಾರು ಬಂತೇ ಸ್ವಾಮಿ" ಎಂದು ಕೇಳಿದ.

"ನೀವು ಹ್ವಾದ್ರೆ ಮ್ಯಾಕೆ ನಮ್ಮ್ಯಾರು ದಿಕ್ಕು ನಮ್ಮಪ್ಪ" ಎಂದು ರಂಗ ಕೇಳಿದ.

"ತಾವು ಓಗಾಕೆ ನಾವು ಬಿಡಾಕಿಲ್ಲ" ಎಂದು ಕರೀಮ್ ಹಟಹಿಡಿದ.

ಗೌಡರು ಮೂಕರಂತೆ ಕಂಬನಿಗರೆಯುತ್ತಾ ಕುಳಿತರು. ಭಟ್ಟರು ಎಲ್ಲರಿಗೂ ಸಮಾಧಾನ ಹೇಳಿದರು.

ಡಿ. ಸಿ. ಸಾಹೇಬರು ಹೊರಟು ನಿಂತರು. ಊರಿಗೆ ಊರೇ ಅವರನ್ನು ಕಾರಿನ ಬಳಿ ಅನುಸರಿಸಿತು. ಗೌಡರು, ಶೆಟ್ಟರು, ಹಾರ ತುರಾಯಿ, ಹಣ್ಣು ಗಳನ್ನು ಸಾಹೇಬರಿಗೆ ಒಪ್ಪಿಸಿದರು.

ಸಾಹೇಬರು ಕಾರು ಹತ್ತುವ ಮುನ್ನ ಭಟ್ಟರ ಬಳಿಗೆ ಬಂದು

"ನನಗೆ ದರ್ಶನಕೊಡದೆ ಶೃಂಗೇರಿಗೆ ಪ್ರಯಾಣ ಬೆಳಸಬೇಡಿ" ಎಂದು ಪ್ರಾರ್ಥಿಸಿದರು.

ಭಟ್ಟರು ಮೌನವಾಗಿ ಸಮ್ಮತಿ ಸೂಚಿಸಿದರು.

# ೧೪

ಮದುವೆ ಮುಗಿಸಿಕೊಂಡು ಊರು ತಲುಪಿದ ಮೇಲೆ ಆದಿಶೇಷಯ್ಯನವರು ಗೆಲುವುಗೊಂಡಿರಲಿಲ್ಲ. ಯಜಮಾನರ ಮನಸ್ಸಿನ ವ್ಯಥೆಯನ್ನು ಊಹಿಸಿದ ನಾಗಮ್ಮ ತಾನಾಗಿಯೇ ಅದನ್ನು ಪ್ರಸ್ತಾಪಿಸಲಿಲ್ಲ. ಮನಸ್ಸಿನಲ್ಲಿದ್ದುದನ್ನು ತಾವಾಗಿಯೇ ಹೇಳಿ ಮನಸ್ಸನ್ನು ಹಗುರಮಾಡಿಕೊಳ್ಳುವುದಕ್ಕೆ ಆದಿಶೇಷಯ್ಯನವರಿಗೆ ಬಿಗುಮಾನ.

ನಾಲ್ಕಾರು ದಿನ ಕಳೆದ ಮೇಲೆ ಒಂದು ದಿನ ಪ್ರಭಾಕರ ತಾಯಿಯ ಹತ್ತಿರ

"ಅಣ್ಣನ ಮದುವೆ ಗೌರವಾರ್ಥ ನಾವೊಂದು ಊಟಹಾಕಬೇಕಮ್ಮಾ" ಎಂದ.

"ಯಾರಿಗೋ ?" ಎಂದು ನಾಗಮ್ಮ ಕೇಳಿದಳು.

"ಅಪ್ಪನ ಸ್ನೇಹಿತರು, ಅಣ್ಣನ ಸ್ನೇಹಿತರು—ನನ್ನ ಸ್ನೇಹಿತರಿಗೆ."

"ನಿಮ್ಮ ತಂದೆಯವರನ್ನು ಕೇಳಪ್ಪಾ."

"ಅಪ್ಪ ಏಕೋ ಗುರ್ ಅಂತಾ ಇದ್ದಾನೆ—ಯಾಕಮ್ಮಾ?"

"ಯಾಕೊ, ನನಗೇನು ಗೊತ್ತಪ್ಪಾ!"

"ಪಾಪ! ನಿನಗೆ ಗೊತ್ತೇ ಇಲ್ಲವೇನೋ?" ಎಂದುಕೊಂಡೇ ಆದಿಶೇಷಯ್ಯ ಒಳಗೆ ಪ್ರವೇಶಿಸಿದರು.

"ಪ್ರಭಾಕರ ಹೇಳಿದ್ದು ಕೇಳಿದಿರಾ ?"

"ಕೇಳಿದೆ."

"ಯಾಕೆ ಗುರ್ ಅಂತಾ ಇದ್ದೀರಿ ?"

"ನನ್ನ ಮಗನಿಗೆ ಯಾರೂ ಹೆಣ್ಣು ಕೊಡುವುದಿಲ್ಲಾಂತ ಭಾವಿಸಿ ಯೇನು?"

"ಹಾಗೆಂದರೆ...."

"ರುದ್ರಾಕ್ಷಿಪುರದ ಹೆಣ್ಣು ತಂದುಕೊಳ್ಳುವುದಕ್ಕೆ ನೀನೂ ಗುಂಡ ಭಟ್ಟರೂ ಹಾರಾಡಿಬಿಟ್ಟಿರಿ."

"ಎಲ್ಲಾ ಮಾತುಕತೆಯೂ ನಿಮ್ಮೆದುರಿಗೇ ಆಯಿತಲ್ಲ. ನೀವು ಒಪ್ಪಿ ಕೊಡದಿದ್ದರೆ ಲಗ್ನ ಕೂಡುತ್ತಿತ್ತೇ?—ಋಣಾನುಬಂಧ ಯಾರೂ ತಪ್ಪಿಸಲ ಸಾಧ್ಯವಿಲ್ಲ. ಚಂದ್ರಶೇಖರ ಪಾರ್ವತಿ ಕೈಹಿಡಿಯಬೇಕೆಂದು ಬ್ರಹ್ಮ ಹ ಯಲ್ಲಿ ಬರೆದಿದ್ದರೆ ಯಾರು ತಪ್ಪಿಸಲು ಸಾಧ್ಯ?"

"................................"

"ಈಗಾದ ಗುನುಗೇನು?"

"ಮದುವೆಯಲ್ಲಿ ಹುಡುಗಿ ಹೇಗೆ ಆಡಿತು ನೀನೇ ನೋಡಿದೆಯಲ್ಲಾ!

"ಚಿಕ್ಕವಯಸ್ಸು—ಸೊಸೆಯನ್ನು ತಿದ್ದುವುದು ಅತ್ತೆಯ ಜವಾಬ್ದಾ ತಾನೇ!"

"ವರದಕ್ಷಿಣೆ—ವರೋಪಚಾರ ಒಂದೂ ಇಲ್ಲದ ಇದು ಎಂಥಾ ಮದು ಹೇಳು."

"ನಮ್ಮ ಚಂದ್ರೂ ಮಾವನಮನೆ ದುಡ್ಡು ತೆಗೆದುಕೊಂಡು ಜೀವ ಮಾಡಬೇಕೇ?"

"ಅವನ ಮಾತು ಹೋಗಲಿ–ಮನೆಮಗಳು ಯಶೋಧಾ, ಅವ ಗೊಂದು ಸೀರೆ ಕೊಡಬೇಡವೇ?"

"ಮಗಳ ಉಡುಗೊರೆ ಬೀಗಿತ್ತಿ ಕೈಯಲ್ಲಿ ಕೊಡಿಸೋಣಾಂ ಇದ್ದಿರೇನೋ?"

"ನಿನ್ನದೆಲ್ಲಾ ವಿತಂಡವಾದ."

"ಹೋಗಲಿ!"

"ಸೊಸೆ ಮನೆಗೆ ಬಂದ ಸಂತೋಷಕ್ಕೆ ನಾಲ್ಕು ಜನಕ್ಕೆ ಪಾಯಸದೂ ಹಾಕಿಸುತ್ತೀರೋ ಇಲ್ಲವೋ?"

"ಊಟ ಹಾಕುವುದಕ್ಕೆ ಯಾರು ಬೇಡವೆನ್ನುತ್ತಾರೆ."

"ಏನೂ ಚಿಂತೆಮಾಡಬೇಡೀಂದ್ರೆ—ಪಾತೂನೇ ನಮ್ಮನೆ ಭಾಗ್ಯಲಕ್ಷ್ಮಿ ಆಗಬಹುದು. ಅವಳ ಪುಣ್ಯದಿಂದ ಚಂದ್ರೂ ತನ್ನ ಕಾಲಮೇಲೆ ತಾನು ನಿಲ್ಲುವ ಹಾಗಾದರೆ ಸಾಕು. ಬಡತನವೋ ಸಿರಿತನವೋ ನಮ್ಮ ಪಾಡಿಗೆ ನಾವು ಸುಖವಾಗಿಯೇ ಇದ್ದೇವೆ—ಕಂಡವರ ಗಂಟಿಗೆ ನಾವೇಕೆ ಆಸೆಪಡ ಬೇಕು. ನರಸಮ್ಮ ಒಬ್ಬಂಟಿಗಳು. ಆದರೂ ಮದುವೇನ ಎಷ್ಟು ಮುಚ್ಚಟೆ ಯಿಂದ ಮಾಡಿದಳು. ಈ ಪ್ರಾಂತ್ಯದಲ್ಲೇ ಇಂಥ ಮದುವೆಯಾಗಿಲ್ಲ ಎಂತಾ ಜನ ಕೊಂಡಾಡಲಿಲ್ಲವೇ ? ಊರಿಗೇ ಊರೇ ಅವಳಿಗೆ ಸಹಾಯಮಾಡಿತಲ್ಲ! ದೊಡ್ಡ ಸಾಹೇಬರೂ ಈ ಮದುವೆ ವಿಷಯದಲ್ಲಿ ಎಷ್ಟು ಉತ್ಸಾಹ ತೋರಿಸಿ ದರು !"

"ಭಟ್ಟರಿಂದ ಪಾಠ ಚೆನ್ನಾಗಿ ಕಲಿತಿದ್ದೀ ಬಿಡು."

ಗಂಡನ ಕ್ಷಣಿಕಕೋಪ ಉಪಶಾಂತವಾದುದಕ್ಕೆ ನಾಗಮ್ಮ ಹರ್ಷಿಸಿದಳು.

ಚಂದ್ರಶೇಖರನ ಮದುವೆಯ ಗೌರವಾರ್ಥವಾಗಿ ಮಧ್ಯಾಹ್ನ ಸುಖ ಭೋಜನ, ಸಂಜೆಗೆ ಆರತಿ ಅಕ್ಷತೆ ಇಟ್ಟುಕೊಳ್ಳಲು ನಾಗಮ್ಮ ನಿರ್ಧರಿಸಿದಳು.

ನರಸಮ್ಮ ಮಗಳೊಂದಿಗೆ ಬರಬೇಕೆಂದು ಆಮಂತ್ರಣ ಹೋಯಿತು. ಗುಂಡಾಭಟ್ಟರಿಗೆ ಆದಿಶೇಷಯ್ಯನವರೇ ಕಾಗದ ಬರೆದು ಖಂಡಿತ ಬರಬೇ ಕೆಂದು ಪ್ರಾರ್ಥಿಸಿದ್ದರು.

ಆರತಿ ಅಕ್ಷತೆಯ ದಿನವೇ ನರಸಮ್ಮ, ಪಾರ್ವತಿ ಬೆಳಿಗ್ಗೆಯ ಬಸ್ಸಿನಲ್ಲಿ ಬಂದಿಳಿದರು. ಭಟ್ಟರು ಅನಿವಾರ್ಯದಿಂದ ಬರಲಾಗಲಿಲ್ಲ. ನಾಗಮ್ಮನೇ ಸೊಸೆಗೆ ತೈಲಾಭ್ಯಂಜನ ಮಾಡಿಸಿ, ತಲೆಬಾಚಿ ಹೆರಳುಹಾಕಿದಳು.

ಸಮಾರಂಭ ವಿಜೃಂಭಣೆಯಿಂದ ನೆರವೇರಿದರೂ ಭಟ್ಟರು ಬರಲಿಲ್ಲವಲ್ಲ ಎನ್ನುವ ದುಃಖ ನಾಗಮ್ಮನನ್ನು ಕಾಡಿತು. ತಾಯಿ, ಅತ್ತೆಯ ಎಡಬಿಡದೆ ಅಂಟಿಕೊಂಡಿದ್ದ ಪಾರ್ವತಿಯನ್ನು ಮಾತನಾಡಿಸಲಾಗಲಿಲ್ಲವಲ್ಲಾ ಎಂದು ಚಂದ್ರಶೇಖರ ಅತೃಪ್ತನಾದ. ಆರತಿ ಅಕ್ಷತೆ ಮುಗಿದ ಮಾರನೆಯ ಬೆಳಿಗ್ಗೆಯೇ ನರಸಮ್ಮ, ಪಾರ್ವತಿ ರುದ್ರಾಕ್ಷಿಪುರಕ್ಕೆ ಪ್ರಯಾಣ ಬೆಳಸಿದರು. ಅವನ ಮನದುಮ್ಮಳ ಕಂಡು ಗರುಡಾಚಾರಿ ಪರಿಹಾಸ್ಯಮಾಡುತ್ತಾ

"ವರ್ಷ ಎರಡು ವರ್ಷದಲ್ಲಿ ಹೆಂಡತಿ ಮನೆಗೇ ಬರುತ್ತಾಳೆ-ಬೇಕಾದಷ್ಟು ಮಾತನಾಡಬಹುದು. ಈ ಮಧ್ಯೆ ಗಣೇಶಚೌತಿ, ದೀಪಾವಳಿಗೆ ನಿನ್ನನ್ನೂ ಅತ್ತೇಮನೆಯವರು ಕರೆಯುತ್ತಾರೆ-ಆಗ ಮಾತನಾಡಬಹುದು. ಇದಕ್ಕೇ ಕಯ್ಯಾ ಇಷ್ಟು ಚಿಂತೆ!"

"ವ್ರತ ಕೆಟ್ಟರೂ ಸುಖವಿಲ್ಲದಂತಾಯಿತು!"

"ನಂಜುಂಡಶೆಟ್ಟಿ ಉಪದೇಶ ನಿನ್ನ ಹೃದಯಕ್ಕಂಟಿದಂತೆ ಕಾಣುತ್ತದೆ."

"ನನಗೆ ಹಣದಾಸೆಯಿಲ್ಲ-ಆದರೆ........"

"ಅತ್ತೆಮನೆಯವರು ಹಣಕೊಡಲಿಲ್ಲವೆಂದು ವ್ಯಥೆ!"

"ಹಾಗಲ್ಲ ಗರುಡ."

"ನೋಡು-ಪಾಲಿಗೆ ಬಂದುದು ಪಂಚಾಮೃತ. ನಿನ್ನ ಹೆಂಡತಿಯನ್ನು ನೀನೇ ಅಲ್ಲಗಳೆದರೆ ಇತರರು ಗೌರವಿಸುವರೇ? ಗಂಡಹೆಂಡಿರಲ್ಲಿ ಪರಸ್ಪರ ಪ್ರೀತಿ ವಿಶ್ವಾಸ ಬೆಳೆಯಬೇಕಾದುದು ಎಷ್ಟು ಅವಶ್ಯಕವೋ ಪರಸ್ಪರ ಗೌರವ ಬೆಳೆಯಬೇಕಾದುದೂ ಅಷ್ಟೇ ಅಗತ್ಯ."

"ಹಳ್ಳಿ ಮುಕ್ಕನನ್ನು ಗೌರವಿಸುವುದು ಹೇಗಯ್ಯಾ?"

"ನಿನ್ನತಾಯಿ-ನನ್ನ ತಾಯಿ, ಅವರ ತಾಯಂದಿರು ಎಲ್ಲರೂ ಹಳ್ಳಿ ಮುಕ್ಕಗಳೇ!"

"ನೀನು ಬಿಡಪ್ಪ-ಬರೀ ಆದರ್ಶಲೋಕದ ವೈನತೇಯ."

"ಆದರ್ಶ ವಾಸ್ತವಗಳೆರಡೂ ಪರಸ್ಪರಾನುವರ್ತಿಗಳು ಚಂದ್ರಶೇಖರ. ಇಂಥದು ಮಾಡಬೇಕು ಎಂದು ನೀನಂದುಕೊಂಡರೆ ಅದು ಆದರ್ಶ: ಮಾಡಿಬಿಟ್ಟರೆ ಅದು ವಾಸ್ತವ. ಒಂದು ಭಾವನೆ, ಇನ್ನೊಂದು ಕ್ರಿಯೆ. ಇಲ್ಲಸಲ್ಲದ ಪೂರ್ವಗ್ರಹಗಳಿಗೆ ಮನಸ್ಸನ್ನೊಪ್ಪಿಸಿ ಜೀವನವನ್ನು ಅ-ಸಹ್ಯಮಾಡಿಕೊಳ್ಳುವುದು ವಿವೇಕಿಯ ಲಕ್ಷಣವಲ್ಲ. ಕೈ ಹಿಡಿಯುವ ಹೆಣ್ಣು ಮನೆಯ ಮಂಗಳ ಲಕ್ಷ್ಮಿಯಾಗಬೇಕೆಂದು ಬಯಸುವುದು ಸಹಜವಾದುದು. ಅವಳು ಬಣ್ಣದ ಬೀಸಣಿಗೆಯಾದರೆ ಯಾವ ದೇವರಿಗೆ ಪ್ರೀತಿ."

ಗರುಡಾಚಾರಿಯ ಖಂಡತುಂಡ ಮಾತುಗಳು ಸದ್ಯ ಚಂದ್ರಶೇಖರನಿಗೆ

ಪ್ರಿಯವಾಗಲಿಲ್ಲ. ಅದರಲ್ಲಿನ ನಿಷ್ಠುರಸತ್ಯ ಅವನ ಹೃದಯದ ಮೇಲೆ ಅಚ್ಚೊತ್ತಿದಂತೆ ಮೂಡಿದವು.

ಒಂದು ಪರಂಪರೆಯ ಚೌಕಟ್ಟಿನಲ್ಲಿ ಚಂದ್ರಶೇಖರ ಸಿಕ್ಕುಬಿದ್ದಿದ್ದ- ಆ ಚೌಕಟ್ಟಿನಿಂದ ಪಾರಾಗಿ ಸ್ವತಂತ್ರವಾಗಿ ಹಾರಾಡಬೇಕೆಂಬುದೇ ಅವನ ಬಯಕೆ.

ಹಾಗೇ ಪಾರಾಗುವುದೂ-ಸ್ವಚ್ಛಂದಕ್ಕೆ ಸ್ವಾತಂತ್ರ್ಯವೆಂದು ಹೆಸರಿಟ್ಟು ಹಾರಾಡುವುದು ಹಿತವೇ, ವಿಹಿತವೇ ಎಂದು ಗರುಡಾಚಾರಿ ಸವಾಲು ಹಾಕಿದ್ದ.

೧೫

ಭಟ್ಟರು ಶೃಂಗೇರಿಗೆ ಹೋಗುವ ವಿಷಯ ನಿರ್ಧರಿಸಿ ಎರಡುವಾರ ಗಳಾಗಿದ್ದರೂ ಅವರ ಸಂಕಲ್ಪ ಈಡೇರಿರಲಿಲ್ಲ. ಅವರನ್ನು ತಡೆಗಟ್ಟಲು ಊರಿಗೆ ಊರೇ ನಿರ್ಧರಿಸಿತ್ತು.

"ಅದು ಹೇಗೆ ಹೋಗುತ್ತೀರಿ ಬುದ್ಧಿ" ಎಂದು ಕೆಂಗೇಗೌಡರು ಸವಾಲು ಹಾಕಿದ್ದರು.

"ಒಂದು ಕೈಯಲ್ಲಿದೀಪ ಹಚ್ಚಿ ಇನ್ನೊಂದು ಕೈಯಲ್ಲಿ ಅದೇ ದೀಪ ಆರಿಸುವುದು ಥರವೇ ನನ್ನೊಡೆಯಾ?" ಎಂದು ರುದ್ರಶೆಟ್ಟಿ ಕೇಳಿದ್ದ.

"ನಡೀರಿ ಬುದ್ಧಿ-ನೀವು ಹೋದಮೇಲೆ ನಮಗಿಲ್ಲಿ ಆಗಬೇಕಾದು ದೇನು? ನಾವೂ ಜತೆಯಲ್ಲೇ ಬರ್ತೀವಿ" ಎಂದು ಕವಿಹನುಮ ಬೆದರಿಕೆ ಹಾಕಿದ್ದ.

ಊರಿನವರ ವಿಶ್ವಾಸ ಭಟ್ಟರಿಗೆ ಭವ್ಯಬಂಧನವಾಗಿತ್ತು. ಎಲ್ಲರಿಗಿಂತ ಹೆಚ್ಚಾಗಿ ದೊಡ್ಡಮ್ಮ ಕಣ್ಣೀರುಗರೆಯುತ್ತಾ

"ಕಾವಲು ಹ್ವಾದ ವ್ಯಾಕೆ ಬೇಲಿಯೇ ಎದ್ದು ಒಲ ಮೆಯ್ತೈತೆ ನನ್ನೊಡೆಯಾ-ನೀವು ಇಲ್ಲಿರೋ ಗಂಟಾ ರಾಮದೇವರೂ ಇಲ್ಲಿರ್ತಾರೆ-ನೀವು ಹ್ವಾದ್ರೆ ಅವರೂ ಒಂಟೋಗ್ತಾರೆ" ಎಂದು ಹೇಳಿದ್ದಳು.

ಭಟ್ಟರ ಪಾದಗಳನ್ನು ಕಣ್ಣೀರಿನಿಂದ ತೊಳೆಯುತ್ತಾ ನರಸಮ್ಮ

"ಇನ್ನು ನಮಗೆ ಯಾರು ದಿಕ್ಕು ಅಣ್ಣಯ್ಯಾ" ಎಂದು ಅಂಗ ಲಾಚಿದ್ದಳು.

"ಇದುವರೆಗೆ ಯಾರು ದಿಕ್ಕಾಗಿದ್ದರೋ ಇನ್ನು ಮುಂದೆಯೂ ಅವರೇ ದಿಕ್ಕು."

"ಯಾರು ದಿಕ್ಕಾಗಿದ್ದರು."

"ಶ್ರೀರಾಮಚಂದ್ರಸ್ವಾಮಿ."

"ಎಲ್ಲಾ ಸತ್ಕಾರ್ಯಗಳನ್ನೂ ನಿರ್ವಹಿಸಿರುವವನು ಶ್ರೀರಾಮನೇ. ಅವನು ನೇರವಾಗಿ ನಿರ್ವಹಿಸಲಿಚ್ಛಿಸದ ಕೆಲವು ಕೆಲಸಗಳನ್ನು ತನ್ನ ಅಂಶ ಪುರುಷನಿಂದ ಮಾಡಿಸುತ್ತಾನೆ ಎಂದು ನೀವೇ ಹೇಳಿದ್ದರಲ್ಲ."

"ನಾನು ಶೃಂಗೇರಿಗೆ ಹೋಗುವುದರಿಂದ ಯಾರಿಗೂ ತೊಂದರೆ ಯಾಗುವುದಿಲ್ಲ—ಯಾರಿಗೂ ಹಾನಿಯಾಗುವುದಿಲ್ಲ."

"ಅದನ್ನು ಹೇಗೆ ಹೇಳಬಲ್ಲಿರಿ ?"

"ಅಲ್ಲಿ ತಾಯಿಯ ಪಾದದಮೇಲೆ ತಲೆಯಿಟ್ಟು 'ಎಲ್ಲರನ್ನು ಕಾಪಾಡು ಲೋಕಮಾತೆ' ಎಂದು ಬೇಡಿಕೊಳ್ಳುತ್ತೇನೆ."

"ಅಲ್ಲಿ ಇರುವ ತಾಯಿ ಇಲ್ಲಿಲ್ಲವೇ ?"

"ಇದ್ದಾಳೆ–ಎಲ್ಲೆಲ್ಲಿಯೂ ಇದ್ದಾಳೆ."

"ಆ ತಾಯಿ ಪೂಜೆ ಇಲ್ಲೇ ಮಾಡಿ."

"ನಾನಿನ್ನೂ ಅಷ್ಟು ಪ್ರಬುದ್ಧನಾಗಿಲ್ಲ ನರಸಮ್ಮ."

"ಹಾಗೆಂದರೇನು ಅಣ್ಣಯ್ಯ."

"ನಿಜವಾದ ಭಕ್ತ ಲೋಕಜೀವನವಲ್ಲಿದ್ದೂ ಲೋಕಾತೀತನಾಗಿರ ಬೇಕು. ಮಾನವನ ಮನಸ್ಸನ್ನು ಗರಗಸದಂತೆ ಕೊಯ್ಯುವ ದ್ವಂದ್ವ ಭಾವನೆ ಗಳನ್ನು ನಿರ್ಮಮತೆಯಿಂದ, ನಿಶ್ಶಂಕೆಯಿಂದ, ನಿರ್ಭೀತಿಯಿಂದ ದೂರವಿರಿ ಸಲು ಸಮರ್ಥನಾಗಿರಬೇಕು."

"ನೀವು ಸಮರ್ಥರಾಗಿಲ್ಲದಿದ್ದರೆ ಇನ್ನು ಯಾರು ಸಮರ್ಥರು ?"

"ಶೃಂಗೇರಿಯಲ್ಲಿರುವ ಶ್ರೀ ಚಂದ್ರಶೇಖರ ಗುರುದೇವರು."

"ನೀವು ಹೋಗಲೇಬೇಕೇ ?"

"ಬದ್ಧಜೀವಿ ಬುದ್ಧಜೀವಿಯಾಗಬೇಡವೇ ?"

"ಈಗ ಹೋದರೆ ಪುನಃ ಯಾವಾಗ ಬರುವಿರಿ ?"

"ನೀವೆಲ್ಲರೂ ಬಯಸಿದಾಗ–ನೀನು ತಿಳಿವಳಿಕಸ್ಥೆ ನರಸಮ್ಮ. ನನಗೆ ಅಪ್ಪಣೆಕೊಡು. ದೊಡ್ಡಮ್ಮ, ತಿಪ್ಪಮ್ಮನನ್ನು ನೀನೇ ಸಮಾಧಾನಪಡಿಸ ಬೇಕು."

"ನೀವು ಹೊರಡುವುದಕ್ಕೆ ಗೌಡರು ಒಪ್ಪಿದ್ದಾರೆಯೇ ?"

"ಯಾರೂ ಒಪ್ಪಿಲ್ಲ-ಹನುಮಣ್ಣ ನನ್ನ ಜತೆಯಲ್ಲಿಯೇ ಬರುವುದಾಗಿ ಹಟಹಿಡಿದಿದ್ದಾನೆ."

"ಇಷ್ಟು ಜನರ ಮನಸ್ಸಿಗೆ ಅಸಂತೋಷವನ್ನುಂಟುಮಾಡಿ ನೀವು ಹೋಗುವುದು ಯಾವ ನ್ಯಾಯ."

"ಹೋಗಬೇಕಾಗಿದೆ ನರಸಮ್ಮ. ಯಾವದೋ ಶಕ್ತಿ-ಅಗೋಚರ ಅಗಮ್ಯ, ಅದಮ್ಯಶಕ್ತಿ, ನನ್ನನ್ನತ್ತ ಎಳೆಯುತ್ತಿದೆ. ಹೋಗಬೇಕು-ಹೋಗಲೇ ಬೇಕು."

ಮರುಮಾತಾಡಲು ನರಸಮ್ಮನಿಗೆ ಸಾಧ್ಯವಾಗಲಿಲ್ಲ.

ಅಂದೇ ಭಟ್ಟರು ಶಾರದಾದೇವಿಯ ಚರಣಕಮಲಗಳನ್ನು ಹಿಡಿದು

"ತಾಯೀ-ನಾನು ಶೃಂಗೇರಿಗೆ ಬರಬೇಡವೇ ? ನಾನು ಇಲ್ಲೇ ಇರಬೇಕೆಂದು ಆಜ್ಞೆ ವಿಧಿಸುತ್ತಿರುವೆಯಾ ? ಈ ನಿನ್ನ ಮಕ್ಕಳ ಬಾಯಲ್ಲಿ ಬರುತ್ತಿರುವುದು ನಿನ್ನ ಮಾತೇ-ಯಾವ ಅಪರಾಧಮಾಡಿದುದಕ್ಕೆ ನನ್ನನ್ನಿಂತು ಪರೀಕ್ಷಿಸುತ್ತಿರುವೆ- ಶಿಕ್ಷಿಸುತ್ತಿರುವೆ. ತಾಯಿಾ, ನನಗೆ ಕೀರ್ತಿಬೇಡ, ಧನ ಬೇಡ, ಅಧಿಕಾರ ಬೇಡ-ನಿನ್ನ ಸೇವೆ ಮಾಡುವ ಸೌಭಾಗ್ಯವೊಂದನ್ನು ಕರುಣಿಸು. ನನ್ನ ಜನ್ಮ ಸಾರ್ಥಕಗೊಳಿಸು.

ಮಿತ್ರಋಣದಿಂದ ನಾನು ಮುಕ್ತನಾಗಿದ್ದೇನೆ. ರುದ್ರಾಕ್ಷಿಪುರದಲ್ಲಿ ನಿಂತು ನಾನು ಮಾಡಬೇಕಾದ ಕೆಲಸಮಾಡಿ ಮುಗಿಸಿದ್ದೇನೆ-ಇನ್ನಾದರೂ ನಿನ್ನ ಸನ್ನಿಧಿಗೆ ಬರಲು ಅವಕಾಶ ಕೊಡು.

ಶುಭ್ರಸ್ನಾತೆಯಾಗಿ ಚಿರಯೌವ್ವನೆಯಾಗಿ ಪರಿಶುಭ್ರ ಶ್ವೇತವಸನ ಧಾರಿಯಾಗಿ, ಪದ್ಮಪೀಠೆಯಾಗಿ, ಲೋಕದ ಜೀವರುಗಳನ್ನು ನಿನ್ನ ವೀಣೆಯ ಝೇಂಕೃತಿಯಲ್ಲಿ ಕುಣಿಸುತ್ತಿರುವ ನಿತ್ಯನೂತನ ಸ್ಮಿತವದನೆಯಾದ ಓ ನನ್ನ ತಾಯಿ-ಓನನ್ನ ಶಾರದೆ-ಓ ನನ್ನ ತಪೋಮೂರ್ತಿ ಅನುಗ್ರಹಿಸಮ್ಮ"

ಎಂದು ಹುಯ್ಯಲಿಟ್ಟರು.

ನಗೆಮೊಗದ ಶಾರದೆ ನಗುತ್ತಲೇ ಕುಳಿತಿದ್ದಳು.

ಭಟ್ಟರು ಕಣ್ತೆರೆದು ನೋಡಿದರು.

"ದೇವಿ ನನ್ನನ್ನು ಹಾಸ್ಯಮಾಡುತ್ತಿರುವಳೇ?–ನನ್ನ ಮೌಢ್ಯ ಕಂಡು ನಗುತ್ತಿರುವಳೇ?–

ವೀಣೆಯ ಮೃದುಮಧುರ ನಾದಮೋದದಲ್ಲಿ ನನ್ನ ಆಕ್ರಂದನ ಅವಳ ಕಿವಿಮುಟ್ಟುವುದೇ?

ಈ ತಾಯಿ ಸುಳ್ಳೇ? ನಿತ್ಯ ಸತ್ಯ, ಅನಂತವೆಂದು ನಾವು ನಂಬುವ ಈ ಶಕ್ತಿಯೂ ಒಂದು ಮೋಸದ ಮೂಟೆಯೇ?"

ಎಂದು ಭಟ್ಟರು ಮಥಿಸುತ್ತಿರುವಲ್ಲಿ ದೇವಿಯ ಪಟದ ಮೇಲಿದ್ದ ಹೂವೊಂದು ಬಲಗಡೆ ಜಾರಿತು. ಭಟ್ಟರು ಅದನ್ನೆತ್ತಿ ಕಣ್ಣಿಗೊತ್ತಿಕೊಂಡು

"ತಾಯಿ ಸುಳ್ಳಲ್ಲ–ಆಕೆಯ ಅನುಗ್ರಹ ಸುಳ್ಳಲ್ಲ–ನಂಬಿದವರನ್ನು ಆಕೆ ಕೈಬಿಡುವುದಿಲ್ಲ"

ಎಂದು ಹಿಗ್ಗಿನಿಂದ ಕುಣಿದಾಡಿದರು.

ಭಟ್ಟರ ಪ್ರಯಾಣದ ದಿನ ನಿಷ್ಕರ್ಷೆಯಾಗಿ ಊರಿನಲ್ಲಿ ಡಣಾಡಂಗುರ ವಾಯಿತು. ಶ್ರಾವಣ ಶುದ್ಧ ಪಂಚಮಿಯ ಶುಭದಿನ ರುದ್ರಾಕ್ಷಿಪುರ ಬಿಟ್ಟು ತೆರಳುವುದೆಂದು ಭಟ್ಟರು ನಿಶ್ಚಯಿಸಿದರು.

ಎಂಟೇ ದಿನಗಳಲ್ಲಿ ಶ್ರಾವಣ ಶುದ್ಧ ಪಂಚಮಿ ಧಾವಿಸುತ್ತ ಬಂದಿತು.

ಗೌಡರು, ಗೌಡಿತಿ ಭಟ್ಟರನ್ನು ಮನೆಗೆ ಕರೆದೊಯ್ದು ಪಾದಪೂಜೆ ಮಾಡಿ ತಟ್ಟೆ ತುಂಬ ಹಣ್ಣು, ಹೂವು, ಹಣವಿಟ್ಟು ಭಟ್ಟರಿಗೆ ಅರ್ಪಿಸಿದರು.

ಭಟ್ಟರು ಹೂವು ಹಣ್ಣನ್ನು ಮಡುಲಿಗೆ ಸುರಿದುಕೊಂಡು ಹಣ ನಿರಾಕರಿಸಿದರು. ಗೌಡರು ದುಃಖಿಸುತ್ತ

"ನಮ್ಮಿಂದ ಏನೂ ತೆಗೆದುಕೊಳ್ಳಬಾರದೇ ಬುದ್ಧಿ" ಎಂದರು.

"ಹೂವು ಹಣ್ಣು ತೆಗೆದುಕೊಂಡೆನಲ್ಲಾ!"

"ಹತ್ತಿರ ಹಣವಿರಲಿ!"

"ಯಾವದನ್ನು ಬಿಟ್ಟು ಹೋಗುತ್ತಿದ್ದೇನೋ ಅದನ್ನೇ ಬುತ್ತಿಕಟ್ಟಿಕೊಂಡು ಹೋಗಲೇ ಗೌಡರೇ?"

"ನಮ್ಮಿಂದ ಏನಾದರೂ ಸ್ವೀಕರಿಸಿ"

ಭಟ್ಟರು ಸುತ್ತ ಕಣ್ಣುಹೊರಳಿಸಿ, ಮೂಲೆಯಲ್ಲಿದ್ದ ಅಂಕೋಲೆ ದೊಣ್ಣೆಯನ್ನು ಕಂಡು

"ಅದನ್ನು ಕೊಡಿ—ಪ್ರಯಾಣಕ್ಕೆ ಅನುಕೂಲವಾಗುತ್ತದೆ."

ಗೌಡರು ಕೊಟ್ಟ ದೊಣ್ಣೆಯನ್ನು ಹಿಡಿದುಕೊಂಡೇ ಭಟ್ಟರು ರುದ್ರ ಶೆಟ್ಟಿ, ಬಸ್ಯೆಟ್ಟಪ್ಪ, ಹನುಮಣ್ಣನ ಅಪ್ಪಣೆ ಪಡೆದರು.

ನರಸಮ್ಮನ ಗೋಳು ಹೇಳತೀರದಾಯಿತು. ಭಟ್ಟರು ಅವಳಿಂದ ನಾಲ್ಕುಸೇರು ಅವಲಕ್ಕಿ ಸ್ವೀಕರಿಸಿ ಹೆಗಲ ಮೇಲೆ ಹೊತ್ತರು.

ಭಟ್ಟರನ್ನು ಬೀಳ್ಕೊಡಲು ಊರಿಗೆಊರೇ ಬಸ್ ನಿಲ್ದಾಣಕ್ಕೆ ಬಂದಿತು. ಅಡ್ಡಬಿದ್ದ ಎಲ್ಲರನ್ನೂ ಆಶೀರ್ವದಿಸಿ ಭಟ್ಟರು ಮಡಲಲ್ಲಿದ್ದ ಹಣ್ಣುಗಳನ್ನು ಮಕ್ಕಳಿಗೆ ಹಂಚಿದರು.

ಬಸ್ ಹತ್ತಿ ಕುಳಿತ ಭಟ್ಟರ ಕಣ್ಣಲ್ಲಿಯೂ ಒಂದು ಹನಿ ಮಿಡಿಯಿತು.

"ಇದೆಂಥ ಮೋಹ" ಎಂದು ಭಟ್ಟರು ತಮ್ಮನ್ನು ತಾವೇ ಹಳಿದು ಕೊಂಡರು.

ಡೆಪ್ಯುಟಿ ಕಮಿಷನರ್ ಸಾಹೇಬರಿಗೆ ಕೊಟ್ಟಿದ್ದ ವಾಗ್ದಾನ ಪೂರೈಸ ಬೇಕಾಗಿತ್ತು.

ಭಟ್ಟರು ಸಾಹೇಬರನ್ನು ಕಂಡು ಶೃಂಗೇರಿಗೆ ಹೋಗುವ ತಮ್ಮ ನಿರ್ಧಾರವನ್ನು ತಿಳಿಸಿದರು. ಸಾಹೇಬರು ವಿಚಾರ ಪರವಶರಾಗಿ

"ಬೇಗ ಬರುತ್ತೇನೆಂದು ಮಾತು ಕೊಡುವುದಾದರೆ ಹೊಗಲಡ್ಡಿಯಿಲ್ಲ" ಎಂದರು.

"ಬರದೇ ಉಂಟೇ ?"

"ಯಾವಾಗ ಪ್ರಯಾಣ ?"

"ನಾಳೆ ಬೆಳಿಗ್ಗೆ."

"ನನ್ನ ಕಾರಿನಲ್ಲಿ ಕಳಿಸಿಕೊಡುತ್ತೇನೆ."

"ಕಾಲ್ನಡಗೆಯಲ್ಲಿ ಹೋಗಲು ನಿರ್ಧರಿಸಿದ್ದೇನೆ."

ಈ ವಯಸ್ಸಿನಲ್ಲಿ ಶೃಂಗೇರಿಯವರೆಗೆ ಕಾಲ್ನಡಗೆ ಪ್ರಯಾಣವೇ ?— ಯಾರಾದರೂ ನಿಮ್ಮನ್ನು ಹುಚ್ಚರು ಎಂದಾರು ? ನನ್ನ ಮಾತು ಕೇಳಿ."

"ದಯವಿಟ್ಟು ಕ್ಷಮಿಸಿ ಸ್ವಾಮಿ—ನಾನು ಬಹಳ ಹಟವಾದಿ."

ಡಿ. ಸಿ. ಸಾಹೇಬರು ಭಟ್ಟರ ಕೈಯಲ್ಲಿ ನೋಟಿನ ಕಂತೆಯನ್ನಿಡಲು

ಪ್ರಯತ್ನಿಸಿದರು. ರುದ್ರಾಕ್ಷಿಪುರದವರಿಗೆ ದೊರೆತ ಉತ್ತರವೇ ಡಿ. ಸಿ. ಸಾಹೇಬರಿಗೂ ದೊರೆಯಿತು.

"ನನ್ನಿಂದ ಏನಾದರೂ ನೀವು ಸ್ವೀಕರಿಸಲೇ ಬೇಕು."

"ಇದು ಡಿ. ಸಿ. ಸಾಹೇಬರ ಹುಕುಮ್ಮೋ?"

"ಇಲ್ಲ—ಗುಲಾಮನ ಪ್ರಾರ್ಥನೆ."

"ಒಳ್ಳೆಯದು ನನಗೊಂದು ಲಾಂದ್ರ (Lantern) ಬೇಕು. ಕೊಡಿಸಿ."

ಸಾಹೇಬರು ಆಳುಕಳುಹಿಸಿ ಹೊಸ ಲಾಂದ್ರವೊಂದನ್ನು ತರಿಸಿ ಭಟ್ಟರ ಕೈಗಿತ್ತರು. ಫಾತೀಮಳ ತಲೆಸವರಿ ಆಶೀರ್ವದಿಸಿ, ಭಟ್ಟರು ಸಾಹೇಬರ ಕುಟುಂಬಕ್ಕೆ ಕೈಜೋಡಿಸಿ ಅಪ್ಪಣೆ ಬೇಡಿದರು

"ನೀವು ಹಿರಿಯರು—ನಾನೆಷ್ಟಾದರೂ ನಿಮ್ಮ ಮಗಳು ನನಗೆ ನೀವು ಸಲಾಮು ಮಾಡಬಾರದು,"

"ತಾಯೀ, ಪ್ರತಿಯೊಬ್ಬ ಸ್ತ್ರೀಯೂ ನನಗೆ ಮಾತೃಸ್ವರೂಪಳು–ನಿಮ್ಮ ಮಗನನ್ನು ಆಶೀರ್ವದಿಸಿ."

ಬೇಗಂಸಾಹಿಬಾ ಅವಾಕ್ಕಾದರು.

ಭಟ್ಟರು ಇನ್ನೂ ಒಂದು ಘಟ್ಟ ದಾಟಬೇಕಾಗಿತ್ತು.

ಆದಿಶೇಷಯ್ಯನವರ ಮನೆಗೆ ಹೋಗಿ ನಾಗಮ್ಮನನ್ನೂ ಮಕ್ಕಳನ್ನೂ ಕಂಡು ಹೋಗುವುದು ಅನಿವಾರ್ಯವಾಗಿತ್ತು.

ಭಟ್ಟರು ತಮ್ಮ ನಿರ್ಧಾರ ತಿಳಿಸಿ ದುಃಖಿಸುತ್ತಿದ್ದ ನಾಗಮ್ಮನನ್ನು ಸಮಾಧಾನಗೊಳಿಸಿದರು. ಹೊರಡುವಮುನ್ನ ಚಂದ್ರಶೇಖರನನ್ನು ಒಂದೆಡೆ ಕರೆದು

"ಚಂದ್ರಶೇಖರ ಪಾರ್ವತಿಯರಂತೇ ನೀನೂ ನಿನ್ನ ಹೆಂಡತಿ ಬಾಳಬೇಕಪ್ಪಾ, ಪಾರ್ವತಿ ಹಳ್ಳಿಹುಡುಗಿ, ಆದರೆ ಜಾಣೆ. ನಾಲ್ಕು ದಿನಗಳಲ್ಲಿ ನಿನ್ನ ಮನಸ್ಸನ್ನರಿತು ವಿಹಿತವಾಗಿರಬಲ್ಲಳು."

"ಪುನಃ ಯಾವಾಗ ಬರುವಿರಿ ?"

"ನಿನ್ನ ಪುತ್ರೋತ್ಸವಕ್ಕೆ ಬರಬೇಡವೇನಯ್ಯಾ" ಎಂದರು.

ಅಂದೇ ಶೃಂಗೇರಿಯಭಿಮುಖವಾಗಿ ಭಟ್ಟರು ಪ್ರಯಾಣ ಬೆಳಸಿದರು.

# ೧೬

ದೀಪಾವಳಿ ಹಬ್ಬಕ್ಕೆ ರುದ್ರಾಕ್ಷಿಪುರಕ್ಕೆ ಯಾರು ಯಾರು ಹೋಗತಕ್ಕು ದೆಂದು ಆದಿಶೇಷಯ್ಯನವರ ಮನೆಯಲ್ಲಿ ಜಿಜ್ಞಾಸೆಹುಟ್ಟಿಕೊಂಡಿತು. ಎಲ್ಲರೂ ಬರಬೇಕೆಂದು ನರಸಮ್ಮ ಹಾರ್ದಿಕ ಆಮಂತ್ರಣವಿತ್ತಿದ್ದಳು. ಬೀಗಿತ್ತಿಯ ಕೋರಿಕೆಯಂತೆ ಎಲ್ಲರೂ ಹೋಗುವುದು ಒಳ್ಳೆಯದೆಂದು ನಾಗಮ್ಮನ ಅಭಿಪ್ರಾಯ. ಆದಿಶೇಷಯ್ಯನವರು ಬಡಪೆಟ್ಟಿಗೆ ಹೆಂಡತಿಯಮಾತನ್ನು ಒಪ್ಪಿಕೊಳ್ಳಲಿಲ್ಲ. ಸಾಕಷ್ಟು ವಾದವಿವಾದವಾಗಿ ಕೊನೆಗೆ ನಾಗಮ್ಮ, ಚಂದ್ರಶೇಖರ ಹೋಗಿ ಬರುವುದೆಂದು ಇತ್ಯರ್ಥವಾಯಿತು.

ಆದಿಶೇಷಯ್ಯ ಬರಲು ನಿರಾಕರಿಸುದುದಕ್ಕೆ ಚಂದ್ರಶೇಖರ ವಿಷಾದ ಪಡಲಿಲ್ಲ. ರುದ್ರಾಕ್ಷಿಪುರಕ್ಕೆ ಹೊರಡುವ ದಿನವೂ ನಾಗಮ್ಮ 'ನೀವೂ ಬಂದಿದ್ದರೆ ಚೆನ್ನಾಗಿತ್ತು' ಎಂದಳು.

ತಾಯಿ ಮಗನನ್ನು ಬಸ್ ಸ್ಟ್ಯಾಂಡಿನಲ್ಲಿ ಕಂಡು ಅವರಿಗೆ ಸ್ವಾಗತ ಬಯಸುವ ಕರ್ತವ್ಯ ಹನುಮಣ್ಣ ನಿರ್ವಹಿಸಬೇಕಾಯಿತು.

ಭಟ್ಟರಿಲ್ಲವೆಂಬ ಚಿಂತೆ ನರಸಮ್ಮ, ನಾಗಮ್ಮ ಇಬ್ಬರನ್ನೂ ಕಾಡುತ್ತಿತ್ತು ಭಟ್ಟರ ನೆನಪು, ಅವರ ಗುಣವರ್ಣನೆ ಇಬ್ಬರನ್ನು ಒಂದುಕೂಡಿಸಿತ್ತು.

ಬೀಗಿತ್ತಿಯನ್ನೂ ಅಳಿಯದೇವರನ್ನೂ ತೃಪ್ತಿಪಡಿಸಲು ನರಸಮ್ಮ ಶಕ್ತಿಮೀರಿ ಪ್ರಯತ್ನಿಸಿದ್ದಳು. ಯಾವದಾದರೂ ಅಲ್ಪವಿಷಯಕ್ಕೆ ಚಂದ್ರಶೇಖರ ಅಸಮಾಧಾನಗೊಂಡರೆ ನಾಗಮ್ಮ ಅವನನ್ನು ಗದರಿಸಿ

"ಇಲ್ಲದ ಕುಸುಬಿಸ್ಟಿ ಮಾಡಬಾರದು ಚಂದ್ರೂ. ನರಸಮ್ಮ ಹೆಣ್ಣು ಹೆಂಗಸು--ಮನೆಯಲ್ಲಿ ನೀನೇ ಎನ್ನುವ ಗಂಡುದಿಕ್ಕು ಕೂಡ ಅವಳಿಗಿಲ್ಲ— ಇಂಥದ್ದರಲ್ಲಿ ಎಷ್ಟು ಅಚ್ಚುಕಟ್ಟಾಗಿ ಎಲ್ಲಾ ಅಣಿಮಾಡಿದ್ದಾಳೆ. ಇದಕ್ಕಿಂತ

ಇನ್ನು ಯಾರು ಏನು ಮಾಡಲು ಸಾಧ್ಯ. ಇತರರ ಕಷ್ಟಸುಖ ಸ್ವಲ್ಪ ಅರ್ಥಮಾಡಿಕೊಳ್ಳಬೇಕಪ್ಪಾ."

ಊಟ ಉಪಚಾರದಲ್ಲಿಯಾಗಲಿ, ಕೊಡುವ ಬಿಡುವ ವಿಷಯದಲ್ಲಿ ಯಾಗಲಿ ಚಂದ್ರಶೇಖರನ ಆಕ್ಷೇಪವಿರಲಿಲ್ಲ.

ಅವನ ಹೃದಯದಲ್ಲಿ ವಯೋಧರ್ಮಕ್ಕನುಗುಣವಾಗಿ ಸಹಜ ಉಮ್ಮಳ ಹುಟ್ಟಿತ್ತು.

ಸಂಪ್ರದಾಯದ ಕಟ್ಟಿನಲ್ಲಿ ಬೆಳೆದು ಬಂದಿದ್ದ ನಾಗಮ್ಮನಿಗೆ ಮಗನ ಆಸೆ ನಿರೀಕ್ಷೆಗಳ ಸ್ವರೂಪವಾಗಲಿ ಆವೇಗವಾಗಲಿ ಅರ್ಥವಾಗಲಿಲ್ಲ.

ನರಕಚತುರ್ದಶಿ, ಬಲಿಪಾಡ್ಯಮಿ ಹಬ್ಬಗಳು ಸಾಂಗವಾಗಿ ನೆರವೇರಿ ದವು.

ಚಂದ್ರಶೇಖರನ ಮನದಭೀಷ್ಟ ಮಾತ್ರ ಈಡೇರಲಿಲ್ಲ.

ಒಂದು ದಿನ ನರಸಮ್ಮ ಬೀಗಿತ್ತಿಯೊಂದಿಗೆ ಮಾತನಾಡುತ್ತ ಕುಳಿತಿದ್ದಾಗ

"ಅಳೀಮಯ್ಯ ಮುಂದೇನು ಮಾಡುತ್ತಾರೆ" ಎಂದು ಕೇಳಿದಳು.

"ಪ್ಲೀಡರ್ ಪರೀಕ್ಷೆಗೆ ಓದುತ್ತಿದ್ದಾನೆ. ಅವನೂ ಲಾಯರಾಗಿ ತಮ್ಮ ಸ್ಥಾನಕ್ಕೆ ಬರಬೇಕೆಂದು ಅವನ ತಂದೆಯವರು ಯೋಚಿಸಿದ್ದಾರೆ."

"ಬೆಂಗಳೂರಿಗೆ ಹೋಗಿ ನೆಲಸುವ ಸಂಭವವಿದೆಯೆಂದು ಗುಂಡಾ ಭಟ್ಟರು ತಿಳಿಸಿದ್ದರು."

"ಅದೂ ಯೋಚನೆಯಿದೆ. ತುಮಕೂರಿನಲ್ಲೊಂದು, ಬೆಂಗಳೂರಿನಲ್ಲೊಂದು ಸಂಸಾರ ನಡಸುವುದು ಎಲ್ಲಿ ಸಾಧ್ಯ ನರಸಮ್ಮ."

"ಅಳೀಮಯ್ಯ ಬೆಂಗಳೂರಿಗೆ ಹೋಗುವುದರಿಂದ ಗುಣವುಂಟೇ ?"

"ತುಮಕೂರಿನಲ್ಲಿ ಏನೂ ಸ್ವಾರಸ್ಯವಿಲ್ಲ. ನಾವೂ ಬೆಂಗಳೂರಿಗೆ ಹೋಗುವುದು ಒಳ್ಳೆಯದೇನೋ ಎಂದು ಯೋಚಿಸಿದೆವು—ಬೆಂಗಳೂರು ಜೀವನ ಎಂದರೆ ಹೆದರಿಕೆಯಾಗುತ್ತದೆ-ಪಾರ್ವತಿ ನಮ್ಮ ಮನೆಗೆ ಬಂದ ಮೇಲೆ ನೀವೇನು ಮಾಡುವಿರಿ ?"

"ನಾನು ಯಾವದನ್ನೂ ಯೋಚನೆಮಾಡಲ್ರೀ. ಇರೋಳು ಒಬ್ಬಳು-ನನ್ನದು ಹೇಗೋ ನಡೆದುಹೋಗುತ್ತದೆ."

"ನೀವು ಬಂದು ನಮ್ಮನೆಯಲ್ಲೇ ಏಕಿರಬಾರದು?"

"ಇದು ಯಾವ ನ್ಯಾಯ ನಾಗಮ್ಮ?"

"ಅನ್ಯಾಯವೇನು ಬಂತು? ಮಗಳ ಜತೆ ತಾಯಿ ಇದ್ರೆ ತಪ್ಪೇ?"

"ತಪ್ಪಲ್ಲ; ಇನ್ನೊಬ್ಬರಿಗೆ ನಾನೇಕೆ ಹೊರೆಯಾಗಬೇಕು–ಈ ಕಾಲದಲ್ಲಿ ಎಲ್ಲರಿಗೂ ಸಾಕಷ್ಟು ಹೊರೆಯಿದ್ದೇ ಇರುತ್ತದೆ."

"ನೋಡೀಮ್ಮ—ಯೋಚನೆಮಾಡಿ. ನೀವು ಬಂದು ನಮ್ಮ ಜತೆ ಇದ್ರೆ ನನಗೆ ನೆರವಾಗುತ್ತದೆ. ಪಾರ್ವತೀಗೂ ಹೊಸಮನೆ, ಹೊಸಜನ ಅನ್ನುವ ಸಂಕೋಚವಿರುವುದಿಲ್ಲ."

"ನಿಮ್ಮ ಮನಸ್ಸು ಎಷ್ಟು ದೊಡ್ಡದು ನಾಗಮ್ಮ. ನನ್ನ ಮಗಳು ಬೇರೆಯೊಬ್ಬರ ಮನೆಗೆ ಹೋಗುತ್ತಾಳಲ್ಲ ಅನ್ನೋ ದುಃಖವಿಲ್ಲದ ಹಾಗೆ ಮಾಡಿದಿರಿ. ನಿಮ್ಮ ಹೊಟ್ಟೆ ತಣ್ಣಗಿರಲಮ್ಮ" ಎಂದಳು.

ಮಾರನೆಯ ದಿನವೇ ನಾಗಮ್ಮ, ಚಂದ್ರಶೇಖರ ತುಮಕೂರಿಗೆ ಪ್ರಯಾಣ ಬೆಳಸಿದರು.

# ೧೭

ಹೆಗಲಮೇಲೆ ಹಸಿಬೆ ಚೀಲ, ಕೈಯಲ್ಲಿ ದೊಣ್ಣೆ, ಲಾಂದ್ರ ಹಿಡಿದು ಭಟ್ಟರು ಕಾಲ್ನಡಗೆಯಲ್ಲಿ ಶೃಂಗೇರಿಯತ್ತ ಹೊರಟರು.

ಹಾದಿಯಲ್ಲಿ ಓಡಿಯಾಡುತ್ತಿದ್ದ ಮೋಟಾರು ಕಾರುಗಳು, ಬಸ್ಸುಗಳು ಭಟ್ಟರಮೇಲೆ ಸಾಕಷ್ಟು ಧೂಳು ಚೆಲ್ಲಿದ್ದವು.

ಸಾಲುಮರಗಳಡಿ ವಿಶ್ರಮಿಸಿಕೊಳ್ಳುವುದು, ಹಳ್ಳ, ಕೆರೆ, ನದಿ ಸಿಕ್ಕಿದರೆ ಸ್ನಾನಮಾಡಿ ಹಸಿಬೆಚೀಲದಲ್ಲಿದ್ದ ಅವಲಕ್ಕಿ ಸ್ವಲ್ಪ ನೆನಸಿ, ಅದಕ್ಕಷ್ಟು ಬೆಲ್ಲ, ಕೊಬ್ಬರಿ ಬೆರಸಿ ಕ್ಷುದ್ಬಾಧೆ ಪರಿಹರಿಸಿಕೊಂಡು ಮುಂದೆ ಸಾಗುವುದು–ಇದು ಭಟ್ಟರ ನಿತ್ಯವಿಧಿಯಾಯಿತು.

ಬಂಡಿಗಳಲ್ಲಿ ಸಾಗುತ್ತಿದ್ದ ಹಳ್ಳಿಗರು ಬಂಡಿ ನಿಲ್ಲಿಸಿ ಭಟ್ಟರನ್ನು 'ಕೂಡಬನ್ನಿ' ಎಂದು ಕರೆಯುತ್ತಿದ್ದರು. ನಡೆದುಕೊಂಡೇ ಶೃಂಗೇರಿ ತಲುಪ ಬೇಕೆಂದು ದೃಢಸಂಕಲ್ಪಮಾಡಿದ್ದ ಭಟ್ಟರು ಹಳ್ಳಿಗರ ಕರೆಯನ್ನು ವಿನಯ ದಿಂದ ನಿರಾಕರಿಸುತ್ತಿದ್ದರು.

ರಣಬಿಸಲಿನಲ್ಲಿ ಏಕಾಂಗಿಯಾಗಿ, ಪಾದಚಾರಿಯಾಗಿ ಹೋಗುತ್ತಿದ್ದ ಈ ಬ್ರಾಹ್ಮಣನನ್ನು ನೋಡಿ ಹಳ್ಳಿಗರು ಆಶ್ಚರ್ಯಪಡುತ್ತಿದ್ದರು.

ಭಟ್ಟರು ಊರುಬಿಟ್ಟು ಎಂಟುದಿನಗಳಾಗಿದ್ದವು. ಬಿಸಿಲು ಗಾಳಿ ಗಳಿಗೆ ಸಿಕ್ಕಿದ ಅವರ ಜೀರ್ಣದೇಹಕ್ಕೆ ಸಾಕಷ್ಟು ಶ್ರಮವಾಗಿದ್ದರೂ ಮನಸ್ಸು ಪರಿಶುಭ್ರವಾಗಿ ಸುಶಾಂತವಾಗಿತ್ತು. ತಾವು ಇಡುತ್ತಿರುವ ಪ್ರತಿಹೆಜ್ಜೆಯೂ ಶೃಂಗೇರಿಯನ್ನು ಸಮೀಪಕ್ಕೆ ಕರೆತರುತ್ತಿದೆ ಎಂಬ ಭಾವನೆಯೇ ಭಟ್ಟರ ಕ್ರತುಶಕ್ತಿಯಾಗಿತ್ತು.

ಒಂದು ಸಂಜೆ ಭಟ್ಟರು ಶಾಂತಿಗ್ರಾಮ ತಲುಪುವ ವೇಳೆಗೆ ದಟ್ಟವಾಗಿ ಕತ್ತಲು ಹಬ್ಬಿತು. ಹಳ್ಳಿಯಲ್ಲಿ ತಂಗಿ ವಿಶ್ರಮಿಸಿಕೊಂಡು ಬೆಳಿಗ್ಗೆ ಪ್ರಯಾಣ ಬೆಳಸುವುದು ಅನಿವಾರ್ಯವಾಯಿತು.

ಶಾಂತಿಗ್ರಾಮ ನಾಗರಿಕತೆಯ ಸೋಂಕಿಗೆ ಸಿಕ್ಕಿದ ಕುಗ್ರಾಮವಾಗಿತ್ತು. ಇನ್ನೂರು ಮನೆಗಳ ಆ ಹಳ್ಳಿಯಲ್ಲಿ ಒಕ್ಕಲಿಗರೇ ಬಹು ಸಂಖ್ಯಾತರು. ವೀರಶೈವರದು ಹತ್ತುಮನೆ; ಬ್ರಾಹ್ಮಣರದು ಹದಿನಾಲ್ಕು ಮನೆಗಳಿದ್ದವು. ವೀರಶೈವರು, ಬ್ರಾಹ್ಮಣರು ಕೂಡ ಒಕ್ಕಲುತನದಿಂದಲೇ ಜೀವಿಸುತ್ತಿದ್ದರು.

ಊರಿನೊಳಗಿದ್ದ ಮಂಟಪದಲ್ಲಿ ಭಟ್ಟರು ಬಂದು ಕೂಡಲು, ಕಂಬ ಒರಗಿ ಬೀಡಿ ಸೇದುತ್ತಿದ್ದ ಒಬ್ಬ ರೈತ ತನ್ನ ಬೀಡಿಯನ್ನಾರಿಸಿ ಭಟ್ಟರ ಬಳಿಗೆ ಬಂದು

"ಯಾವೂರು ಸೋಮಿ" ಎಂದು ಕೇಳಿದ.

"ರುದ್ರಾಕ್ಷಿಪುರ ಕಣಪ್ಪಾ."

"ಅದೆಲ್ಲೈತೆ ಬುದ್ಧಿ."

"ತುಮಕೂರಿನ ಹತ್ತಿರ."

"ಎಲ್ಲಿ ಒಂಟವ್ರಿ ನನ್ನೊಡೆಯಾ ?"

"ಶೃಂಗೇರಿಗೆ ಯಾತ್ರೆ ಹೊರಟಿದ್ದೇನೆ."

"ನಡಕೊಂತಾ..........?"

"ಹೌದು."

"ಬಸ್ ಐತೆ—ರೈಲೈತೆ. ಓಗಾಕಾಗಾಕಿಲ್ವಾ ಬುದ್ಧಿ."

"ಭಗವಂತನ ಸನ್ನಿಧಿಗೆ ನಡೆದು ಹೋಗುವುದೇ ಒಳ್ಳೆಯದಲ್ಲವೇ ಅಣ್ಣಾ."

"ಊಟಕ್ಕೇನು ಮಾಡ್ತೀರಿ ಬುದ್ಧಿ."

"ಅವಲಕ್ಕಿ ಇದೆ-ಅದನ್ನೇ ಸ್ವಲ್ಪತಿಂದು ಮಲಗುತ್ತೇನೆ."

"ಉಂಟಾ ! ನಮ್ಮೂರಿಗೆ ಬಂದು ಉಪಾಸಾ ಮಲಗಾದ ಬುದ್ಧಿ."

ಎಂದವನೇ ಎದ್ದು ಹೋಗಿ ಸ್ವಲ್ಪ ಕಾಲಾನಂತರ ಜತೆಯಲ್ಲಿಯೇ ಮತ್ತೊಬ್ಬನನ್ನು ಕರೆದುಕೊಂಡು ಬಂದ. ಆತ ಭಟ್ಟರಬಳಿಗೆ ಬಂದು ಅತ್ಯಂತ ವಿನಯದಿಂದ

"ತಮ್ಮಂಥ ಸದ್ಬ್ರಾಹ್ಮಣರು ನಮ್ಮೂರಿಗೆ ಬರುವುದೇ ಒಂದು ಸುಯೋಗ. ತಾವು ಉಪವಾಸ ಮಲಗಿದರೆ ನಮ್ಮ ಊರಿಗೇ ಅಶ್ರೇಯಸ್ಸು. ನಮ್ಮ ಮನೆಗೆ ತಾವು ದಯೆಮಾಡಿಸಿ ಸ್ನಾನ, ಪೂಜೆ, ಊಟ ತೀರಿಸಿ ಕೊಂಡು ರಾತ್ರಿ ಅಲ್ಲಿಯೇ ವಿಶ್ರಮಿಸಿಕೊಂಡು ಬೆಳಿಗ್ಗೆ ಪ್ರಯಾಣ ಬೆಳಸ ಬಹುದು. ನನ್ನ ಹೆಸರು ರಮಣಯ್ಯ. ನಾನು ಈ ಊರಿನ ಶಾನುಭೋಗ. ಈತ ನಮ್ಮೂರಿನ ಪಟೇಲ ಚನ್ನವೀರಪ್ಪ."

"ತಾವು ತೊಂದರೆತೆಗೆದುಕೊಳ್ಳಬೇಡಿ ರಮಣಯ್ಯನವರೇ ಇಲ್ಲಿಯೇ ನನಗೆ ಸುಖವಾಗಿರುತ್ತದೆ."

ರಮಣಯ್ಯ ಭಟ್ಟರಿಗೆ ಗಂಟೇ ಬಿದ್ದ. ವಿಶ್ವಾಸಪೂರ್ವಕವಾದ ಅವನ ಒತ್ತಾಯ ಭಟ್ಟರ ಮನಸ್ಸು ಮುಟ್ಟಿತು.

ರಮಣಯ್ಯ ಭಟ್ಟರನ್ನು ಕರೆದುಕೊಂಡುಬಂದು ತನ್ನ ಮನೆಯ ಹಜಾರದಲ್ಲಿದ್ದ ಚಾಪೆಯಮೇಲೆ ಕೂಡಿಸಿ

"ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳಿಸ್ವಾಮಿ. ಸ್ನಾನಕ್ಕೆ ನೀರು ಸಿದ್ಧ ಮಾಡಿ ಬಂದು ತಿಳಿಸುತ್ತೇನೆ."

"ನನ್ನಿಂದ ನಿಮಗೆಷ್ಟು ತೊಂದರೆ."

"ತಾವು ಹಾಗೆಂದಿಗೂ ಭಾವಿಸಬಾರದು. ನನ್ನ ಮನೆಯಲ್ಲಿ ತಾವು ಪೂಜೆಮಾಡಿ, ಪ್ರಸಾದ ಸ್ವೀಕರಿಸಿದರೆ ಧನ್ಯನಾಗುತ್ತೇನೆ."

"ಆಗಲಿ—ತಮ್ಮ ಸಂತೋಷ."

ಭಟ್ಟರು ಸ್ನಾನಮಾಡಿ ಸಾಂಗವಾಗಿ ದೇವರ ಪೂಜೆ ಮಾಡಿ ರಮಣಯ್ಯನವರಿಗೂ ಅವರ ಕುಟುಂಬ ಶಂಕರಮ್ಮನವರಿಗೆ ತೀರ್ಥಪ್ರಸಾದ ಕೊಟ್ಟರು.

ಊಟಮುಗಿದು ತಾಂಬೂಲಚರ್ವಣಕ್ಕೆ ಕುಳಿತಾಗ ರಮಣಯ್ಯನವರು

"ಈ ವಯಸ್ಸಿನಲ್ಲಿ ತಾವೂ ಇಷ್ಟು ಶ್ರಮಸಾಧ್ಯವಾದ ಯಾತ್ರೆ ಕೈಗೊಳ್ಳಬಾರದಾಗಿತ್ತು."

"ಭಗವದ್ಗೀತೆಯ ಧ್ಯಾನಶ್ಲೋಕ ಬರೆದ ಪುಣ್ಯಾತ್ಮ ಒಂದು ಮಾತು ಹೇಳಿದ್ದಾನೆ ರಮಣಯ್ಯನವರೇ

**ಮೂಕಂ ಕರೋತಿ ವಾಚಾಲಂ**
**ಪಂಗುಂ ಲಂಘಯತೇ ಗಿರಿಮ್**
**ಯತ್ಕೃಪಾ ತಮಹಂ ವಂದೇ**
**ಪರಮಾನಂದ ಮಾಧವಂ ||**

ಶೃಂಗೇರಿಗೆ ಯಾತ್ರೆ ಹೋಗುವ ಸಂಕಲ್ಪವನ್ನು ನನ್ನಲ್ಲಿ ಹುಟ್ಟಿಸಿದವನೂ **ಅವನೇ**; ಅದನ್ನು ಸಾಂಗವಾಗಿ ನಡೆಸುವವನೂ **ಅವನೇ**—ನಾನೇತಕ್ಕೆ ಚಿಂತೆಮಾಡಲಿ. ಪಂಚಭೂತಾತ್ಮಕವಾದ ಈ ಶರೀರ ಒಂದಲ್ಲ ಒಂದು ದಿನ ಪಂಚಭೂತಗಳಿಗೇ ವಿನಿಯೋಗವಾಗಬೇಕು. ಅದು ಭಗವಧ್ಯಾನದಲ್ಲಿ, ಭಗವತ್ಸೇವೆಯಲ್ಲಿ ನಾಶವಾದರೆ ದುಃಖಪಡಲೇ ?"

"ನಾನು ಅಜ್ಞ ಶಾಸ್ತ್ರಿಗಳೇ–ದೊಡ್ಡವರು ಬಂದಿರುವಾಗ ನನ್ನ ಸಂಶಯ ನಿವೃತ್ತಿಮಾಡಿಕೊಳ್ಳಲು ಬಯಸುತ್ತೇನೆ. ತಾವು ಅಪ್ಪಣೆ ಕೊಡುವುದಾದರೆ ಒಂದೆರಡು ಪ್ರಶ್ನೆಗಳನ್ನು ಕೇಳುತ್ತೇನೆ."

"ಅಗತ್ಯವಾಗಿ ಕೇಳಿ. ನಾನೂ ಅಜ್ಞನೇ—ನಾನೂ ತಮ್ಮ ಹಾಗೇ ಜ್ಞಾನವೃಕ್ಷದ ಬೇರು ಹುಡುಕುತ್ತಿದ್ದೇನೆ, ನನ್ನ ಅಲ್ಪಜ್ಞಾನ, ಅಲ್ಪ ಅನುಭವದಿಂದ ತಮಗೆ ಪ್ರಯೋಜನವಾಗುವುದಾದರೆ ಆಗಲಿ—ಬೇಡವೆನ್ನುವುದಕ್ಕೆ ನಾನು ಯಾರು ?"

"ದುಃಖದ ಮೂಲ ಯಾವದು? ಮಹಾಮುನಿಗಳನ್ನು, ಮಹಾಪುರುಷರನ್ನೂ ದುಃಖ ಆವರಿಸಿತಲ್ಲ! ಈ ದುಃಖದ ಪರಿಮಿತಿಯಿಂದ ಮಾನವ ಮೇಲಕ್ಕೇಳಬಲ್ಲನೇ ?"

"ಏಳಬಲ್ಲ—ದುಃಖ ಕೊನೆಗಾಣಿಸಬಲ್ಲ. ತಮ್ಮ ಪ್ರಶ್ನೆಗೆ ಭಗವಂತ ಭಗವದ್ಗೀತೆಯಲ್ಲಿ ಸಮಂಜಸ ಉತ್ತರಕೊಟ್ಟಿದ್ದಾನೆ. ನಿಜವಾಗಿ ಹೇಳಬೇಕೆಂದರೆ ಗೀತೆಯ ಸಮಸ್ಯೆಯೂ ತಮ್ಮ ಸಮಸ್ಯೆಯಂತೆಯೇ ಇದೆ. ಇಷ್ಟ ಮಿತ್ರರು, ಬಂಧು ಬಾಂಧವರು, ಗುರುಹಿರಿಯರ ವಿರುದ್ಧ ಯುದ್ಧ ಹೂಡಬೇಕಲ್ಲಾ ಎಂದು ಅರ್ಜುನನಿಗೆ ವಿಷಾದವಾಗುತ್ತದೆ. ಆದರೆ ಈ ವಿಷಾದ ಅರ್ಜುನನ ವೃತ್ತಿ ಪ್ರವೃತ್ತಿಗಳಿಗೆ ವಿರೋಧವಾದ— ಅಸಹಜವಾದ ವಿಷಾದ. ಭೀಷ್ಮದ್ರೋಣಾದಿಗಳನ್ನು ಕೊಲ್ಲಬೇಕಲ್ಲಾ ಎನ್ನುವ ಪ್ರಶ್ನೆ

ಗಿಂತಲೂ **ನಾನು** ಕೊಲ್ಲಬೇಕಲ್ಲಾ ಎನ್ನುವ ಪ್ರಶ್ನೆ ಮುಖ್ಯ. ಅರ್ಜುನನ ವಿಷಾದದ ಹಿಂದೆ '**ನಾನು**' ಹೇಗೆ ಹೆಡೆಯೆತ್ತಿ ನಿಂತಿದೆ ನೋಡಿ. ಈ '**ನಾನು**' ಭಾವನೆ ನಿರ್ಮೂಲವಾದರೆ ದುಃಖ ನೀಗುತ್ತದೆ ಎಂದು ಭಗವಂತ ಹೇಳುತ್ತಾನೆ.

**ಯೋಗಸಂನಸ್ತ್ಯ ಕರ್ಮಾಣಂ**
**ಜ್ಞಾನಸಂಛಿನ್ನ ಸಂಶಯಮ್**
**ಆತ್ಮವಂತಂ ನ ಕರ್ಮಾಣಿ**
**ನಿಬಧ್ನಂತಿ ಧನಂಜಯ ||**

ಆತ್ಮ ಸ್ವರೂಪದ ಅರಿವಿನಲ್ಲಿ ಜಾಗರೂಕನಾಗಿಯೂ, ಜ್ಞಾನದಿಂದ ಸಂಶಯವನ್ನು ಕಳೆದುಕೊಂಡವನಾಗಿಯೂ, ಫಲದಾಶೆ ಇಲ್ಲದ್ದರಿಂದ ಕರ್ಮಗಳನ್ನು ಮಾಡದವನಾಗಿಯೂ ಇರುವವನನ್ನು ಕರ್ಮಗಳು ಕಟ್ಟಿಹಾಕುವುದಿಲ್ಲ.

ಜ್ಞಾನ ಶ್ರದ್ಧೆಯಿಂದಲೇ ಲಭಿಸಬೇಕು (ಶ್ರದ್ಧವಾನ್ ಲಭತೇ ಜ್ಞಾನಂ)—ಈ ಜ್ಞಾನ ಅಸದೃಶವಾದುದು (ನಹಿ ಜ್ಞಾನೇನಸದೃಶಂ)—ಎಲ್ಲ ಕರ್ಮಗಳೂ ಪೂರ್ಣವಾಗಿ ಜ್ಞಾನದಲ್ಲಿ ಮುಗಿದು ಹೋಗುತ್ತವೆ. (ಸರ್ವಂ ಕರ್ಮಾಖಿಲಂ ಜ್ಞಾನೇ ಪರಿಸಮಾಪ್ಯತೇ). ನಿಮ್ಮ ಮೂಲಪ್ರಶ್ನೆಗೆ ಭಗವದ್ಗೀತೆಯಲ್ಲಿಯೇ ಉತ್ತರವಿದೆಯೆಂದು ಹೇಳಿದೆ. ಎರಡನೆಯ ಅಧ್ಯಾಯದಲ್ಲಿ ಭಗವಂತ ಆತ್ಮಸ್ವರೂಪವನ್ನು ವಿಸ್ತರಿಸುತ್ತಾನೆ. ಸರ್ವಭೂತಸ್ಥವಾಸಿಯಾದ ಆತ್ಮ ಏತಕ್ಕೆ ಪ್ರಕಟವಾಗುವುದಿಲ್ಲ, ಏತಕ್ಕೆ ದೃಗ್ಗೋಚರವಾಗುವುದಿಲ್ಲ?

**ಯದಾ ಸಂಹರತೇ ಚಾಯಂ ಕೂರ್ಮೋಂಗಾನೀವ ಸರ್ವಶಃ**
**ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ||**

(ಆಮೆಯು ತನ್ನ ಅವಯವಗಳನ್ನು ಎಲ್ಲ ಕಡೆಯಿಂದಲೂ ಒಳ ಸೆಳೆದುಕೊಳ್ಳುವಂತೆ ಯಾವನು ಯಾವಾಗ ಸರ್ವೇಂದ್ರಿಯಗಳನ್ನು ಶಬ್ದಾದಿ ವಿಷಯಗಳಿಂದ ತನ್ನ ಇಚ್ಛಾನುಸಾರವಾಗಿ ಹಿಮ್ಮೆಟ್ಟಿಸಿಕೊಳ್ಳುವನೋ ಆಗ ಅವನ ಬುದ್ಧಿಯು ಆತ್ಮನಲ್ಲಿ ಬೇರು ಬಿಡುವುದು.)

ಧ್ಯಾಯತೋ ವಿಷಯಾನ್ ಪುಂಸಃ
ಸಂಗಸ್ತೇಷೂಪಜಾಯತೇ
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಭಿ
ಜಾಯತೇ ||
ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ||

(ಸುಖಸಾಧನೆಗಳನ್ನೇ ಹಂಬಲಿಸುತ್ತಿರುವವನಿಗೆ ಅವುಗಳಲ್ಲಿ ಪ್ರೀತಿ ಹುಟ್ಟುತ್ತದೆ. ಪ್ರೀತಿಯಿಂದ ಬಯಕೆ ಹುಟ್ಟುತ್ತದೆ. ಬಯಕೆಯಿಂದ ಸಿಟ್ಟು ತಲೆಹಾಕುತ್ತದೆ.

ಸಿಟ್ಟಿನಿಂದ ಭ್ರಾಂತಿಯುಂಟಾಗುತ್ತದೆ. ಭ್ರಾಂತಿಯಿಂದ ನೆನಪುಹಾರುತ್ತದೆ. ನೆನಪು ಹಾರುವುದರಿಂದ ಬುದ್ಧಿಯು ಹಾಳಾಗುತ್ತದೆ. ಬುದ್ಧಿಹಾಳಾಗುವುದರಿಂದ ಅವನು ಕೆಟ್ಟುಹೋಗುತ್ತಾನೆ.)

ದುಃಖದ ಪರಿಮಿತಿಯಿಂದ ಮಾನವ ಮೇಲಕ್ಕೇಳಬಲ್ಲನೇ ಎಂದು ತಾವು ಕೇಳಿದಿರಿ—ಉತ್ತರ ಭಗವಂತ ಹೇಳಿಯೇ ಇದ್ದಾನೆ. 'ಯದಾ ಸಂಹರತೇ ಚಾಯಂ ಕೂರ್ಮೋಂಗಾನೀವ ಸರ್ವಶಃ'. ಮಹಾಮುನಿಗಳನ್ನೂ ಮಹಾಪುರುಷರನ್ನೂ ದುಃಖ ಕಾಡಿದೆ. ಸಣ್ಣಪುಟ್ಟ ಈಪ್ಸಿತಗಳು ಈಡೇರ ಲಿಲ್ಲವೆಂದು ನಾವೇ ಇಷ್ಟು ದುಃಖ ಪಡುವಾಗ, ಭಗವಂತನ ಸಾಕ್ಷಾತ್ಕಾರ ವಾಗಲಿಲ್ಲವೆಂದು ಅವರು ಪಡುವ ದುಃಖ ಯಾವ ಪ್ರಮಾಣದ್ದಾಗಿರಬೇಕು. 'ಎನ್ನ ನೆತ್ತಿಯಲ್ಲಿ ಅಲಗು ತಿರುಗಿದಂತಪ್ಪ ವೇದನೆಯುಹುದೆನಗೆ' ಎಂದು ವರ್ಣಿಸುತ್ತಾ ಬಸವಣ್ಣ ಕಾರಣ ಹೇಳುತ್ತಾನೆ— ಕೂಡಲಸಂಗಯ್ಯ ಒಲಿಯುವನೋ, ಒಲಿಯನೋ ಎಂಬ ಆಂಹತಿಗೊಳಗಾಗಿ ಎಂದು ವಿವರಿಸುತ್ತಾನೆ. ತನ್ನ ಸುಖ, ಹಿತ, ಶ್ರೇಯಸ್ಸುಗಳಿಗಿಂತ ಸಮಷ್ಟಿಯ ಕಲ್ಯಾಣ ಮುಖ್ಯವಾದದು—ತನಗೆಷ್ಟು ಹಿಂಸೆಯಾದರೂ ಚಿಂತೆಯಿಲ್ಲ, ಲೋಕ ಬದುಕಿದರೆ ಸಾಕು ಎನ್ನುವ ಮನೋಭಾವನೆಯೇ ಮಹಾಪುರುಷನ ಲಕ್ಷ್ಯವನ್ನು ನಿರ್ದೇಶಿಸುತ್ತದೆ. ಅವನ ದುಃಖ ಅಧಿಕವಾದುದೆನ್ನುವುದರಲ್ಲಿ ಸಂದೇಹವೇನು ?"

ಚಿಂತಾಕುಲರಾದ ರಮಣಯ್ಯನವರು ಮಾತನಾಡದೆ ಕುಳಿತರು. ಭಟ್ಟರ ವಿವರಣೆಯಿಂದ ಅವರ ಬಾಯಿ ಕಟ್ಟಿಹೋಗಿತ್ತು.

"ತಾವು ಏನೋ ಹೇಳಬೇಕೆಂದಿದ್ದಿರಿ" ಎಂದು ಭಟ್ಟರು ಪೂರ್ವಪೀಠಿಕೆ ಹಾಕಿ ಧೈರ್ಯಕೊಟ್ಟರು.

"ನನ್ನ ಪ್ರಶ್ನೆಗೆ ಸಮಾಧಾನ ದೊರೆತಿದೆ. ಪುನಃ ಪುನಃ ಅದನ್ನೇ ಏಕೆ ಪ್ರಸ್ತಾಪಿಸಲಿ."

"ತಮ್ಮ ಮನಸ್ಸಿನಲ್ಲಿ ಯಾವುದೋ ದುಃಖ ತುಂಬಿದೆ."

"ಹೌದು."

"ಹೇಳುವುದಕ್ಕೆ ಅಡ್ಡಿಯಿಲ್ಲದಿದ್ದರೆ ಹೇಳಿ."

"ತಮ್ಮನ್ನು ನೋಡಿದ ಕೂಡಲೇ ಹೃದಯ ತೋಡಿಕೊಳ್ಳಬೇಕೆನಿಸಿತು. ತಮ್ಮ ಮಾತು ಕೇಳಿದ ಮೇಲಂತೂ ಹೊಸಜೀವ ಬಂದಂತಾಯಿತು. ನಾನು ಈ ಊರಿನ ಶಾನುಭೋಗ ಎಂದು ಮೊದಲೇ ಅರಿಕೆ ಮಾಡಿಕೊಂಡೆ. ಈ ಶಾನುಭೋಕೆ ವಂಶಪಾರಂಪರ್ಯವಾಗಿ ನನಗೆ ಬಂದಿದೆ. ಹಿರಿಯರು ಗೌರವವಾಗಿ ಶಾನುಭೋಕೆ ನಡೆಸಿ, ರಟ್ಟೆ ಮುರಿದು ಅಲ್ಪ ಸ್ವಲ್ಪ ಆಸ್ತಿ ಸಂಪಾದಿಸಿದರು. ನಾನು ಅದನ್ನೇ ರೂಢಿಸಿಕೊಂಡು, ಅವರ ಮೇಲ್ಪಂಕ್ತಿಯನ್ನನುಸರಿಸಿ ಧರ್ಮವನ್ನು ಬಿಡದೆ ಪಾಲಿಸಿಕೊಂಡು ಬಂದಿದ್ದೇನೆ. ಈಚೆಗೆ ದೇಶದ ಪರಿಸ್ಥಿತಿ ಕೆಟ್ಟಂತೆ ನಮ್ಮೂರಿನ ಪರಿಸ್ಥಿತಿಯೂ ಕೆಡುತ್ತಬಂದಿದೆ. ಬ್ರಾಹ್ಮಣ-ಅಬ್ರಾಹ್ಮಣ ದ್ವೇಷ ತಲೆಹಾಕಿ ಒಮ್ಮುಖವಾದ ಸ್ನೇಹಸೌಹಾರ್ದ ಭಾವನೆಗೆ ಬಲವಾದ ಪೆಟ್ಟು ಬಿದ್ದಿದೆ. ನನ್ನ ಶಾನುಭೋಕೆ ಕಸಿದುಕೊಳ್ಳ ಬೇಕೆಂಬ ಪ್ರಯತ್ನವೂ ನಡೆಯಿತು. ಅದನ್ನು ಬಿಟ್ಟುಕೊಡಲು ನಾನು ಸಿದ್ಧನಾಗಿದ್ದೆ. ಆದರೆ ಸರ್ಕಾರದವರೇ ಒಪ್ಪಲಿಲ್ಲ. ನಮ್ಮ ಆತ್ಮಗೌರವವನ್ನು ಬದಿಗಿಟ್ಟೇ ಈಗಿನ ಅಧಿಕಾರಿಗಳ ಕೈಕೆಳಗೆ ದುಡಿಯಬೇಕಾಗಿದೆ. ನಿನ್ನೆ ಮೊನ್ನೆ ಕಾಲೇಜಿನಿಂದ ಹೊರಬಿದ್ದ ಹುಡುಗರು ಅಮಲ್ದಾರರಾಗಿ, ಸಬ್‌ಡಿವಿಸನ್ ಆಫೀಸರಾಗಿಬರುತ್ತಾರೆ. ನಮ್ಮ ವಯಸ್ಸಿಗೂ ಗೌರವ ಕೊಡದೆ ನಮ್ಮನ್ನು ಎಲೋ-ತಲೋ ಎಂದು ಮಾತನಾಡಿಸುತ್ತಾರೆ. ನನಗೆ ಬರುವುದೆಲ್ಲಾ ನೂರು ಮೂವತ್ತು ರೂಪಾಯಿ ಪೋಟಿಗೆ ಹಣ. ಈ ಅಲ್ಪಕ್ಕಾಗಿ ನಾನೇಕೆ ಅವಾಚ್ಯ ಶಬ್ದಗಳನ್ನು ಕೇಳಬೇಕು ಎಂದು ಆಲೋಚಿಸಿ ರಾಜೀನಾಮೆ ಕೊಟ್ಟೆ. ಪ್ರಾಯಶಃ ನನ್ನ ಕರ್ಮ ಸವೆದಿಲ್ಲ—ಅದು ಅಂಗೀಕಾರವಾಗಲಿಲ್ಲ."

"ಸತ್ಯಸೂರ್ಯನನ್ನು ಸದಾ ಮುಚ್ಚಿಡಲಾಗುವುದಿಲ್ಲ ರಮಣಯ್ಯ ನವರೇ.—ಅಂತಿಮ ಜಯ ಸತ್ಯಕ್ಕೆಂಬುದು ಸ್ವತಃಸ್ಸಿದ್ಧ."

"ನನಗೇನು ಸಲಹೆ ಕೊಡುತ್ತೀರಿ ?"

"ಪ್ರತಿಭಟನೆ ಬಂದರೆ ಎದುರಿಸಲೇ ಬೇಕು. ನೀವು ಬೇಸರಗೊಂಡು ಒಂದುವೇಳೆ ಕೆಲಸ ಬಿಡುವುದಾದರೆ ನಿಮ್ಮ ಸ್ಥಾನಕ್ಕೆ ಬರುವವನು ನಿಮ್ಮಷ್ಟೇ ಧರ್ಮಿಷ್ಠನಾಗಿರುತ್ತಾನೆಂದು ನಂಬಲಾಗುವುದೇ ? ಎಂತಿನವರೆಗೆ ನಿಮ್ಮಿಂದ ಧರ್ಮಚ್ಯುತಿ ಆಗಲಾರದೋ ಅಂದಿನವರೆಗೆ ನೀವು ನಿಮ್ಮ ಸ್ಥಾನ ಬಿಟ್ಟು ಕೊಡಬಾರದು."

"ನನ್ನ ಮನಸ್ಸಿನಿಂದ ದೊಡ್ಡ ಹೊರೆ ಇಳಿಸಿದಿರಿ ಶಾಸ್ತ್ರಿಗಳೇ. ನಾನು ತಮಗೆ ಎಷ್ಟು ಕೃತಜ್ಞನಾಗಿದ್ದರೂ ಸಾಲದು."

"ಇಲ್ಲ ರಮಣಯ್ಯನವರೇ–ಇನ್ನೂ ಹೊರೆ ಇಳಿಸಿಲ್ಲ. ತಮಗೆ ಮಕ್ಕಳೆಷ್ಟು ?"

ರಮಣಯ್ಯನವರು ಅವನತಮುಖರಾಗಿ ಕುಳಿತರು. ಅವರ ಕಣ್ಣು ಗಳಿಂದ ಹನಿಗಳು ತೊಟ್ಟಿಕ್ಕಿದವು.

"ಭಗವಂತ ಕಣ್ಣೆತ್ತಿ ನೋಡಿಲ್ಲ ಸ್ವಾಮಿ–ನನಗೆ ಮಕ್ಕಳಿಲ್ಲ. ಅದೇ ದುಃಖದಲ್ಲಿ ಆಕೆ ಕೊರಗಿ ಸೊರಗುತ್ತಿದ್ದಾಳೆ."

"ಇಲ್ಲಿ ನೋಡಿ ರಮಣಯ್ಯನವರೇ–ನನಗೂ ಮಕ್ಕಳಿಲ್ಲ–ನಾಳೆ ನನ್ನ ಉತ್ತರಕ್ರಿಯಾದಿಗಳನ್ನು ಮಾಡುವವರೂ ಇಲ್ಲ. ಅದಕ್ಕಾಗಿ ನಾನು ದುಃಖ ಪಡುತ್ತಿಲ್ಲ. ಭಗವಂತನನ್ನೇ ದೃಢವಾಗಿ ನಂಬಿ ಆತನಿಗೆ ಶರಣುಹೋಗಿ. ಅವನನ್ನು ಮಗುವೆಂದೇ ಆರಾಧಿಸಿ. ಯಶೋಧಾ ತಾಯಿ ವಿಶ್ವಪುರುಷನನ್ನು ತನ್ನ ಮಗನೆಂದು ಮುದ್ದಿಸಿ ಲಾಲಿಸಿ ಪಾಲಿಸಲಿಲ್ಲವೇ ?

**ಯೋ ಯೋ ಯಾಂ ಯಾಂ ತನುಂ**
**ಭಕ್ತಃ ಶ್ರದ್ಧಯಾರ್ಚಿತು ವಿಚ್ಛತಿ**
**ತಸ್ಯ ತಸ್ಯಾಚಲಂ ಶ್ರದ್ಧಾಂ**
**ತಾಮೇವ ವಿದಧಾಮ್ಯಹಂ ||**

**ಯಾವ ಯಾವ ಭಕ್ತನು ಯಾವ ಯಾವ ದೇವತೆಯನ್ನು ವಿಶ್ವಾಸದಿಂದ ಪೂಜಿಸಬೇಕೆಂದುಬಯಸುತ್ತಾನೋ ಅವನವನಿಗೆ ನಾನು ಆಯಾ ದೇವತೆಯ ಮೇಲಿನ ವಿಶ್ವಾಸವನ್ನೇ ನೆಲೆಗೊಳಿಸುವೆನು.**

ಒಳಗಿನ ಬಾಗಿಲಿನಲ್ಲಿ ಕುಳಿತು ಭಟ್ಟರ ಮಾತುಗಳನ್ನು ಕೇಳುತ್ತಿದ್ದ ಶಂಕರಮ್ಮ ಎದ್ದು ಬಂದು ಭಟ್ಟರಿಗೆ ದೀರ್ಘದಂಡ ಪ್ರಣಾಮ ಮಾಡಿದರು. ರಮಣಯ್ಯನವರೂ ಪತ್ನಿಯನ್ನು ಅನುಸರಿಸಿದರು.

"ಗುರುದೇವರು ಮಂಗಳವನ್ನುಂಟುಮಾಡುತ್ತಾನೆ ಚಿಂತಿಸಬೇಡಿ."

ರಮಣಯ್ಯ ಅಂಜಲಿಬದ್ಧರಾಗಿ

"ಶಾಸ್ತ್ರಿಗಳೇ–ತಾವು ನಾಲ್ಕು ದಿನ ಇಲ್ಲಿಯೇ ನಿಂತು ಊರಿನವರಿಗೆ ಉಪದೇಶ ಮಾಡಬೇಕು."

"ನಾನು ಉಪದೇಶಕನಲ್ಲ ಸ್ವಾಮಿ–ಸಾಧಕ, ಭಕ್ತ, ಜ್ಞಾನಾಭಿಕ್ಷಾ ಪಾತ್ರೆ ಹಿಡಿದು ನಾನೇ ಗುರುಸನ್ನಿಧಿಗೆ ಹೋಗುತ್ತಿದ್ದೇನೆ. ದಾರಿಯಲ್ಲಿ ನನ್ನ ತಾಯಿ ಅನ್ನಪೂರ್ಣೇಶ್ವರಿಯ ದರ್ಶನವಾಯಿತು–ಮೃಷ್ಟಾನ್ನ ಭೋಜನವಾಯಿತು. ಇನ್ನು ನನಗೆ ಅಪ್ಪಣೆ ಕೊಡಿ–ಬೆಳಿಗ್ಗೆ ನಾನು ಪ್ರಯಾಣ ಮಾಡಲೇ ಬೇಕು."

ರಮಣಯ್ಯನವರು ಒಪ್ಪಿಕೊಳ್ಳದೆ ನಿರ್ವಾಹವಿರಲಿಲ್ಲ.

ಬೆಳಿಗ್ಗೆ ನಾಲ್ಕು ಗಂಟೆಗೇ ಭಟ್ಟರೆದ್ದು ತಣ್ಣೀರು ಸ್ನಾನಮಾಡಿ, ಪೂಜೆ ಮುಗಿಸಿ ಹೊರಡಲನುವಾದರು. ಶಂಕರಮ್ಮ ತಾಲೀಪಿಟ್ಟು ತಟ್ಟಿ, ಅವಲಕ್ಕಿ ಮೊಸರು ಕಲಸಿ ಭಟ್ಟರಿಗೆ ಬಲವಂತವಾಗಿ ಉಪಾಹಾರ ಮಾಡಿಸಿದರು.

ಭಟ್ಟರು ತಮ್ಮ ಯಾತ್ರೆ ಮುಂದುವರಿಸಿದರು.

## ೧೮

ಭಟ್ಟರ ಯಾತ್ರೆ ಅವ್ಯಾಹತವಾಗಿ ಸಾಗಿತು.

ಪ್ರತಿದಿನ ಏಳೆಂಟು ಮೈಲಿಗಳಿಗಿಂತ ಹೆಚ್ಚು ನಡೆಯಲು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ರುದ್ರಾಕ್ಷಿಪುರ ಬಿಟ್ಟು ಎಷ್ಟು ದಿವಸಗಳಾದು ವೆಂಬುದು ಭಟ್ಟರಿಗೆ ಮರೆತೇ ಹೋಗಿತ್ತು. ಅವರ ಕಣ್ಣು ಮನಸ್ಸುಗಳಲ್ಲಿ ಶೃಂಗೇರಿ – ಶ್ರೀ ಶಾರದಾದೇವಿ – ಶ್ರೀ ಚಂದ್ರಶೇಖರ ಗುರುಗಳು ನೆಲಸಿ ಬಿಟ್ಟಿದ್ದರು.

ಭಟ್ಟರ ಅಪೂರ್ಣ ಲೌಕಿಕಜ್ಞಾನವನ್ನು ಯಾತ್ರೆ ಪೂರ್ಣಗೊಳಿಸಿತು. ಪ್ರಕೃತಿಲಾವಣ್ಯದಿಂದ ತುಂಬಿದ ಪ್ರದೇಶ ದಾಟಿದೊಡನೆಯೇ ಬೆಂಗಾಡಿನಂಥ ಭೂಮಿ—ಅದನ್ನು ದಾಟಿದೊಡನೆಯೇ ಮತ್ತೆ ಹಸಿರುಪಸರಿಸಿದ ಪಚ್ಚೆ ಭೂಮಿ. ಪೂರ್ಣಗರ್ಭಿಣಿಯಂತೆ ಬೆಳೆದು ನಿಂತಿದ್ದ ಭತ್ತದ ಪೈರು.

ಜನರ ಉಡಿಗೆತೊಡುಗೆ ಮಾತುಕತೆಯಲ್ಲಿಯೂ ನೂರೆಂಟು ವ್ಯತ್ಯಾಸ. ಬಯಲು ನಾಡವರ ಗಾಂಭೀರ್ಯಪೂರ್ಣ ಕ್ಷಾತ್ರಭಾಷೆ; ಮಲೆನಾಡಿನವರ ಮೃದುಮಧುರ ಮಂಜುಳಭಾಷೆ. ಇತ್ತ ಪರಭಾಷೆಗಳ ಪ್ರಭಾವವನ್ನು ಜೀರ್ಣಿಸಿಕೊಂಡು, ಅವುಗಳ ಮೇಲೆ ಪಳವಿಗೆ ನೆಟ್ಟು ಮೆರೆಯುತ್ತಿದ್ದ ವೀರ ಗನ್ನಡ; ಅತ್ತ ಸ್ವಭಾಷೆಯ ಸುಪ್ತಶಕ್ತಿಯನ್ನೇ ಪ್ರಚೋದಿಸಿ ಸ್ವಶಕ್ತಿಯ ಬಲದಿಂದಲೇ ಬೆಳೆಯುತ್ತಿದ್ದ ಸುಕುಮಾರ ಕನ್ನಡ.

ಹೌದು! ಜಗಜ್ಜನನಿ ದುರ್ಗಿಯಾಗಿ ಕತ್ತಿಯನ್ನೂ ಹಿಡಿದಿದ್ದಾಳೆ; ಸರಸ್ವತಿಯಾಗಿ ವೀಣೆಯನ್ನೂ ಹಿಡಿದಿದ್ದಾಳೆ.

ಆದರೆ ಈ ವಿವಿಧ ಪ್ರತೀಕಗಳ ಹಿನ್ನೆಲೆಯಲ್ಲಿ ಒಂದು ಸಂಸ್ಕೃತಿಯ ಅನಂತವಿತಾನ. ಹಲವು ವಾದ್ಯಗಳಲ್ಲಿ ನುಡಿಯುತ್ತಿದ್ದುದು ಒಂದೇ ಸ್ವರ–

ಒಂದೇ ಮಂತ್ರ-ಒಂದೇ ಹಾಡು **ತತ್-ತ್ವಂ-ಅಸಿ.** ಭಿನ್ನಭಿನ್ನ ಭಾಷೆ, ಆಹಾರ, ಉಡುಪು, ಆಚಾರ, ವಿಚಾರ, ಮತಗಳಿಗೆ ಆಶ್ರಯಕೊಟ್ಟಿದ್ದ ಭಾರತ ಒಂದು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಕೇಳಿ ಬರುವುದು ಅದೇ ಒಂದು ದಿವ್ಯಗೀತೆ—ವಿಶ್ವೋದ್ಧಾರಕ ಬೀಜಮಂತ್ರ.

**ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ॥**

ತದೇಕಧ್ಯಾನಪರರಾಗಿ ಭಟ್ಟರು ಶೃಂಗೇರಿಯ ಸಮೀಪ ಸಮೀಪಕ್ಕೆ ಹೋಗುತ್ತಿದ್ದರು.

ಭಟ್ಟರು ಶೃಂಗೇರಿ ತಲುಪಿದಾಗ ಮಧ್ಯಾಹ್ನವಾಗಿತ್ತು. ಬಿಸುಲಿನ ಬೇಗೆಯಿಂದ ಅವರ ಪ್ರಬುದ್ಧಕಾಯಕ್ಕೆ ತಾಪವೂ ಆಗಿತ್ತು. ಬ್ರಾಹ್ಮಣ ಧೂಳಿಧೂಸರಿತನಾಗಿದ್ದಾನೆ—ಆಪಾದಮಸ್ತಕ ಬೆವರುತ್ತಿದ್ದಾನೆ—ಬಿಸುಲಿನ ಹೊಡೆತಕ್ಕೆ ಸಿಕ್ಕಿ ಅವನ ಮುಖ ರಕ್ತಛಾಯೆಗೊಂಡಿದೆ.

ಶೃಂಗೇರಿಯ ದೇವಾಲಯಗಳ ಗೋಪುರಗಳು ಕಣ್ಣಿಗೆ ಬಿದ್ದೊಡನೆಯೇ ಭಟ್ಟರು ಹೆಗಲಮೇಲಿದ್ದ ಹಸಿಬೆಚೀಲ ಬಿಸುಟು ದೀರ್ಘದಂಡ ಪ್ರಣಾಮ ಮಾಡಿದರು.

'ಅಲ್ಲಿ ತಾಯಿ ಇದ್ದಾಳೆ-ಅಗೋ ಅಲ್ಲಿ ನರಸಿಂಹವನದಲ್ಲಿ ಗುರುಮೂರ್ತಿ ಮಂಡಿಸಿದ್ದಾನೆ'

ಎಂದವರ ಹೃದಯ ಸಂತೋಷದಿಂದ ಹಾಡತೊಡಗಿತು.

ಭಟ್ಟರು ನದೀಸ್ನಾನಮಾಡಿ, ಒದ್ದೆಯುಟ್ಟು ಅಮ್ಮನವರ ದೇವಾಲಯದ ಬಳಿಗೆ ಬಂದರು.

ಗುರುಗಳು ಮಧ್ಯಾಹ್ನದ ಪೂಜೆಗಾಗಿ ತಾಯಿ ಮನೆಗೆ ಬಂದರು. ಭಟ್ಟರು ದೂರದಿಂದಲೇ ಗುರುಗಳಿಗೆ ವಂದಿಸಿದರು. ಅವರ ಕಣ್ಣುಗಳಿಂದ ಆನಂದಬಾಷ್ಪಗಳುದುರುತ್ತಿದ್ದವು.

'ತಾಯಿ, ಎಷ್ಟು ಕರುಣಾಮಯಿ ನೀನು. ಶೃಂಗೇರಿ ತಲುಪಿದ ಕೂಡಲೆ ಗುರುದೇವನ ದರ್ಶನ ಭಾಗ್ಯ ಕರುಣಿಸಿದೆಯಲ್ಲಾ !'

ನದಿಯ ದಂಡೆಯಲ್ಲಿದ್ದ ಹಾಳುಮಂಟಪವೇ ಭಟ್ಟರ ಆವಾಸಸ್ಥಾನವಾಯಿತು.

ಶೃಂಗೇರಿಯ ಜನ ಭಟ್ಟರನ್ನು ಕಣ್ಣೆತ್ತಿಯೂನೋಡಲಿಲ್ಲ. ಆಗಂತುಕ ರಾಗಿ ಶೃಂಗೇರಿಗೆ ಬಂದು, ಸೇವೆಸಲ್ಲಿಸಿ ಹೋಗುತ್ತಿದ್ದ ಭಕ್ತತಂಡಕ್ಕೆ ಕೊರತೆ ಯಿರಲಿಲ್ಲ. ಭಿಕ್ಷುಕರು, ಬೈರಾಗಿಗಳು, ಸಾಧುಗಳು, ಶೃಂಗೇರಿಯಲ್ಲಿ ತುಂಬಿರುತ್ತಿದ್ದರು. ಶೃಂಗೇರಿಯ ಜನ ಯಾರನ್ನೂ ಲಕ್ಷಿಸುವ ಅಭ್ಯಾಸವನ್ನೇ ಇಟ್ಟುಕೊಂಡಿರಲಿಲ್ಲ.

ಭಟ್ಟರು ತಾವಾಗಿಯೇ ಯಾರ ಪರಿಚಯವನ್ನೂ ಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಹಿಂದೆ—ವಿದ್ಯಾರ್ಥಿದೆಸೆಯಲ್ಲಿ ಅವರು ಶೃಂಗೇರಿ ಯಲ್ಲಿದ್ದಾಗ ಹಲವು ಜನ ಸಹಾಧ್ಯಾಯಿಗಳಾಗಿದ್ದರು. ಊರಿನ ಹಲವು ಗಣ್ಯರ ಪರಿಚಯವೂ ಅವರಿಗಿತ್ತು. ತಾನೊಬ್ಬ ಭಿಕ್ಷುಕನೆಂದು ಜನರೆಲ್ಲಿ ಭಾವಿಸುವರೋ, ಪರಾನ್ನ ಋಣಕ್ಕೆ ಎಲ್ಲಿ ಸಿಕ್ಕಬೇಕೋ ಎಂಬ ಚಿಂತೆ ಸದಾ ಭಟ್ಟರನ್ನು ಬಾಧಿಸುತ್ತಿತ್ತು.

ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಗುರುಗಳ ದರ್ಶನ ದೂರದಿಂದಲೇ ಪಡೆದು, ನಿಂತಿದ್ದ ಎಡೆಯಿಂದಲೇ ಗುರುಗಳಿಗೆ ಮಣಿದು ಭಟ್ಟರು ತಮ್ಮ ಮಂಟಪ ಸೇರುತ್ತಿದ್ದರು.

ಒಂದು ದಿನ ಮಧ್ಯಾಹ್ನದ ಪೂಜೆ ಮುಗಿಸಿಕೊಂಡು ಗುರುಗಳು ನರಸಿಂಹವನ ಸೇರಿದರು. ಅವರನ್ನೇನೋಡುತ್ತ ನಿಂತಿದ್ದ ಭಟ್ಟರು ತಮ್ಮ ಮಂಟಪ ಸೇರಿದರು. ಭಟ್ಟರ ಹಸಿಬೇ ಚೀಲದಲ್ಲಿದ್ದ ಅವಲಕ್ಕಿ ಮುಗಿದು ಹೋಗಿತ್ತು.

ಭಟ್ಟರು ಒಂದು ತಂಬಿಗೆ ನೀರು ಕುಡಿದು ನಿರಾತಂಕವಾಗಿ ಕುಳಿತಿದ್ದರು.

ಅವರು ಧ್ಯಾನದಲ್ಲಿ ಮೈಮರೆತಿದ್ದಾಗ ಯಾವನೋ ಬ್ರಹ್ಮಚಾರಿಯ ಧ್ವನಿ ಹೊಡೆದೆಬ್ಬಿಸಿದಂತಾಯಿತು. ಭಟ್ಟರು ಕಣ್ಣುಬಿಟ್ಟು ನೋಡಿದರು. ಕನಸಲ್ಲ-ಸತ್ಯ. ಎದುರಿಗೆ ಬ್ರಹ್ಮಚಾರಿ ನಿಂತಿದ್ದಾನೆ.

"ಯಾರಪ್ಪಾ ನೀನು ?" ಎಂದು ಭಟ್ಟರು ಕೇಳಿದರು.

"ಗುರುಗಳ ಸೇವೆ ಮಾಡಿಕೊಂಡಿರುವ ಬ್ರಹ್ಮಚಾರಿ-ನನ್ನ ಹೆಸರು ಸೀತಾರಾಮ."

"ಇಲ್ಲಿಗೇಕೆ ಬಂದೆ ಸೀತಾರಾಮು ?"

"ತಮ್ಮನ್ನು ಜತೆಯಲ್ಲಿ ಕರೆದುಕೊಂಡು ಬರಬೇಕೆಂದು ಗುರುಗಳು ಆಜ್ಞೆ ಮಾಡಿದ್ದಾರೆ."

"ನನ್ನನ್ನೇ?"

"ಹೌದು ತಮ್ಮನ್ನೇ."

"ಗುರುಗಳಿಗೆ ನನ್ನ ಪರಿಚಯವಿಲ್ಲ."

"ಗುರುಗಳಿಗೆ ಗೊತ್ತಿಲ್ಲದಿರುವುದು ಯಾವದೂ ಇಲ್ಲ."

"ಅವರ ಸನ್ನಿಧಿಗೆ ಬರಲು ನಾನು ಎಷ್ಟರವನು!"

"ಎಲ್ಲರೂ ಅವರ ಸನ್ನಿಧಿ ಸೇರಲೇಬೇಕಲ್ಲವೇ?"

"ಸತ್ಯ ಸತ್ಯ-ಸೀತಾರಾಮು, ನೀನು ಗುರುಗಳಲ್ಲಿ ಅಭ್ಯಾಸ ಮಾಡುತ್ತಿರುವೆಯಾ?"

"ಹೌದು ಸ್ವಾಮಿ-ನಾನೊಬ್ಬ ದಿಕ್ಕಿಲ್ಲದ ಅನಾಥ. ಗುರುಗಳು ನನ್ನನ್ನು ಕಾಪಾಡಿ ಪೋಷಿಸುತ್ತಿದ್ದಾರೆ. ನಿತ್ಯ ಅವರೇ ನನಗೆ ಪಾಠ ಹೇಳಿ ಕೊಡುತ್ತಿದ್ದಾರೆ."

"ಈಗ ಯಾವದು ಸಾಗಿದೆ."

"ವೇದಾಂತ - ಬೃಹದಾರಣ್ಯಕೋಪನಿಷತ್ತೇ ನನ್ನ ಪಠ್ಯ ಪುಸ್ತಕವಾಗಿದೆ."

"ನೀನು ಅಪೂರ್ವ ಪುಣ್ಯಶಾಲಿ ಸೀತಾರಾಮು."

"ಹಿರಿಯರ ಆಶೀರ್ವಾದ-ಹೊತ್ತಾಗುತ್ತದೆ ಶಾಸ್ತ್ರಿಗಳೇ, ಗುರುಗಳು ತಮ್ಮ ದಾರಿ ನೋಡುತ್ತಿರುತ್ತಾರೆ."

ಭಟ್ಟರು ಎದ್ದು ನಿಂತರು. ಸೀತಾರಾಮು ಕುತೂಹಲದಿಂದ

"ಇಲ್ಲಿಯೇ ಇರುವಿರಾ?" ಎಂದು ಕೇಳಿದ.

"ಹೌದಪ್ಪಾ ಏಕೆ?"

"ನಿಮ್ಮ ಬಟ್ಟೆ ಬರೆ, ಲಾಂದ್ರ, ಚೆಂಬು ಬಿಟ್ಟು ಬರುತ್ತಿರುವಿರಲ್ಲಾ."

"ಇವುಗಳನ್ನು ಯಾರು ಹೊತ್ತುಕೊಂಡು ಹೋಗುತ್ತಾರೆ."

"ಇದು ಶೃಂಗೇರಿ ಶಾಸ್ತ್ರಿಗಳೇ-ವೈಮೇಲಿನ ಚರ್ಮವನ್ನೇ ಇಲ್ಲಿ ಕದಿಯುತ್ತಾರೆ."

ಅವನ ಮಾತಿಗೆ ನಕ್ಕು ಭಟ್ಟರು ಅವನನ್ನು ಹಿಂಬಾಲಿಸಿದರು.

ಗುರುಗಳು ಭಟ್ಟರನ್ನು ನಿರೀಕ್ಷಿಸುತ್ತ ಕುಳಿತಿದ್ದರು. ಭಟ್ಟರು ಪ್ರವೇಶಿಸಿ ನಮಸ್ಕರಿಸಿದಮೇಲೆ ಗುರುಗಳು ಕಣ್ತುಂಬ ಅವರನ್ನು ನೋಡಿ

"ಕುಳಿತುಕೊಳ್ಳಿ" ಎಂದು ಅಪ್ಪಣೆ ಮಾಡಿದರು.

ಭಟ್ಟರು ಗುರುಗಳ ಎದುರಿಗೆ ನೆಲದ ಮೇಲೆ ಕುಳಿತರು.

"ಕೆಲವು ದಿವಸಗಳಿಂದ ನಿಮ್ಮನ್ನು ನೋಡುತ್ತಿದ್ದೇನೆ. ಪರಿಚಯ ಮಾಡಿಕೊಳ್ಳಬೇಕೆನಿಸಿತು. ಹೇಳಿ ಕಳಿಸಿದೆ. ನಿಮಗೆ ತೊಂದರೆಯಾಗಲಿಲ್ಲವಷ್ಟೇ !"

"ತೊಂದರೆಯೇ ! ಈ ಅನುಗ್ರಹಕ್ಕಾಗಿಯೇ ನಾನು ಚಾತಕಪಕ್ಷಿಯಂತೆ ಕಾಯುತ್ತಿದ್ದೆ."

"ತಮ್ಮ ಊರು ಯಾವುದು ?"

"ರುದ್ರಾಕ್ಷಿಪುರ—ಸೀತಾರಾಮ ಭಟ್ಟರ ಮಗ ನಾನು."

ಗುರುಗಳು ಕ್ಷಣಕಾಲ ಭಟ್ಟರನ್ನು ದಿಟ್ಟಿಸಿ ನೋಡಿ

"ಗುಂಡಾಭಟ್ಟನೆ !"

"ಹೌದು ಗುರುದೇವಾ."

"ನೀವೂ ನಾನೂ ಸಹಾಧ್ಯಾಯಿಗಳಾಗಿದ್ದೆವು. ಅನೇಕಸಲ ನೀವು ನನ್ನನ್ನು ತಿದ್ದಿ ಉಪಕಾರ ಮಾಡಿರುವಿರಿ. ಬಹಳ ದಿವಸಗಳಿಂದ ನಿಮ್ಮ ಸುದ್ದಿ ಸಮಾಚಾರ ತಿಳಿಯಲಿಲ್ಲ."

ಭಟ್ಟರು ತಮ್ಮ ಆತ್ಮಕಥೆಯನ್ನು ನಿವೇದಿಸಿದರು. ಗುರುಗಳು ಎಲ್ಲವನ್ನೂ ಸಾವಧಾನ ಚಿತ್ತರಾಗಿ ಕೇಳಿಕೊಂಡು

"ಯಾವುದೋ ಮಂಟಪದಲ್ಲಿಳಿದುಕೊಂಡಿರುವಿರಂತೆ ?"

"ಹೌದು"

"ಇಲ್ಲಿಯೇ ಬಂದಿರಿ. ಇಲ್ಲಿ ಬರಲು ಇಷ್ಟವಿಲ್ಲದಿದ್ದರೆ ಮಠದಲ್ಲಿರಿ."

"ನನಗಾಗಿ ತಾವು ಯಾವ ತೊಂದರೆಯನ್ನೂ ತೆಗೆದುಕೊಳ್ಳಬಾರದಾಗಿ ಬೇಡಿಕೊಳ್ಳುತ್ತೇನೆ."

ಗುರುಗಳು ಥಟ್ಟನೆ

"ಊಟಕ್ಕೇನು ಮಾಡುತ್ತಿರುವಿರಿ ?"

"ಊರಿನಿಂದ ಬರುವಾಗ ಅವಲಕ್ಕಿ ತಂದಿದ್ದೆ."

ಗುರುಗಳು ಸೀತಾರಾಮುನ ಕಡೆ ತಿರುಗಿ

"ಸೀತಾರಾಮು, ಶಾಸ್ತ್ರಿಗಳ ಊಟದ ವ್ಯವಸ್ಥೆ ಮಾಡು. ಇಂದು ಅವರು ಇಲ್ಲಿಯೇ ಪ್ರಸಾದ ಸ್ವೀಕರಿಸಲಿ."

ಎಂದು ಹೇಳಿದವರೇ ಎದ್ದು ಹೋದರು.

ಕೃತಜ್ಞತೆಯಿಂದ ಭಟ್ಟರ ಕಣ್ಣುಗಳಲ್ಲಿ ಕೋಡಿ ಹರಿಯಿತು.

"ದೊಡ್ಡ ಜೀವ ದೊಡ್ಡ ಜೀವವೇ—ಯಃಕಶ್ಚಿತ ಮನುಷ್ಯ ನಾನೆಲ್ಲಿ—ಅವರೆಲ್ಲಿ. ಧರ್ಮಕರ್ಮಸಂಯೋಗದಿಂದ ಅವರ ಸಹಾಧ್ಯಾಯಿ ನಾನಾಗಿದ್ದುದನ್ನು ಅವರು ಮರೆತಿಲ್ಲ."

"ಗುರುಗಳ ಜ್ಞಾಪಕಶಕ್ತಿ ಅಸಾಧಾರಣವಾದುದು ಶಾಸ್ತ್ರಿಗಳೇ" ಎಂದು ಸೀತಾರಾಮು ಹಿನ್ನುಡಿ ನುಡಿದ.

ಸೀತಾರಾಮು ಭಟ್ಟರ ಕೈಂಕರ್ಯಕ್ಕೆ ನಿಂತ.

ಒಂದುದಿನ ಗುರುಗಳು ಮಧ್ಯಾಹ್ನದ ಪೂಜೆ ಮುಗಿಸಿಕೊಂಡು ನರಸಿಂಹವನ ಸೇರಿ ಭಟ್ಟರೊಂದಿಗೆ ಮಾತನಾಡುತ್ತ ಕುಳಿತಿದ್ದರು. ಸೀತಾರಾಮು ಬಂದವನೇ

"ಯಾರೋ ವೃದ್ಧ ದಂಪತಿಗಳು ಬಂದಿದ್ದಾರೆ. ತಮ್ಮ ದರ್ಶನ ಲಾಭ ಬೇಡುತ್ತಿದ್ದಾರೆ" ಎಂದ.

"ಒಳಗೆ ಬನ್ನಿ ಎಂದು ಹೇಳಪ್ಪಾ"

ಎಂದು ಗುರುಗಳು ಅಪ್ಪಣೆ ಮಾಡಿದರು.

ಶುಭ್ರಸ್ನಾತರಾಗಿ, ರೇಷ್ಮೆ ಮಡಿಯುಟ್ಟು, ವಿಭೂತಿ ಕುಂಕುಮಾಲಂಕೃತರಾಗಿದ್ದ ವೃದ್ಧ ದಂಪತಿಗಳು ಬಂದು ಗುರುಗಳಿಗೆ ದೀರ್ಘದಂಡ ನಮಸ್ಕಾರ ಮಾಡಿ ಕೈಕಟ್ಟಿ ನಿಂತುಕೊಂಡರು.

"ನಿಮ್ಮದು ಯಾವ ಊರು?"

"ಚಿತ್ರದುರ್ಗ."

"ಅಮ್ನೋರ ದರ್ಶನವಾಯಿತೇ?"

ವೃದ್ಧ ದಂಪತಿಗಳ ಕಣ್ಣುಗಳಿಂದ ಧಾರಾಪ್ರವಾಹ ಹೊರಟಿತು.

"ದುಃಖಿಸಬೇಡಿ. ಇವತ್ತು ಇಲ್ಲಿಯೇ ಇರಿ. ಸಂಜೆಗೆ ತಾಯಿಯ ದರ್ಶನ ಪಡೆದು ಪ್ರಯಾಣಮಾಡುವಿರಂತೆ!"

ಎಂದವರೇ ಕೂಡಲೇ

"ಊಟದ ವ್ಯವಸ್ಥೆಯಾಗಿದೆಯೇ ?"

"ಮೂರು ಗಂಟೆಗೊಂದು ಬಸ್ ಇದೆ—ಅದರಲ್ಲಿ ಹೊರಟುಬಿಡಬೇಕೆಂದಿದ್ದೆವು."

ಗುರುಗಳ ಮುಖದಲ್ಲಿ ದುಃಖದ ಗೆರೆಮೂಡಿತು. ತೇಜಃಪುಂಜವಾದ ಅವರ ವದನಶ್ರೀ ಉದ್ವೇಗದಿಂದ ಮತ್ತಷ್ಟು ಪ್ರಕಾಶಿಸಿತು.

"ಸೀತಾರಾಮು, ಇವರನ್ನು ಕರೆದುಕೊಂಡು ಹೋಗಿ ಊಟ ಮಾಡಿಸಿ ಬಂದು ತಿಳಿಸು" ಎಂದರು.

ದಂಪತಿಗಳು ಹೋದಮೇಲೆ ಗುರುಗಳು ಭಟ್ಟರ ಕಡೆ ತಿರುಗಿ

"ನೋಡಿದಿರಾ ಶಾಸ್ತ್ರಿಗಳೇ—ಅನ್ನಪೂರ್ಣೆಯ ಮನೆಗೆ ಬಂದವರೂ ಉಪವಾಸ ಹಿಂದಿರುಗಬೇಕಾಗಿದೆ—ಶೃಂಗೇರಿ ಮೊದಲಿನ ಶೃಂಗೇರಿಯಲ್ಲ ಶಾಸ್ತ್ರಿಗಳೇ-ಮಠದಲ್ಲಿ ನಡೆಯುವ ದುರ್ವ್ಯಾಪಾರ ಕಂಡು ನನಗೆ ತಲೆಬೇಸರ ಬಂದಿದೆ. ವಿದ್ವಾಂಸರಿಗೆ ಗೌರವವಿಲ್ಲ—ಶಾರದಾಪೀಠದಲ್ಲಿ; ಭಕ್ತರಿಗೆ ಆದರವಿಲ್ಲ—ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳ ಸಾಮ್ರಾಜ್ಯದಲ್ಲಿ; ಮಠದ ಅಧಿಕಾರಿಗಳೇ ಅನ್ನ ಮಾರುತ್ತಾರೆ. ಅತಿಥಿ ಅಭ್ಯಾಗತರನ್ನು ಹಿಂಸೆ ಮಾಡುತ್ತಾರೆ. ಈ ಮಾತು ಹೇಳಿದ ತಪ್ಪಿಗಾಗಿ ನನ್ನನ್ನು 'ಹುಚ್ಚ'ನೆಂದು ಕರೆಯುತ್ತಾರೆ. ಬಂಧನವನ್ನೂ ನಾನು ಅನುಭವಿಸಿದ್ದೇನೆ ಶಾಸ್ತ್ರಿಗಳೇ—ಚಿಕ್ಕಗುರುಗಳನ್ನು ಪೀಠಕ್ಕೆ ಅಣಿಮಾಡುವ ಜವಾಬ್ದಾರಿ ನನ್ನ ಹೆಗಲ ಮೇಲೆ ಬೀಳದಿದ್ದರೆ ನಾನು ಒಂದು ದಿನವೂ ಇಲ್ಲಿ ನಿಲ್ಲುತ್ತಿರಲಿಲ್ಲ."

"ತಾವು ಶೃಂಗೇರಿಯಲ್ಲಿರುವುದು ಶೃಂಗೇರಿಗೇ ಅಪೂರ್ವ ಶೋಭೆಯನ್ನಿತ್ತಿದೆ. ಹೊರಲಾಗದ ದುಃಖದ ಹೊರೆ ಹೊತ್ತು ಇಲ್ಲಿಗೆ ಬರುವವರು ತಮ್ಮ ದರ್ಶನಮಾತ್ರ ದಿಂದಲೇ ಧನ್ಯರಾಗುತ್ತಾರೆ. ತಾವು ಶೃಂಗೇರಿ ಬಿಟ್ಟರೆ ಶೃಂಗೇರಿಗೆ ಯಾರು ಗತಿ ?"

"ಶೃಂಗೇರಿಯ ರೈತರು ಸಂಸ್ಥಾನದ ಬಗ್ಗೆ ಅಭಿಮಾನ ತಳೆದಿರುವವರೆಗೆ ಯಾವ ಭಯವೂ ಇಲ್ಲ ಭಟ್ಟರೇ. ಅವ್ನೋರು ಎಂದಿನವರೆಗೆ ಇಲ್ಲಿ ನೆಲೆಸಿರುವರೋ ಅಂದಿನವರೆಗೆ ಶೃಂಗೇರಿಯ ಕೀರ್ತಿಗೆ ಚ್ಯುತಿಯಿಲ್ಲ. ಇಲ್ಲಿಯ ಗುರುಪೀಠ ಸ್ಥಾಪಿಸಿದವರು ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರಾದ

ಶ್ರೀ ವಿದ್ಯಾರಣ್ಯ ಸ್ವಾಮಿಗಳು. ಅವರ ದಿವ್ಯತಪಸ್ಸಿನ ಪ್ರಭಾವದಿಂದ ಪೀಠದ ಮೇಲೆ ಯಾರು ಕುಳಿತರೂ ಮಹಿಮಾಶಾಲಿಗಳಾಗುತ್ತಾರೆ."

"ವ್ಯಕ್ತಿಪ್ರಭಾವವೂ ಪೀಠದ ಹಿರಿಮೆಗೆ ಕಾರಣವಾಗುವುದಿಲ್ಲವೇ ?"

"ವ್ಯಕ್ತಿ ಮಹಾವ್ಯಕ್ತಿಯಾಗುವುದು, ಗುರುಕರುಣೆಯಿಂದ."

ದಂಪತಿಗಳಿಗೆ ಭೋಜನವಾಯಿತೆಂದು ಸೀತಾರಾಮು ತಿಳಿಸಿದ ಮೇಲೆ ಶ್ರೀ ಶ್ರೀಗಳವರು ಮೇಲಕ್ಕೆದ್ದರು.

ಅದೇ ಸಂಜೆ ಅಮ್ನೋರ ದೇವಾಲಯದಲ್ಲಿ ವೃದ್ಧ ದಂಪತಿಗಳ ಸೇವೆ ನಡೆಯಿತು. ಶ್ರೀ ಶ್ರೀಗಳವರು ದಂಪತಿಗಳಿಗೆ ಪ್ರಸಾದವನ್ನನುಗ್ರಹಿಸಿದುದಲ್ಲದೆ ಉಡುಗೊರೆಗಳನ್ನಿತ್ತು ಆದರಿಸಿದರು.

## ೧೯

ಚಂದ್ರಶೇಖರ ಪ್ಲೀಡರ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ತಂದೆಯ ಜತೆಯಲ್ಲಿಯೇ ವಕೀಲಿವೃತ್ತಿಯನ್ನಾರಂಭಿಸಿದ.

ಶುಭಮುಹೂರ್ತ ಗೊತ್ತುಮಾಡಿ ಪ್ರಸ್ತದಶಾಸ್ತ್ರ ಮುಗಿಸಿಕೊಟ್ಟ ನರಸಮ್ಮ ಮಗಳನ್ನು ಗಂಡನ ಮನೆಯಲ್ಲಿ ಬಿಟ್ಟು ಹೋದಳು. ತಾನು ಬಂದು ಬೀಗರ ಮನೆಯಲ್ಲಿರುವುದಕ್ಕೆ ನರಸಮ್ಮ ಸುತರಾಂ ಒಪ್ಪಲಿಲ್ಲ.

ನಾಗಮ್ಮ ನಿತ್ಯವೂ ಭಟ್ಟರನ್ನು ಸ್ಮರಿಸಿಕೊಳ್ಳುತ್ತಿದ್ದಳು. ಒಂದು ದಿನ ಗಂಡನೊಂದಿಗೆ

"ಭಟ್ಟರು ಶೃಂಗೇರಿಗೆ ಹೋಗಿ ಆರು ತಿಂಗಳಾಯಿತು. ಒಂದು ಕಾಗದ ವನ್ನೂ ಬರೆದಿಲ್ಲ. ಈ ಇಳಿವಯಸ್ಸಿನಲ್ಲಿ ಎಷ್ಟು ಕಷ್ಟ ಪಡುತ್ತಿದ್ದಾರೋ ಏನೋ? ಶೃಂಗೇರಿಗೆ ಒಂದು ಕಾಗದವನ್ನಾದರೂ ಬರೆದು ಭಟ್ಟರ ಯೋಗ ಕ್ಷೇಮ ವಿಚಾರಿಸಬಾರದೇ?"

"ಭಟ್ಟರು ತುಂಬ ಹಟವಾದಿಗಳು. ಇಲ್ಲಿಯೇ ಹಾಯಾಗಿ ಇದ್ದಿದ್ದರೆ ನಾನು ಬೇಡವೆನ್ನುತ್ತಿದ್ದೆನೇ?"

"ರುದ್ರಾಕ್ಷಿಪುರದಲ್ಲಿ ಅವರಿಗೇನು ಕಡಿಮೆಯಾಗಿತ್ತು. ಜನ ಅವರನ್ನು ದೇವರೆಂದು ಪೂಜಿಸುತ್ತಿದ್ದರು—ಅಲ್ಲಿಯೇ ನಿಲ್ಲಲು ಒಪ್ಪದಿದ್ದ ಭಟ್ಟರು ಇಲ್ಲಿ ನಿಲ್ಲುವರೇ?"

"ಶೃಂಗೇರಿಗೆ ಕಾಗದ ಬರೆಯುತ್ತೇನೆ—ಅವಶ್ಯಕ ಕಂಡರೆ ನಾನೇ ಒಂದು ದಿನದ ಮಟ್ಟಿಗೆ ಹೋಗಿ ನೋಡಿಕೊಂಡು ಬರುತ್ತೇನೆ."

"ಅಷ್ಟು ನೀವು ಮಾಡಿದರೆ ನನ್ನ ಮನಸ್ಸಿಗೆ ನೆಮ್ಮದಿಯಾಗುತ್ತದೆ."

"ನಿನ್ನ ಮಗನ ವಿಷಯ ಏನು ಮಾಡುತ್ತೀ?"

"ಒಳ್ಳೇ ಚೆನ್ನಾಗಿ ಕೇಳುತ್ತೀರಿ ಬಿಡಿ—ಮಗನ ವಿಷಯ ನಾನು ನಿರ್ಧರಿಸಲೇ ?"

"ಇನ್ನು ಇಪ್ಪತ್ತುವರ್ಷ ಅವನು ತುಮಕೂರು ಕೋರ್ಟುಗಳಿಗೆ ಮಣ್ಣು ಹೊತ್ತರೂ ಏನೂ ಪ್ರಯೋಜನವಿಲ್ಲ. ಅವನನ್ನು ಬೆಂಗಳೂರಿಗೆ ಕಳಿಸುವುದೇ ಲೇಸು."

"ಪಾರ್ವತಿಯನ್ನೇನು ಮಾಡುವಿರಿ ?"

"ಅವಳೂ ಹೋಗಬೇಕು—ಬೆಂಗಳೂರಿನಲ್ಲಿ ಒಂದು ಮನೆ ಮಾಡಲೇ ಬೇಕು. ಚಂದ್ರೂ ಬೆಂಗಳೂರಿನಲ್ಲಿದ್ದರೆ ಪ್ರಭಾಕರನ ವಿದ್ಯಾಭ್ಯಾಸಕ್ಕೂ ಸಹಾಯವಾಗುತ್ತದೆ."

"ನವರಾತ್ರಿ ಕಳೆಯಲಿ – ಆಮೇಲೆ ಈ ವಿಷಯ ನಿರ್ಧರಿಸೋಣ. ಈಗಲೇ ಪಾರ್ವತಿ ತಲೆಮೇಲೆ ಸಂಸಾರದ ಜವಾಬ್ದಾರಿ ಹೊರೆಸುವುದು ನ್ಯಾಯವಲ್ಲ. ಅದು ಏನೂ ಅರಿಯದ ಮಗು."

"ನರಸಮ್ಮನವರು ಮಗಳ ಜತೆ ಬೆಂಗಳೂರಿನಲ್ಲಿ ಇರಬಹುದು. ಅವರನ್ನು ಒಪ್ಪಿಸುವ ಭಾರ ನಿನ್ನದು."

"ನಾನೋ ಅವರೋ ಇಬ್ಬರಲ್ಲಿ ಒಬ್ಬರು ಇರಲೇಬೇಕು."

"ನೋಡು, ಅದನ್ನು ಹೇಗೆ ಇತ್ಯರ್ಥ ಮಾಡುತ್ತೀಯೋ ಮಾಡು–" ಎಂದರು.

ಪಾರ್ವತಿ ತನ್ನ ಮನೆಗೆ ಬಂದ ದಿನ ಚಂದ್ರಶೇಖರನಿಗೆ ಅಪಾರ ಆನಂದವಾಯಿತು. ಆದರೆ ಆ ಆನಂದ ಹೆಚ್ಚು ಕಾಲ ಉಳಿಯಲಿಲ್ಲ.

ಸ್ವತಂತ್ರ ವಾತಾವರಣದಲ್ಲಿ, ತಾಯಿಯ ಏಕಮಾತ್ರ ಪುತ್ರಿಯಾಗಿ ಬೆಳೆದಿದ್ದ ಪಾರ್ವತಿ ನಾಗಮ್ಮನ ಮನೆಯ ಆಚಾರವಿಚಾರಗಳಿಗೆ ಕೂಡಲೆ ಹೊಂದಿಕೊಳ್ಳಲಾಗಲಿಲ್ಲ. ಸೊಸೆಯ ಕುಂದುಕೊರತೆಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ನಾಗಮ್ಮ ಸೊಸೆಯನ್ನು 'ತರಪೇತು' ಮಾಡುವ ಉದ್ಯಮ ಕೈಗೊಂಡಿದ್ದಳು. ಆಗಾಗ್ಗೆ ಸೊಸೆಯನ್ನು ಹತ್ತಿರ ಕೂಡಿಸಿಕೊಂಡು ನಸು ನಗುತ್ತಾ

"ಪಾತೂ, ನಿನ್ನ ತಾಯಿ ತುಂಬ ನಿಧಾನಸ್ಥರು. ಅವರು ಹುಬ್ಬು ಗಂಟು ಹಾಕಿಕೊಂಡುದನ್ನು ನಾನು ನೋಡಿಯೇ ಇಲ್ಲ. ನಿಮ್ಮ ತಂದೆಯ

ಗುಣವನ್ನಂತೂ ಭಟ್ಟರು ಕೊಂಡಾಡಿದ್ದಾರೆ. ಅವರಿಬ್ಬರಿಗೂ ಇಲ್ಲದ ಸಿಟ್ಟು, ಕೋಪ ನಿನಗೇಕೆ ಬಂತಮ್ಮಾ?"

"ನಾನು ಸಿಟ್ಟೆಲ್ಲಿ ಮಾಡುತ್ತೇನೆ ಅತ್ತೇ?"

"ಚಂದ್ರೂ ಮುಖ ಕಂಡೊಡನೆಯೇ ನೀನು ಮುಖ ಮುಚ್ಚಿಕೊಳ್ಳುತ್ತೀ!"

"..............................."

"ನನ್ನ ಮಗ ಅಷ್ಟು ಕುರೂಪಿಯೇನೇ ಪಾತೂ?"

"..............................."

"ಇದೆಲ್ಲಾ ಚೆನ್ನಿಲ್ಲಮ್ಮ. ಗಂಡಹೆಂಡತಿ ನೀವು ನಗುನಗುತ್ತಾ ಇದ್ದರೆ ನಮಗೂ ಸಂತೋಷ—ಮನೆಮಂದಿಗೂ ಸಂತೋಷ. ಕಷ್ಟ ಕಾರ್ಪಣ್ಯ ಎಲ್ಲರಿಗೂ ಇರುತ್ತದೆ. ಇದ್ದುದರಲ್ಲೇ ತೃಪ್ತಿಪಟ್ಟುಕೊಂಡು, ಭಗವಂತ ಕೊಟ್ಟುದನ್ನು ಅನುಭವಿಸಿ ಆನಂದವಾಗಿರಬೇಕು."

ಅತ್ತೆಯ ಹಿತವಚನ ಪಾರ್ವತಿಗೆ ಪ್ರಿಯವಾಗಲಿಲ್ಲ.

ಒಂದು ದಿನ ಸಂಜೆ ಮನೆಗೆ ಬೇಗ ಬಂದ ಚಂದ್ರಶೇಖರ

"ಅಮ್ಮಾ—ಬೇಗ ತಲೆಬಾಚಿಕೊಂಡು, ಒಳ್ಳೆಯ ಸೀರೆ ಉಟ್ಟುಕೋ" ಎಂದ.

"ಏಕೋ ಚಂದ್ರ—ಊರಿನಲ್ಲಿ ನನ್ನ ಮೆರವಣಿಗೆ ಮಾಡುತ್ತೀಯಾ?"

"ಇಲ್ಲಮ್ಮಾ-ವೀರಣ್ಣನವರ ಥಿಯೇಟರಿನಲ್ಲಿ ಒಳ್ಳೆಯ ಸಿನೀಮಾ ಬಂದಿದೆ—'ಹೇಮರೆಡ್ಡಿ ಮಲ್ಲಮ್ಮ'—ಎಲ್ಲರೂ ಹೋಗಿ ಬರೋಣ."

"ಇನ್ನೂ ಅಡಿಗೆಯಾಗಿಲ್ಲಪ್ಪಾ—ನಾನು ಬರುವ ಹಾಗಿಲ್ಲ. ನೀನೂ ಪಾತೂ ಹೋಗಿ ಬನ್ನಿ."

"ನೀನು ಬಾಮ್ಮ."

"ನನ್ನದಿರಲಿ ಚಂದ್ರೂ-ಚಿಕ್ಕಪುಟ್ಟವರು ನೀವು ನೋಡಿ ಸಂತೋಷ ಪಟ್ಟರೆ ನಾನು ನೋಡಿದಂತೆಯೇ ಆಯಿತು."

ಮೊದಲು 'ಒಲ್ಲೆ' ಎಂದು ಹೇಳಿದ ಪಾರ್ವತಿ ಅತ್ತೆಯ ಮಾತಿಗೆ ಕಟ್ಟುಬಿದ್ದು ಹೊಸಸೀರೆಯುಟ್ಟು ಸಿನೀಮಾಕ್ಕೆ ಹೊರಟು ನಿಂತಳು.

ಸಿನೀಮಾಕ್ಕೆ ಹೋಗುವ ದಾರಿಯಲ್ಲಿ ಚಂದ್ರಶೇಖರ ಪಾರ್ವತಿಯನ್ನು ಮಾತನಾಡಿಸಲೆತ್ನಿಸಿದ

"ಅಮ್ಮನಿಗೆ ನಿನ್ನ ಕಂಡರೆ ಬಲುಪ್ರೀತಿ ಪಾತೂ...."

"ಹೂ !"

"ಯಾವದಕ್ಕೂ ನಾನು ನಿನ್ನಮೇಲೆ ಸಿಟ್ಟಾಗಬಾರದೆಂದು ಅಮ್ಮ ಆಜ್ಞೆ ಮಾಡಿದ್ದಾಳೆ."

"ಹೂ !"

"ಬೆಂಗಳೂರಿಗೆ ಬರುತ್ತೀಯಾ ಪಾತೂ ?"

"ಏಕೆ ?"

"ಇನ್ನು ಮೇಲೆ ನಾವು ಅಲ್ಲಿಯೇ ಇರಬೇಕಾಗುತ್ತದೆ. ಶ್ರೀನಿವಾಸ ರಾಯರು ಬೆಂಗಳೂರಿನಲ್ಲಿ ದೊಡ್ಡ ಲಾಯರು. ನಾನು ಕೆಲವು ದಿವಸ ಅವರ ಕಛೇರಿಯಲ್ಲಿದ್ದು ಕೆಲಸ ಕಲಿತುಕೊಂಡು, ಸ್ವತಂತ್ರವಾಗಿ ವಕೀಲಿವೃತ್ತಿ ಆರಂಭಿಸುತ್ತೇನೆ."

"ನಾನೊಬ್ಬಳೇ ಬರೋದಿಲ್ಲ."

"ನಿನ್ನ ತಾಯಿ ನಮ್ಮ ಜತೆ ಇರುವಂತೆ ಮಾಡಬೇಕೆಂದು ಅಮ್ಮನ ಇಚ್ಛೆ."

"ಅಮ್ಮ ಬಂದರೆ ನಾನೂ ಬರುತ್ತೇನೆ."

"ನಾನು ಮದುವೆಯಾಗಿರೋದು ನಿನ್ನೇ ವಿನಾ ನಿಮ್ಮಮ್ಮನನ್ನಲ್ಲ !"

"................"

"ನೀನು ಏಕೆ ಹೀಗಾಡುತ್ತೀ ಪಾತು ?"

"ಹೇಗೆ ?"

"ಒರಟು ಒರಟಾಗಿ "

"................"

"ಮಾತಾಡುವುದಕ್ಕಾಗುವುದಿಲ್ಲವೇ ?"

"ನೀವೇ ಮಾತಾಡಿ."

"ನೀನು ಬಹಳ ಬೇಸರಪಡಿಸುತ್ತೀ ಪಾತೂ."

"ನಾನು ಹಾಗೇ ಇರೋದು."

ಥಿಯೇಟರ್ ಬಳಿಗೆ ಬಂದ ಚಂದ್ರಶೇಖರ ಟಿಕೆಟ್‌ಕೊಂಡು, ಹೆಂಡತಿಯೊಡನೆ ಹೋಗಿ ಕುಳಿತ.

ಆಟ ಆರಂಭವಾಯಿತು.

ಭರಮರೆಡ್ಡಿ, ಮಲ್ಲಮ್ಮನ ಪ್ರಣಯದೃಶ್ಯಗಳು ತೆರೆಯಮೇಲೆ ಬಂದಾಗ ಚಂದ್ರಶೇಖರ ಹೆಂಡತಿಯ ಕೈ ಹಿಡಿಯಲು ಪ್ರಯತ್ನಿಸಿದ. ಪಾರ್ವತಿ ಕೈ ಕೊಡಹಿಕೊಂಡಳು.

"ಭರಮರೆಡ್ಡಿ ಹೆಂಡತಿಯನ್ನು ಎಷ್ಟು ಪ್ರೀತಿಸುತ್ತಾನೆ ನೋಡು."

"..............."

"ಗಂಡನನ್ನು ಕಂಡರೆ ಮಲ್ಲಮ್ಮನಿಗೆಷ್ಟು ಆದರ—ಎಷ್ಟು ವಿಶ್ವಾಸ!"

"..............."

"ನಿನ್ನ ಕೈಯಲ್ಲಿ ಮಾತಾಡುವುದಕ್ಕಿಂತ ಕಂಬಕ್ಕೆ ತಲೆಚಚ್ಚಿ ಕೊಳ್ಳುವುದು ಲೇಸು."

ಇಬ್ಬರೂ ಸಾಲಭಂಜಿಕೆಗಳಂತೆ ಕುಳಿತು ಚಿತ್ರನೋಡಿ ಮುಗಿಸಿದರು.

ಚಂದ್ರಶೇಖರ, ಪಾರ್ವತಿ ಮನೆ ತಲುಪುವ ವೇಳೆಗೆ ನಾಗಮ್ಮ ಎಲೆ ಹಾಕಿ, ಅವರ ದಾರಿ ನೋಡುತ್ತಿದ್ದಳು.

"ಸಿನೀಮಾ ಹೇಗಿತ್ತು ಚಂದ್ರೂ"

"ಚೆನ್ನಾಗಿತ್ತಮ್ಮ" ಎಂದಷ್ಟೇ ಚಂದ್ರಶೇಖರ ಉತ್ತರಿಸಿದ.

ಮಾರನೆಯದಿನ ಬೆಳಿಗ್ಗೆಯವರಿಗೆ ಮಗನೊಂದಿಗೆ ಮಾತನಾಡಲು ನಾಗಮ್ಮನಿಗೆ ಅವಕಾಶ ಸಿಕ್ಕಲಿಲ್ಲ. ಕೋಟು ಧರಿಸಿ ಹೊರಗೆ ಹೊರಡ ಲನುವಾದ ಮಗನನ್ನು ನಾಗಮ್ಮ

"ಅಡಿಗೆಯಾಯಿತು. ಊಟ ಮುಗಿಸಿಕೊಂಡೇ ಹೋಗಿದ್ದರೆ ಚೆನ್ನಾಗಿತ್ತಲ್ಲಪ್ಪ" ಎಂದಳು.

"ಕೋರ್ಟಿನಲ್ಲಿ ಸ್ವಲ್ಪ ಕೆಲಸವಿದೆ. ಹನ್ನೆರಡು ಗಂಟೆಗೆ ಬಂದು ಬಿಡುತ್ತೇನಮ್ಮ."

"ಯಾಕೋ ಚಂದ್ರೂ—ಏನೋಒಂದು ಥರ ಇದ್ದೀ?"

"ಇನ್ನು ಹೇಗಿರಬೇಕಮ್ಮ?"

"ಪಾತೂ ಕೈಯಲ್ಲಿ ವ್ಯಾಜ್ಯವಾಡಿದೆಯಾ?"

"ಅದಕ್ಕೆ ವ್ಯಾಜ್ಯವಾಡುವುದಕ್ಕೂ ಬರುವುದಿಲ್ಲವಲ್ಲಮ್ಮ."

"ಪಾತೂ ಏನೂ ಅರಿಯದವಳು ಕಣೋ--ಹೊಸಸ್ಥಳ-ಹೊಸಜನ. ನಾಲ್ಕುದಿನ ಸುಧಾರಿಸಿಕೊಳ್ಳಪ್ಪ. ಎಲ್ಲಾ ಸರಿಹೋಗುತ್ತದೆ."

"ನನಗೆಲ್ಲಿ ಕಾದಿತ್ತಮ್ಮ ಈ ಹಳ್ಳಿಗೊಡ್ಡು."

"ನೀನು ಹೀಗೆ ಮಾತಾಡಿದರೆ ನನಗೆ ವ್ಯಸನವೂ ಆಗತ್ತೆ, ಕೋಪವೂ ಬರತ್ತೆ."

"ನನ್ನ ಕಷ್ಟ ಸುಖ ನಿನ್ನ ಹತ್ತಿರ ಹೇಳಿಕೊಳ್ಳದೆ ಇನ್ನೆಲ್ಲಿ ಹೇಳಿಕೊಳ್ಳಲಿ."

"ಅದೇನೋ ಸರಿ—ಆದರೆ ......."

"ನೀನು ಭಟ್ಟರ ಮಾತು ಕೇಳಬಾರದಾಗಿತ್ತಮ್ಮ."

"ಭಟ್ಟರಿಗಿಂತಲೂ ನಮ್ಮ ಹಿತೈಷಿಗಳಾದವರು ಇನ್ನು ಯಾರಿದ್ದಾರೆ ಚಂದ್ರಾ."

"ಅವರು ವೈದಿಕರು-ಲೌಕಿಕ ಅವರಿಗೇನು ಗೊತ್ತಾಗತ್ತಮ್ಮ-ಪಾತೂ ಕಟ್ಟಿಕೊಂಡು ಈಗ ಅನುಭವಿಸೋನು ನಾನೋ ಭಟ್ಟರೋ?"

"ಸಂಸಾರದ ಕಷ್ಟಸುಖ ಅರ್ಥವಾಗೋದೇ ತಡ—ಎಂಥವರಾದರೂ ಹಣ್ಣಾಗಿ ಹೋಗುತ್ತಾರೆ."

"ಇಂದಲ್ಲ ನಾಳೆ ಪಾತೂಗೆ ವಿವೇಕ ಬರುತ್ತದೆಂದು ನಂಬಿರುವೆಯಾ?"

"ನಿಸ್ಸಂದೇಹವಾಗಿ!"

"ನಿನಗೆಲ್ಲೋ ಭ್ರಾಂತಿ. ಕರಟುಬಳ್ಳೀಗೆ ಎಷ್ಟು ನೀರೆರೆದರೂ ಅದು ಕರಟುಬಳ್ಳೀನೇ!"

"ಹೆಂಗಸರಿಗೆ ವಿವೇಕವಿಲ್ಲವೆಂದು ಗಂಡಸರೂ ಅವಿವೇಕಿಗಳಾಗುವುದು ಯಾವ ನ್ಯಾಯ?"

"ಎಲ್ಲಾ ತಪ್ಪೂ ಗಂಡಸರದ್ದೇ ಅಲ್ಲವೇ?"

"ಛಿ! ಛಿ! ನಾನು ಹಾಗನ್ನಲಾರೆ. ಪಾತೂ ಸ್ವಲ್ಪ ಮುಂಗೋಪಿ. ತಂದೆಯಿಲ್ಲದ ಮಗು, ಒಬ್ಬಳೇ ಮಗಳು ಎಂದು ನರಸಮ್ಮ ಮುದ್ದಿನಿಂದ ಬೆಳಸಿದ್ದಾರೆ. ನಿನ್ನ ಮನಸ್ಸನ್ನು ತಿಳಿದು ನಡೆದುಕೊಳ್ಳುವುದು ಅವಳಿಗೆ

ಪಾಠವಾಗಿಲ್ಲ. ನಾಲ್ಕುದಿನ ಕಳೆದರೆ ತಾನೇ ಪಾಠವಾಗುತ್ತದೆ. ಅಲ್ಲಿಯು ವರೆಗೆ ನೀನು ತಾಳ್ಮೆಯಿಂದಿರಬೇಕು."

"ಏನು ತಾಳ್ಮೆಯೋ ಬಿಡಮ್ಮ. ನಿನ್ನ ಮಾತು ಮೀರಿ ನಡೆಯುವುದು ನನಗೆ ಸಾಧ್ಯವಿಲ್ಲ. ನೀನು ಹೇಳಿದಂತೆ ಮಾಡುತ್ತೇನೆ"

ಎಂದು ಹೇಳಿ ಹೊರಟುಬಿಟ್ಟ.

ಮಗನ ಮನಃಕ್ಲೇಶವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದ ನಾಗಮ್ಮನ ಕಣ್ಣುಗಳಲ್ಲಿ ಹನಿಗೂಡಿದವು. 'ಭಗವಂತಾ, ನನ್ನ ಕಂದನ್ನ ಸುಖಿಯಾಗಿ ಮಾಡಪ್ಪಾ' ಎಂಬ ಪ್ರಾರ್ಥನೆ ಅವರ ಹೃದಯದಿಂದ ಹೊರಹೊಮ್ಮಿತು.

# ೨೦

ಮೂರು ದಿವಸ ಮಠದಲ್ಲಿ ಕಳೆಯುವುದರೊಳಗೆ ಭಟ್ಟರಿಗೆ ಸಾಕು ಸಾಕಾಯಿತು, ಕೆಳಗಿನ ನೌಕರರನ್ನು ಮೊದಲುಗೊಂಡು ಮೇಲಧಿಕಾರಿಗಳ ವರೆಗೆ ವ್ಯಾಪಿಸಿದ್ದ ಕೈಕೊಳಿ ಭಟ್ಟರಿಗೆ ಜಿಗುಪ್ಸೆಯನ್ನುಂಟುಮಾಡಿತು. ಅತಿಥಿ ಅಭ್ಯಾಗತರ ಬಗ್ಗೆ ಅಧಿಕಾರವರ್ಗದವರು ತೋರುತ್ತಿದ್ದ ಅನಾದರ ಭಟ್ಟರ ಸಾತ್ವಿಕ ಪ್ರವೃತ್ತಿಯನ್ನು ಹಿಡಿದಲುಗಿಸಿತ್ತು.

"ಸೀತಾರಾಮು!"

"ಏನು ಶಾಸ್ತ್ರಿಗಳೇ?"

"ಇಲ್ಲಿ ಹೆಚ್ಚು ದಿನ ನಿಂತರೆ ನಾನೂ ಮಠದ ಹೆಗ್ಗಣವಾಗಿಬಿಡುತ್ತೇನಪ್ಪಾ. ಮಠದಲ್ಲಿ ನಡೆಯುವ ಅತ್ಯಾಚಾರ, ಅನಾಚಾರ ನಾನು ನೋಡಲಾರೆ. ಮತ, ಮಠಗಳ ಬಗ್ಗೆ ತಿರಸ್ಕಾರ ಹುಟ್ಟುವುದರ ಕಾರಣ ಅರ್ಥವಾಯಿತು. ನೀನು ನನಗೊಂದು ಉಪಕಾರ ಮಾಡಬೇಕಲ್ಲಯ್ಯಾ."

"ಹೇಳಿ ಶಾಸ್ತ್ರಿಗಳೇ."

"ಈ ಮಠ ಬಿಟ್ಟು ನಾನು ಬೇರೆಕಡೆ ಇರುವುದಕ್ಕೆ ಗುರುಗಳ ಅಪ್ಪಣೆ ದೊರಕಿಸಿಕೊಡು."

"ಅವರ ಎದುರು ನಿಲ್ಲುವ ಧೈರ್ಯ ನನಗೆಲ್ಲಿ ಬಂತು ಶಾಸ್ತ್ರಿಗಳೇ."

"ನಾನೇ ಹೇಳಿಕೊಳ್ಳುತ್ತಿದ್ದೆ. ಆದರೆ ಇದು ನನಗೆ ಸಂಬಂಧಪಟ್ಟ ಮಾತು. ಹೇಳುವುದಕ್ಕೆ ಸಂಕೋಚವಾಗುತ್ತದೆ."

"ಮಠ ಬಿಟ್ಟರೆ ನೀವು ಎಲ್ಲಿರುತ್ತೀರಿ?"

"ಶೃಂಗೇರಿಯಲ್ಲಿ ತೆಂಗಿನಗರಿಗಳಿಗೆ ಕ್ಷಾಮವಿಲ್ಲ. ನೀನು ಸ್ವಲ್ಪ ಸಹಾಯ ಮಾಡಿದರೆ ಒಂದು ಗುಡಿಸಲು ಹಾಕಿಕೊಳ್ಳುತ್ತೇನೆ."

"ಹಾಗೇ ಆಗಲಿ. ಹೇಳುತ್ತೇನೆ. ಮಠದಲ್ಲಿ ನೀವಿರುವುದು ನನಗೂ ಇಷ್ಟವಿರಲಿಲ್ಲ."

ಅಂದೇ ಸಂಜೆ ಭಟ್ಟರು ಶ್ರೀಶ್ರೀಗಳವರ ದರ್ಶನಕ್ಕೆ ಹೋದಾಗ ಅವರು ನಸುನಗುತ್ತಾ

"ಇಷ್ಟುಬೇಗ ಮಠದವಾಸ ಬೇಸರವಾಯಿತೇ ಶಾಸ್ತ್ರಿಗಳೇ" ಎಂದು ಕೇಳಿದರು.

"ಮಠಕ್ಕೆ ಬರುವವರು ಹೋಗುವವರು ಬಹಳ ಮಹಾಸ್ವಾಮಿ. ಈ ಜೀವ ಶಾಂತಿ ಬಯಸುತ್ತಿದೆ."

"ಮೂರು ದಿವಸಕ್ಕೆ ಮಠ ನಿಮಗಿಷ್ಟು ಬೇಸರವಾದರೆ ನನ್ನ ಪಾಡೇನು ಶಾಸ್ತ್ರಿಗಳೇ ?"

"ತಮ್ಮ ಸಹನೆ ಎಲ್ಲರಿಗೂ ಬರಬೇಕೆಂದರೆ ಹೇಗೆ ಸಾಧ್ಯ ?"

"ಒಳ್ಳೆಯದು. ನಿಮ್ಮ ಇಷ್ಟದಂತೆಯೇ ಆಗಲಿ."

"ಅನುಗ್ರಹೀತನಾದೆ" ಎಂದರು ಭಟ್ಟರು.

ಸೀತಾರಾಮು ಬಂದು 'ತಮ್ಮ ದರ್ಶನಾಕಾಂಕ್ಷಿಗಳಾಗಿ ಅರಮನೆಯ ವಿದ್ವಾಂಸರೊಬ್ಬರು ಬಂದಿದ್ದಾರೆ' ಎಂದು ಗುರುಗಳಿಗೆ ಬಿನ್ನವಿಸಿದ. ಶ್ರೀಶ್ರೀಗಳವರು 'ಅವರನ್ನು ಒಳಕ್ಕೆ ಬರಮಾಡು' ಎಂದರು. ಅರಮನೆಯ ತೋಡಾ, ಶಾಲು ಧರಿಸಿದ್ದ ಮಧ್ಯವಯಸ್ಸಿನ ವಿದ್ವಾಂಸರೊಬ್ಬರು ಬಂದು ಗುರುಗಳಿಗೆ ಪ್ರಣಾಮಮಾಡಿದರು.

"ಯಾವ ಊರು ತಮ್ಮದು ಪಂಡಿತರೇ ?"

"ನನ್ನದು ನಂಜನಗೂಡು ಸ್ಥಳ. ಆಸ್ಥಾನ ವಿದ್ವಾಂಸನಾಗಿದ್ದೇನೆ. ನನ್ನ ಹೆಸರು ನಂಜುಂಡ ಶಾಸ್ತ್ರಿ."

"ಬಹಳ ಸಂತೋಷ. ಏನು ಇಷ್ಟುದೂರ ಬಂದದ್ದು ?"

"ಗೀತಾಭಾಷ್ಯ ಬರೆದಿದ್ದೇನೆ. ಅದನ್ನು ತಮ್ಮ ಸನ್ನಿಧಿಗೆ ಒಪ್ಪಿಸಿ ಆಶೀರ್ವಾದಪಡೆಯಬೇಕೆಂದು ಬಂದೆ."

ಎಂದು ರೇಷ್ಮೆಮಡಿಯಲ್ಲಿ ಸುತ್ತಿದ್ದ ಹಸ್ತಪ್ರತಿಯನ್ನು ತೆಗೆದು ಶ್ರೀಶ್ರೀಗಳವರ ಮುಂದಿಟ್ಟು ಕೈಕಟ್ಟಿ ನಿಂತುಕೊಂಡರು.

"ಕುಳಿತುಕೊಳ್ಳಿ"

ನಂಜುಂಡ ಶಾಸ್ತ್ರಿಗಳು ಕುಳಿತು

"ಗ್ರಂಥ ಸಾವಿರ ಪುಟವಾಗಿದೆ. ಅಚ್ಚು ಹಾಕಿಸಬೇಕೆಂದಿದ್ದೇನೆ."

"ಆಗಬಹುದು ನಿಮ್ಮ ಭಾಷ್ಯದಲ್ಲಿ ಗೀತೆಯಲ್ಲಿರುವ ಸತ್ಯದರ್ಶನ ಮಾಡಿಸಲು ಪ್ರಯತ್ನಿಸಿರುವಿರೋ ಅಥವಾ ಗೀತಾಭ್ಯಾಸದಿಂದ ನಿಮ್ಮ ಮನಸ್ಸಿನ ಮೇಲಾದ ಪರಿಣಾಮವನ್ನು ವಿವರಿಸಲೆತ್ನಿಸಿರುವಿರೋ ?"

"ಸರ್ವಜ್ಞರೂ ತ್ರಿಕಾಲಜ್ಞಾನಿಗಳೂ ಆದ ತಮಗೆ ನಾನು ಹೇಳತಕ್ಕದ್ದೇನಿದೆ? ರಹಸ್ಯವೇದವಾದ ಗೀತೆಯ ಸತ್ಯದರ್ಶನ ಮಾಡಿಸುವುದು ನನ್ನಿಂದ ಸಾಧ್ಯವೇ ? ನನ್ನ ಅಲ್ಪಮತಿಗೆ ಹೊಳೆದ ಭಾವನೆ, ವಿಚಾರಗಳನ್ನಷ್ಟೇ ಗ್ರಂಥದಲ್ಲಿ ವಿವರಿಸಿದ್ದೇನೆ. ತಾವೊಮ್ಮೆ ಪರಾಮರ್ಶಿಸಬೇಕು."

"ಅಗತ್ಯವಿಲ್ಲ—ಗೀತೆಯ ಆ ತ್ಮೋ ಪ ದೇ ಶ ವ ನ್ನು ಹೇಳುವ ಪ್ರಯತ್ನ ನೀವು ಮಾಡಿದ್ದರೆ ನಾನು ಅದನ್ನು ನೋಡಬಹುದಾಗಿತ್ತು-ಪ್ರಯೋಜನವನ್ನೂ ಪಡೆಯಬಹುದಾಗಿತ್ತು. ನೀವು ಹೇಳಹೊರಟಿರುವುದು ಶ್ರೀಕೃಷ್ಣನ ಗೀತೆಯನ್ನಲ್ಲ. ನಿಮ್ಮ ಗೀತೆಯನ್ನು ! ತನ್ನ ಬುದ್ಧಿಗೆ ಅಳವಡುವ ವಿಚಾರಗಳನ್ನು ಮಂಡಿಸುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಯಾವದು ಸೂಕ್ತ, ನ್ಯಾಯ, ಧರ್ಮ ಎಂದು ನಿಮಗೆ ತೋರಿತೋ ಅದನ್ನೇ ನೀವು ಬರೆದಿರುವಿರಿ—ಅದರ ಬಗ್ಗೆ ನಾನು ಪರಾಮರ್ಶೆ ಮಾಡುವ ಅಗತ್ಯ ವೇನಿದೆ ?"

ಎಂದವರೇ ಸೀತಾರಾಮು ಕಡೆ ತಿರುಗಿ 'ಏಜಂಟರನ್ನು ಕರೆ' ಎಂದರು.

ಏಜಂಟರು ಬರಲು ಶ್ರೀ ಶ್ರೀಗಳವರು

"ನೋಡಿ—ಈ ವಿದ್ವಾಂಸರು ಬಹಳ ದೂರದಿಂದ ಬಂದಿದ್ದಾರೆ. ಗೀತೆಯ ಮೇಲೆ ಭಾಷ್ಯ ಬರೆದಿದ್ದಾರೆ. ಇವರಿಗೆ ಯೋಗ್ಯ ಸನ್ಮಾನ ಮಾಡಿ ಕಳುಹಿಸಿಕೊಡಿ" ಎಂದರು.

ಏಜಂಟರೊಂದಿಗೆ ಪಂಡಿತರು ಹೋಗಲು ಶ್ರೀ ಶ್ರೀಗಳವರು ಭಟ್ಟರ ಕಡೆ ತಿರುಗಿ

"ಕೇವಲ ಪಾಂಡಿತ್ಯಬಲದಿಂದ ಪ್ರಸ್ಥಾನತ್ರಯ ಅರ್ಥವಾಗುತ್ತದೆಂದು

ಜನ ಭಾವಿಸುತ್ತಾರೆ. ತ್ರಿಪುಟಿ*ಯನ್ನು ಭೇದಿಸದೆ ಅಧ್ಯಾತ್ಮಜ್ಞಾನ ದೊರಕಿಸಲು ಸಾಧ್ಯವೇ ? ಸರ್ವಭೂತಸ್ಥವಾಸಿಯಾದ ಪರಮಾತ್ಮನ ನೆಲೆಯನ್ನು ಅರಿತರಲ್ಲವೇ ನಮಗೆ ಅವನ ವಿವಿಧ ಭಾವ, ರೂಪ, ವಿಚಾರಗಳ ಜ್ಞಾನ ಲಭಿಸುವುದು."

"ಗುಹ್ಯಾಗುಹ್ಯತರವಾದ ಅಧ್ಯಾತ್ಮ ಅಭಿವ್ಯಕ್ತಿಗೆ ನಿಲುಕುವುದೇ ?"

"ನಿಲುಕುತ್ತದೆ. ಆದರದು ಸಾಧಕನ ಉತ್ಕ್ರಾಂತಿಸ್ಥಿತಿಯನ್ನವಲಂಬಿಸುತ್ತದೆ. ಶಬ್ದಪಾತ ಮಾಡುತ್ತಿರುವವರು ಸಾಂಖ್ಯಕ್ಕೆ ಟೀಕೆ ಬರೆಯಲೆತ್ನಿಸಿದರೆ ಏನು ಸಾರ್ಥಕ ?"

ಎಂದು ಮುಗುಳ್ನಗೆ ಬೀರಿ

"ನಿಮ್ಮ ಪರ್ಣಕುಟಿಗೆ ನಾನು ಆಗಾಗ್ಗೆ ಬರಬಹುದೇ ?" ಎಂದು ಕೇಳಿದರು.

"ಎಂಥ ಪ್ರಶ್ನೆ ಮಹಾಸ್ವಾಮಿ. ವಿದುರನ ಮನೆಗೆ ಭಗವಂತ ಬರುವುದಕ್ಕೆ ಅಪ್ಪಣೆ ಪಡೆಯಬೇಕೆ ?"

"ನೀವು ವಿದುರ ಎನ್ನುತ್ತಲೇ ಜ್ಞಾಪಕಕ್ಕೆ ಬಂತು ಶಾಸ್ತ್ರಿಗಳೇ. ಕೆಲವು ದಿವಸಗಳ ಹಿಂದೆ ಇಲ್ಲಿಗೊಬ್ಬ ಕಮ್ಯುನಿಸ್ಟರು ಬಂದಿದ್ದರು. ಎಲ್ಲ ಧರ್ಮಗಳೂ ಸುಳ್ಳು, ಕಮ್ಯುನಿಸ್ಟ್ ಧರ್ಮವೊಂದೇ ಸತ್ಯ ಎಂದು ಅವರು ಪ್ರತಿಪಾದಿಸುತ್ತ ಜಗತ್ತಿನ ಅತ್ಯಂತ ಶ್ರೇಷ್ಠಪ್ರವಾದಿಯೆಂದರೆ ಕಾರ್ಲ್‌ಮಾರ್ಕ್ಸ್ ಒಬ್ಬನೇ ಎಂದು ಹೇಳಿದರು. ನಾನು ಅವರ ತತ್ವಾರ್ಥ ಸಂಗ್ರಹಿಸಿಕೊಂಡು 'ಶ್ರೀ ಕೃಷ್ಣನಿಗಿಂತಲೂ ದೊಡ್ಡ ಕಮ್ಯುನಿಸ್ಟ್ ಇಲ್ಲ. ಕಾರ್ಲ್‌ಮಾರ್ಕ್ಸ್ ಕಮ್ಯುನಿಸಂ ಬೋಧಿಸುವುದಕ್ಕೆ ಸಹಸ್ರಾರು ವರ್ಷಗಳ ಮುಂಚೆಯೇ ಯದುನಂದನ ಈ ಧರ್ಮವನ್ನು ಪ್ರತಿಪಾದಿಸಿದ್ದಾನೆ. ಶ್ರೀ ಕೃಷ್ಣನ ಜೀವನವನ್ನೇ ನೋಡಿ. ಆತ ಜನ್ಮ ತಳೆದುದು ಕಾರಾಗೃಹದಲ್ಲಿ; ಬಾಲ್ಯ ಕಳೆದುದು ಗೋಕುಲದ ಗೋವಳರ ಜತೆಯಲ್ಲಿ. ಆತನ ಪರಮ ಸ್ನೇಹಿತ ಕುಚೇಲ. ಮಥುರೆಗೆ ಬಂದಾಗ ಆತ ಅನುಗ್ರಹಿಸಿದುದು ಹೂ ಕಟ್ಟುವ ಕುಬ್ಜೆಯನ್ನು. ಹಸ್ತಿನಾಪುರದ ಚಕ್ರಾಧಿಪತಿ ಅವನ ಕೈಂಕರ್ಯಕ್ಕೆ ಟೊಂಕಕಟ್ಟಿ ನಿಂತಿದ್ದಾಗ

---

* ಜ್ಞಾತೃ, ಜ್ಞಾನ, ಜ್ಞೇಯ

ಕೃಷ್ಣ ಪ್ರಸಾದ ಸ್ವೀಕರಿಸಿದುದು ವಿದುರನ ಮನೆಯಲ್ಲಿ. ತ್ಯಾಗದಲ್ಲಿಯೇ ಹುಟ್ಟಿ ಬೆಳೆದ ಈ ವಿಭೂತಿ ಪುರುಷ ಕೊನೆಗೆ ತನ್ನ ಕೈವಲ್ಯ ಕಂಡುದು ಗೊಂಡಾರಣ್ಯದಲ್ಲಿ—ನಿಷಾದ ಪುತ್ರನ ಕೈಯಲ್ಲಿ' ಎಂದು ಹೇಳಿದೆ."

ಶ್ರೀ ಶ್ರೀಗಳವರು ತಮ್ಮ ವಿಚಾರಲಹರಿಯಲ್ಲಿ ಮೈಮರೆತುದನ್ನು ಕಂಡು ಸೀತಾರಾಮು ಮೆಲ್ಲನೆ 'ಸಂಧ್ಯಾ ಪೂಜೆಯ ವೇಳೆಯಾಯಿತು' ಎಂದು ಎಚ್ಚರಿಸಿದ. ಶ್ರೀ ಶ್ರೀಗಳವರು ಜಗ್ಗನೆದ್ದು

"ಶಾಸ್ತ್ರಿಗಳೇ—ನನಗೊಂದು ಉಪಕಾರಮಾಡಿ" ಎಂದರು.

"ಅಪ್ಪಣೆಯಾಗಲಿ,"

"ಸೀತಾರಾಮುನಿಗೆ ಉಪನಿಷತ್ ಪಾಠ ಆರಂಭಿಸಿದೆ. ಕೆಲವು ಕಾರಣಗಳಿಂದ ಮುಂದುವರಿಸಲು ನನಗೆ ಸಾಧ್ಯವಿಲ್ಲವಾಗಿದೆ. ನೀವು ಅವನಿಗೆ ಇತರ ಉಪನಿಷತ್ತುಗಳ ಪಾಠ ಹೇಳಿ. ಕಠದಿಂದ ಆರಂಭಿಸಿ."

"ಆಜ್ಞೆ" ಎಂದು ಶಾಸ್ತ್ರಿಗಳು ವಿನಮ್ರರಾಗಿ ತಲೆ ಬಗ್ಗಿಸಿದರು.

## ೨೧

ಭಟ್ಟರ ಪರ್ಣಕುಟಿ ಸಿದ್ಧವಾಯಿತು. ಕುಟೀರ ಸಿದ್ಧವಾದ ಕ್ಷಣವೇ ಭಟ್ಟರು ಅಲ್ಲಿಗೆ ವಾಸಕ್ಕೆ ಬಂದುಬಿಟ್ಟರು. ಭಟ್ಟರ ಜತೆಯಲ್ಲಿಯೇ ಸೀತಾರಾಮು ಇರಬೇಕೆಂದು ಗುರುಗಳು ಆಜ್ಞೆ ಮಾಡಿದರು.

ಪ್ರತಿನಿತ್ಯ ಭಟ್ಟರೇ ಅಡಿಗೆಮಾಡಿ ಶಿಷ್ಯನಿಗೆ ಬಡಿಸಿ ತಾವೂ ಊಟ ಮಾಡುತ್ತಿದ್ದರು.

ಒಂದು ಶುಭ ಗುರುವಾರ ಗುರ್ವಾಜ್ಞೆಯಂತೆ ಸೀತಾರಾಮುನಿಗೆ ಕಠೋಪನಿಷತ್ತಿನ ಪಾಠ ಆರಂಭಿಸಿದರು.

"ಕಠೋಪನಿಷತ್ತು ದಶೋಪನಿಷತ್ತುಗಳಲ್ಲಿ ಒಂದಾಗಿದೆ. ಇದರಲ್ಲಿ ಋಷಿ ಕವಿಯಾಗಿ ಪರತತ್ತ್ವವನ್ನು ಬಹಳ ಸುಂದರವಾಗಿ ನಿರೂಪಿಸಿದ್ದಾನೆ.

ರಾಜಮಹಾರಾಜರಿಗೆ ಸಾಧ್ಯವಾಗುವ ವಿಶ್ವಜಿತ್‌ಯಾಗವನ್ನು ಆಶೆಬುರುಕನಾದ ವಾ ಜ ಶ್ರ ವ ಸ್ ಕೈಗೊಳ್ಳುತ್ತಾನೆ. ಅವನು ದಾನವಿತ್ತ ಬಡಕಲು ಆಕಳುಗಳನ್ನೂ ದನಗಳನ್ನೂ ಕಂಡು ಮನನೊಂದ ಅವನ ಚಿಕ್ಕ ಮಗ ನಚಿಕೇತ 'ತಂದೆ, ನನ್ನನ್ನು ಯಾರಿಗೆ ದಾನ ಕೊಡುವೆ' ಎಂದು ಕೇಳುತ್ತಾನೆ. ಇದೇ ಪ್ರಶ್ನೆಯನ್ನು ಮಗ ಮೂರು ಬಾರಿ ಕೇಳಿ ಪೀಡಿಸಲು ಕೋಪಿಷ್ಟನಾದ ವಾಜಶ್ರವಸ್ 'ಯಮನಿಗೆ' ಎಂದು ಹೇಳುತ್ತಾನೆ. ಕೋಪ ಇಳಿದ ಮೇಲೆ ವಾಜಶ್ರವಸ್ಸಿಗೆ ಪಶ್ಚಾತ್ತಾಪ ಹುಟ್ಟಿ 'ಅಯ್ಯೋ ನಾನೆಂಥಾ ಅವಿವೇಕ ಮಾಡಿಬಿಟ್ಟೆ' ಎಂದುಕೊಂಡು ಮಗನನ್ನು ಸಮಾಧಾನಗೊಳಿಸಲು ಪ್ರಯತ್ನಿಸುತ್ತಾನೆ. ದೃಢಮನಸ್ಕನಾದ ನಚಿಕೇತ ತಂದೆಯ ಮಾತನ್ನು ಸತ್ಯವನ್ನಾಗಿಸಲು ನಿರ್ಧರಿಸಿ ಯಮನ ಬಳಿಗೆ ಹೊರಡುತ್ತಾನೆ.

ನಚಿಕೇತ ಯಮಲೋಕ ಮುಟ್ಟಿದಾಗ .ಯಮ ಊರಿನಲ್ಲಿರಲಿಲ್ಲ. ಯಮಲೋಕದ ನಿವಾಸಿಗಳು ಅವನನ್ನು ಒಳಗೆ ಬರಮಾಡಿಕೊಂಡು ಆದರಿಸಿ ಸತ್ಕರಿಸಲೂ ಇಲ್ಲ. ನಚಿಕೇತ ಯಮನ ಆಗಮನವನ್ನೇ ನಿರೀಕ್ಷಿಸುತ್ತಾ ಮೂರು ದಿವಸ ನಿದ್ರಾಹಾರಗಳಿಲ್ಲದೆ ಅವನ ಮನೆ ಬಾಗಿಲು ಕಾಯುತ್ತಾ ಕೂಡುತ್ತಾನೆ.

ಪ್ರವಾಸಮುಗಿಸಿಕೊಂಡು ಬಂದ ಯಮಧರ್ಮರಾಜ ವರ್ಚಸ್ವಿಯಾದ ವಟುವನ್ನು ನೋಡಿ, ಅವನ ಶ್ರದ್ಧೆ, ನಿಷ್ಠೆಗಳನ್ನು ಮೆಚ್ಚಿಕೊಂಡು ಆದರಿಸಿ ಸತ್ಕರಿಸಿ 'ಮೂರು ದಿನಗಳಿಂದ ವ್ರತಸ್ಥನಾಗಿ ಕುಳಿತಿರುವ ವೀರಕುಮಾರ, ನಿನ್ನ ನಿಶ್ಚಲತೆ ಕಂಡು ಯಮ ಸಂತುಷ್ಟನಾಗಿದ್ದಾನೆ. ನೀನು ಇಲ್ಲಿ ಕಳೆದ ಮೂರು ದಿನಗಳಿಗಾಗಿ ಮೂರು ವರಗಳನ್ನು ಕೊಡಲು ನಿಶ್ಚಯಿಸಿದ್ದೇನೆ. ಕೇಳು, ನಿನಗೇನು ಬೇಕು' ಎಂದು ಹೇಳುತ್ತಾನೆ.

ವಿಶ್ವಕ್ಕೆಲ್ಲ ಕರಾಳನಂತೆ ಕಂಡುಬರುತ್ತಿದ್ದ ಯಮ ಸೌಮ್ಯನಾಗಿ ಪುತ್ರ ಪ್ರೇಮದಿಂದ ತನ್ನನ್ನು ಮಾತನಾಡಿಸಿದುದನ್ನು ಕಂಡು ನಚಿಕೇತನಿಗೆ ಪರಮಾನಂದವಾಯಿತು.

## ನಚಿಕೇತ ಕೇಳಿದ ಮೊದಲನೆಯ ವರ :

'ಭಗವಾನ್, ನನ್ನ ತಂದೆ ನನ್ನ ಮೇಲೆ ಕೋಪಗೊಂಡಿದ್ದಾನೆ. ನಾನು ಮರಳಿ ಹೋದಮೇಲೆ ತಂದೆ ಪ್ರಸನ್ನನಾಗುವಂತೆ ವರ ಕರುಣಿಸು' ಎಂದು ಬೇಡಿದ. ಯಮ ಸುಹಾಸವದನನಾಗಿ 'ತಥಾಸ್ತು. ಮೃತ್ಯುಮುಖದಿಂದ ಪಾರಾಗಿ ಬಂದ ನಿನ್ನನ್ನು ನೋಡಿ ವಾಜಶ್ರವಸ್ ಆನಂದದಭರಿತನಾಗುತ್ತಾನೆ' ಎಂದು ಆಶ್ವಾಸನವಿತ್ತ.

## ನಚಿಕೇತ ಕೇಳಿದ ಎರಡನೆಯ ವರ :

'ಮುಪ್ಪು, ಸಾವು, ಹಸಿವೆ, ನೀರಡಿಕೆ, ಭಯ, ಶೋಕ, ಮೃತ್ಯುವಿಲ್ಲದ ಸ್ವರ್ಗವೊಂದಿದೆಯೆಂದು ಕೇಳಿದ್ದೇನೆ. ಆ ಸ್ವರ್ಗ ಸೇರುವ ಮಾರ್ಗ ಯಾವದು ಅಪ್ಪಣೆಯಾಗಬೇಕು.'

ವಯೋಧರ್ಮವಿೂರಿದ ನಚಿಕೇತನ ದಿವ್ಯಚಿಂತನೆ ಕಂಡು ಸಂತುಷ್ಟ ನಾದ ಯಮಧರ್ಮ

'ನಚಿಕೇತ, ಬಹಳ ಮುಖ್ಯವಾದ ಪ್ರಶ್ನೆಯನ್ನೇ ನೀನು ಕೇಳಿರುವೆ. ನಾನು ಹೇಳುವುದನ್ನು ಚಿತ್ತವಿಟ್ಟು ಲಾಲಿಸು. ಲೋಕದಲ್ಲಿ ಎಲ್ಲರೂ ಸುಖ ವನ್ನಪೇಕ್ಷಿಸುತ್ತಾರೆ, ಸ್ವರ್ಗವನ್ನು ಬಯಸುತ್ತಾರೆ. ಯಜ್ಞ ಯಾಗಾದಿ ಕರ್ಮಗಳಿಂದ, ಪುಣ್ಯಕರ್ಮಗಳಿಂದ ಆ ಲೋಕ ಪ್ರಾಪ್ತವಾಗುತ್ತದೆ. ಸಕಲ ಯಜ್ಞ ವಿಧಿಗೂ ಅಗ್ನಿಯೇ ಮೂಲ. ಶ್ರೇಷ್ಠತರ ವಸ್ತುಪ್ರಾಪ್ತಿಗಾಗಿ ಹೀನ ವಸ್ತು ತ್ಯಾಗವೇ ಯಜ್ಞ. ಆಹವನೀಯ, ಅನ್ವಾಹಾರ್ಯ, ಗಾರ್ಹಪತ್ಯ ಎಂಬ ಮೂರು ಅಗ್ನಿಗಳನ್ನಿಟ್ಟು ಜ್ಞಾನಾಧ್ಯಯನ, ದಾನಕರ್ಮಗಳಲ್ಲಿ ನಿರತನಾಗಿರುವವನು ಜನ್ಮಮೃತ್ಯುವನ್ನು ಜಯಿಸಬಲ್ಲ. ಅಗ್ನಿಯನ್ನು ಭಕ್ತಿಯಿಂದ ಆರಾಧಿಸುವವನು ಪೂರ್ಣಜ್ಞಾನಿಯಾಗಿ ಶಾಂತಿಸುಖವನ್ನನು ಭವಿಸುತ್ತಾನೆ. ಜ್ಞಾನ, ಅಧ್ಯಯನ, ಅನುಷ್ಠಾನಗಳ ಪೂರ್ಣಬೋಧವನ್ನು ಪಡೆದು ಯಾವನು ಅಗ್ನಿಯ ಅನುಷ್ಠಾನ ಮಾಡುತ್ತಾನೋ ಅವನು ಮರಣಕ್ಕೆ ಮೊದಲೇ ಮೃತ್ಯುಪಾಶವನ್ನು ನಾಶಗೊಳಿಸುತ್ತಾನೆ. ಇದನ್ನೇ ನಾನು ಇನ್ನು ಮೇಲೆ ನಿನ್ನ ಹೆಸರಿನಿಂದ ನಚಿಕೇತಾಗ್ನಿ ಎಂದು ಕರೆಯು ತ್ತೇನೆ."

**ನಚಿಕೇತ ಕೇಳಿದ ಮೂರನೆಯ ವರ :**

'ಅನುಗ್ರಹೀತನಾದೆ ಭಗವಾನ್. ಮೂರನೆಯ ವರ ಬೇಡಲು ಅಪ್ಪಣೆ ಕೊಡು.'

'ಅವಶ್ಯಕವಾಗಿ ಆಗಲಿ.'

'ಮನುಷ್ಯನು ಮರಣಹೊಂದಿದ ಮೇಲೆ ಅವನು (ಅಂದರೆ ಅವನ ಆತ್ಮ) ಇರುತ್ತಾನೆಂದು ಕೆಲವರು, ಅವನು ಇರುವುದಿಲ್ಲ ಎಂದು ಕೆಲವರು ವಾದ ಮಾಡುತ್ತಾರೆ. ಈ ಬಗ್ಗೆ ನನಗೆ ನಿಶ್ಚಿತಜ್ಞಾನವನ್ನು ಕರುಣಿಸು.'

ನಚಿಕೇತನ ಮೂರನೆಯ ವರವೇನೆಂಬುದನ್ನರಿತ ಯಮಧರ್ಮ ಚಕಿತನಾದ. ತನ್ನ ಕಿವಿಗಳನ್ನು ತಾನೇ ನಂಬದಾದ. ನಚಿಕೇತನನ್ನು ಹಲವು ಬಾರಿ ಆಪಾದಮಸ್ತಕ ನೋಡಿ

'ನಚಿಕೇತ, ಇದು ಬಹಳ ಕ್ಲಿಷ್ಟ ಸಮಸ್ಯೆ. ದೇವಾಧಿದೇವತೆಗಳೇ ಇದನ್ನು ಚರ್ಚೆಮಾಡಿ ವಿಫಲರಾಗಿದ್ದಾರೆ. ಎಳೆಯ ಬಾಲಕನಾದ ನಿನಗೇಕೆ ಇದರ ಗೊಡವೆ. ಬೇರೊಂದು ವರವನ್ನು ಕೇಳು. ಸಂತೋಷದಿಂದ ಕೊಡುತ್ತೇನೆ.'

'ಭಗವಾನ್, ದೇವಾಧಿದೇವತೆಗಳಿಗೂ ಬಗೆಹರಿಯದ ಪ್ರಶ್ನೆಯ ಬಗ್ಗೆ ನೀನು ಬೆಳಕು ಚೆಲ್ಲದೆ ಇನ್ನು ಯಾರು ಚೆಲ್ಲಬೇಕು. ನನಗೆ ಈ ವರ ಬೇಕಲ್ಲದೆ ಬೇರೆ ವರ ಬೇಕಿಲ್ಲ.'

'ಪ್ರಿಯ ನಚಿಕೇತ, ಹಟ ಮಾಡಬೇಡಪ್ಪಾ—ನೂರು ವರ್ಷ ಬದುಕಿ ಬಾಳುವ ಮಕ್ಕಳು ಮೊಮ್ಮಕ್ಕಳನ್ನೂ, ಪಶುಗಳನ್ನೂ, ಆನೆ, ಕುದುರೆಗಳನ್ನೂ, ವಿಶಾಲವಾದ ಭೂಮಿಯನ್ನೂ, ನೀನು ಕೋರುವಷ್ಟು ಆಯುಷ್ಯವನ್ನು, ಈ ಲೋಕದ ಅರಸುಪದವಿಯನ್ನೂ, ಸುರಸುಂದರಿಯನ್ನೂ ಮೀರಿಸುವ ರಮಣಿಯರನ್ನೂ, ಸಕಲ ಭೋಗಗಳನ್ನನುಭವಿಸುವ ಸಾಮರ್ಥ್ಯವನ್ನೂ ವರವಾಗಿ ಕೊಡಲು ಸಿದ್ಧನಿದ್ದೇನೆ—ಈ ವರದ ಅಪೇಕ್ಷೆಯನ್ನು ಮಾತ್ರ ಬಿಟ್ಟುಬಿಡು.'

'ಮೃತ್ಯುದೇವಾ, ಇವೆಲ್ಲ ನಶ್ವರ. ಇವೆಲ್ಲವೂ ಸಾವಿನ ನೆಳಲಿನಲ್ಲಿ ಬಾಳುವ ಕ್ಷಣಿಕ ವಸ್ತುಗಳು. ಅಮೃತಮೂರ್ತಿಯಾದ ನಿನ್ನೆಡೆಗೆ ಬಂದು ಈ ಅಲ್ಪ ವಿಷಯುಗಳನ್ನು ಬೇಡಲೇ ? ಯಾವ ತತ್ತ್ವದ ಬಗ್ಗೆ ಚರ್ಚೆ ನಡೆದು ಇನ್ನೂ ನಿಗೂಢವಾಗಿ ಉಳಿದಿದೆಯೋ ಆ ಮಹತ್ವದ ಪ್ರಶ್ನೆಯನ್ನು ಬಿಡಿಸಿ ನನ್ನನ್ನು ಉದ್ಧರಿಸು.'

ಯಮಧರ್ಮರಾಜನಿಗೆ ಮಹದಾನಂದವಾಯಿತು. ಲೋಕದ ಸಮಸ್ತ ಸುಖಭೋಗಗಳನ್ನೂ ನಿರಾಕರಿಸಿ ಅಮೃತಜ್ಞಾನವೊಂದನ್ನೇ ಬಯಸುತ್ತಿದ್ದ ಬಾಲಕನ ಬಗ್ಗೆ ವಿಶೇಷ ಮಮತೆಯುಂಟಾಯಿತು.

'ನಚಿಕೇತ, ನಾನು ಹೇಳುವ ರಹಸ್ಯಜ್ಞಾನವನ್ನರಿಯಲು ನೀನು ಎಲ್ಲ ರೀತಿಯಿಂದಲೂ ಅಧಿಕಾರಿಯಾಗಿರುವೆ. ಕೇಳು—

ಲೋಕದಲ್ಲಿ ಕ್ಷಣಭಂಗುರವಾದ ಪ್ರೇಯಸ್ಸನ್ನು ಬಯಸುವವರೇ ಹೆಚ್ಚು ; ಶ್ರೇಯಸ್ಸನ್ನು ಬಯಸುವವರು ವಿರಳ. ಶ್ರೇಯಸ್ಸನ್ನು ಬಯಸುವವನು ವಿಷಯೋಪಭೋಗಗಳಲ್ಲಿ ಮಗ್ನನಾಗಿ ಅಪರಿಮಿತ ಕಷ್ಟಗಳನ್ನನು

ಭವಿಸುತ್ತಾನೆ, ಜನನ ಮರಣಗಳ ಚಕ್ರಕ್ಕೆ ಸಿಲುಕಿ ಅವನ ಅನವರತ ಸುತ್ತುತ್ತಾನೆ. ಆತ್ಮಜ್ಞಾನ ಪಡೆಯುವವನು ಎಲ್ಲ ಬಂಧನಗಳಿಂದ ಮುಕ್ತನಾಗುತ್ತಾನೆ. ಜನನ ಮರಣಗಳನ್ನು ಗೆದ್ದು ಧೀರನಂತೆ ನಿಲ್ಲುತ್ತಾನೆ. ದೇಹ ವಿನಾಶಿ, ಆತ್ಮ ಅವಿನಾಶಿ. ಅತ್ಮನಿಗೆ ಹುಟ್ಟು ಸಾವುಗಳಿಲ್ಲ. ಅವನು ಅಣುವಿನಲ್ಲಿ ಅಣುವಾಗಿದ್ದಾನೆ, ಮಹತ್ತಿನಲ್ಲಿ ಮಹತ್ತಾಗಿದ್ದಾನೆ. ಪ್ರವಚನ, ತರ್ಕ, ಬುದ್ಧಿಗೆ ಅವನು ನಿಲುಕುವುದಿಲ್ಲ. ಶೋಕರಹಿತನೂ, ನಿಷ್ಕಾಮನೂ ಆದವನೇ ಆತ್ಮನ ನಿಜಸ್ವರೂಪವರಿಯಬಲ್ಲ.

ಇಂದ್ರಿಯಾತೀತನಾದ ಆತ್ಮನನ್ನು ಇಂದ್ರಿಯಗಳ ಮುಖೇನ ತಿಳಿಯಲು ಸಾಧ್ಯವಿಲ್ಲ. ನಮ್ಮ ವಾಣಿಯನ್ನು ಮನಸ್ಸಿನಲ್ಲಿ, ಮನಸ್ಸನ್ನು ಬುದ್ಧಿಯಲ್ಲಿ (ಅಥವಾ ಜ್ಞಾನಶಕ್ತಿಯಲ್ಲಿ) ಅವ್ಯಕ್ತದಲ್ಲಿ, ಶಾಂತಾತ್ಮನಲ್ಲಿ ಸ್ಥಿರಪಡಿಸಬೇಕು. ಇದೇ ಲಯಯೋಗ. ಈ ಯೋಗ ಸಾಧಿಸಿದ ಹೊರತೂ ಆತ್ಮಜ್ಞಾನ ಲಭಿಸುವುದಿಲ್ಲ. ಆತ್ಮಜ್ಞಾನ ಸಾಧಿಸುವವನಿಗೆ ಇಂದ್ರಿಯ ಪ್ರವೃತ್ತಿಗಳು ಅಡ್ಡಿ ಬರುತ್ತವೆ. ಸಾಧಕ ಧೀರನಂತೆ ಅವುಗಳನ್ನೆದುರಿಸಿ ಜಯಿಸಬೇಕು. ಈ ಶರೀರವೇ ಒಂದು ರಥ, ಇಂದ್ರಿಯಗಳೇ ಕುದುರೆಗಳು–ಬುದ್ಧಿಯೇ ಕಡಿವಾಣ ಹಿಡಿದಿರುವ ಸಾರಥಿ. ರಥದಲ್ಲಿ ಕುಳಿತವನೇ ಆತ್ಮನು ಕುದುರೆಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ ಸಾರಥಿಗೆ ಆತ್ಮಸಾಕ್ಷಾತ್ಕಾರವಾಗುತ್ತದೆ.

ನಚಿಕೇತ, ನಿನಗೆ ಬೇಕಾದ ಜ್ಞಾನವನ್ನರುಹಿರುವೆನು. ಅದನ್ನು ಸಾಕ್ಷಾತ್ಕಾರಪಡಿಸಿಕೊಂಡು ಮುಕ್ತನಾಗು.'

'ಕೃತಾರ್ಥನಾದೆ ಸ್ವಾಮಿ' ಎಂದು ನಚಿಕೇತ ಭಗವಾನ್ ಯಮಧರ್ಮರಾಜನಿಗೆ ಉದ್ದಂಡ ಪ್ರಣಾಮ ಮಾಡಿ ತನ್ನ ಊರಿಗೆ ಮರಳಿದ.

ವಾಜಶ್ರವಸ್ಸಿನ ಕೋಪ ಎಂದೋ ಹೋಗಿತ್ತು. ಮೃತ್ಯುಮುಖದಿಂದ ಪಾರಾಗಿ ಅಮೃತವಿದ್ಯಾಪಾರಂಗತನಾಗಿ ಬಂದ ಮಗನನ್ನು ತಂದೆಯಪ್ಪಿ ಮುದ್ದಾಡಿದುದಲ್ಲದೆ, ಅವನ ಶಿಷ್ಯತ್ವವನ್ನಂಗೀಕರಿಸಿ ಧನ್ಯನಾದ.

ಯಮನಿಂದ ಅಮೃತವಿದ್ಯೆಯ ಉಪದೇಶ ಪಡೆದ ನಚಿಕೇತ ಅದನ್ನು ಸಾಧಿಸಿ ಬ್ರಹ್ಮತ್ವವನ್ನು ಪಡೆದು ಅಮರನಾದ.

—ಇದು ಕಠೋಪನಿಷತ್ತಿನ ಸಾರಾಂಶ. ನಾಳೆಯಿಂದ ವಿಸ್ತಾರವಾಗಿ ಪ್ರತಿಶ್ಲೋಕಾರ್ಥ ತಾತ್ಪರ್ಯದ ವಿವೇಚನೆ ಮಾಡೋಣ' ಎಂದು ಭಟ್ಟರು ಹೇಳಿದರು,

ಸೀತಾರಾಮು ಗುರುಗಳಿಗೆ ಅಭಿವಂದಿಸಿ ಮೇಲಕ್ಕೆದ್ದ.

## ೨೨

ಆದಿಶೇಷಯ್ಯ ನಾಲ್ಕುದಿನ ಪುರಸತ್ತು ಮಾಡಿಕೊಂಡು ಬೆಂಗಳೂರಿಗೆ ಹೋಗಿ ಮಗನಿಗೆ ಮನೆಗೊತ್ತುಮಾಡಿಕೊಂಡು ಬಂದರು. ಅರ್ಧಚಂದ್ರಾಕಾರವಾಗಿದ್ದ ಚಾಮರಾಜಪೇಟೆ ನಾಲ್ಕನೆಯ ರಸ್ತೆಯ ಮೇಲ್ತುದಿಯಲ್ಲಿಯೇ ಮನೆಯಿದ್ದುದು.

ಅಮಲ್ದಾರ್ ಸುಬ್ಬರಾಯಪ್ಪನವರು ಕೆಲಸದಿಂದ ನಿವೃತ್ತಿಹೊಂದಿದ ಮೇಲೆ ಬೆಂಗಳೂರಿಗೆ ಬಂದು ನೆಲಸಿದರು. ಅವರ ಏಕಮಾತ್ರ ಪುತ್ರ ಮುಂಬಯಿಯ ಒಂದು ಇಂಜನಿಯರಿಂಗ್ ಫರ್ಮ್‌ನಲ್ಲಿ ಕೆಲಸಕ್ಕಿದ್ದುದರಿಂದ ಸುಬ್ಬರಾಯಪ್ಪ, ಅವರ ಹೆಂಡತಿ ವೆಂಕಮ್ಮ ಇಬ್ಬರೇ ಬೆಂಗಳೂರು ಮನೆಯಲ್ಲಿರಬೇಕಾಯಿತು.

ಸುಬ್ಬರಾಯಪ್ಪನವರನ್ನು ಬಲ್ಲವರು ಅವರನ್ನು 'ಹಿಂದೂ ಪೇಪರ್ ಸುಬ್ಬರಾಯಪ್ಪ'ನವರೆಂದು ಕರೆಯುವ ವಾಡಿಕೆಯಾಗಿತ್ತು. ಬೆಳಿಗ್ಗೆ ಐದು ಗಂಟೆಗೇ ಏಳುತ್ತಿದ್ದ ಸುಬ್ಬರಾಯಪ್ಪನವರು ಅರ್ಧಮುಕ್ಕಾಲುಗಂಟೆ ವಾಕಿಂಗ್ ಹೋಗಿ ಬಂದು, ಮನೆತೋಟದಲ್ಲಿದ್ದ ಹೂಗಳನ್ನಾಯ್ದು, ಸ್ನಾನಮಾಡಿ, ದೇವರಪೂಜೆ ಮುಗಿಸಿ, ಒಂದು ಗ್ಲಾಸ್ ಬಿಸಿಬಿಸಿ ಕಾಫಿಕುಡಿದು ಫ್ಲಾನಲ್ ಷರ್ಟ್ ಹಾಕಿಕೊಂಡು ತಮ್ಮ ಮನೆಯ ಗೇಟಿನಲ್ಲಿ ಬಂದು ನಿಲ್ಲುತ್ತಿದ್ದರು. ಎಂಟು ಗಂಟೆಯ ವೇಳೆಗೆ ಹಿಂದೂ ಪೇಪರ್ ಹಂಚುವವನು ಪತ್ರಿಕೆ ಕೊಟ್ಟು ಹೋಗುತ್ತಿದ್ದ.

ಮನೆಯ ವರಾಂಡದಲ್ಲಿ ಬೆತ್ತದ ಆರಾಮಾಸನದ ಮೇಲೆ ಕುಳಿತು ಸುಬ್ಬರಾಯಪ್ಪನವರು ಪತ್ರಿಕೆಯ ವ್ಯಾಸಂಗ ಆರಂಭಿಸುತ್ತಿದ್ದರು. ಪತ್ರಿಕೆಯ

ಹೆಸರಿನಿಂದ ಆರಂಭಿಸಿ ಮುದ್ರಣಕಾರನ ನಾಮೋಲ್ಲೇಖನದವರೆಗೆ ಓದಿದರೇ ಅವರ ಮನಸ್ಸಿಗೆ ತೃಪ್ತಿ.

ಹನ್ನೆರಡು ಗಂಟೆಗೆ ಸರಿಯಾಗಿ ವೆಂಕಮ್ಮನವರು ತಟ್ಟೆಹಾಕಿ ಬಂದು ಗಂಡನನ್ನು ಊಟಕ್ಕೆಬ್ಬಿಸುತ್ತಿದ್ದರು. ಸುಬ್ಬರಾಯಪ್ಪನವರು ಕಂಠಪೂರ್ತಿ ಹೊಡೆದು ಒಂದು ಗಂಟೆಯವರೆಗೆ ಶತಪಥ ಸುತ್ತುತ್ತಿದ್ದು ಮಲಗುವುದಕ್ಕೆ ಹೋಗುತ್ತಿದ್ದರು. ಮೂರು ಗಂಟೆಯವರೆಗೆ ಮಧ್ಯಾಹ್ನದ ಸುಖನಿದ್ರೆ ಅನುಭವಿಸಿ ಎದ್ದಮೇಲೆ ಬೆಳಿಗ್ಗೆ ಓದದೆ ಉಳಿಸಿದ್ದ ಹಿಂದೂ ಪತ್ರಿಕಾ ಪಠನ ವಾಗುತ್ತಿತ್ತು. ನಾಲ್ಕು ಗಂಟೆಗೆ ಸರಿಯಾಗಿ ವೆಂಕಮ್ಮನವರು ಒಂದು ಕಪ್ ಕಾಫಿ ತಂದುಕೊಡುತ್ತಿದ್ದರು. ಒಂದು ಗಂಟೆ ಕಾಲ ಅಮಲ್ದಾರರು ರಾಮಾಯಣವನ್ನೋ ಭಾರತವನ್ನೋ ಓದುತ್ತಿದ್ದು ಐದು ಗಂಟೆಗೆ ಸರಿಯಾಗಿ 'ಶ್ರೀರಾಮ–ಶ್ರೀರಾಮಚಂದ್ರ' ಎಂದುಸುರಿ, ಆಕಳಿಸುತ್ತಾ ಎದ್ದು ಬಟ್ಟೆಧರಿಸಿ, ಕೋಲು ಹಿಡಿದು ಹೊರಗೆ ಹೊರಡಲು ಸಿದ್ಧವಾಗು ತ್ತಿದ್ದರು. ಸುಬ್ಬರಾಯಪ್ಪನವರಂತೆಯೇ ಕೆಲಸದಿಂದ ನಿವೃತ್ತಿಹೊಂದಿದ್ದ ಮೂರ್ತಿರಾಯರು, ರಾಮರಾಯರು ಇಬ್ಬರೇ ಅವರ ಗೆಳೆಯರು. ಈ ಮೂವರು ಗೆಳೆಯರು ಸಂಜೆಯನ್ನು ಮಾಧ್ವಸಂಘದಲ್ಲೋ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲೋ, ಹರಿಕಥಾ ಭಜನ ಸಮಾಜದಲ್ಲೋ ಕಳೆದು ಗೃಹಾಭಿಮುಖವಾಗುತ್ತಿದ್ದರು. ಮನೆಗೆ ಹಿಂದಿರುಗಿದೊಡನೆಯೇ ಸುಬ್ಬ ರಾಯಪ್ಪನವರು ಮುಗುಟವುಟ್ಟು ದೇವರ ತಲೆಯಮೇಲೆ ಹೂವೇರಿಸಿ, ಊಟ ಮುಗಿಸಿ, ಅರ್ಧಮುಕ್ಕಾಲು ಗಂಟೆ ಎಚ್ಚರವಾಗಿದ್ದು ಹತ್ತುಗಂಟೆಗೆ ಸರಿಯಾಗಿ ಮರದ ಹಲಗೆ ಹಾಕಿದ್ದ 'ಸ್ಪ್ರಿಂಗ್‌ಮಂಚ' ವೇರುತ್ತಿದ್ದರು.

ಬೆಳಗಾಯಿತೆಂದರೆ ಇದೇ ಕಾರ್ಯಕ್ರಮ ಅವರ ಜೀವನದಲ್ಲಿ ಸಾಗುತ್ತಿತ್ತು. ಕಾಲ ನಿರ್ದಿಷ್ಟತೆಯಲ್ಲಾಗಲಿ ಕ್ರಮದಲ್ಲಿಯಾಗಲಿ ಚಾ–ಚೂ ವ್ಯತ್ಯಾಸ ಬರದಂತೆ ವಿರಾಮವೇತನ ಪಡೆದ ಹತ್ತುವರ್ಷಗಳಿಂದ ಇದೇ ಜೀವನ ಸಾಗಿಸಿಕೊಂಡು ಬಂದಿದ್ದರು.

ಕೋಲಾರದಲ್ಲಿ ಅಮಲ್ದಾರರಾಗಿದ್ದ ಸುಬ್ಬರಾಯಪ್ಪನವರಿಗೆ ವಯಸ್ಸು ಐವತ್ತೈದು ತುಂಬಲು ಸರ್ಕಾರ ಅವರಿಗೆ ಅರ್ಧಸಂಬಳದ ವಿರಾಮವೇತನ

ಕರುಣಿಸಿತು. ಸುಬ್ಬರಾಯಪ್ಪನವರು ಬಾಡಿಗೆಗೆ ಕೊಟ್ಟಿದ್ದ ತಮ್ಮ ಬೆಂಗಳೂರು ಮನೆಯನ್ನು ಖಾಲಿಮಾಡಿಸಿ ಅಲ್ಲಿಯೇ ತಾವು ವಾಸಕ್ಕೆ ಬಂದು ಪ್ರತಿತಿಂಗಳೂ ಸರ್ಕಾರದ ಖಜಾನೆಯಿಂದ ನೂರೈವತ್ತು ರೂಪಾಯಿಗಳನ್ನು ಸ್ವೀಕರಿಸುತ್ತಿದ್ದರು.

ವಿಶ್ರಾಮವೇತನ ಪಡೆದು ಬೆಂಗಳೂರು ಸೇರಿದಮೇಲೆ ಸುಬ್ಬರಾಯಪ್ಪನವರ ಆರ್ಥಿಕ ಪರಿಸ್ಥಿತಿಗೆ ಬಲವಾದ ಧಕ್ಕೆ ತಗುಲಿತು. ಕೋಲಾರದಲ್ಲಿ ಕೆಲಸದಲ್ಲಿದ್ದಾಗ ಸಂಬಳ ಮುನ್ನೂರು, ಬೆಂಗಳೂರಿನ ಮನೆಬಾಡಿಗೆ ಐವತ್ತು ಮೊತ್ತವಾಗಿ ಕೈಸೇರುತ್ತಿತ್ತು. ಕೋಲಾರದ ಮನೆಯ ಖರ್ಚು 'ಮಾಮೂಲಿ'ನಲ್ಲಿ ನಡೆದುಹೋಗುತ್ತಿತ್ತು. ಈಗ ಜೀವನಸಾಗಿಸುವುದಕ್ಕೆ ಕೈಯಿಂದ ಖರ್ಚುಮಾಡಬೇಕಾದ ಪ್ರಸಂಗ ಒದಗಿದುದಲ್ಲದೆ, ಮನೆ ಬಾಡಿಗೆಯೂ ಬರದಂತಾಯಿತು. ಈ ಕೊರತೆ ತುಂಬಲು ಸುಬ್ಬರಾಯಪ್ಪನವರು ತಮ್ಮ ಮನೆಯ ಹಿಂದೆ ಮೂರು ಉಪಗೃಹಗಳನ್ನು (Out-House) ಕಟ್ಟಿಸಿ ತಲಾ ಹದಿನೆಂಟು ರೂಪಾಯಿಯಂತೆ ಬಾಡಿಗೆಗೆ ಕೊಟ್ಟಿದ್ದುದಲ್ಲದೆ ತಮ್ಮ ವಾಸಗೃಹದ ಒಂದು ಭಾಗವನ್ನು ಬಾಡಿಗೆಗೆ ಅಣಿಮಾಡಿದ್ದರು. ಅದರಿಂದ ಇಪ್ಪತ್ತೈದು ರೂಪಾಯಿ ಸಿಕ್ಕುತ್ತಿತ್ತು. ಬಾಡಿಗೆ ಹಣ ಸುಬ್ಬರಾಯಪ್ಪನವರ ಕೊರತೆಯನ್ನು ಅಲ್ಪಸ್ವಲ್ಪ ತುಂಬಿತ್ತು. ಐದುವರ್ಷ ಕಳೆಯುವಲ್ಲಿ ಮಗ ರಾಮರಾಯನಿಗೆ ಮುಂಬಯಿಯ ಒಂದು ಇಂಜನಿಯರಿಂಗ್ ಫರ್ಮ್‌ನಲ್ಲಿ ಕೆಲಸ ಸಿಕ್ಕಿತು. ರಾಮರಾಯ ತಿಂಗಳಿಗೆ ಐವತ್ತೋ ನೂರೋ ತಂದೆಗೆ ಕಳಿಸಿಕೊಡುತ್ತಿದ್ದ.

ಸುಬ್ಬರಾಯಪ್ಪನವರು ಎಂಜಲ ಕೈಯಲ್ಲಿ ಕಾಗೆ ಹೊಡೆಯುವವರಲ್ಲವೆಂಬುದು ಪ್ರಸಿದ್ಧವಾಗಿತ್ತು. ಗೆಳೆಯರು ತಮ್ಮ ಮನೆಗೆ ಬಂದರೆ ಅವರಿಗೆ 'ಪಾನಕಪನ್ಯಾರ' ವಿನಿಯೋಗವಮಾಡಬೇಕಾಗುತ್ತದಲ್ಲಾ ಎಂದು ಸುಬ್ಬರಾಯಪ್ಪನವರೇ ಪ್ರತಿದಿನ ಐದುಗಂಟೆಗೆ ಸರಿಯಾಗಿ ಅವರ ಮನೆಗೇ ಹೋಗುತ್ತಿದ್ದರು.

ಸುಬ್ಬರಾಯಪ್ಪನವರಿಗೂ ಲಾಯರ್ ಶ್ರೀನಿವಾಸರಾಯರಿಗೂ ಬಹಳ ದಿನಗಳ ಪರಿಚಯ. ಶ್ರೀನಿವಾಸರಾಯರ ಪ್ರಯತ್ನದಿಂದಲೇ ಆದಿಶೇಷಯ್ಯನವರಿಗೆ ಸುಬ್ಬರಾಯಪ್ಪನವರ ಮನೆ ಸಿಕ್ಕಿದುದು.

ಹೇಗಾದರೂ ಮಾಡಿ ಶ್ರೀನಿವಾಸರಾಯರಿಂದ ಬೆಂಗಳೂರು ಮನೆಯ ಖರ್ಚನ್ನು ಎಬ್ಬಿಸಬೇಕೆಂದು ಆದಿಶೇಷಯ್ಯ ಮಾಡಿದ ಪ್ರಯತ್ನ ಸಾರ್ಥಕವಾಗಲಿಲ್ಲ.

"ನೋಡಿ ಆದಿಶೇಷಯ್ಯ ನನ್ನ ಆಫೀಸಿನಲ್ಲಿ ಈಗಲೇ ಐದುಜನ ಜ್ಯೂನಿಯರ್ಸ್ (Juniors) ಇದ್ದಾರೆ. ಮೂವರಿಗೆ ಸಂಬಳ ಕೊಡುತ್ತಿದ್ದೇನೆ. ಇನ್ನಿಬ್ಬರಿಗೆ ಅಲೋಯನ್ಸ್ (Allowance) ಕೊಡುತ್ತಿದ್ದೇನೆ. ನಿಮ್ಮ ಮಗನಿಗೆ ಸದ್ಯ ಹಣ ಕೊಡುವುದು ನನಗೆ ಸಾಧ್ಯವಿಲ್ಲ. ಅವನು ನಾಲ್ಕಾರು ತಿಂಗಳು ಇರಲಿ, ಕೆಲಸ ಕಲಿತುಕೊಳ್ಳಲಿ. ನನ್ನ ಒಬ್ಬ ಜ್ಯೂನಿಯರ್ ಸ್ವತಂತ್ರ ಆಫೀಸ್ ಮಾಡಿಕೊಂಡು ಹೋಗುತ್ತಾರೆ. ಆಗ ಅವನಿಗೆ ಯಥಾಶಕ್ತಿ ಅಲೋಯನ್ಸ್ ಕೊಡುತ್ತೇನೆ" ಎಂದು ಸ್ಪಷ್ಟವಾಗಿ ಹೇಳಿದ್ದರು.

ಆದಿಶೇಷಯ್ಯ ಚಂದ್ರಶೇಖರನಿಗಾಗಿ ತಿಂಗಳಿಗೆ ನೂರು ರೂಪಾಯಿಯಂತೆ ಆರುತಿಂಗಳು ಖರ್ಚುಮಾಡದೆ ನಿರ್ವಾಹವೇ ಇರಲಿಲ್ಲ.

'ಆಯಿತು. ಏನು ಮಾಡುವುದಕ್ಕಾಗುತ್ತದೆ. ಮಗ ಮುಂದಕ್ಕೆ ಬಂದರೆ ಸಾಕು' ಎಂದು ಆದಿಶೇಷಯ್ಯ ಮನಸ್ಸು ಗಟ್ಟಿಮಾಡಿದರು.

ಊರಿನಿಂದಲೇ ಪಾತ್ರೆಪಡಗ, ಕುಕ್ಕೆಮರ, ಒನಕೆ ರುಬ್ಬುಗುಂಡು ಎಲ್ಲವನ್ನೂ ಹೊತ್ತುತಂದು ನಾಗಮ್ಮ ಮಗನ ಸಂಸಾರಕ್ಕೆ ಅಣಿಮಾಡಿದಳು.

ಅಳಿಯ ಮಗಳ ಜತೆಯುಲ್ಲಿರಲು ಒಪ್ಪಿ ನರಸಮ್ಮ ಬಂದಿದ್ದುದರಿಂದ ನಾಗಮ್ಮನ ಅರ್ಧಚಿಂತೆ ಪರಿಹಾರವಾಗಿತ್ತು.

ಒಂದುವಾರ ಮಗನ ಮನೆಯಲ್ಲಿದ್ದು ನಾಗಮ್ಮ, ಆದಿಶೇಷಯ್ಯ ಊರಿಗೆ ಹೊರಡಲನುವಾದರು. ನರಸಮ್ಮ ಗಸಗಸೆ ಪಾಯಸ, ಹುಳಿಯನ್ನ, ಆಂಬೊಡೆ ಮಾಡಿ ಬೀಗರಿಗೆ ಔತಣ ಮಾಡಿದಳು.

ನಾಗಮ್ಮ ಊರಿಗೆ ಹೊರಡುವ ಮುನ್ನ ಮಗನನ್ನು ಹತ್ತಿರ ಕರೆದು

"ಚಂದ್ರೂ, ನಿನ್ನ ಬಿಟ್ಟು ಹೋಗುವುದಕ್ಕೆ ಕರುಳು ಕಿತ್ತು ಬರುತ್ತದೆ. ಏನುಮಾಡುವುದು? ಭಗವಂತ ಯಾರ ಅನ್ನ ಎಲ್ಲಿಟ್ಟಿದ್ದಾನೋ? ಎಚ್ಚರದಿಂದ ಕೆಲಸ ಕಾರ್ಯ ನೋಡಿಕೊಂಡು ಒಳ್ಳೆಯ ಹೆಸರು ಸಂಪಾದನೆ ಮಾಡಪ್ಪಾ. ಪಾತೂ ಒರಟೊರಟಾಗಿ ಆಡಿದರೆ ಕೋಪಮಾಡಿಕೊಳ್ಳಬೇಡ. ಹಳ್ಳಿಯಲ್ಲೇ ಇದ್ದವಳು—ಈಗ ಬೆಂಗಳೂರಿಗೆ ಬಂದಿದ್ದಾಳೆ. ಒಂದೆರಡು

ತಿಂಗಳಲ್ಲಿ ನಿನ್ನ ಮನಸ್ಸನ್ನರ್ಥಮಾಡಿಕೊಂಡು ಅಚ್ಚುಮೆಚ್ಚಾಗಿರುತ್ತಾಳೆ. ಅಲ್ಲಿಯವರೆಗೆ ನೀನು ತಾಳ್ಮೆ ತಂದುಕೊಳ್ಳಬೇಕು. ಎರಡು ಮೂರು ದಿವಸಕ್ಕೊಂದು ಸಲವಾದರೂ ಕಾಗದ ಬರೆದು ಯೋಗಕ್ಷೇಮ ತಿಳಿಸುತ್ತಿರು." ಎಂದು ಆಶೀರ್ವದಿಸಿದಳು.

ಸೊಸೆಗೂ ನಾಲ್ಕು ಬುದ್ಧಿಯಮಾತು ಹೇಳಲು ನಾಗಮ್ಮ ಮರೆಯಲಿಲ್ಲ.

"ಹೆಂಗಸರು ನಮಗೆ ಮನೆಯೋಚನೆ ಬಿಟ್ಟು ಬೇರೊಂದಿಲ್ಲ. ಗಂಡಸರಿಗೆ ಹಾಗಲ್ಲ. ಮನೆಯ ಯೋಚನೆ ಜತೆ ಹೊರಗಿನ ಯೋಚನೆಯೂ ಇರುತ್ತದೆ. ಅವರು ಸಂಪಾದನೆ ಮಾಡಬೇಕು–ಅದಕ್ಕಾಗಿ ನೂರಾರು ಕಷ್ಟ ಅನುಭವಿಸಬೇಕಾಗುತ್ತದೆ. ಗಂಡನ ಎದುರು ವಾದಿಸಬೇಡಮ್ಮ. ಅವನು ಸಿಟ್ಟುಮಾಡಿಕೊಂಡು ಒಂದು ಮಾತು ಅಂದರೂ ಸಹಿಸಿಕೋ. ಅವನು ಶಾಂತವಾಗಿದ್ದಾಗ ಬುದ್ಧಿ ಹೇಳು. ಗಂಡಹೆಂಡತಿ ಬಿಂದಿಗೆ ಹಗ್ಗವಿದ್ದಹಾಗೆ. ಇಬ್ಬರಲ್ಲಿಯೂ ಅನ್ಯೋನ್ಯ, ಪರಸ್ಪರ ಹೊಂದಿಕೆ ಇದ್ದರೆ ಜೀವನದಿಯಿಂದ ನೀರು ಜಗ್ಗಲು ಸಾಧ್ಯ. ಬಿಂದಿಗೆಯಿಲ್ಲದೆ ಹಗ್ಗದಿಂದ ಪ್ರಯೋಜನವಿಲ್ಲ; ಹಗ್ಗವಿಲ್ಲದ ಬಿಂದಿಗೆಯೂ ಪ್ರಯೋಜನಕ್ಕೆ ಬರುವುದಿಲ್ಲ."

ಕಣ್ಣೀರ್ಗರೆಯುತ್ತ ನಿಂತಿದ್ದ ನರಸಮ್ಮನ ಬಳಿಹೋಗಿ ನಾಗಮ್ಮ

"ನೀವು ಇಲ್ಲಿರೋದು ನನ್ನ ಮನಸ್ಸಿನ ಭಾರ ಇಳಿಸಿದೆ. ಎಲ್ಲಾ ತಿಳಿದವರು, ನಿಮಗೆ ನಾನು ಹೇಳಬೇಕಾದದ್ದೇನಿದೆ? ಪಾತೂ ಚಂದ್ರೂ ಇವರ ದಾಂಪತ್ಯ ಅನ್ಯೋನ್ಯವಾಗುವಂತೆ ಮಾಡುವುದು ನಿಮ್ಮ ಭಾರ." ಎಂದು ಹೇಳಿದಳು.

ಚಂದ್ರಶೇಖರ ಬಸ್‌ಸ್ಟ್ಯಾಂಡ್‌ವರೆಗೆ ಹೋಗಿ ತಾಯಿ ತಂದೆಯನ್ನು ಬಸ್ಸಿನಲ್ಲಿ ಕೂಡಿಸಿ ಬಂದ.

ಯಾವದೋ ಅವ್ಯಕ್ತವೇದನೆ ಅವನನ್ನು ಬಾಧಿಸುತ್ತಿತ್ತು. ಅವನ ಹೃದಯದಲ್ಲಿ ಕೊರತೆ–ಕೊರಗು ಮೂಡಿತ್ತು.

## ೨೩

ಒಂದುದಿನ ಪರ್ಣಕುಟಿಯಲ್ಲಿ ಭಟ್ಟರು ಸೀತಾರಾಮನಿಗೆ ಪಾಠ ಹೇಳುತ್ತ ಕುಳಿತಿದ್ದರು. ಯಾರೊ ಅಗಂತುಕ ಬಂದು ಭಟ್ಟರಿಗೆ ನಮಸ್ಕಾರ ಮಾಡಿದರು.

"ಯಾರುಸ್ವಾಮಿ, ಏನು ಬಂದಿದ್ದಿರಿ?" ಎಂದು ಭಟ್ಟರು ಕೇಳಿದರು.

"ನಾನು ಕಡೂರು ಡೆಪ್ಯುಟಿ ಕಮಿಷನರ್ ಸಾಹೇಬರ ಆಪ್ತ ಕಾರ್ಯದರ್ಶಿ. ನನ್ನ ಹೆಸರು ಸೋಮಸುಂದರಂ."

"ಸಂತೋಷ. ಬನ್ನಿ-ಏನು ಸಮಾಚಾರ."

"ರೆವಿನ್ಯೂಕಮಿಷನರ್ ಸಾಹೇಬರಿಂದ ನಮ್ಮ ಸಾಹೇಬರಿಗೆ ಮೆಸೇಜ್ (Message) ಬಂತು. ಶೃಂಗೇರಿಯಲ್ಲಿರುವ ತಮ್ಮನ್ನು ಕಂಡು, ಯೋಗ ಕ್ಷೇಮ ತಿಳಿದು ಕೂಡಲೆ ತಮಗೆ ಫೋನ್ ಮಾಡಬೇಕೆಂದು ದೊಡ್ಡ ಸಾಹೇಬರು ಆಜ್ಞಾಪಿಸಿದ್ದಾರೆ."

"ನೀವು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲವಲ್ಲ ಸೋಮಸುಂದರಂ–ರೆವಿನ್ಯೂಕಮಿಷನರ್ ಸಾಹೇಬರು ಯಾರು?"

"ತುಮಕೂರಿನ ಡಿ. ಸಿ. ಗಳಾಗಿದ್ದ ಹಾಜಿ ಅಬ್ದುಲ್ ಜಬ್ಬಾರ್ ಸಾಹೇಬರು."

"ಓ; ಅವರೇ? ಸರಿಸರಿ-ಈಗರ್ಥವಾಯಿತು. ಅವರು ಈಗ ತುಮಕೂರಿನಲ್ಲಿಲ್ಲ."

"ಇಲ್ಲ ಸ್ವಾಮಿ, ರೆವಿನ್ಯೂಕಮಿಷನರಾಗಿ ಬೆಂಗಳೂರಿಗೆ ಹೋದರು."

"ಬಹಳ ಸಂತೋಷ. ನಾನು ಚೆನ್ನಾಗಿದ್ದೇನೆ. ಇಲ್ಲಿ ಎಲ್ಲವೂ ಸುಖವಾಗಿದೆ ಎಂದು ದಯೆಯಿಟ್ಟು ತಿಳಿಸಿ."

"ತಾವು ಬೆಂಗಳೂರಿಗೆ ಹೋಗಿ ದೊಡ್ಡ ಸಾಹೇಬರನ್ನು ಕಾಣಬೇಕಂತೆ;"

"ಸದ್ಯಕ್ಕೆ ಸಾಧ್ಯವಿಲ್ಲ. ನವರಾತ್ರಿ ಕಳೆದಮೇಲೆ ಅತ್ತ ಹೋಗಿ ಬರುತ್ತೇನೆ."

"ದೊಡ್ಡ ಸಾಹೇಬರಿಗೆ ಹಾಗೇ ತಿಳಿಸುತ್ತೇನೆ."

ಎಂದು ಸೋಮಸುಂದರಂ ಹೋದರು. ಭಟ್ಟರು ಶಿಷ್ಯನ ಕಡೆಗೆ ತಿರುಗಿ

"ನಾನೊಮ್ಮೆ ತುಮಕೂರು. ಬೆಂಗಳೂರುಕಡೆ ಹೋಗಿಬರಬೇಕು. ರುದ್ರಾಕ್ಷಿಪುರದಿಂದ ಕಾಗದಗಳಮೇಲೆ ಕಾಗದಗಳು ಬರುತ್ತಿವೆ."

"ನನ್ನ ಪಾಠ ಗುರುಗಳೇ ?"

"ನಿನ್ನ ಪಾಠಕ್ಕೆ ತೊಂದರೆ ಮಾಡಲ್ಲಪ್ಪಾ. ನಾನು ಹೋಗುವು ದಾದರೆ ನಿನ್ನನ್ನೂ ಜತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ಎಲ್ಲದಕ್ಕೂ ಗುರುಗಳ ಅಪ್ಪಣೆಯಾಗಬೇಕಲ್ಲ."

ಅಂದೇ ಭಟ್ಟರು ಗುರುಗಳಿಗೆ ಎಲ್ಲವನ್ನೂ ನಿವೇದಿಸಿಕೊಂಡು

"ನನ್ನ ಪಾತೂ ಈಗ ಬೆಂಗಳೂರಿನಲ್ಲಿ ಸಂಸಾರ ಹೂಡಿದ್ದಾಳಂತೆ. ಜಬ್ಬಾರ್ ಸಾಹೇಬರು ದೊಡ್ಡ ಅಧಿಕಾರಕ್ಕೆ ಬಂದಿರುವರಂತೆ–ಎಲ್ಲರನ್ನೂ ಒಮ್ಮೆ ನೋಡಬೇಕೆಂದು ಮನಸ್ಸಾಗಿದೆ."

"ಹೋಗಿಬನ್ನಿ."

"ನವರಾತ್ರಿ ಮುಗಿಸಿಕೊಂಡು ಹೋಗಿಬರಲು ಅಪ್ಪಣೆಯಾಗಬೇಕು. ಸೀತಾರಾಮು ಪಾಠಕ್ಕೆ ತೊಂದರೆಯಾಗದಂತೆ ಅವನನ್ನೂ ಜತೆಯಲ್ಲಿ ಕರೆದು ಕೊಂಡು ಹೋಗುತ್ತೇನೆ, ನನಗೂ ವಯಸ್ಸಾಯಿತು. ಜತೆಯಲ್ಲಿ ಒಬ್ಬರಿದ್ದರೆ ಲೇಸು."

"ಆ ಮಾತು ನಾನೇ ಹೇಳಬೇಕೆಂದಿದ್ದೆ. ಅಗತ್ಯವಾಗಿ ಆಗಲಿ."

ನವರಾತ್ರಿ ಬಹಳದೂರ ಉಳಿಯಲಿಲ್ಲ. ನವರಾತ್ರಿ ಉತ್ಸವಾಚರಣೆಗೆ ಶೃಂಗೇರಿಯ ಮಠದಲ್ಲಿ ವಿಶೇಷ ವ್ಯವಸ್ಥೆ ಆರಂಭವಾಗಿತ್ತು. ದೇಶದ ನಾನಾ ಮೂಲೆಗಳಿಂದ ಬರುವ ಅತಿಥಿ ಅಭ್ಯಾಗತರ ಆತಿಥ್ಯಕ್ಕೆ ಸೂಕ್ತಕ್ರಮಕೈಗೊಳ್ಳಲಾಗಿತ್ತು.

ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ * ಎಂದು ನಾಲ್ಕುರೂಪದಲ್ಲಿ ಪ್ರಕಟವಾಗುವ ಆದಿಶಕ್ತಿ ಶೃಂಗೇರಿಯಲ್ಲಿ ಮಹಾಸರಸ್ವತಿಯಾಗಿ ನೆಲಸಿದ್ದಳು. ವಿದ್ಯೆಯ ಅಧಿಷ್ಠಾನ ದೇವತೆಯಾದ ತಾಯಿ, ಜ್ಞಾನ, ವಿಜ್ಞಾನ, ಸಾಹಿತ್ಯ, ಕಲೆ, ಕ್ರಮ, ಸಂಯಮಗಳ ಪೋಷಿಕೆಯಾಗಿದ್ದಳು. ಅನನ್ಯಾದೃಶ ಕರುಣಾಮೂರ್ತಿಯಾದ ಸರಸ್ವತಿ ತನ್ನ ನಗೆಮೊಗದ ಬೆಳುದಿಂಗಳನ್ನು ಪಸರಿಸಿ ಲೋಕದ ಜಂಜಡವನ್ನು ಪರಿಹರಿಸುತ್ತಿದ್ದಳು.

---

* "MAHASARASWATHI is the Mother's Power of Work and her spirit of perfection and order. The youngest of the Four, she is the most skilful in executive faculty and the nearest to physical nature........The science and craft and technique of things are Mahasaraswathi's province. Always she holds in her nature and can give to those whom she has chosen the intimate and precise knowledge, the subtlety and patience, the accuracy of intuitive mind and conscious hand and discerning eye of the perfect worker The power is the strong, tireless, the careful and efficient builder, organizer, administrator, the technician, artisan and classifier of the worlds. When she takes up the transformation and new building of the nature her action is laborious and minute and often seems to our impatience slow and interminable, but it is persistent, integral and flawless....Nothing short of a perfect perfection satisfies her and she is ready to face an eternity of toil if that is needed for the fullness of her creation. Therefore of all the Mother's powers she is the most long-suffering with man and his thousand imperfections. Kind, smiling, close and helpful, not easily turned away or discouraged, insistent even after repeated failure, her hand sustains our every step on condition that we are single in our will and straightforward and sincere; for a double mind she will not tolerate and her re vealing irony is merciless to drama and histrionics and self-deceit and pretence. A mother to our wants, a friend in our difficulties, a persistent and tranquil councillor and mentor, chasing away with her radiant smile the clouds of gloom and fretfulness and depression, remind always of the ever-present help,

ಆ ತಾಯಿಯನ್ನು ಶೃಂಗೇರಿಯಲ್ಲಿ ಆರಾಧಿಸುತ್ತಿದ್ದವರು ಯೋಗೀಶ್ವರ ಶ್ರೀಚಂದ್ರಶೇಖರ ಭಾರತಿಸ್ವಾಮಿಗಳವರು. ಮಹಾಭಕ್ತನ ಅಸೀಮ ಆತ್ಮಾರ್ಪಣಕ್ಕೆ ಮನಸೋತ ದೇವಿ ಪೂರ್ಣಕಳೆಯಿಂದ ಅವತರಿಸಿದ್ದಳು. ಈ ದಿವ್ಯ ನೋಟನೋಡುವುದಕ್ಕೆ, ದೇವಿಯಕೃಪೆಯನ್ನು ದೊರಕಿಸುವುದಕ್ಕೆ ಭಕ್ತರು ನಾನಾ ಕಡೆಗಳಿಂದ ಶೃಂಗೇರಿಗೆ ಬರುತ್ತಿದ್ದರು.

ನವರಾತ್ರಿಯಲ್ಲಿ ನಡೆದ ಎಲ್ಲಾ ಪೂಜಾ ವೈಭವವನ್ನೂ ಭಟ್ಟರು ಕಣ್ಣೆವೆಹಾಕದೆ ನೋಡಿ, ಮನಸ್ಸು ತುಂಬಿಕೊಂಡು ಆತ್ಮತೃಪ್ತರಾದರು. ಒಮ್ಮೊಮ್ಮೆ ದೇವಿಯೇ ಬಂದು ಪ್ರತ್ಯಕ್ಷವಾಗಿ ಅವರೊಂದಿಗೆ ಮಾತನಾಡಿ ದಂತಾಗುತ್ತಿತ್ತು. ಹಲವು ಕಾಲದಿಂದ ಸಿಕ್ಕಾಗಿ ಕುಳಿತಿದ್ದ ಸಮಸ್ಯೆಗಳು ತಾವಾಗಿಯೇ ಪರಿಹಾರವಾಗುತ್ತಿದ್ದವು. ಭಟ್ಟರು ಪರವಶರಾಗಿ

"ಸೀತಾರಾಮು, ನಮ್ಮ ಮನೆಯ ಬಾಗಿಲಿಗೆ, ಮನಸ್ಸಿನ ಬಾಗಿಲಿಗೆ ತಾಯಿ ನಡೆದು ಬರುತ್ತಾಳೆ. ನಾವು ಬಾಗಿಲು ತೆಗೆದು ಅವಳನ್ನು ಒಳಗೆ ಬಾ ತಾಯಿ ಎಂದು ಕರೆಯಬೇಕಷ್ಟೆ! ಆವಳ ಮಡಿಲಲ್ಲಿ ಮುಖವಿಟ್ಟು 'ಅಮ್ಮ, ನನಗೆ ಜ್ಞಾನ ಕೊಡು, ವೈರಾಗ್ಯ ಕೊಡು, ಭಕ್ತಿ ಕೊಡು' ಎಂದು ಬೇಡ ಬೇಕಷ್ಟೆ! ನಾವು ಬೇಡಿದುದಕ್ಕಿಂತ ಹೆಚ್ಚಾಗಿ ಅವಳು ಕೊಡುತ್ತಾಳೆ" ಎಂದು ನುಡಿಯುತ್ತಿದ್ದರು.

ಏಕಾದಶಿಯ ದಿನ ಭಟ್ಟರು ಸೀತಾರಾಮುನೊಂದಿಗೆ ಗುರುಗಳ ದರ್ಶನ, ಆಶೀರ್ವಾದ ಪಡೆದು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

---

pointing to the eternal sunshine, she is firm, quiet and persevering in the deep and continuous urge that drives us towards the integrality of the higher nature. All the work of the other Powers lean on her for its completeness; for she assures the material foundation elaborates the stuff of detail and erects and rivets the armour of the structure."

*Sri Aurobindo in "THE MOTHER"*

## ೨೪

'ಹಿಂದೂ' ಪತ್ರಿಕಾಭಿಮಾನಿ ಸುಬ್ಬರಾಯಪ್ಪನವರಿಗೆ ಸ್ವಂತ ಮನೆಯಿದ್ದಂತೆ ಬೆಂಗಳೂರಿನಲ್ಲಿ ಸಾವಿರಾರು ಜನಕ್ಕೆ ಸ್ವಂತ ಮನೆಯಿತ್ತು; ಆದರೆ ಈ ಅಂಶ ಸುಬ್ಬರಾಯಪ್ಪನವರ ಗಮನಕ್ಕೆ ಮಾತ್ರ ಬಿದ್ದಿರಲಿಲ್ಲ. ಮನೆಯ ಬಗ್ಗೆ ಅವರಿಗಿದ್ದ ಮೋಹ, ಮನೆಯ ಪ್ರತಿಯೊಂದು ಹೆಂಚು, ಇಟ್ಟಿಗೆ, ಕಂಬ, ಗಾರೆಯ ಚೂರಿನ ಬಗ್ಗೆ ಅವರಿಗಿದ್ದ ಅಭಿಮಾನ ಅನುಪಮವಾಗಿತ್ತು. ಅವರ ಮನೆಯಲ್ಲಿ ಒಕ್ಕಲಿದ್ದ ಪಯೋನಿಯರ್ ಫಿಲ್ಮ್ ಡಿಸ್ಟ್ರಿಬ್ಯೂಟರ್ ಆಫೀಸಿನ ಹನುಮಂತರಾಯರ ಹೆಂಡತಿ ಜೀವೂಬಾಯಿ 'ಈ ಮನುಷ್ಯ ಸತ್ತರೆ ಪಿಶಾಚಿಯಾಗಿ ಇದೇ ಮನೆಯಲ್ಲಿ ನೆಲಸುತ್ತಾನೆ' ಎಂದು ಹೇಳುತ್ತಿದ್ದಳು.

ಬೆಳಿಗ್ಗೆಯಿಂದ ಸಂಜೆಯವರೆವಿಗೂ ಅಮಲ್ದಾರರ ಕಿಟಕಿಟಿ ಒಕ್ಕಲಿದ್ದವರಿಗೆ ತಪ್ಪಿದ್ದೇ ಅಲ್ಲ.

'ಗಿಡದಲ್ಲಿ ಯಾರೋ ಹೂ ಕಿತ್ತಿದ್ದಾರೆ. ಕಷ್ಟಪಟ್ಟು ಗಿಡ ಹಾಕಿ ನಾವು ಹೂ ಬೆಳೆಸುವುದು ಕಂಡವರು ಕಿತ್ತುಕೊಂಡು ಹೋಗುವುದಕ್ಕಾಯ್ತು.

'ನಲ್ಲಿಯಲ್ಲಿ ಯಾರೋ ನೀರು ಬಿಟ್ಟಿದ್ದಾರೆ. ಹೋದ ತಿಂಗಳು ಎರಡು ರೂಪಾಯಿ ನೀರಿನ ಕಂದಾಯ ತೆತ್ತದ್ದಾಯ್ತು. ನೀರಿನ ಅವಾಂತರ ನಿಲ್ಲದಿದ್ದರೆ ಹೊರಗಡೆ ಇರುವ ನಲ್ಲಿಯನ್ನು ಕಿತ್ತುಹಾಕಿಸಿಬಿಡುತ್ತೇನೆ.

'ಬಾಡಿಗೆಯವರ ಹಾವಳಿ ಬಹಳವಾಯ್ತು. ಇವರು ಕೊಡೋ ಸಾವಿರಾರು ರೂಪಾಯಿಗೆ ರಾತ್ರಿಯೆಲ್ಲಾ ದೀಪ ಉರಿಸುತ್ತಾರೆ.'

'ಅಗೋ—ಗೋಡೆಯಂಚು ಯಾರೋ ಮುಕ್ಕು ಮಾಡಿದರಲ್ಲಪ್ಪಾ. ಇದನ್ನೇನು ಮನೆಯೆಂತಾ ತಿಳಿದುಕೊಂಡರೋ ಅಠಾರ ಕಛೇರಿಯೆಂತಾ ತಿಳಿದುಕೊಂಡರೋ ಗೊತ್ತಾಗಲಿಲ್ಲ.'

ಇಂಥವೇ ಕಾರಣಗಳು ಸುಬ್ಬರಾಯಪ್ಪನವರಿಗೆ ದಿನಕ್ಕೊಂದು ಒದಗುತ್ತಿತ್ತು.

ಅಮಲ್ದಾರರ ಕಿರುಕುಳವನ್ನನುಭವಿಸಲಾಗದೆ ರಾಘವೇಂದ್ರರಾಯರು ಸ್ವಂತ ಮನೆ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದರು.

"ಇವರ ಸಹವಾಸ ಸಾಕು. ನಡೀರಿ ಬೇರೆ ಮನೆಗೆ ಹೋಗೋಣ. ಹತ್ತು ರೂಪಾಯಿ ಹೆಚ್ಚು ಬಾಡಿಗೆಯಾದರೂ ಚಿಂತೆಯಿಲ್ಲ."

ಎಂದು ಸೀತಾಬಾಯಿ ಬಲವಂತಮಾಡಿದರೆ ರಾಯರು

"ಎಲ್ಲಾ ಬಾಡಿಗೆಮನೆಯ ಹಣೆಯಬರಹವೂ ಇಷ್ಟೇ ಸೀತಾ. ಹುರಿಯೋ ಓಡಿನಿಂದ ಹಾರಿಕೊಂಡು ಉರಿಯೋ ಬೆಂಕಿಗೆ ಬಿದ್ದಹಾಗೆ! ಇಲ್ಲೇ ಇನ್ನು ನಾಲ್ಕು ದಿವಸ ತಳ್ಳಿಬಿಟ್ಟು ನಮ್ಮ ಮನೆಗೆ ನಾವು ಹೋಗೋಣ"

ಎಂದು ಸಮಾಧಾನ ಹೇಳುತ್ತಿದ್ದರು.

ಬಾಡಿಗೆಗೆ ಇದ್ದವರಲ್ಲಿ ಈಶ್ವರಮೂರ್ತಿ ಹೆಂಡತಿ ಕುಮುದಮ್ಮ ಸ್ವಲ್ಪ ಗಟ್ಟಿ ಹೆಂಗಸು. ಅಮಲ್ದಾರರು ಲೊಟಗುಟ್ಟುವುದಕ್ಕೆ ಸರಿಯಾಗಿ ಅವಳೂ ಲೊಟಗುಟ್ಟಿ ಉತ್ತರಕೊಡುತ್ತಿದ್ದಳು.

"ಅಯ್ಯೋ—ದನ ನುಗ್ಗಿ ಗಿಡಗಳನ್ನೆಲ್ಲಾ ಧ್ವಂಸ ಮಾಡಿಬಿಟ್ಟಿದೆಯಲ್ಲಪ್ಪಾ"

ಎಂದು ಅಮಲ್ದಾರರು ಉದ್ಗಾರ ತೆಗೆದರೆ ಕುಮುದಮ್ಮ

"ಮನೆ ಯಜಮಾನರೂಂತ ಅನಿಸಿಕೊಂಡವರು ತೂಕಡಿಸುತ್ತಾ ಕುಳಿತರೆ ಆಗುತ್ತದೇನು. ಅಥವಾ ದನ ಕಾಯುವುದಕ್ಕೆ ನಮ್ಮನ್ನು ಗೊತ್ತು ಮಾಡಿದ್ದಾರೆಯೋ?" ಎಂದು ಮರುನುಡಿಯುತ್ತಿದ್ದಳು.

ಸುಬ್ಬರಾಯಪ್ಪನವರು ಬಾಯಾಳಿ ಕುಮುದಮ್ಮನನ್ನು ಕಂಡರೆ ಗರುಡನನ್ನು ಕಂಡ ಹಾವಿನಂತಾಡುತ್ತಿದ್ದರು. ಒಮ್ಮೊಮ್ಮೆ ಈಶ್ವರಮೂರ್ತಿಗಳ ಜತೆ ಮಾತನಾಡುತ್ತಾ

"ಹೆಂಗಸರಿಗೆ ಬಾಯಿ ದೊಡ್ಡದಾದರೆ ಲೋಕ ಉಳಿಯುವುದು ಕಷ್ಟ" ಎಂದು ಟೀಕೆಯನ್ನು ಮಾಡುತ್ತಿದ್ದರು.

ಅಮಲ್ದಾರರ ಮನೆ ಉಪಗೃಹಕ್ಕೆ (out-house) ನರಸಮ್ಮ, ಪಾರ್ವತಿ ವಾಸಕ್ಕೆ ಬರಲು ಅವರಿಗೆ ಯುಕ್ತ ಶಿಕ್ಷಣ ಕೊಡುವ ಭಾರ ವಹಿಸಿ ಕೊಂಡವಳೇ ಕುಮುದಮ್ಮ. ತಾವು ಅನುಭವಿಸಿದ, ಅನುಭವಿಸುತ್ತಲಿದ್ದ ಕಷ್ಟಗಳನ್ನು ನಿರೂಪಿಸಿ

"ಈ ಮುದುಕನಿಗೆ ಸೇರಿಗೆ ಸವ್ವಾಸೇರಾಗಿ ನಿಂತರೇ ಇಲ್ಲಿ ಉಳಿಯಲು ಸಾಧ್ಯ ಕಣ್ರೀ ನರಸಮ್ಮ."

"ಜಗಳ ಕದನ ನಾನು ಅರಿಯದವಳು ಕುಮುದಮ್ಮ. ಅಮಲ್ದಾರ ರಿಗೆ ವಯಸ್ಸಾಗಿದೆ. ಸ್ವಂತ ಮನೆ ಮೇಲೆ ಹೆಚ್ಚಿನ ಅಭಿಮಾನವೂ ಇದೆ. ಒಂದುಮಾತು ಅವರು ಆಡಿಕೊಂಡರೆ ಆದ ನಷ್ಟವೇನು?—ಆಡಿಕೊಳ್ಳಲಿ ಬಿಡಿ."

"ಈ ಮನೆ ವಾಸದ ಅನುಭವ ನಿಮಗಿಲ್ಲ ನರಸಮ್ನ-ಹೀಗೆ ಹೇಳುತ್ತೀರಿ. ನಾಲ್ಕು ದಿನ ಕಳೆಯಲಿ—ನಿಮಗೇ ಗೊತ್ತಾಗತ್ತೆ."

"ಅಮಲ್ದಾರರ ಹೆಂಡತಿ ಒಳ್ಳೆಯವರ ಹಾಗೆ ಕಾಣುತ್ತಾರಲ್ರೀ!"

"ಒಳ್ಳೆಯವರೇ!?—ಈ ಮಾತು ನೀವೇ ಹೇಳಬೇಕು ನೋಡಿ. ಒಳಗೇ ಕೂತುಕೊಂಡು ಗಂಡನಿಗೆ ಹಚ್ಚಿಕೊಡೋಳೇ ಆ ಪುಣ್ಯಾತ್ಗಿತ್ತಿ. ಸತ್ತಮೇಲೆ ಈ ಮನೆಯನ್ನೂ ಹೆಗಲ ಮೆಲೆ ಹೊತ್ತುಕೊಂಡು ಹೋಗುತ್ತಾ ಳೆಂದು ಕಾಣುತ್ತದೆ.

"ಹಾಗನ್ನಬೇಡ್ರೀ—ವಯಸ್ಸಾದ ಮುತ್ತೈದೆ. ಹಣೆತುಂಬ ಕುಂಕುಮ ಕೆನ್ನೆತುಂಬ ಅರಿಶಿನ ಆಕೆ ಇಟ್ಟುಕೊಂಡು ಬಂದರೆ ಸಾಕ್ಷಾತ್ ಗೌರಿ ಬಂದ ಹಾಗಾಗುತ್ತದೆ."

"ನಿಮ್ಮ ಒಳ್ಳೇತನ ಇವರ ಹತ್ತಿರ ಏನೂ ನಡೆಯುವುದಿಲ್ಲ ನರಸಮ್ಮ ನವರೇ. ನೀವು ಮೆತ್ತಗಿದ್ದಷ್ಟೂ ಇವರ ಕಿರುಕುಳ ಹೆಚ್ಚುತ್ತೆ" ಎಂದು ಮುನ್ನೆಚ್ಚರಿಕೆಯನ್ನಿತ್ತಳು.

ಜಗಳಗಂಟಕಿಯಾದ ಕುಮುದಮ್ಮನ ವಿರೋಧ ಸ್ನೇಹ ಎರಡೂ ನರಸಮ್ಮನಿಗೆ ಬೇಕಿರಲಿಲ್ಲ. ಕುಮುದಮ್ಮನನ್ನು ಆದಷ್ಟು ದೂರವಿಡಬೇಕೆಂ ಬುದೇ ನರಸಮ್ಮನ ಯೋಚನೆಯಾಗಿತ್ತು.

ಆದರೆ ನರಸಮ್ಮನ ಯೋಚನೆ ಕೈಗೂಡಲಿಲ್ಲ.

ಪಾರ್ವತಿಗೂ ಕುಮುದಮ್ಮನಿಗೂ ಕೆಲವೇ ದಿನಗಳಲ್ಲಿ ಸ್ನೇಹ ಬೆಳೆಯಿತು. ಬೆಳಿಗ್ಗೆ ಏಳು ಗಂಟೆಗೇ ಕುಮುದಮ್ಮನ ಗಂಡ ಈಶ್ವರಮೂರ್ತಿ ಟೆಲಿಫೋನ್ ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತಿದ್ದ; ಎಂಟು ಗಂಟೆಯ ವೇಳೆಗೆ ಚಂದ್ರಶೇಖರ ಶ್ರೀನಿವಾಸರಾಯರ ಆಫೀಸಿಗೆ ಹೋಗುತ್ತಿದ್ದ. ಇಬ್ಬರಿಗೂ ದಿನವೆಲ್ಲಾ ಪುರುಸತ್ತು.

ಕುಮುದಮ್ಮ ಕೆಲವೇ ದಿನಗಳಲ್ಲಿ ಕುಮುದಕ್ಕನಾದಳು; ಅವಳ ಪ್ರತಿ ಮಾತು, ಪ್ರತಿ ಅಭಿಪ್ರಾಯ ಪಾರ್ವತಿಗೆ ವೇದಪ್ರಮಾಣವಾಯಿತು. ಮಾತು ಮಾತಿಗೆ 'ಕುಮುದಕ್ಕ ಹೀಗೆ ಹೇಳಿದರು–ಹಾಗೆ ಹೇಳಿದರು' ಎನ್ನುವ ಅಭ್ಯಾಸ ಅವಳಲ್ಲಿ ಬೆಳೆಯುತ್ತ ಬಂತು.

ಪಾರ್ವತಿ ಪ್ರತಿಯೊಂದು ವಿಷಯಕ್ಕೂ ಕುಮುದಮ್ಮನ ಹೆಸರೆತ್ತಿಕೊಳ್ಳುವುದು ಚಂದ್ರಶೇಖರನ ಲಕ್ಷ್ಯಕ್ಕೂ ಬಂದಿತು. ಒಂದು ದಿನ ಅವನು ಮನೆಗೆ ಬಂದವನು ಊಟಮಾಡುವುದಕ್ಕೆ ಸಿದ್ಧನಾದ. ಪಾರ್ವತಿ ಬಂದು 'ತಟ್ಟೆ ಹಾಕಿದೆ' ಎಂದಳು. ಚಂದ್ರಶೇಖರ ಪರಿಹಾಸ್ಯಕ್ಕೆ 'ಕುಮುದಕ್ಕ ಅಪ್ಪಣೆ ಕೊಟ್ಟರೇನು?' ಎಂದು ಕೇಳಿದ. ಪಾರ್ವತಿ ಮುನಿಸಿಕೊಂಡು 'ಕುಮುದಕ್ಕನ್ನ ಹಾಸ್ಯಮಾಡಬೇಡಿ' ಎಂದು ಕಟುವಾಗಿ ನುಡಿದಳು. 'ನನಗಿಂತಲೂ ಇವಳಿಗೆ ಕುಮುದಕ್ಕನೇ ಹೆಚ್ಚಾಯಿತೇ?' ಎಂದು ಚಂದ್ರಶೇಖರ ನೊಂದುಕೊಂಡ.

೨೫

ಮನೆಯ ವೆರಾಂಡದಲ್ಲಿ ಕುಳಿತು ತಮ್ಮ ಅಧಿಕಾರದ ಗತವೈಭವವನ್ನು ಸ್ಮರಿಸಿಕೊಳ್ಳುತ್ತಿದ್ದ ಅಮಲ್ದಾರ್ ಸುಬ್ಬರಾಯಪ್ಪನವರನ್ನು ಯಾರೋ 'ಸ್ವಾಮಿ–ಸ್ವಾಮಿ' ಎಂದು ಕೂಗಿದಂತಾಯಿತು. ಅಮಲ್ದಾರರು ಮುಖ ಸಿಂಡರಿಸಿಕೊಂಡೇ ಎದ್ದು 'ಯಾರು ಈ ಹೊತ್ತಿನಲ್ಲಿ ಕೂಗುವವರು' ಎಂದರು. ಗೇಟಿನಾಚೆ ನಿಂತಿದ್ದ ಒಂದು ವ್ಯಕ್ತಿ 'ಒಳಗೆ ಬರುವುದಕ್ಕೆ ಭಯವಾಗುತ್ತದೆ. ನಾಯಿ ಇದೆಯೇನೋ?' ಎಂದ. 'ಇಲ್ಲ ಒಳಕ್ಕೆ ಬನ್ನಿ' ಎಂದರು ಅಮಲ್ದಾರರು, ಮನೆಯ ತಲಬಾಗಿಲಿನಲ್ಲೇ ನಿಂತುಕೊಂಡು,

ಒಳಕ್ಕೆ ಬಂದ ಸೀತಾರಾಮು

"ಲಾಯರ್ ಚಂದ್ರಶೇಖರಯ್ಯನವರ ಮನೆ ಎಲ್ಲಿದೆಯೋ ಗೊತ್ತಾಗಲಿಲ್ಲ. ನಿಮ್ಮನ್ನು ಕೇಳಿದರೆ ಗೊತ್ತಾಗುತ್ತದೆಂದು ಅಕ್ಕಪಕ್ಕದವರು ತಿಳಿಸಿದರು" ಎಂದ.

"ಈ ಮನೆ ಹಿಂದುಗಡೆ ಔಟ್‌ಹೌಸಿನಲ್ಲಿದ್ದಾರೆ—ಅಲ್ಲಿಗೆ ಹೋಗಪ್ಪ."

ಸೀತಾರಾಮು ಹೊರಗೆ ಹೋಗಿ ಭಟ್ಟರನ್ನು ಜತೆಯಲ್ಲಿ ಕರೆದುಕೊಂಡು ಚಂದ್ರಶೇಖರನ ಮನೆಗೆ ಬಂದ.

ಭಟ್ಟರಿಗೆ ಚಂದ್ರಶೇಖರನೇ ಸ್ವಾಗತ ಬಯಸಿದ.

ಭಟ್ಟರು ನರಸಮ್ಮ, ಪಾರ್ವತಿಯನ್ನು ಮಾತನಾಡಿಸಿ ಎಲ್ಲರಿಗೂ ಸೀತಾರಾಮನ ಪರಿಚಯಮಾಡಿಕೊಟ್ಟರು.

ನರಸಮ್ಮ ಆನಂದಭಾಷ್ಪ ಸುರಿಸುತ್ತ

"ನಮ್ಮನ್ನೆಲ್ಲಾ ನೀವು ಮರೆತುಬಿಟ್ಟರಿ ಎಂದು ತಿಳಿದಿದ್ದೆ ಅಣ್ಣಯ್ಯಾ" ಎಂದಳು.

"ಮರೆಯುವುದಕ್ಕೆ ಹೇಗೆ ಸಾಧ್ಯ ತಾಯಿ."

"ತುಮಕೂರಿಗೆ ಹೋಗಿ ಬಂದಿರಾ ಭಟ್ಟರೇ" ಎಂದು ಚಂದ್ರಶೇಖರ ಕೇಳಿದ.

"ಇಲ್ಲಪ್ಪಾ. ಶೃಂಗೇರಿಯಿಂದ ನೇರವಾಗಿ ಇಲ್ಲಿಗೇ ಬಂದೆ. ನಿಮ್ಮನ್ನು ನೋಡಿಕೊಂಡು ತುಮಕೂರು, ರುದ್ರಾಕ್ಷಿಪುರಕ್ಕೆ ಹೋಗಿ, ಶೃಂಗೇರಿ ಸೇರುತ್ತೇನೆ.

"ನಮ್ಮ ಮನೆ ಹೇಗೆ ಗೊತ್ತಾಯಿತು."

"ನಿಮ್ಮ ತಂದೆ ತಿಳಿಸಿದ್ದರು. ನಿಮ್ಮೆಲ್ಲರ ಯೋಗಕ್ಷೇಮ ಆಗಿಂದಾಗ್ಗೆ ಅವರಿಂದ ತಿಳಿಯುತ್ತಿರುತ್ತದೆ."

"ನೀವು ಒಂದು ಕಾಗದ ಹಾಕಿದ್ದರೆ ನಾನು ಸ್ಟೇಷನ್ನಿಗೆ ಬರುತ್ತಿದ್ದೆನಲ್ಲಾ ಭಟ್ಟರೇ."

"ನಿನಗೇಕಪ್ಪಾ ತೊಂದರೆ. ಕಣ್ಣು ಕುರುಡಾದರೆ ಬಾಯಿ ಕುರುಡೇ– ನಾವು ರೈಲಿನಲ್ಲಿ ಬರಲಿಲ್ಲ—ಬಸ್ಸಿನಲ್ಲಿ ಬಂದೆವು."

"ಏಳಿ ಅಣ್ಣಯ್ಯ—ಮೊದಲು ಸ್ನಾನ ಊಟವಾಗಲಿ—ಆಮೇಲೆ ಎಲ್ಲಾ ವಿಷಯ ಹೇಳುವಿರಂತೆ" ಎಂದು ನರಸಮ್ಮ ಉಪಚರಿಸಿದಳು.

ಭಟ್ಟರು, ಸೀತಾರಾಮು ಸ್ನಾನ, ಪೂಜೆ ಮುಗಿಸುವುದರಲ್ಲಿ ನರಸಮ್ಮ ಅನ್ನ, ಮೆಂತ್ಯದ ಹಿಟ್ಟಿನ ಗೊಜ್ಜು ಮಾಡಿ, ಹಪ್ಪಳ ಸಂಡಿಗೆ ಕರೆದಳು.

ಸೀತಾರಾಮೂಗೆ ವಿಪರೀತ ಹಸಿವಾಗಿತ್ತು. ಅವನಿಗೆ ಧಾರಾಳವಾಗಿ ಬಡಿಸುತ್ತ ನರಸಮ್ಮ

"ನಿಧಾನವಾಗಿ ಊಟ ಮಾಡಪ್ಪಾ—ಬೆಳಿಗ್ಗೆ ಎಷ್ಟು ಹೊತ್ತಿಗೆ ಊಟ ಮಾಡಿದ್ದೋ ಏನೋ" ಎಂದು ಹೇಳಿ,

"ಅಪರೂಪಕ್ಕೆ ನೀವು ಬಂದರೆ, ಎಂಥಾ ಕೆಟ್ಟ ಅಡಿಗೆಮಾಡಿ ಬಡಿಸುತ್ತಿದ್ದೇನೆ ನೋಡಿ ಅಣ್ಣಯ್ಯಾ" ಎಂದಳು.

"ಕೆಟ್ಟದ್ದೇನು ಬಂತು ತಾಯಿ. ಭಗವಂತ ಪ್ರಸಾದರೂಪವಾಗಿ ಕರುಣಿಸುವುದು ಅಮೃತಾನ್ನವೇ."

"ನಿಮ್ಮ ಮೊಮ್ಮಗಳ ಮನೆಯಲ್ಲೇ ಊಟಮಾಡುವುದಾಗಿ ಶಪಥ ಮಾಡಿದ್ದಿರಾ ಅಣ್ಣಯ್ಯ."

"ಏಕಮ್ಮಾ ?"

"ರುದ್ರಾಕ್ಷಿಪುರದಲ್ಲಿ ಒಪ್ಪತ್ತೂ ನಮ್ಮ ಮನೆಯಲ್ಲಿ ನೀವು ಊಟ ಮಾಡಲಿಲ್ಲ."

"ಅದೂ ನನ್ನ ಮನೆ—ಇದೂ ನನ್ನ ಮನೆ. ಎಲ್ಲಿ ಊಟ ಮಾಡಿದ ರೇನಮ್ಮಾ" ಎಂದು ಚಂದ್ರಶೇಖರನ ಕಡೆ ತಿರುಗಿ,

"ದೊಡ್ಡ ಲಾಯರಾದೆ—ಬಡವರನ್ನ ಮರೆಯಬೇಡಪ್ಪ."

"ನಾನಿನ್ನು ದೊಡ್ಡಲಾಯರಾಗಿಲ್ಲ ಭಟ್ಟರೇ. ಶ್ರೀನಿವಾಸರಾಯರ ಕಛೇರಿಯಲ್ಲಿಯೇ ಜ್ಯೂನಿಯರ್ ಆಗಿದ್ದೀನಿ. ನಿಮ್ಮ ಆಶೀರ್ವಾದವಿದ್ದರೆ ಸ್ವತಂತ್ರಕಛೇರಿ ತೆಗೆಯುತ್ತೇನೆ.

"ಭಗವದನುಗ್ರಹದಿಂದ ಎಲ್ಲಾ ಅನುಕೂಲವಾಗತ್ತೆ ಚಂದ್ರಣ್ಣ—ಯೋಚನೆಮಾಡಬೇಡ."

ಊಟವುಗಿದ ಮೇಲೆ ಭಟ್ಟರು ಎಲ್ಲರನ್ನು ಸುತ್ತಕೂಡಿಸಿಕೊಂಡು ಶೃಂಗೇರಿಯ ಐತಿಹ್ಯ, ಗುರುಮಹಿಮೆಗಳನ್ನು ಸವಿಸ್ತಾರವಾಗಿ ನಿರೂಪಿಸಿದರು.

"ನನಗೆ ಶೃಂಗೇರಿಯಾತ್ರೆ ಮಾಡಿಸಲ್ಲವೇ ಅಣ್ಣಯ್ಯಾ" ಎಂದು ನರಸಮ್ಮ ಪ್ರಾರ್ಥಿಸಿದಳು.

"ಭಗವಂತ ಮನಸ್ಸು ಮಾಡಿದರೆ ಯಾವುದು ಸಾಧ್ಯವಿಲ್ಲ ತಾಯಿ—ಚಂದ್ರಣ್ಣಾ, ತುಮಕೂರಿನ ಜಿಲ್ಲಾಧಿಕಾರಿಗಳಾಗಿದ್ದರಲ್ಲಾ ಜಬ್ಬಾರ್ ಸಾಹೇಬರು ಈಗ ಇಲ್ಲಿಯೇ ಇದ್ದಾರಂತೆ. ನಿನಗೆ ಅವರ ಮನೆ ಗೊತ್ತೇ ?" ಎಂದು ಕೇಳಿದರು.

"ಬಸವನಗುಡಿ ಮುಸ್ಲಿಮ್ ಬ್ಲಾಕಿನಲ್ಲಿದ್ದಾರೆಂದು ಕೇಳಿದ್ದೇನೆ. ಬೆಳಿಗ್ಗೆ ವಿಚಾರಿಸೋಣ."

"ಬೆಳಿಗ್ಗೆ ಅವರನ್ನು ಕಂಡುಬಿಟ್ಟರೆ ಮಧ್ಯಾಹ್ನ ನಾವು ತುಮಕೂರಿಗೆ ಪ್ರಯಾಣ ಮಾಡಬಹುದು."

"ನಾಳೆ ನೀವು ಖಂಡಿತ ಹೊರಡಕೂಡದು." ಎಂದು ನರಸಮ್ಮ ಹಟ ಹಿಡಿದಳು. ಚಂದ್ರಶೇಖರನೂ ಅವಳ ಅಭಿಪ್ರಾಯವನ್ನು ಪುಷ್ಟೀಕರಿಸುತ್ತ

"ಪ್ರಯಾಣದ ಆಯಾಸ ಕೂಡ ಪರಿಹಾರವಾಗಿಲ್ಲ. ಈಗಲೇ ಹೊರಡುವುದೆಂದರೇನು ಭಟ್ಟರೇ ?" ಎಂದು ಕೇಳಿದ.

"ಗುರುಗಳು ಈ ಹುಡುಗನ ಜವಾಬ್ದಾರಿ ನನ್ನ ಮೇಲೆ ಹಾಕಿದ್ದಾರಪ್ಪಾ. ನನ್ನಿಂದ ಇವನ ಪಾಠಪ್ರವಚನಕ್ಕೆ ಅಡ್ಡಿಯಾಗಬಾರದು."

"ಇಲ್ಲೇ ಪಾಠ ಹೇಳಿ."

"ಉಂಡ ಬ್ರಾಹ್ಮಣನ ಕೈಯಲ್ಲಿ ಏನಾದರೂ ಕೆಲಸವಾಗುತ್ತದೆಯೇ ಚಂದ್ರಣ್ಣ—ಒಂದು ಕೆಲಸ ಮಾಡೋಣ. ನಾಳೆ ಇಲ್ಲೇ ಇದ್ದು ಬಿಡುತ್ತೇನೆ. ನಾಡಿದ್ದು ಬೆಳಿಗ್ಗೆ ನಮ್ಮನ್ನು ಮೊದಲನೆ ಬಸ್ಸಿನಲ್ಲಿ ಕೂಡಿಸಿಬಿಡು."

ಭಟ್ಟರ 'ಖಾಜಿನ್ಯಾಯ' ಕ್ಕೆ ಎಲ್ಲರೂ ಸಮ್ಮತಿಸಬೇಕಾಯಿತು.

ಬೆಳಿಗ್ಗೆ ಸೀನಿಯರ್ (Senior) ಅಪ್ಪಣೆ ಪಡೆದು ಚಂದ್ರಶೇಖರನೇ ಭಟ್ಟರನ್ನೂ ಸೀತಾರಾಮುವನ್ನೂ ಕರೆದುಕೊಂಡು ಹೊರಟ.

ಬಸವನಗುಡಿ ಮುಸ್ಲಿಮ್ ಬ್ಲಾಕಿನಲ್ಲಿ ಜಬ್ಬಾರ್ ಸಾಹೇಬರ ಮನೆ ಪತ್ತೆಮಾಡುವುದು ಕಷ್ಟವಾಗಲಿಲ್ಲ. ಮನೆಯ ಕಾಂಪೌಂಡಿನಲ್ಲಿ ಶತಪಥ ಸುತ್ತುತ್ತಾ ಬಂದಿದ್ದವರೊಂದಿಗೆ ಮಾತನಾಡುತ್ತಿದ್ದ ರೆವಿನ್ಯೂ ಕಮಿಷನರ್ ಸಾಹೇಬರು ಭಟ್ಟರನ್ನು ಕಂಡೊಡನೆಯೇ ವಿನಯ, ಗೌರವದಿಂದ ಮಾತನಾಡಿಸಿ ಅವರನ್ನು ಒಳಕ್ಕೆ ಕರೆದೊಯ್ದರು.

ಈ ಸೋಜಿಗ ಕಂಡು ಸಾಹೇಬರ ದರ್ಶನಕ್ಕೆ ಬಂದಿದ್ದ ಡಿ. ಸಿ. ಗಳು, ಎಸ್. ಡಿ. ಒ. ಗಳು ಅಮಲ್ದಾರರು ಬೆಕ್ಕಸ ಬೆರಗಾದರು. ಒಂದು ಜಿಲ್ಲೆಯ ಎಸ್. ಡಿ. ಒ. ಇನ್ನೊಂದು ಜಿಲ್ಲೆಯ ಎಸ್. ಡಿ. ಒ. ಗೆ ಪಿಸುಮಾತಿನಲ್ಲಿ 'ಕಲಿಗಾಲ! ಇಮಾಂಸಾಹೇಬರಿಗೂ ಗೋಕುಲಾಷ್ಟಮಿಗೂ ಗಂಟು ಬಿದ್ದಿದೆ' ಎಂದ. ಇನ್ನೊಬ್ಬ ಎಸ್. ಡಿ. ಒ. 'ಇಮಾಂಸಾಹೇಬರಿಗಲ್ಲ—ಜಬ್ಬಾರ್ ಸಾಹೇಬರಿಗೆ' ಎಂದು ತಿದ್ದುಪಡಿ ಸೂಚಿಸಿದ.

ವರಾಂಡಕ್ಕೆ ಹೋದೊಡನೆಯೇ ಭಟ್ಟರು ಚಂದ್ರಶೇಖರ, ಸೀತಾರಾಮುವನ್ನು ಸಾಹೇಬರಿಗೆ ಪರಿಚಯ ಮಾಡಿಕೊಟ್ಟರು. ಸಾಹೇಬರು ಸೌಜನ್ಯದಿಂದ

"ಇವರ ಮದುವೆಗೆ ನಾನು ಬಂದಿತ್ತಿಲ್ಲವೇ ?—ಈಗ ಇಲ್ಲೇ ಪ್ರಾಕ್ಟೀಸು ಮಾಡುತ್ತಿರುವಿರಾ ?"

"ಶ್ರೀನಿವಾಸರಾಯರ ಕಛೇರಿಯಲ್ಲಿ ಜ್ಯೂನಿಯರ್ ಆಗಿದ್ದೇನೆ. ಸದ್ಯದಲ್ಲಿಯೇ ಸ್ವತಂತ್ರ ಕಛೇರಿ ತೆಗೆಯುವ ಉದ್ದೇಶವಿದೆ."

"ಒಂದೆರಡು ವರ್ಷ ಶ್ರೀನಿವಾಸರಾಯರ ಜತೆ ಇರುವುದು ಒಳ್ಳೆಯದು. ಅವರು ತುಂಬ ದಕ್ಷರು ಮಾತ್ರವೇ ಅಲ್ಲ ಗುಣಾಢ್ಯರೂ ಹೌದು. ರೆವಿನ್ಯೂ ಕೇಸುಗಳಿಗೆ ನನ್ನ ಮುಂದೆ ಹಾಜರಾಗುತ್ತಾರೆ. ಅನ್ಯಾಯದ ಪಕ್ಷ ಅವರು ವಹಿಸಿದ್ದು ನಾನು ಕಂಡೇ ಇಲ್ಲ. ಇಂದಲ್ಲ ನಾಳೆ ಅವರು ನಮ್ಮ ಹೈಕೋರ್ಟ್ ಅಲಂಕರಿಸುವುದರಲ್ಲಿ ಸಂದೇಹವೇ ಇಲ್ಲ."

ಸೀತಾರಾಮೂಗೂ ಕುಶಲಪ್ರಶ್ನೆ ಮಾಡಿ

"ನೀವು ಬಹಳ ಪುಣ್ಯವಂತರು. ಶ್ರೀ ಗುರುಗಳ ಸನ್ನಿಧಿಯಲ್ಲಿ ನಮ್ಮ ಶಾಸ್ತ್ರಿಗಳಂಥ ಮಹಾನುಭಾವರಿಂದ ಶಿಕ್ಷಣ ಪಡೆಯುತ್ತಿರುವಿರಿ. ಹಿಂದೂ ಮಠಗಳು, ದೇವಸ್ಥಾನಗಳು, ಗುರುಮನೆಗಳ ಬಗ್ಗೆ ನಾನು ಟೀಕೆ ಮಾಡು ತ್ತಿದ್ದೇನೆಂದು ಭಾವಿಸಬೇಡಿ. ಅವುಗಳ ಅಭ್ಯುದಯದಲ್ಲಿ ನಾನು ಹಿಂದುಗ ಳಷ್ಟೇ ಉತ್ಸುಕನಾಗಿದ್ದೇನೆ. ಇಸ್ಲಾಂ ಜಾತಿಯಲ್ಲಿ ಹುಟ್ಟಿ, ಮಸೀದಿಗೆ ಹೋಗುತ್ತೇನೆಂಬ ಕಾರಣದಿಂದ ನನ್ನ ಭಾರತೀಯತ್ವಕ್ಕೆ ಕುಂದು ಬರುವುದಿಲ್ಲ. ನೋಡಿ–ನನ್ನ ಹಿರಿಯರು ಹಿಂದುಗಳಾಗಿಯೇ ಇದ್ದರು. ಪ್ರಾಯಶಃ ಟಿಪ್ಪುಸುಲ್ತಾನರ ಕಾಲದಲ್ಲಿ ಅವರು ಇಸ್ಲಾಂ ಧರ್ಮಕ್ಕೆ ಪರಿವರ್ತನೆ ಹೊಂದಿ ರಬೇಕು. ನನ್ನ ಸಂಪರ್ಕ, ಸಹವಾಸ, ಸ್ನೇಹವೆಲ್ಲಾ ಹಿಂದುಗಳ ಜತೆಯ ಲ್ಲಿಯೇ. ಹೈಸ್ಕೂಲು, ಕಾಲೇಜಿನಲ್ಲಿ ನನ್ನ ದ್ವಿತೀಯ ಭಾಷೆ ಕನ್ನಡ. ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ ಆಶುಭಾಷಣ ಸ್ಪರ್ಧೆ, ಪ್ರಬಂಧಲೇಖನ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದೇನೆ. ಸ್ವರ್ಗವಾಸಿ ಕಾನಕಾನಹಳ್ಳಿ ವರದಾಚಾರ್ಯರ ಶಿಷ್ಯರಲ್ಲಿ ನಾನೂ ಒಬ್ಬನಾಗಿದ್ದೆ–ದೊಡ್ಡ ಸ್ಥಾನದಲ್ಲಿರುವ ನೀವು ಹಿರಿಯರಿಗೆ ಗೌರವಬರುವ ರೀತಿಯಲ್ಲಿ ಜೀವನ ಬೆಳಸಿಕೊಂಡು ಲೋಕಸೇವೆ ಮಾಡಬೇಕು. ನಾನು ಹೇಳಿದ್ದರಲ್ಲಿ ಏನಾದರೂ ತಪ್ಪಿದೆಯೇ ಶಾಸ್ತ್ರಿಗಳೇ?"

"ಹಿಂದುವಾಗಲಿ ಮುಸಲ್ಮಾನನಾಗಲಿ ಯಾರು ಹೇಳಿದರೂ ದೊಡ್ಡ ಮಾತು ದೊಡ್ಡಮಾತಲ್ಲವೇ?—ಸೀತಾರಾಮು, ಇವರ ಧರ್ಮದಲ್ಲಿ ಇವರು ಗುರುಸ್ಥಾನೀಯರಪ್ಪಾ–ಹಾಜಿಗಳುಪವಿತ್ರ. ಮೆಕ್ಕಾಕ್ಷೇತ್ರಕ್ಕೆ ಯಾತ್ರೆ ಹೋಗಿ ಬಂದಿದ್ದಾರೆ. ಹಜರತ್ ಮಹಮದ್ ಪೈಗಂಬರರಂತೆ (ಅವರ

ಆತ್ಮಕ್ಕೆ ಶಾಂತಿಯಿರಲಿ) ನಿರಾಡಂಬರಮೂರ್ತಿಗಳಾದ ಕರ್ಮಯೋಗಿಗಳಾಗಿದ್ದಾರೆ. ಹಾಜಿಸಾಹೇಬರು ಆಶೀರ್ವಾದ ಮಾಡಿದ್ದಾರೆ–ನಿನಗೆ ಮಂಗಳವಾಗುತ್ತದೆ."

"ಯಾವದೋ ಮೂಲಿಕೆಯ ಸ್ಪರ್ಶದಿಂದ ಕಬ್ಬಿಣ ಚಿನ್ನವಾಗುತ್ತದಂತೆ ಶಾಸ್ತ್ರಿಗಳೇ."

ಎಂದು ಹೇಳಿ ಭಟ್ಟರನ್ನು ಒಳಕ್ಕೆ ಕರೆದೊಯ್ದರು

ಜಬ್ಬಾರ್ ಸಾಹೇಬರು, ಬೀಗಂ ಸಾಹೀಬಾ, ಫಾತೀಮಾ, ಭಟ್ಟರ ಸುತ್ತ ಕುಳಿತು ಅವರ ಯೋಗಕ್ಷೇಮ ವಿಚಾರಿಸಿದರು. ತಾವು ರುದ್ರಾಕ್ಷಿಪುರ ಬಿಟ್ಟ ಹೊತ್ತಿನಿಂದ ಅಂದಿನವರೆಗಾದುದನ್ನೆಲ್ಲಾ ಭಟ್ಟರು ವರದಿ ಒಪ್ಪಿಸಬೇಕಾಯಿತು.

"ಇಲ್ಲಿಗೇ ಬಂದುಬಿಡಿ ತಾತಾ" ಎಂದು ಫಾತೀಮಾ ಗೋಗರೆದಳು.

"ಏಕಮ್ಮ, ನಿತ್ಯ ನನಗೆ ಮಿಠಾಯಿ ಕೊಡುತ್ತಿಯೇನು ಹೇಳು."

"ಖಂಡಿತ ಕೊಡುತ್ತೇನೆ. ನನ್ನ ಭಾಗದ ಮಿಠಾಯಿಯನ್ನೂ ನಿಮಗೇ ಕೊಡುತ್ತೇನೆ."

"ನಿನ್ನ ಬಾಯಿ ಸಕ್ಕರೆಯಾಗ! ಎಷ್ಟು ಚೆನ್ನಾಗಿ ಮಾತನಾಡುತ್ತೀ ನನ್ನ ಕಂದ!"

"ಅಣ್ಣಾ, ಈ ವಯಸ್ಸಿನಲ್ಲಿ ಅಷ್ಟು ದೂರವಿದ್ದುಕೊಂಡು ಏಕೆ ಕಷ್ಟಪಡುತ್ತಿರುವಿರಿ ?"

ಎಂದು ಬೀಗಂ ಸಾಹೀಬಾ ಕೇಳಿದರು.

"ನನಗೆ ಸ್ವಲ್ಪವೂ ಕಷ್ಟವಿಲ್ಲ ತಾಯಿ. ಭಗವಂತ ನನಗೆ ಎಲ್ಲಾ ಅನುಕೂಲಮಾಡಿಕೊಟ್ಟಿದ್ದಾನೆ. ದೊರೆಹಾಗೆ ಇದ್ದೀನಮ್ಮ. ನನ್ನ ಶಿಷ್ಯ ಸೀತಾರಾಮು ಕಣ್ಣಲ್ಲಿ ಕಣ್ಣಿಟ್ಟು ನನ್ನ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಾನೆ."

"ನಿಮ್ಮ ಆಶೀರ್ವಾದದಿಂದ ಮಗೂ ಆರೋಗ್ಯ ಸುಧಾರಿಸಿತು–ಯಜಮಾನರಿಗೆ ದೊಡ್ಡ ಕೆಲಸವಾಯಿತು. ನಮ್ಮ ಕೃತಜ್ಞತೆ ತೋರಿಸುವುದಕ್ಕೆ ನೀವು ಅವಕಾಶವೇ ಕೊಡುವುದಿಲ್ಲ."

"ತಾಯೀ, ಯಜಮಾನರಿಗೆ ದೊಡ್ಡ ಕೆಲಸವಾದುದು ಭಗವಂತನ ಅನುಗ್ರಹದಿಂದ. ಅವರ ಧರ್ಮವೇ ಅವರನ್ನು ಕಾಪಾಡುತ್ತಿದೆ–ಮುಂದೆಯೂ ಕಾಪಾಡುತ್ತದೆ. ಇದಕ್ಕೂ ದೊಡ್ಡ ಕೆಲಸವಾಗುತ್ತದೆ. ಈಗ ನೂರಾರು ಜನಕ್ಕವರು ಅಶ್ವತ್ಥವೃಕ್ಷವಾಗಿರುವಂತೆ, ನಾಳೆ ಸಾವಿರಾರು ಜನಕ್ಕೆ ಆಶ್ರಯ ದಾತರಾಗುತ್ತಾರೆ–ಇನ್ನು ಅಪ್ಪಣೆಯಾದರೆ ಬರುತ್ತೇನೆ."

ಬೀಗಂ ಸಾಹೀಬಾ ಮುಖ ಚಿಕ್ಕದುಮಾಡಿಕೊಂಡುದನ್ನು ಕಂಡು ಭಟ್ಟರು

"ಏಕೆ ತಾಯಿ ಚಿಂತೆ–ನಾನು ಪುನಃ ಬರುತ್ತೇನೆ. ಹೃದಯದ ಮಮತಾಗ್ರಂಥಿಗಳನ್ನು ಕಡಿಯಬೇಕೆಂದು ಪ್ರಯತ್ನಿಸುತ್ತೇನೆ–ಸಾಧ್ಯವಾ ಗುವುದಿಲ್ಲ. ನನ್ನ ನಿರ್ಧಾರಕ್ಕಿಂತ ನಿಮ್ಮ ಅಭಿಮಾನ ಶಕ್ತಿಯುಳ್ಳದ್ದಾಗಿದೆ."

"ಮನೆಯಲ್ಲಿ ಹೊಸ ಬೆಳ್ಳಿಯ ಲೋಟಾಯಿದೆ–ಯಾರೂ ಉಪಯೋ ಗಿಸಿಲ್ಲ. ಸ್ವಲ್ಪ ಹಾಲುಕೊಟ್ಟರೆ ಸ್ವೀಕರಿಸಬಹುದೇ ?"

ಭಟ್ಟರು ಕ್ಷಣಕಾಲ ಆಲೋಚಿಸಿ

"ಕೊಡು ತಾಯೀ–ಇಷ್ಟರಿಂದ ನನ್ನ ಜಾತಿ ಕೆಟ್ಟುಹೋಗುವುದಾದರೆ ಹೋಗಲಿ. ಹೃದಯಕ್ಕಿಂತ ಜಾತಿ ದೊಡ್ಡದೇನಲ್ಲ!" ಎಂದರು.

ಬೀಗಂ ಸಾಹೀಬಾ ಅವರಿಗಾದ ಆನಂದಕ್ಕೆ ಪಾರವೇ ಇರಲಿಲ್ಲ.

ಭಟ್ಟರಿಗೂ, ಹೊರಗೆ ಕುಳಿತಿದ್ದ ಚಂದ್ರಶೇಖರ, ಸೀತಾರಾಮು ಅವರಿಗೂ ಹಾಲಿನ ವಿನಿಯೋಗವಾಯಿತು. ಮೊದಲು ಅನುಮಾನಿಸಿದ ಸೀತಾರಾಮು 'ಭಟ್ಟರೂ ಸ್ವೀಕರಿಸಿದ್ದಾರೆಂದು' ತಿಳಿದಮೇಲೆ ಹಾಲು ಕುಡಿದ.

ರೆವಿನ್ಯೂಕಮಿಷನರ್ ಸಾಹೇಬರು ಭಟ್ಟರನ್ನು ಅವರ ಜತೆಯಲ್ಲಿ ಬಂದಿದ್ದವರನ್ನೂ ತಮ್ಮ ಕಾರಿನಲ್ಲಿ ಕೂಡಿಸಿ ಕಳುಹಿಸಿಕೊಟ್ಟರು. ಕಾರಿನ ಹಿಂದೆಯೇ ಎರಡು ಬುಟ್ಟಿ ಹಣ್ಣು ಚಂದ್ರಶೇಖರನ ಮನೆ ತಲುಪಿದವು.

ಎಲ್ಲರೂ ಮನೆ ಸೇರುವಷ್ಟರಲ್ಲಿ ನರಸಮ್ಮ ಹಬ್ಬದಡಿಗೆಮಾಡಿ, ಎಲೆ ಹಾಕಿ ಕಾಯುತ್ತಿದ್ದಳು. ಭಟ್ಟರು, ಸೀತಾರಾಮು ಸ್ನಾನ, ಪೂಜೆ ಮುಗಿ ಸಿದಮೇಲೆ ಎಲ್ಲರಿಗೂ ಸುಗ್ರಾಸ ಭೋಜನವಾಯಿತು.

ಸಂಜೆ ಚಂದ್ರಶೇಖರ ಆಫೀಸಿನ ದರ್ಶನ ಪಡೆದು ಬರಲು ಹೋದ. ಸೀತಾರಾಮು, ಕಾಂಪೌಂಡಿನಲ್ಲಿದ್ದ ಒಂದು ಸಂಪಿಗೆ ಮರದ ಕೆಳಗೆ ಕುಳಿತು

ತನ್ನ ಅಧ್ಯಯನ ಸಾಗಿಸಿದ್ದ. ಪಾರ್ವತಿ ಕುಮುದಕ್ಕನ ಮನೆಯಲ್ಲಿ ಹರಟೆ ಹೊಡೆಯುತ್ತಿದ್ದಳು.

"ಬೆಳಿಗ್ಗೆ ಹೊರಡಲೇ ಬೇಕೇ ಅಣ್ಣಯ್ಯ" ಎಂದು ನರಸಮ್ಮ ಕೇಳಿದಳು.

"ಅಯ್ಯೋ! ಹೋಗದೇ ಉಂಟೇ! ಬಂದಕೆಲಸವಾಯಿತಲ್ಲಮ್ಮ—ನಿಮ್ಮನ್ನೆಲ್ಲಾ ಕಣ್ತುಂಬ ನೋಡಿ ಸಂತೋಷಪಟ್ಟೆ, ಔತಣವೂ ಮಾಡಿಸಿಕೊಂಡೆ."

"ಅಳೀಮಯ್ಯನಿಗೆ ನೀವು ಒಂದು ಮಾತು ಹೇಳಬೇಕು."

"ಏನದು–ಚಂದ್ರಶೇಖರ ಮಾರ್ಗಬಿಟ್ಟು ನಡೆಯುತ್ತಿದ್ದಾನೆಯೇ?"

"ಛೆ! ಛೆ! ದೇವಸಂಥ ಮನುಷ್ಯರು—ಯಾವ ಬಾಯಲ್ಲಿ ಅವರನ್ನು ಆಕ್ಷೇಪಿಸಲಿ."

"ಹಾಗಾದರೆ ಇನ್ನೇನು ಚಿಂತೆ!"

"ನಮ್ಮ ಹುಡುಗೀದೇ ಐಬು–ಚಿಕ್ಕಂದಿನ ಮೊಂಡುತನ, ಹಟಮಾರಿತನ ಇನ್ನೂ ಹೋಗಿಲ್ಲ. ಗಂಡ ಎಂದರೆ ಅವಳಿಗೆ ಲಕ್ಷ್ಯವೇ ಇಲ್ಲ. ಮನಸ್ಸು ಬಂದ ಹಾಗೆ ಆಡುತ್ತಾಳೆ. ಹಾಗಲಕಾಯಿಗೆ ಬೇವಿನಕಾಯಿ ಬೆರತಹಾಗೆ ಪಕ್ಕದ ಮನೆ ಕುಮುದಮ್ಮನ ಸ್ನೇಹ ಬೇರೆ ಸಿಕ್ಕಿದೆ. ಅದೋ ಮಹಾ ಹಮ್ಮೀರಿ—ಮನೆ ಯಜಮಾನರ ಕೈಲಿ ಯುದ್ಧಕ್ಕೇ ನಿಂತುಬಿಡುತ್ತಾಳೆ. ಅಳೀಮಯ್ಯ ತುಂಬ ಮೆದುಗಷ್ಟರು—ಮರ್ಯಾದೆಗಂಜಿಕೊಂಡು ಬಾಯಿ ಮುಚ್ಚಿಕೊಂಡು ಸುಮ್ಮನಿರುತ್ತಾರೆ. ಅವರಿಗೆಷ್ಟು ದುಃಖವಾಗಿದೆಯೆನ್ನುವುದನ್ನು ನಾನು ಬಲ್ಲೆ—ಆದರೆ ನಾನೇನು ಮಾಡಲಿ. ಪಾತೀಗೆ ಎಷ್ಟು ಹೇಳಿದರೂ ಪ್ರಯೋಜನವಿಲ್ಲ."

"ನೋಡು ನರಸಮ್ಮ–ಇದು ನೀನು ತಿಳಿದುಕೊಂಡಿರುವಷ್ಟು ದೊಡ್ಡ ಸಮಸ್ಯೆಯಲ್ಲ. ಪಾರ್ವತಿ ವಯಸ್ಸೆಷ್ಟು ನೀನೇ ವಿಚಾರಮಾಡು. ಹೆಂಗಸಿನ ಮನಸ್ಸು ವಿಕಾಸವಾಗಬೇಕಾದರೆ ಅವಳ ಒಂದು ವೈ ಎರಡಾಗಬೇಕು. ಎಲ್ಲಾ ಕಾಲಾನುಕ್ರಮದಲ್ಲಿ ತಾನೇ ಸರಿಹೋಗುತ್ತದೆ. ಈಗ ಹೊರಗಿನವರು ಗಂಡ ಹೆಂಡತಿ ಮಾತಿನಲ್ಲಿ ಬಾಯಿಹಾಕಿದರೆ ಪಾಯಸಕ್ಕೆ ಉಪ್ಪು ಬೆರಸಿದಂತಾಗುತ್ತದೆ. ಸುಮ್ಮನಿರುವುದೇ ಈಗ ನಾನೂ ನೀನೂ ಮಾಡಬೇಕಾಗಿರುವ ಕೆಲಸ. ಚಂದ್ರಶೇಖರ ಪಾರ್ವತಿ ಜಗಳವಾಡುತ್ತಾರೆ, ನಾಳೆ ಅವರೇ

ರಾಜಿಮಾಡಿಕೊಂಡು ಸರಿಹೋಗುತ್ತಾರೆ—ಈ ಕುಮುದಮ್ಮ ಎಂಥಾವಳು ?"

"ಅವಳಲ್ಲಿ ಕೆಟ್ಟಚಾಳಿಯೇನೂ ಇಲ್ಲ. ಬಾಯಾಳಿ—ಜಗಳಗಂಟಿಕಿ—ದೊಡ್ಡವರು ಚಿಕ್ಕವರು ಎನ್ನುವ ತಾರತಮ್ಯಜ್ಞಾನವೇ ಇಲ್ಲ. ಅವಳ ಹಾಗೇ ಪಾತೂನು ಎಲ್ಲಿ ಆಗುತ್ತಾಳೋ ಎಂತಾ ನನಗೆ ಭಯವಾಗಿದೆ."

"ಭಯಪಡಬೇಡ—ದೇವರಮೇಲೆ ಭಾರಹಾಕು ನರಸಮ್ಮ. ಊರಿನ ಹೊಲಗದ್ದೆ ಉಸ್ತುವಾರಿ ಯಾರು ನೋಡಿಕೊಳ್ಳುತ್ತಿದ್ದಾರೆ ?"

"ಎಲ್ಲಾ ಗುತ್ತಿಗೆಗೆ ಕೊಟ್ಟಿದ್ದೇನೆ."

"ನೀನು ಇಲ್ಲಿಗೆ ಬಂದು ನಿಂತದ್ದು ಒಳ್ಳೆಯದಾಯಿತು" ಎಂದು ಭಟ್ಟರು ತೃಪ್ತಿವ್ಯಕ್ತಪಡಿಸಿದರು.

ರಾತ್ರಿ ಮನೆಗೆ ಹಿಂದಿರುಗಿದ್ದ ಪಾರ್ವತಿಯನ್ನು ಭಟ್ಟರು ಹತ್ತಿರ ಕೂಡಿಸಿಕೊಂಡು ಲೋಕಾಭಿರಾಮವಾಗಿ ಮಾತನಾಡುತ್ತಾ

"ನೀನೂ ನಿನ್ನ ಗಂಡ ಇಷ್ಟು ಮುಚ್ಚಟೆಯಾಗಿರುವುದನ್ನು ಕಂಡು ಸಂತೋಷವಾಯಿತು ಪಾತೂ. ಗೃಹಿಣಿಗೆ ಪತಿಯೇ ಸರ್ವಸ್ವ. ಇದು ಹಳೆಯ ಮಾತು—ಆದರೆ ಅದರ ಅರ್ಥ ಸ್ವಲ್ಪವೂ ಮಾಸಿಲ್ಲ. ನಿನ್ನ ತಾಯಿ ತುಂಬ ನೊಂದವಳು. ಅವಳಿಗೆ ಜೀವನದಲ್ಲಿರುವ ಒಂದೇ ಒಂದು ಸುಖ ವೆಂದರೆ ನಿನ್ನ ಸುಖಜೀವನ ನೋಡುವುದು. ತಾಯಿಯನ್ನೂ ಗಂಡನನ್ನೂ ಚೆನ್ನಾಗಿ ನೋಡಿಕೊಳ್ಳಮ್ಮ" ಎಂದು ಹೇಳಿದರು.

ಮಾರನೆಯ ದಿನ ಬೆಳಿಗ್ಗೆ ಭಟ್ಟರು ಸೀತಾರಾಮುವನ್ನು ಜತೆಯಲ್ಲಿ ಕರೆದುಕೊಂಡು ತುಮಕೂರಿಗೆ ಪ್ರಯಾಣಬೆಳೆಸಿದರು. ಚಂದ್ರಶೇಖರ ಬಸ್ಸಿನಲ್ಲಿ ಅವರನ್ನು ಕೂಡಿಸಿ ತನ್ನ ಕಛೇರಿಗೆ ಹೋದ.

## ೨೬

ತುಮಕೂರ್ ಬಸ್ ನಿಲ್ದಾಣದಲ್ಲಿ ಭಟ್ಟರು ಇಳಿದಕೂಡಲೆ ರುದ್ರಾಕ್ಷಿಪುರಕ್ಕೆ ಹೊರಟು ನಿಂತಿದ್ದ ಬಸ್ ಅವರ ಕಣ್ಣಿಗೆ ಬಿತ್ತು.

"ಸೀತಾರಾಮು"

"ಗುರುಗಳೇ"

"ಹಸಿವಾಗುತ್ತದೇನಪ್ಪಾ."

"ಇಲ್ಲ ಗುರುಗಳೇ."

"ಸಂಕೋಚಪಟ್ಟುಕೊಳ್ಳಬೇಡ—ಹೇಳು."

"ಬೆಳಿಗ್ಗೆ ನರಸಮ್ಮನವರು ತಿಂಡಿಕೊಟ್ಟಿದ್ದರು ಗುರುಗಳೇ-ಹಸಿವಿಲ್ಲ."

"ರುದ್ರಾಕ್ಷಿಪುರಕ್ಕೇ ಹೊರಟುಹೋಗೋಣವೇ?"

"ತುಮಕೂರಿನಲ್ಲಿ ಚಂದ್ರಶೇಖರಯ್ಯನವರ ತಂದೆ, ತಾಯಿ ನೋಡಬೇಕೆಂದಿರಿ."

"ಸಂಜೆಗೆ ಇಲ್ಲಿಗೆ ಬಂದುಬಿಟ್ಟು, ಅವರನ್ನು ನೋಡಿಕೊಂಡು ನಾಳೆ ಬೆಳಿಗ್ಗೆ ಶೃಂಗೇರಿಗೆ ಹೊರಟುಬಿಡೋಣ."

"ತಮ್ಮ ಚಿತ್ತ ಗುರುಗಳೇ"

ಎಂದು ಸೀತಾರಾಮು ಹೇಳಿದ.

ಅರ್ಧ ಗಂಟೆಯಲ್ಲಿ ಬಸ್ಸು ಭಟ್ಟರನ್ನೂ ಸೀತಾರಾಮುನನ್ನೂ ರುದ್ರಾಕ್ಷಿಪುರಕ್ಕೆ ಕರೆತಂದಿತು.

ರುದ್ರಾಕ್ಷಿಪುರ ಕಂಡಕೂಡಲೆ ಭಟ್ಟರ ಮುಖಚರ್ಯೆ ಬದಲಾದುದನ್ನು ಗಮನಿಸಿದ ಸೀತಾರಾಮು

"ಏಕೆ ಗುರುಗಳೇ?" ಎಂದು ಕೇಳಿದ.

"ಏನೇನೋ ನೆನಪುಗಳು ಬರುತ್ತಿವೆ ಸೀತಾರಾಮು. ಈ ಹಳ್ಳಿ ನನ್ನ ಮನೆತನ ಸಾಕಿತು—ನನಗೆ ಅನ್ನವಿಟ್ಟು ಕಾಪಾಡಿತು. ಭೂಮಿತಾಯಿ ಋಣ ನಾನು ಎಂದಿಗೆ ತೀರಿಸುವುದು?"

ಭಟ್ಟರ ಹಸಿಬೆಚೀಲವನ್ನು ಸೀತಾರಾಮು ಹೊತ್ತುಕೊಂಡ. ಭಟ್ಟರು ದೊಣ್ಣೆಯೂರಿಕೊಂಡು ಮುನ್ನಡೆದರು.

ಭಟ್ಟರು, ಸೀತಾರಾಮು ಶ್ರೀರಾಮದೇವರ ದೇವಸ್ಥಾನದ ಮಂಟಪ ದಲ್ಲಿ ಬಂದು ಕುಳಿತರು. ಭಟ್ಟರು ಬಂದಿರುವ ಸುದ್ದಿ ಊರಿನಲ್ಲಿ ಹಬ್ಬುವು ದಕ್ಕೆ ತಡವಾಗಲಿಲ್ಲ.

ಹನುಮಯ್ಯ ಬಂದು ಭಟ್ಟರಿಗೆ ಅಡ್ಡಬಿದ್ದು 'ಒಂದು ಕಾಗದ ಬರೆಯ ಬಾರದಾಗಿತ್ತೇ ಗುರುಗಳೇ' ಎಂದ.

ಹೊಲದ ಕಡೆ ಹೋಗಿದ್ದ ಗೌಡರು ಧಾವಿಸಿಬಂದರು. ಊರಿಗೆ ಊರೇ ಜಾತ್ರೆ ಸೇರಿತು. ರುದ್ರಶೆಟ್ಟಿ ಕಣ್ಣಿಗೆ ಬೀಳದಿರಲು ಗೌಡರ ಕಡೆ ತಿರುಗಿ ಭಟ್ಟರು

"ರುದ್ರಶೆಟ್ಟಿ ಊರಲ್ಲಿಲ್ಲವೇ?" ಎಂದು ಕೇಳಿದರು.

"ಯಾವದೋ ಕೇಸಿತ್ತಂತೆ—ಬೆಂಗಳೂರಿಗೆ ಹೋಗಿದ್ದಾನೆ."

"ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆಯೋ?"

"ಚಂದಾಕಿದ್ದಾರೆ."

ಭಟ್ಟರು ಊರಿನವರ ಯೋಗಕ್ಷೇಮ ಕೇಳುವುದಕ್ಕಾರಂಭಿಸಲು ಗೌಡರು

"ತಡೀರಪ್ಪಾ. ಸ್ವಾಮಿಗಳ ಊಟವಾಗಲಿ—ಆಮೇಲೆ ಮಾತಾಡಿದ ರಾಯ್ತು" ಎಂದು ಹೇಳಿದರು.

ಅಲ್ಲಿನ ವಾತಾವರಣ ನೋಡಿದ ಸೀತಾರಾಮು ಮೆಲ್ಲನೆ ಭಟ್ಟರ ಬಳಿಗೆ ಬಂದು

"ತಾವು ಮಾತಾಡುತ್ತಿರಿ ಗುರುಗಳೇ. ನಾನು ಅಡಿಗೆಮಾಡಿ ತಿಳಿಸು ತ್ತೇನೆ. ಸ್ನಾನಕ್ಕೇಳಬಹುದು" ಎಂದ.

ಭಟ್ಟರು ಸೀತಾರಾಮುನ ವಿವೇಕಕ್ಕೆ ತಲೆದೂಗಿದರು.

ಸಾಮಾನು, ಸರಂಜಾಮು, ತರಕಾರಿ, ಪಾತ್ರೆಗಳು, ಊಟದೆಲೆ ಎಲ್ಲವೂ ಕಾಲುಗಂಟೆಯಲ್ಲಿ ಒದಗಿದವು.

ಭಟ್ಟರು ಸಾವಕಾಶವಾಗಿ ಎಲ್ಲರ ಯೋಗಕ್ಷೇಮವನ್ನೂ ವಿಚಾರಿಸಿದರು. ಶೃಂಗೇರಿಯ ಜಗದ್ಗುರುಗಳ ವಿಷಯ ಹೇಳಿ ಎಲ್ಲರನ್ನೂ ಸಂತೋಷ ಪಡಿಸಿದರು.

ಊರಿನವರು ತೆರಳಿದ ಮೇಲೆ ಭಟ್ಟರು ಗೌಡರನ್ನು ಒಂದು ಪಕ್ಕಕ್ಕೆ ಕರೆದು

"ನಿಮಗೂ ರುದ್ರಶೆಟ್ಟರಿಗೂ ಈಗ ಹೇಗಿದೆ?" ಎಂದು ಕೇಳಿದರು.

"ಕೊಟ್ಟ ಮಾತು ಇಬ್ಬರೂ ಉಳಿಸಿಕೊಂಡು ಬರ್‍ತಿದ್ದೀವಿ ನನ್ನೊಡೆಯಾ ರುದ್ರಶೆಟ್ಟಿಯೂ ವಿಶ್ವಾಸವಾಗಿದ್ದಾನೆ. ಮಧ್ಯೆ ಮಧ್ಯೆ ಬಸ್ಶೆಟ್ಟಿ ಹನುಮ ಕಿತಾಪತಿ ಮಾಡ್ತಾರೆ. ಅವರು ಕಮಕ್ ಕಿಮಕ್ ಅನ್ನೋದಿಕ್ಕೆ ನಾವು ಅವಕಾಶ ಕೊಟ್ಟಿಲ್ಲ."

"ಇಲ್ಲಿಯ ತನಕ ನಾನು ಬಂದ ಶ್ರಮವೆಲ್ಲಾ ಪರಿಹಾರವಾಯ್ತು ಗೌಡರೇ. ಹೊಟ್ಟೆತುಂಬ ಸಂತೋಷವಾಗಿ ಊಟಮಾಡುತ್ತೇನೆ."

ಭಟ್ಟರು ಊಟ ಮುಗಿಸಿದವರೆ ಸೀತಾರಾಮು ಜತೆ ನಗರಪರ್ಯಟನಕ್ಕೆ ಹೊರಟರು. ಗೌಡರು, ರುದ್ರಶೆಟ್ಟಿ, ಬಸ್ಶೆಟ್ಟಪ್ಪ, ಹನುಮಣ್ಣ, ರಂಗ ಎಲ್ಲರ ಮನೆಯಲ್ಲಿಯೂ ಭಟ್ಟರು ತಾಂಬೂಲ ಸ್ವೀಕರಿಸಬೇಕಾಯಿತು.

ತಾವು ವಾಸವಾಗಿದ್ದ ಮನೆ, ತಾವು ಮರಕೋತಿ ಆಡುತ್ತಿದ್ದ ಮರ, ಲಗ್ಗೆಚೆಂಡು ಆಡುತ್ತಿದ್ದ ಮೈದಾನಗಳನ್ನು ತೋರಿಸಿಕೊಂಡು ಸೀತಾರಾಮುನಿಗೆ ವೀರಭದ್ರದೇವರ ದರ್ಶನ ಮಾಡಿಸಿದರು.

ಸಂಜೆ ಜಾರಿ ಮೆಲ್ಲನೆ ಇರುಳಿಗೆಡೆಕೊಡುತ್ತಿತ್ತು. ಆಗಸದ ರಕ್ತಮಿಶ್ರ ನೀಲವರ್ಣ ಶುಭ್ರನೀಲಕ್ಕೆ ತಿರುಗುತ್ತಿತ್ತು. ಹಕ್ಕಿಪಕ್ಕಿಗಳು ಕಲಕಲರವ ಮಾಡಿಕೊಂಡು ಗೂಡು ಸೇರುತ್ತಿದ್ದವು. ನಿರ್ಮಲ ಪ್ರಶಾಂತಿಯ ಗಾಢತೆಯನ್ನು ಕ್ರಿಮಿಕೀಟಗಳು ಕೆದಕಿ ಬಗೆಬಗೆಯ ಶಬ್ದಮಾಡುತ್ತಿದ್ದವು.

ಮೌನ.... ನಾದ
ಶಾಂತಿ.... ವಿಪ್ಲವ
ಗಾಯನ.... ಗಲಭೆ

ಸಮರಸ....ವಿರಸ

ಪ್ರಕೃತಿ....ವಿಕೃತಿ

ಎಲ್ಲವುಗಳೂ ಮೇಳವಿಸಿದ್ದವು.

'ಜಗತ್ತು ದ್ವಂದ್ವಮಯವೇ?'

'ದ್ವಂದಾತೀತಂ—ತ್ರಿಗುಣರಹಿತಂ ಎಂದಲ್ಲವೇ ನಾವು ಭಗವಂತನನ್ನು ಸಂಬೋಧಿಸುವುದು?'

'ಜಗತ್ತು ಭಗವಂತನ ಪ್ರತೀಕವಲ್ಲವೇ?'

ಎಂದು ವಿಚಾರಮಾಡುತ್ತಾ ಭಟ್ಟರು

"ಸೀತಾರಾಮು, ಗುರು ಶಬ್ದಾರ್ಥ ನಿನಗೆ ಗೊತ್ತೇ?" ಎಂದು ಕೇಳಿದರು.

ಭಟ್ಟರ ವಿಚಿತ್ರಪ್ರಶ್ನೆ ಕಂಡು ಸೀತಾರಾಮೂಗೆ ಆಶ್ಚರ್ಯವಾಯಿತು.

"ಗೊತ್ತು ಗುರುಗಳೇ—ಅಜ್ಞಾನವನ್ನು ಪರಿಹರಿಸುವವನು ಎಂದು ಅದರರ್ಥ."

"ಗುರುವೇ ಅಜ್ಞಾನಿಯಾಗಿದ್ದರೆ?!"

"ಗುರುವಿನ ಜ್ಞಾನಾಜ್ಞಾನ ಒರೆಹಚ್ಚುವುದು ಶಿಷ್ಯನ ಕೆಲಸವಲ್ಲ—ಯಾಕೆ ಗುರುಗಳೇ ಹೀಗೆ ಕೇಳಿದಿರಿ?"

"ಸುಮ್ಮನೆ—ಏನೋ ಮನಸ್ಸಿಗೆ ಬಂತು ಕೇಳಿದೆ."

ಭಟ್ಟರೂ, ಸೀತಾರಾಮೂ ದೇವಸ್ಥಾನ ತಲುಪುವ ವೇಳೆಗೆ ಊರಿಗೆ ಊರೇ ನೆರೆದು ಭಟ್ಟರ ದಾರಿಯನ್ನು ಎದುರುನೋಡುತ್ತಿತ್ತು.

"ಇದೇನು ಗೌಡರೇ" ಎಂದು ಭಟ್ಟರು ಅಚ್ಚರಿಗೊಂಡು ಕೇಳಿದರು.

"ನಿಮ್ಮ ಉಪದೇಶ ಕೇಳಬೇಕೆಂದು ಎಲ್ಲರೂ ಬಂದಿದ್ದಾರೆ."

"ರಾಮ ರಾಮ! ನಾನು ಉಪದೇಶ ಕೊಡುವುದೇ?—ನಿತ್ಯ ನೇಗಿಲ ಯೋಗಿಗಳಾಗಿ ತಮ್ಮ ದುಡಿಮೆಯಿಂದ ವಿಶ್ವಕ್ಕೇ ಅನ್ನ ಕಾಣಿಸುತ್ತಿರುವ ಈ ಕರ್ಮಯೋಗಿಗಳಿಗೆ ನಾನು ಉಪದೇಶ ಕೊಡುವುದೇನಿದೆ ಗೌಡರೇ!"

"ಅದೇನೋ ಸ್ವಾಮಿ—ಎಲ್ಲರೂ ಬಂದಿದ್ದಾರೆ. ನಾಲ್ಕು ಮಾತು ನೀವು ಅಪ್ಪಣೆಕೊಡಿಸಿದರೆ ಸಂತೋಷಪಡುತ್ತಾರೆ."

ಭಟ್ಟರು ಪದ್ಮಾಸನದಲ್ಲಿ ಕುಳಿತು,

**“ಯಂ ಬ್ರಹ್ಮಾವರುಣೇಂದ್ರರುದ್ರ ಮರುತಃ ಸ್ತುನ್ವಂತಿ ದಿವ್ಯೈಃಸ್ತವೈರ್ವೇದೈಃ ಸಾಂಗಪದಕ್ರಮೋಪನಿಷದೈರ್ಗಾಯಂತಿಯಂ ಸಾಮಗಾಃ || ಧ್ಯಾನಾವಸ್ಥಿತ ತದ್ಗತೇನ ಮನಸಾ ಪಶ್ಯಂತಿಯಂ ಯೋಗಿನೋ ಯಸ್ಯಾಂತಂ ನ ವಿದುಸ್ಸುರಾಸುರಗಣಾ ದೇವಾಯ ತಸ್ಮೈನಮಃ ||**

ಅಣ್ಣಗಳಿರಾ, ನಾನು ನಿಮಗೆ ಉಪದೇಶಕೊಡಬೇಕೆಂದು ಅಪ್ಪಣೆ ಮಾಡಿದ್ದಾರೆ. ಗೌಡರ ಮಾತು ಗೌರವಿಸಬೇಕಾದುದು ನನ್ನ ಕರ್ತವ್ಯ.

ಉಪದೇಶ ಕೊಡುವ ಅಧಿಕಾರ ಪಡೆದಿರುವ ಸದ್ಗುರು ಶೃಂಗೇರಿಯಲ್ಲಿದ್ದಾರೆ. ನಿಮ್ಮೆಲ್ಲರ ಹಿತಕ್ಕಾಗಿ ತಪಸ್ಸುಮಾಡುತ್ತಿದ್ದಾರೆ. ಅವರಿಂದ ನಾನು ಕಲಿತ ಒಂದೆರಡು ವಿಷಯಗಳನ್ನೇ ನಿಮಗೂ ತಿಳಿಸುತ್ತೇನೆ.

ನಮ್ಮೂರು ನೋಡಿ ನನಗೆ ಹೆಮ್ಮೆಯಾಗಿದೆ. ಒಕ್ಕಲಿಗ, ವೀರಶೈವ, ಬ್ರಾಹ್ಮಣ, ಮುಸಲ್ಮಾನ, ಕುರುಬರೆಲ್ಲರೂ ಒಮ್ಮತಿಸಮ್ಮತಿಯಿಂದ ಬಾಳ್ವೆ ಮಾಡಿಕೊಂಡು, ಪರಸ್ಪರ ನೆರವಾಗಿ, ಅಣ್ಣತಮ್ಮಂದಿರಂತೆ ಇರಬೇಕೆಂಬುದು ನನ್ನ ಆಕಾಂಕ್ಷೆಯಾಗಿತ್ತು. ಅದನ್ನು ನೀವು ಈಡೇರಿಸಿರುವಿರಿ. ಈ ಸೌಹಾರ್ದ ಚಿರಕಾಲ ಉಳಿದು, ಪುಷ್ಟವಾಗಿ ಬೆಳೆಯಲಿ.

ನಾವು ಸ್ಥೂಲವಾಗಿ ನೋಡಿದರೆ ಲೋಕದಲ್ಲಿ ಕಾಣುವುದು ದ್ವಂದ್ವ—ವಿರಸ—ಹೋರಾಟ. ಮನುಷ್ಯರು ತಾವು ಕಾದಾಡುವುದಲ್ಲದೆ ತಮ್ಮ ಮತಗಳನ್ನೂ, ದೇವರುಗಳನ್ನೂ ಕಾಳಗದ ಕಣಕ್ಕೆ ತಳ್ಳುತ್ತಾರೆ. ಹುಂಜಗಳನ್ನು ಕಾದುವುದಕ್ಕೆ ಬಿಟ್ಟು ನಾವು ನೋಡುತ್ತ ನಿಲ್ಲುವುದಿಲ್ಲವೇ ಹಾಗೆ!

ಆದರೆ ಸ್ವಲ್ಪ ನಮ್ಮ ದೃಷ್ಟಿ ಬೆಳಸಿಕೊಂಡು ನೋಡಿದರೆ ಈ ಬಗೆಯ ಜಗಳ-ವಿರಸ—ದ್ವೇಷ ಅಗತ್ಯವಿಲ್ಲ. ಒಕ್ಕಲಿಗನಿಗೆ ಅನ್ನ ಕೊಡುವ ತಾಯೇ ವೀರಶೈವನಿಗೂ ಕೊಡುತ್ತಾಳೆ; ವೀರಶೈವನಿಗೆ ಬೋನವನಿಕ್ಕುವ ತಾಯೇ ಬ್ರಾಹ್ಮಣನಿಗೂ ಅನ್ನನೀಡುತ್ತಾಳೆ. ಅದೇ ಭೂಮಿಯನ್ನು ಎಲ್ಲರೂ ಉತ್ತು, ಬಿತ್ತು ಆಹಾರ ಬೆಳೆದು ಉಪಭೋಗಿಸುತ್ತೇವೆ. ನಾವು ಪಾರ್ಥಿವ

ಶರೀರ ಕೊಡಹಿದ ಮೇಲೆ ಅದೇ ಭೂಮಿಯೇ ನಮ್ಮೆಲ್ಲರನ್ನೂ ಸ್ವೀಕರಿಸುತ್ತದೆ.

ನಮ್ಮ ಧರ್ಮ-ವೇದಾಂತ-ಹೇಳುವುದೂ ಇದೇ ಮಾತು. ಸರ್ವ ಭೂತಗಳಿಗೂ ಶ್ರೇಯಸ್ಸಾಗಬೇಕೆಂಬುದೇ ವೇದಾಂತದ ಗುರಿ. ಹಿಂದುವೊಬ್ಬನೇ ತನ್ನ ಐಹಿಕಬಂಧನಗಳಿಂದ ಪಾರಾದರೆ ಸಾಲದು. ಕ್ರೈಸ್ತ, ಮುಸಲ್ಮಾನರೂ ಬಂಧ ವಿಮುಕ್ತರಾಗಬೇಕು.

ಬಂಧವಿಮುಕ್ತಿ ಸಾಧಿಸುವುದಕ್ಕೆ ನೀವು ದೊಡ್ಡ ದೊಡ್ಡ ಗ್ರಂಥಗಳನ್ನೋದಬೇಕಾಗಿಲ್ಲ. ಮೂಗು ಹಿಡಿದು ತಪಸ್ಸುಮಾಡಬೇಕಾಗಿಲ್ಲ. ನಿಮ್ಮ ನಿತ್ಯ ಕರ್ತವ್ಯವೇ ತಪಸ್ಸು—ಅದೇ ಯಾಗ—ಯಜ್ಞ. ಮಾಡುವ ಕೆಲಸವನ್ನು ನಿಷ್ಠೆಯಿಂದ, ಭಕ್ತಿಯಿಂದ ಮಾಡಬೇಕು. ಅದರಿಂದ ಯಾರಿಗೂ ಅಹಿತವಾಗದಂತೆ ಎಚ್ಚರದಿಂದಿರಬೇಕು.

ನಾನು ನಾನಾಗಿಯೇ ಇರುತ್ತೇನೆ-ನನಗೆ ಯಾರ ಸಹಾಯ, ಸಹಾನುಭೂತಿ, ಸಂಪರ್ಕವೂ ಬೇಡ ಎನ್ನುವ ಮಾತು ಹೊಲ್ಲ. 'ಸಾರು' ಎಂದು ಒಂದು ಪದಾರ್ಥವನ್ನು ನಾವು ಕರೆಯುತ್ತೇವೆ. ಬೇಳೆಯ ಎಸರಿಗೆ ಉಪ್ಪು, ಮೆಣಸಿನಪುಡಿ ಹಾಕಿ ಸಾಸವೆ ಒಗ್ಗರಣೆ ಕೊಟ್ಟರಲ್ಲವೇ ನೀರು ಸಾರಾಗುವುದು. ಹಾಗೆಯೇ 'ನಾನು ವಸ್ತುವಿನಲ್ಲಿ ವಿಶ್ವವೇ ಅಡಗಿದೆ. ವಿಶ್ವದ ಸಮಸ್ತ ಕಷ್ಟ ಸುಖ, ಆಸೆನಿರಾಶೆ, ಅಪೇಕ್ಷೆ ನಿರಪೇಕ್ಷೆಗಳೂ ಈ 'ನಾನು' ವಿನಲ್ಲಿ ನೀರಿನಲ್ಲಿ ಉಪ್ಪು ಬೆರೆಯುವಂತೆ ಬೆರತಿವೆ. ಜೀವಾತ್ಮ ಪರಮಾತ್ಮನಾಗುವುದಕ್ಕೆ ಈ ತಿಳುವಳಿಕೆಯೇ ಅಸ್ತಿಭಾರ.

ಹೆಚ್ಚೇನು ಹೇಳಲಿ-ನನ್ನ ಹೃದಯಪಾತ್ರೆ ತುಂಬಿಹೋಗಿವೆ. ನಾನು ಹುಟ್ಟಿ ಬೆಳೆದದ್ದು ಈ ರುದ್ರಾಕ್ಷಿಪುರದಲ್ಲಿ—ನಿಮ್ಮ ಒಡನಾಡಿತನದಲ್ಲಿ. ನನ್ನ ಆಯುಷ್ಯವನ್ನು ಬಹಳ ಸುಖವಾಗಿ ಕಳೆದೆ. ಈಗ ನನ್ನ ದೈವ ಗುರು ಸನ್ನಿಧಿಗೆ ನನ್ನನ್ನು ಕರೆದೊಯ್ದಿದೆ. ಅಲ್ಲಿಯೂ ನಿಮ್ಮ ಶ್ರೇಯಃಚಿಂತನೆಯನ್ನೇ ಮಾಡುತ್ತೇನೆ. 'ಅಮ್ಮ—ನಿನ್ನ ಎಲ್ಲ ಮಕ್ಕಳಿಗೂ ಸದಸದ್ವಿವೇಕ ಕರುಣಿಸಿ ಕಾಪಾಡು' ಎಂದು ಶಾರದಾಂಬೆಯಲ್ಲಿ ಮೊರೆಯಿಡುತ್ತೇನೆ.

ಎಂದು ಹೇಳಿ ನಿಲ್ಲಿಸಿದರು.

ಶ್ರೋತೃಗಳ ಕಣ್ಣುಗಳಿಂದ ಆನಂದಾಶ್ರುಗಳು ಉದುರುತ್ತಿದ್ದವು. ಸೀತಾರಾಮು ಮೊದಲೆದ್ದು ಭಟ್ಟರಿಗೆ ನಮಸ್ಕರಿಸಿದ. ಗೌಡರೆದ್ದರು— ಅವರ ಹಿಂದೆ ಒಬ್ಬೊಬ್ಬರಾಗಿ ಎದ್ದು ಭಟ್ಟರ ಪಾದಧೂಳಿಯನ್ನು ಮುಡಿದರು.

ಭಟ್ಟರು ಕಣ್ಮುಚ್ಚಿ ಕುಳಿತು 'ತಾಯೀ, ಎಲ್ಲವೂ ನಿನಗರ್ಪಿತ' ಎಂದರು.

ಮಾರನೆಯ ಬೆಳಿಗ್ಗೆ ಭಟ್ಟರು ಸೀತಾರಾಮುನೊಂದಿಗೆ ಶೃಂಗೇರಿಗೆ ಪ್ರಯಾಣ ಬೆಳಸಿದರು.

# ೨೭

ನರಸಮ್ಮ ಬರೆಸಿದ ಕಾಗದ ನೋಡಿ ನಾಗಮ್ಮನ ಸಂತೋಷಕ್ಕೆ ಇತಿ ಮಿತಿಯೇ ಇರಲಿಲ್ಲ. ಯಜಮಾನರು ಮನೆಗೆ ಬಂದ ಕೂಡಲೆ

"ನಿಮಗೊಂದು ಸಂತೋಷ ಸಮಾಚಾರ ತಿಳಿಸಿದರೆ ನನಗೇನು ಕೊಡುತ್ತೀರಿ" ಎಂದಳು.

"ಸಮಾಚಾರ ಯಾವದು ಹೇಳು—ಕೊಡುವ ವಿಷಯ ಮುಂದೆ ಆಲೋಚಿಸೋಣ."

"ಪಾತೂ ಬಸುರಿಯಂತೆ. ಸೀಮಂತಕ್ಕೆ ಬರಬೇಕೂಂತ ನರಸಮ್ಮ ಕಾಗದ ಬರೆಸಿದ್ದಾರೆ."

ನಾಗಮ್ಮನ ಕಾಗದ ಓದುತ್ತಿದ್ದಂತೆ ಆದಿಶೇಷಯ್ಯನವರ ಮುಖವರಳಿತು.

"ಮೊಮ್ಮಗನ ಅದೃಷ್ಟಬಲದಿಂದಲಾದರೂ ಚಂದ್ರೂ ಮುಂದಕ್ಕೆ ಬಂದರೆ ಸಾಕು. ಯಶೋಧನಿಗೆ ನೀನೂ ಕಾಗದ ಬರೆದು ಹಾಕು."

"ಬೆಂಗಳೂರಿಗೆ ನಾವು ಬರಿಗೈಯಲ್ಲಿ ಹೋಗುವಂತಿಲ್ಲ."

"ಪಾತೂಗೆ ಸೀರೆ ತೆಗೆದುಕೊಳ್ಳಬೇಕಲ್ಲವೇ ?"

"ಸೀರೆ ತೊಗೋಬೇಕು—ಮನೆಗೆ ಬೇಕಾಗುವ ಸಾಮಾನು ಮಾಡಿಕೊಳ್ಳಬೇಕು."

"ಸೀರೇನೂ ಇಲ್ಲೇ ತೆಗೆದುಕೊಂಡು ಬಿಡು. ಇಲ್ಲೇ ಆದರೆ ಸಾಲವಾದರೂ ಹುಟ್ಟುತ್ತೆ.

"ನಾನೂ ನೀವೂ ಇಬ್ಬರೇ ಹೋಗಬೇಕಾಗುತ್ತದೆ."

"ಏಕೆ—ಪ್ರಭಾಕರ....?"

"ಅವನಿಗೆ ಪರೀಕ್ಷೆ ಹತ್ತಿರ ಬಂತು. ಅವನ ಊಟ, ತಿಂಡಿ ವ್ಯವಸ್ಥೆ ನಾನು ಮಾಡುತ್ತೇನೆ."

"ಚಂದ್ರೂ ತನ್ನ ಕಾಲಮೇಲೆ ತಾನು ನಿಂತುಕೊಳ್ಳುವುದು ಯಾವಾಗ? ಈಗ ಹೇಗೋ ನಡೆದುಹೋಗುತ್ತಿದೆ—ಮುಂದೇನು ಗತಿ?"

"ಈ ಸಲದ ಬೇಸಿಗೆ ರಜ ಮುಗಿದು, ಕೋರ್ಟು ಬಾಗಿಲು ಪುನಃ ತೆಗೆಯುವ ವೇಳೆಗೆ ಸ್ವತಂತ್ರವಾಗಿ ಆಫೀಸ್ ಓಪನ್ ಮಾಡ್ತಾನಂತೆ! ಚಂದ್ರೂಗೆ ದಾಕ್ಷಿಣ್ಯಕವಿಲ್ಲ. ಈ ವಕೀಲಿವೃತ್ತಿ ಟಗರಿನ ಕಾಳಗವಿದ್ದ ಹಾಗೆ!- ಈ ವೃತ್ತಿಯಲ್ಲಿ ಉದ್ಧಾರವಾಗಬೇಕಾದರೆ ಬಾಯೂ ಮುಂದಾಗಿರಬೇಕು— ಕೋಡೂ ಬಲವಾಗಿರಬೇಕು. ರೆವಿನ್ಯೂ ಕಮಿಷನರು ಜಬ್ಬಾರ್ ಸಾಹೇಬರು ಅವನ ವಿಷಯದಲ್ಲಿ ವಿಶ್ವಾಸಿಗಳಾಗಿದ್ದಾರೆ. ಅವರು ಇರುವಾಗಲೇ ಚಂದ್ರೂ ತನ್ನ ಬುಡ ಭದ್ರಮಾಡಿಕೊಳ್ಳಬಹುದು. ಭಟ್ಟರ ಮೇಲಿನ ವಿಶ್ವಾಸಕ್ಕಾಗಿ ಸಾಹೇಬರು ಚಂದ್ರೂಗೆ ಬೇಕಾದ ಸಹಾಯ ಮಾಡುತ್ತಾರೆ. ಅದನ್ನು ಉಪಯೋಗಿಸಿಕೊಳ್ಳುವ ಜಾಣತನ ಚಂದ್ರೂಲಿ ಇಲ್ಲ!"

"ಅದೇನು ಮಾಡಬೇಕೋ-ಹೇಗೆ ಮಾಡಬೇಕೋ ನೀವು ಚಂದ್ರೂಗೆ ಹೇಳಿಕೊಡಿ."

"ಶ್ರೀನಿವಾಸರಾಯರಿಗಿಂತ ಹೇಳಿಕೊಡುವವರು ಬೇಕೇ?"

"ಮಗ ಬುದ್ಧಿವಂತನಲ್ಲವೆಂದು ನೀವು ಬೇಸರಪಟ್ಟುಕೊಂಡರೆ ಏನು ಪ್ರಯೋಜನ? ದೊಡ್ಡವರು ನೀವು ಒಂದಲ್ಲ ಹತ್ತು ಸಲ ಅವನಿಗೆ ವಿವೇಕ ಹೇಳಿ ದಾರಿಗೆ ತರಬೇಕು."

"ಚಂದ್ರು ದಡ್ಡನಲ್ಲ ಕಣೇ-ಆದರೆ ಯಾವದೋ ಮಂಕು ಕವಿದು ಬಿಟ್ಟಿದೆ. ಒಬ್ಬನೇ ಕುಳಿತು ಯೋಚಿಸಿಯೇ ಯೋಚಿಸುತ್ತಾನೆ. ಕಾರಣ ವೇನೋ ಗೊತ್ತಾಗಲಿಲ್ಲ."

ನಾಗಮ್ಮನಿಗೆ ಕಾರಣ ಗೊತ್ತಿದ್ದರೂ ಗಂಡನೆದುರಿಗೆ ಹೇಳುವ ಧೈರ್ಯ ವಾಗಲಿಲ್ಲ. ಪಾರ್ವತಿಯನ್ನು ತಂದುಕೊಳ್ಳುವ ವಿಷಯದಲ್ಲಿ ಆದಿಶೇಷಯ್ಯ ನವರು ಮೊದಲಿಂದಲೂ ಉತ್ಸುಕರಾಗಿರಲಿಲ್ಲ; ನಾಗಮ್ಮನ ಬಲವಂತಕ್ಕೆ ಕಟ್ಟುಬಿದ್ದೇ ಅವರು ಸಮ್ಮತಿಸಿದುದು. ಪಾರ್ವತಿಯಿಂದ ಚಂದ್ರಶೇಖರನಿಗೆ

ಮಂಕು ಮುಚ್ಚಿಕೊಂಡಿತೆಂದು ತಿಳಿದರೆ ಪರಿಣಾಮ ವಿಪರೀತವಾಗಬಹು ದೆಂದು ನಾಗಮ್ಮ ಅಂಜಿದಳು.

ಸೀಮಂತ ಮಹೋತ್ಸವದಲ್ಲಿ ಕುಮುದಮ್ಮನ ಓಡಾಟವೇ ಓಡಾಟ. 'ಬಸುರಿ ಹೆಂಗಸು ಅವಳ ಮನಸ್ಸು ಏಕೆ ನೊಯ್ಯಬೇಕು' ಎಂದುಕೊಂಡು ನಾಗಮ್ಮ ಯಾವುದಕ್ಕೂ ಬಾಯಿಹಾಕಲಿಲ್ಲ. ಬೀಗಿತ್ತಿ ಮನಸ್ಸಿಗೆಲ್ಲಿ ಬೇಸರ ಪಟ್ಟುಕೊಂಡಿದ್ದಾರೋ ಎಂಬ ಯೋಚನೆ ನರಸಮ್ಮನನ್ನು ಕಾಡತೊಡಗಿತು.

ಆರತಿ ಅಕ್ಷತೆಯಾದ ಮಾರನೆಯ ದಿನ ಬಲವಂತದಿಂದ ನರಸಮ್ಮ ಬೀಗರನ್ನು ಉಳಿಸಿಕೊಂಡಳು. 'ಕೋರ್ಟು ಹೋಗುತ್ತದೆಂದು' ಆದಿಶೇಷಯ್ಯ ಚಡಪಡಿಸಲಾರಂಭಿಸಿದರು. ಯಶೋದೆಯೂ ಹೊರಟು ನಿಂತಳು. ತಂಗಿ ನಾಲ್ಕು ದಿವಸ ಇದ್ದು ಹೋಗಲೇಬೇಕೆಂದು ಚಂದ್ರಶೇಖರನೇ ಪಟಹಿಡಿದ. ಯಶೋದೆಯನ್ನು ಬೆಂಗಳೂರಿನಲ್ಲೇ ಬಿಟ್ಟು ಆದಿಶೇಷಯ್ಯ, ನಾಗಮ್ಮ ತುಮಕೂರಿಗೆ ಪ್ರಯಾಣಮಾಡಿದರು.

ಚಂದ್ರಣ್ಣನನ್ನು ಕಂಡರೆ ಯಶೋಧೆಗೆ ಪಂಚಪ್ರಾಣ. ಯಶೋದೆ, ಚಂದ್ರಶೇಖರ ಓರಗೆಯುವರಾಗಿದ್ದುದರಿಂದ ಅವರಲ್ಲಿ ಹೆಚ್ಚಿನ ಮೈತ್ರಿ ಬೆಳೆದಿತ್ತು. 'ಪ್ರಭಾಕರ ಗುರುಂಘಾತಕ, ಚಂದ್ರಣ್ಣನ ಹಾಗಲ್ಲ. ಚಂದ್ರಣ್ಣನ ಮನಸ್ಸು ಹಾಲಿನಂತೆ ಶುಭ್ರ, ನೀರಿನಂತೆ ತಿಳಿ' ಎಂದು ಯಶೋದೆ ಹೊಗಳಿದರೆ ಅವಳ ಗಂಡ ವೆಂಕಟರಾಮಯ್ಯ 'ನಿಮ್ಮಣ್ಣ ಒಬ್ಬನೇ ಸ್ವರ್ಗ ದಿಂದ ಇಳಿದುಬಂದಿದ್ದಾನೆ ಕಣೇ' ಎಂದು ಹಾಸ್ಯಮಾಡುತ್ತಿದ್ದ.

ವೆಂಕಟರಾಮಯ್ಯನಿಗೂ ಚಂದ್ರಶೇಖರನನ್ನು ಕಂಡರೆ ವಿಶ್ವಾಸವಿತ್ತು.

"ಶಿವಮೊಗ್ಗೆಗೇ ಬಂದು ಅಲ್ಲೇ ಬೋರ್ಡ್ ಹಾಕು ಚಂದ್ರೂ-ನಾನು ಹೇಗೂ ಮೈಸೂರ್ ಬ್ಯಾಂಕ್ ಅಕೌಂಟೆಂಟ್-ನನ್ನ ಕಕ್ಷಿಗಾರರಿಗೆ ಹೇಳಿ ನಿನಗೆ ಕೇಸು ಕೊಡಿಸುತ್ತೇನೆ."

"ನೀನೇನು ಶಿವಮೊಗ್ಗೆಯ ಸರ್ವಾಧಿಕಾರಿ ಎಂದು ತಿಳಿದುಕೊಂಡಿದ್ದೀ ಯೇನಯ್ಯಾ ?"

"ನಮ್ಮ ಬ್ಯಾಂಕಿನ ಒಬ್ಬ ಆಳು ಶಿವಮೊಗ್ಗೆಯ ಸಾಹುಕಾರರನ್ನೆಲ್ಲಾ ನಡುಗಿಸಬಲ್ಲ ಚಂದ್ರೂ—ಇಡಿಯ ಸಂಸ್ಥಾನದ ಸೂತ್ರವೆಲ್ಲಾ ಬ್ಯಾಂಕಿನ ಕೈಯಲ್ಲಿರುತ್ತದೆ. ದೊಡ್ಡದೊಡ್ಡ ಅಧಿಕಾರಿಗಳು, ಶ್ರೀಮಂತರು, ಸಾಹು

ಕಾರರು, ಸಾರ್ವಜನಿಕ ಮುಖಂಡರು ಇವರ ಹಣೇಬರಹ ನವುಗೆ ಗೊತ್ತಿರುವಂತೆ ಯಾರಿಗೂ ಗೊತ್ತಿರುವುದಿಲ್ಲ. ಏನು ಹೇಳು—ನೀನು ಹೂ ಅನ್ನು- ಮುಂದಿನ ವಿಷಯ ನನಗಿರಲಿ."

"ಶ್ರೀನಿವಾಸರಾಯರ ಆಫೀಸಿನ ಟರ್ಮ್ ಮುಗಿಯಬೇಕು ವೆಂಕಟರಾಮು. ನಾನು ಬೆಂಗಳೂರಿನಲ್ಲಿಯೇ ಪ್ರ್ಯಾಕ್ಟೀಸ್ ಮಾಡಿ ಕೀರ್ತಿಗಳಿಸಬೇಕೆಂದು ತಂದೆಯವರ ಅಭಿಲಾಷೆ."

ಅಣ್ಣನ ಮಾತಿಗೆ ಕಟ್ಟುಬಿದ್ದು ನಾಲ್ಕುದಿನ ಬೆಂಗಳೂರಿನಲ್ಲಿ ನಿಲ್ಲಲು ಯಶೋದಾ ಒಪ್ಪಿಕೊಂಡಿದ್ದಳು. ತಂದೆ, ತಾಯಿ ಊರಿಗೆ ಪ್ರಯಾಣ ಬೆಳಸಿದ ಮಾರನೆಯ ದಿನವೇ ಅವಳಿಗೆ ಶಿವಮೊಗ್ಗೆಯ ಚಿಂತೆ ಆರಂಭವಾಯಿತು.

"ನಾನು ನಾಳೆ ಹೊರಟುಬಿಡುತ್ತೇನೆ ಅಣ್ಣಯ್ಯಾ."

"ನಾಳೆ ಶುಕ್ರವಾರ-ಅಣ್ಣನ ಮನೆಗೆ ಒಳ್ಳೆಯ ಶುಭವಾಗುತ್ತದೆ."

"ನಾಡಿದ್ದು ಹೊರಡಬಹುದಷ್ಟೆ!"

"ನಿನ್ನ ಗಂಡ ಎಲ್ಲೂ ಓಡಿಹೋಗಲ್ಲ—ನಾಲ್ಕುದಿನ ಚಿತ್ತಶುದ್ಧಿಯಿಂದ ಇರಮ್ಮ.

"ಹಾಗಲ್ಲ ಚಂದ್ರಣ್ಣ—ಪಾಪ, ಅವರೇ ಅಡಿಗೆಮಾಡಿಕೊಳ್ಳುತ್ತಾರೆ."

"ಅಯ್ಯೋ ಪಾಪ! ವೆಂಕಟರಾಮು ಕೈಗಳಿಗೆ ಚಿನ್ನದ ಮುಲಾಮು ಹಾಕಿದೆ—ಸವೆದು ಹೋಗುತ್ತದೆ. ಗಂಡ ಹೆಂಡತಿ ನೀವು ಒಬ್ಬರ ಮುಂದೆ ಒಬ್ಬರು ಕುಳಿತಿದ್ದರೆ ಸಾಕು—ಪ್ರಪಂಚವೇ ಮರೆತುಹೋಗುತ್ತದೆ."

"ಹೋಗಣ್ಣಾ-ನೀನೂ ಹೀಗಂತಿ. 'ನಿಮ್ಮಣ್ಣ ಇದ್ದರೆ ಸಾಕು ನಿನಗೆ ಯಾರೂ ಬೇಕಾಗಿಲ್ಲ' ಎಂದು ಅವರೂ ಛಡಾಯಿಸುತ್ತಾರೆ."

"ಯಶೋದಾ ನೀನು ಬಲು ಭಾಗ್ಯವಂತೆ ಕಣೇ ತಾಯಿ."

"ಏಕಣ್ಣಾ."

"ವೆಂಕಟರಾಮು ಅಂಥಾ ಗಂಡ ಸಿಕ್ಕಬೇಕಾದರೆ ಎಷ್ಟು ಸಂಪಿಗೆ ಹೂ ನೀನು ಪೂಜೆ ಮಾಡಿದ್ದೆಯೋ? ನನ್ನ ಭಾವಾಂತ ನಾನು ಹೊಗಳಲ್ಲ—ಅವನ ಗುಣಕ್ಕೆ ಯಾರಾದರೂ ತಲೆದೂಗಬೇಕಾದದ್ದೇ."

"ನಿನ್ನ ಮಾತು ಅಕ್ಷರಶಃ ದಿಟ ಕಣಣ್ಣಾ. ನನಗೆ ಸ್ವಲ್ಪ ಮೈ ಬೆಚ್ಚಗಾದರೆ ಸಾಕು—ಕೂಡಿಸಿ ಎಲ್ಲಾ ಕೆಲಸ ತಾವೇ ಮಾಡುತ್ತಾರೆ. ಒಂದು ಸಲ ನನಗೆ ಜ್ವರ ಬಂತು—ಶಿವಮೊಗ್ಗೆ ಮಲೆನಾಡು—ಮೂರುಮೂರು ದಿವಸಕ್ಕೆ ಜ್ವರದ ಕಾಟ ಇದ್ದದ್ದೇ!—ಅವರೇ ಅಡಿಗೆಮಾಡಿದರು. ಅದರ ವಿತರಣೆ ಏನು ಹೇಳುತ್ತೀ—ಮನೆಯೆಲ್ಲಾ ಹರಡ ಹಾಕಿ ಸಾಮಾನೆಲ್ಲಾ ಗೂರಾಡಿ, ಸಾರಿಗೆ ಎರಡು ಸಲ ಉಪ್ಪು ಹಾಕಿ, ಅನ್ನ ಮಿಡ್ಡೆಮಾಡಿ ಅಂತೂ ಇಂತೂ ಅಡಿಗೆ ಪೂರೈಸಿದರು. ಊಟಕ್ಕೆ ಕೂಡುತ್ತಾರೆ-ಬಾಯಲ್ಲಿ ಒಂದು ತುತ್ತೂ ಇಡುವುದಕ್ಕೆ ಸಾಧ್ಯವಿಲ್ಲ. 'ತಲೆಚಚ್ಚಿಕೊಂಡರೂ ಗಂಡಸರಿಗೆ ಅಡಿಗೆ ಮಾಡುವುದಕ್ಕೆ ಬರೋದಿಲ್ಲ ಕಣೇ ಯಶೋದಾ' ಎಂದರು. ನಾನು ಚೇಷ್ಟೆಗೆ 'ಹೋಟಲಿನವರು ನಮಗಿಂತ ಚೆನ್ನಾಗಿ ಅಡಿಗೆ ಮಾಡುತ್ತಾರೆ' ಎಂದೆ. 'ಹೋಟಲು ಅಡಿಗೆ ತಿನ್ನೋದಕ್ಕಿಂತ ಬೀದಿ ಮಣ್ಣು ಮುಕ್ಕುವುದು ಲೇಸು' ಎಂದರು. ಹೋಟಲು ಊಟ ತಿಂಡಿ ಅವರಿಗೆ ಸೇರುವುದಿಲ್ಲ. ನಾನು ಇಲ್ಲಿ ಹೆಚ್ಚುಕಾಲ ನಿಂತರೆ ಅವರು ಉಪವಾಸ ಒಣಗುತ್ತಾರೆ."

"ಆಗಲಮ್ಮ –ನಿನ್ನಿಷ್ಟ–ಸೋಮವಾರ ಹೊರಟುಬಿಡುವೆಯಂತೆ; ವೆಂಕಟರಾಮೂಗೆ ನಾನು ಕಾಗದವನ್ನೂ ಬರೆಯುತ್ತೇನೆ."

ಯಶೋದೆಯ ಜತೆಯಲ್ಲಿದ್ದು ಅವಳೊಂದಿಗೆ ಸರಸವಾಗಿ ಮಾತುಕತೆ ಯಾಡುವುದಕ್ಕೂ ಪಾರ್ವತಿಗೆ ವ್ಯವಧಾನವಿರಲಿಲ್ಲ. ಕುಮುದಕ್ಕನ ಮನೆ ಯಾಯಿತು—ಅವಳಾಯಿತು. ಯಶೋದ ತನ್ನ ಕಾಲವನ್ನೆಲ್ಲಾ ನರಸಮ್ಮ ನವರ ಜತೆಯಲ್ಲಿಯೇ ಕಳೆಯಬೇಕಾಯಿತು.

ಒಂದು ದಿನ ಚಂದ್ರಶೇಖರ ಹೆಂಡತಿಗೆ

"ಯಶೋದ ಅಪರೂಪಕ್ಕೆ ಬಂದಿದ್ದಾಳೆ. ಊರಿಗೆ ಹೊರಟಿದ್ದವಳನ್ನು ನಾನೇ ಬಲವಂತಮಾಡಿ ನಿಲ್ಲಿಸಿಕೊಂಡೆ. ನೀನು ಅವಳನ್ನು ಸರಿಯಾಗಿ ವಿಚಾರಿಸಿಕೊಳ್ಳಬೇಕು" ಎಂದು ಹೇಳಿದ. ಪಾರ್ವತಿ ಮುಖ ಗಂಟು ಹಾಕಿಕೊಂಡು

"ಅವರ ಕಥೆ, ಅವರ ಯಜಮಾನರ ಕಥೆ ಕೇಳಿಕೇಳಿ ನನ್ನ ತಲೆ ಚಿಟ್ಟು ಹಿಡಿದು ಹೋಗಿದೆ. ಅವರ ಹತ್ತಿರ ನಾನೇನು ಮಾತನಾಡಲಿ?"

"ಗಂಡನ ವಿಷಯ ಅವಳು ಒಳ್ಳೆಯ ಮಾತನಾಡುವುದೂ ತಪ್ಪೇ?"

"ಯಾರಿಗೂ ಇಲ್ಲದ ಗಂಡ ಅವರೊಬ್ಬರಿಗೇ ಇರುತ್ತಾರೇನು?"

"ನಿನ್ನ ಮನಸ್ಸೇ ನನಗರ್ಥವಾಗುವುದಿಲ್ಲ ಪಾತೂ."

"ತಂಗಿ ಮನಸ್ಸು ಅರ್ಥವಾಗುತ್ತದಲ್ಲ—ಸಾಕು ಬಿಡಿ" ಎಂದು ಚಂದ್ರಶೇಖರನ ಬಾಯಿ ಮುಚ್ಚಿಸಿಬಿಟ್ಟಳು.

ಸೋಮವಾರದವರೆವಿಗೂ ನಿಲ್ಲಲು ಒಪ್ಪಿದ್ದ ಯಶೋದಾ ಭಾನುವಾರವೇ ಹೊರಟು ನಿಂತಳು.

"ಏಕಮ್ಮಾ" ಎಂದು ಚಂದ್ರಶೇಖರ ಸಹಾನುಭೂತಿಯಿಂದ ಕೇಳಿದ.

"ಅತ್ತಿಗೆಮ್ಮನಿಗೇಕಣ್ಣ ನನ್ನಿಂದ ತೊಂದರೆ."

"ಅತ್ತಿಗೆಮ್ಮ ನಿನಗಾಗಿ ಹುಲ್ಲುಕಡ್ಡಿ ಕದಲಿಸುತ್ತಿಲ್ಲ—ಅವಳಿಗೇನು ತೊಂದರೆ?"

"ಆ ಮಾತು ಬೆಳಸುವುದು ಬೇಡ. ನೀನೂ ಅತ್ತಿಗೆಮ್ಮ ಚೆನ್ನಾಗಿದ್ದರೆ ಸಾಕು."

ಎಂದು ಹೇಳುತ್ತಿದ್ದಂತೆ ದುಃಖದ ಕಟ್ಟೆಯೊಡೆದು ಬಂತು. ತಂಗಿಯ ಕಣ್ಣೀರು ತೊಡೆದು ಚಂದ್ರಶೇಖರ

"ಪಾತೂ ಏನಾದರೂ ಅಂದಳೇ ಯಶೋದಾ."

"ನಾನು ಬಂದು ಇಲ್ಲಿರೋದು ಅತ್ತಿಗೆಮ್ಮನಿಗೆ ಬೇಕಿಲ್ಲ. ಅವಳ ಮನಸ್ಸಿಗೆ ನಾನೇಕೆ ಮುಜುಗರವುಂಟುಮಾಡಲಿ."

ಚಂದ್ರಶೇಖರನ ಮನಸ್ಸು ಮಮ್ಮಲ ಮರುಗಿತು. 'ನನ್ನ ಮನೆಯಲ್ಲಿ ನನ್ನ ತಂಗೀಗೆ ಸ್ವಾಗತವಿಲ್ಲವಾಯಿತೇ?' ಎಂದವನು ದುಃಖಿಸಿದ.

ಭಾನುವಾರವೇ ಯಶೋದೆ ಶಿವಮೊಗ್ಗೆಗೆ ಪ್ರಯಾಣಮಾಡಿದಳು.

## ೨೮

ಪ್ರಭಾಕರ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದುದು ಆದಿಶೇಷಯ್ಯನವರಿಗೆ ಆನಂದವನ್ನುಂಟುಮಾಡುವುದರ ಜತೆಗೆ ಚಿಂತೆಯನ್ನೂ ತಂದಿತು. ಮಗನನ್ನು ಮುಂದಕ್ಕೆ ಓದಿಸಲೇಬೇಕು—ಓದಿಸುವ ಬಗೆ ಹೇಗೆ—ಖರ್ಚು ಪೂರೈಸುವ ಮಾರ್ಗ ಯಾವದು? ಚಂದ್ರಶೇಖರನೇ ಇನ್ನೂ ತನ್ನ ಕಾಲ ಮೇಲೆ ನಿಲ್ಲುವಂತಾಗಿಲ್ಲ ಎಂದು ಯೋಚಿಸುತ್ತಾ

"ಲೇ, ಪ್ರಭಾಕರನ ವಿಷಯ ಏನು ಮಾಡೋಣವೇ" ಎಂದು ಹೆಂಡತಿಯನ್ನು ಕೇಳಿದರು.

"ಮಾಡುವುದೇನು—ಅವನೂ ಬೆಂಗಳೂರಿಗೆ ಹೋಗಿ ಚಂದ್ರೂ ಜತೆಯಲ್ಲಿರಲಿ. ಪುಸ್ತಕ, ಫೀಸಿಗೆ ನೀವು ಇಲ್ಲಿಂದ ಹಣ ಕಳಿಸಿದರಾಯಿತು."

"ಹಣವಿದ್ದರೆ ತಾನೇ ಕಳಿಸುವುದು. ಈ ಮಾರಾಯ ಚಂದ್ರೂ ಯಾವಾಗ ಸಂಪಾದನೆ ಮಾಡುತ್ತಾನೋ—ಯಾವಾಗ ಸ್ವಾವಲಂಬಿಯಾಗುತ್ತಾನೋ ಭಗವಂತನೇ ಬಲ್ಲ!"

"ಗಿಡ ಹಾಕಿದ ಕೂಡಲೆ ಫಲ ಸಿಕ್ಕುತ್ತದೆಯೇ?"

"ಮೈಮೇಲೆ ಸಾಲ ಏರುತ್ತಿದೆ ಕಣೇ."

"ನಮಗೆ ಕಷ್ಟವಾಗುತ್ತದೆಯೆಂದು ಮಕ್ಕಳ ಭವಿಷ್ಯ ಕಡೆಗಾಣಿಸುವುದಕ್ಕಾಗುತ್ತದೆಯೇ?"

"ಮಕ್ಕಳಿಗೆ ನಾನೇನೂ ಆಸ್ತಿಯಿಡುವ ಸಂಭವವಿಲ್ಲ—ಅವರಿಗೆ ಸಾಲಬಿಟ್ಟು ಹೋಗಬಾರದೆನ್ನುವುದೇ ನನ್ನ ಆಸೆ. ಲಕ್ಷರೂಪಾಯಿ ಆಸ್ತಿಯಿದ್ದರೂ ಸಾವಿರರೂಪಾಯಿ ಸಾಲ ಶೂಲವಾಗುತ್ತದೆ."

"ದೇವರು ನಮಗೆ ಒಳ್ಳೆಯ ಮಕ್ಕಳನ್ನು ಕರುಣಿಸಿದ್ದಾನೆ. ಈ ಭಾಗ್ಯಕ್ಕಿಂತ ಹೆಚ್ಚಿನದೇನು ಬೇಕು !"

ಪ್ರಭಾಕರನನ್ನು ಬೆಂಗಳೂರಿಗೆ ಕಳಿಸಿಕೊಡುವುದು ಅನಿವಾರ್ಯ ವಾಯಿತು. ತಮ್ಮ ಬಂದು ತನ್ನ ಜತೆ ಇರುವ ವಿಷಯದಲ್ಲಿ ಚಂದ್ರಶೇಖರ ಉತ್ಸಾಹವನ್ನೇ ವ್ಯಕ್ತಪಡಿಸಿದ. ನರಸಮ್ಮನೂ ಸಂತೋಷಪಟ್ಟಳು. ಪಾರ್ವತಿ ಸ್ಪಷ್ಟವಾಗಿ ಅಸಮ್ಮತಿ ಸೂಚಿಸದಿದ್ದರೂ ಅತೃಪ್ತಿಯನ್ನು ವ್ಯಕ್ತ ಪಡಿಸಿದಳು.

ಕಾಲೇಜ್ ಬಾಗಿಲು ತೆಗೆದಮೇಲೆ ಪ್ರಭಾಕರ ಜ್ಯೂನಿಯರ್ ಇಂಟರ್ ಮೀಡಿಯೇಟ್ ತರಗತಿ ಸೇರಿದ. ಕಾಲೇಜಿಗೆ ಅರ್ಧ ಶುಲ್ಕ (Half-freeship) ದೊರಕಿಸಲು ಸಹಾಯ ಮಾಡುವುದಾಗಿ ಶ್ರೀನಿವಾಸರಾಯರು ಭರವಸೆ ಯಿತ್ತರು.

ಪಾರ್ವತಿ ತಾಯ್ತನದ ಸವಿಗನಸುಗಳನ್ನು ಕಾಣತೊಡಗಿದಳು. ಗರ್ಭ ಬೆಳೆಯುತ್ತಿದ್ದಂತೆ ಅವಳ ಆಸೆಗಳು ಬಯಕೆಗಳು ಹೆಚ್ಚುತ್ತಿದ್ದವು. ಹೆಂಡತಿಯ ಈ ಸ್ಥಿತಿಯಲ್ಲಿ ಅವಳ ಸರ್ವಾಭೀಷ್ಟಗಳನ್ನು ನೆರವೇರಿಸಲಾಗದ ಅಸಹಾಯ ಕತೆ ಚಂದ್ರಶೇಖರನನ್ನು ಬಾಧಿಸುತ್ತಿತ್ತು. ಮಗಳು, ಅಳಿಯ ಇಬ್ಬರೂ ಬೇಸರವನ್ನುಂಟುಮಾಡಿಕೊಳ್ಳದಂತಿರಲು ನರಸಮ್ಮ ತನ್ನ 'ಕುಡಿಕೆಹಣ' ದಿಂದ ಧಾರಾಳವಾಗಿ ಖರ್ಚುಮಾಡುತ್ತಿದ್ದಳು.

ಪಾರ್ವತಿ ಮೈಮೇಲೆ ಹೊಸಕುಪ್ಪಸ ಕಂಡರೆ ಸಾಕು-ಕುಮುದಮ್ಮ ಏನೂ ಅರಿಯದವಳಂತೆ

"ಯಜಮಾನರು ತಂದುಕೊಟ್ಟರೇ" ಎಂದು ಕೇಳುತ್ತಿದ್ದಳು.

ಸುತ್ತಿಕೊಂಡು ಮಲಗಿದ್ದ ಹಾವು ಕಡ್ಡಿಯ ತಿವಿತಕ್ಕೆ ಕೆರಳಿ ಎದ್ದು ನಿಂತು ಬುಸುಗುಟ್ಟುವಂತೆ ಪಾರ್ವತಿ

"ಸರಿ ! ಅವರು ತಂದುಕೊಟ್ಟರು ನಾನು ಹಾಕಿಕೊಂಡೆ ! ನಾನು ಆ ಪುಣ್ಯವನ್ನು ಕೇಳಿಕೊಂಡು ಬಂದಿದ್ದೇನೆಯೇ ಕುಮುದಕ್ಕ. ಎಲ್ಲದಕ್ಕೂ ತಲೆ ಕೊಡುವುದಕ್ಕೆ ನಮ್ಮಮ್ಮ ಇದ್ದಾಳಲ್ಲಾ !"

ಪಾರ್ವತಿಯ ಪ್ರತಿ ಮಾತಿಗೂ ವಿಪರೀತಾರ್ಥ ಕಲ್ಪನೆಮಾಡುವ

ಸಾಮರ್ಥ್ಯ ಕುಮುದಮ್ಮನಲ್ಲಿ ಹೆಮ್ಮರದಂತೆ ಬೆಳೆದಿತ್ತು. ಮರುಕ್ಷಣವೇ ಅವಳು ಸೀತಾಬಾಯಿಯ ಮನೆಗೆ ಹೋಗಿ

"ಕೇಳಿದಿರಾ ಸೀತಾಬಾಯ್—ಚಂದ್ರಶೇಖರಯ್ಯನವರ ಮನೆ ಸಂಸಾರ ನಡೆಸುತ್ತಿರುವವರು ನರಸಮ್ಮನವರಂತೆ!"

"ಹಾಗೇನು?"

"ಹೌದ್ರಿ—ಪಾರ್ವತಮ್ಮನೇ ಹೇಳಿದರು. ತುಂಬಿದ ಬಸುರಿ-ಅವರ ಬಯಕೆಗಳನ್ನು ಪೂರೈಸದ ಗಂಡಸು ಎಂಥಾ ಗಂಡಸ್ರೀ? ಪಾಪ! ಆ ಮುದುಕಮ್ಮನ್ನ ಕಿತ್ತುಕೊಂಡು ತಿನ್ನೋ ಅನ್ಯಾಯಕ್ಕಿಂತ ಬೇಕೇ? ನಾಳೆ ಋಷಿಪಂಚಮಿ ಉದ್ಯಾಪನೆ ಮಾಡುವುದಕ್ಕೂ ನರಸಮ್ಮನವರ ಕೈಯಲ್ಲಿ ಈ ಅಳಿಯ ಮೂರುಕಾಸು ಉಳಿಸೋದಿಲ್ಲ."

ಸೀತಾಬಾಯಿ ಲೋಕದಕಷ್ಟಸುಖ ಕಂಡವರು. ಗಂಡನೊಂದಿಗೆ ಸಂಸಾರ ಆರಂಭಿಸಿದಾಗ ಸೀತಾಬಾಯಿಯೂ ಹಲವು ಕಷ್ಟಗಳನ್ನು ಕಂಡಿದ್ದರು. ಅತ್ತೆ, ಅತ್ತಿಗೆ, ನಾದಿನಿಯರ ಕಾಟವೂ ಅವರಿಗೆ ಅನುಭವವಾಗಿತ್ತು. ಕುಮುದಮ್ಮ ಅನವಶ್ಯಕವಾಗಿ ಕಂಡವರ ಮನೆ ಸಂಸಾರದ ರಹಸ್ಯಗಳನ್ನು ಭೇದಿಸಿ ಊರಿಗೆಲ್ಲಾ ಸಾರುವುದು ಸೀತಾಬಾಯಿಗೆ ಅಪ್ರಿಯವಾಗಿತ್ತು.

"ಕುಮುದಮ್ಮ, ನಾನು ನಿಮಗಿಂತ ವಯಸ್ಸಿನಲ್ಲಾದರೂ ಹಿರಿಯಳು. ಖಂಡಿತವಾಗಿ ನಾನು ಒಂದು ಮಾತು ಹೇಳಿದರೆ ನೀವು ಬೇಸರಪಟ್ಟುಕೊಳ್ಳಬಾರದು."

"ಇಲ್ಲ. ಹೇಳ್ರೀ— ನೀವು ದೊಡ್ಡವರು."

ಸೀತಾಬಾಯಿಯ ವಿರೋಧ ಕಟ್ಟಿಕೊಳ್ಳುವುದಕ್ಕೆ ಕುಮುದಮ್ಮ ಸಿದ್ಧವಾಗಿರಲಿಲ್ಲ. ಅವಳು ಕೇಳಿ ಕೇಳಿದಾಗ ಕಾಫಿಪುಡಿ, ಸಕ್ಕರೆ, ತೊಗರಿಬೇಳೆ, ಚಿಲ್ಲರೆ ಹಣ 'ಸಾಲ' ಕೊಡುತ್ತಿದ್ದವರೇ ಸೀತಾಬಾಯಿ. ಕೊಟ್ಟ 'ಸಾಲ' ಹಿಂದಕ್ಕೆ ಪಡೆಯುವ ಅಭ್ಯಾಸ ಸೀತಾಬಾಯಿಗಿರಲಿಲ್ಲ; ತೆಗೆದುಕೊಂಡ 'ಸಾಲ' ಹಿಂದಿರುಗಿಸುವ ಅಭ್ಯಾಸ ಕುಮುದಮ್ಮನಿಗಿರಲಿಲ್ಲ.

"ಅವರವರ ಕಷ್ಟ ಸುಖ ಅವರವರಿಗೇ ಸೇರಿದ್ದಮ್ಮ. ಕುಮುದಮ್ಮ ನಿಮ್ಮ ಸ್ನೇಹಿತರಾಗಿದ್ದಾರೆ—ನಿಮ್ಮ ಹತ್ತಿರ ತಮ್ಮ ಮನೆಯ ವಿಷಯ ಹೇಳಿಕೊಳ್ಳುತ್ತಾರೆನ್ನುವ ಕಾರಣದಿಂದ ನೀವು ಅದನ್ನೆಲ್ಲಾ ಸಾರುವುದು ನ್ಯಾಯ

ವಲ್ಲ. ನಾನು ಕಂಡಹಾಗೆ ನರಸಮ್ಮನವರು, ಚಂದ್ರಶೇಖರಯ್ಯ ಒಳ್ಳೆಯ ಜನ. ಒಬ್ಬರ ಸುದ್ದಿಗೆ ಅವರು ಬರುವುದಿಲ್ಲ. ಕಷ್ಟವೋ ಕಾರ್ಪಣ್ಯವೋ ಒಬ್ಬರ ಮನೆ ಬಾಗಿಲಿಗೆ ಅವರು ಬರುವುದಿಲ್ಲ. ಅವರ ಗೊಡವೆ ನಮಗೇಕೆ ? ನಮ್ಮ ಸಂಸಾರ ನಾವು ನೇರವಾಗಿ ನಡೆಸಿಕೊಂಡು ಹೋದರೆ ಸಾಕಾಗಿದೆ—ಚಂದ್ರಶೇಖರಯ್ಯನವರ ಸಂಸಾರ ಅವರಿಂದಲೇ ನಡೆಯುತ್ತಿದೆಯೋ ನರಸಮ್ಮನವರಿಂದ ನಡೆಯುತ್ತಿದೆಯೋ ನಮಗೇಕೆ ? ಇದೆಲ್ಲಾ ಚಿನ್ನಿಲ್ಲಮ್ಮ."

"ಪಾರ್ವತಿ ಸ್ಥಿತಿ ಕಂಡು ಅಯ್ಯೋ ಎನಿಸಿ ಒಂದು ಮಾತಾಡಿದೆ ಕಣ್ರೀ ಖಂಡಿತ ಅವರ ಸಂಸಾರದ ಗುಟ್ಟು ರಟ್ಟು ಮಾಡಬೇಕೂಂತ ಹೇಳಲಿಲ್ಲ."

"ಒಬ್ಬರ ಸಂಸಾರಕ್ಕೆ ಇನ್ನೊಬ್ಬರು ಕೈಹಾಕುವುದೇ ತಪ್ಪು ಕುಮುದಮ್ಮ. ವಿವೇಚನೆಯಿಲ್ಲದೆ ನಾವು ಆಡುವ ಮಾತಿಗೆ ಕೈ, ಕಾಲು, ಮುಖ ಬಂದು ಅದೇ ಬ್ರಹ್ಮರಾಕ್ಷಸನಾಗುತ್ತದೆ. ಈ ರಾಕ್ಷಸನನ್ನು ಸೃಷ್ಟಿ ಮಾಡುವುದು ಬಹಳ ಸುಲಭ. ಆಮೇಲೆ ಇದನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ನಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲ."

"ಹೋಗಲಿ ಬಿಡಿಯಮ್ಮ. ಯಾರದೋ ಮಾತಿಗೆ ನೀವೂ ನಾನೂ ಏಕೆ ಮನಸ್ಸು ಹುಳಿ ಮಾಡಿಕೊಳ್ಳಬೇಕು" ಎಂದು ಕುಮುದಮ್ಮ ತಿಪ್ಪೆಸಾರಿಸಿದಳು.

ಪಾರ್ವತಿಗೆ ಆಸ್ಪತ್ರೆ ಬಾಣಂತನ ಮಾಡಿಸಬೇಕೆಂದು ಚಂದ್ರಶೇಖರನ ಆಕಾಂಕ್ಷೆಯಾಗಿತ್ತು. ಅವಳಿಗೆ ನೋವು ಆರಂಭವಾಗಲು ಅತ್ತೆಯೆದುರು

"ಹೆರಿಗೆ ಆಸ್ಪತ್ರೆಯಲ್ಲಿ ಆ್ಯಂಬುಲೆನ್ಸ್ ವ್ಯಾನ್ (Ambulance Van) ಇದೆ—ಫೋನ್ ಮಾಡಿ ತರಿಸಲೇ" ಎಂದು ಕೇಳಿದ.

"ಏಕೆ ?"

"ಆಸ್ಪತ್ರೆಯಲ್ಲಿ ಎಲ್ಲಾ ಸೌಕರ್ಯವಿದೆ."

"ಚೊಚ್ಚಲು ಬಾಣಂತನ ಮನೆಯಲ್ಲಿಯೇ ಮಾಡುತ್ತೇನೆ. ನೀವು ಯಾವ ಯೋಚನೆಯನ್ನೂ ಇಟ್ಟುಕೊಳ್ಳಬೇಡಿ.

"ನಿಮಗೆ ತುಂಬ ಕೆಲಸವಾಗುತ್ತದಲ್ಲಾ ಎಂದು ಯೋಚಿಸುತ್ತಿದ್ದೆ."

"ಆದರಾಯಿತು. ಪಾತು ಸುಖವಾಗಿ ಮೈ ಕಳೆದರೆ ಸಾಕು."

ಹೆರಿಗೆ, ಬಾಣಂತನದ ಖರ್ಚು ವೆಚ್ಚವನ್ನೆಲ್ಲಾ ನರಸಮ್ಮನ ಮೇಲೆ ಹಾಕಿ ಆದಿಶೇಷಯ್ಯ, ನಾಗಮ್ಮ ಸುಖವಾಗಿ ಕೂಡಲಿಲ್ಲ. ತಮ್ಮ ಶಕ್ತಿ ಮೀರಿ ಅವರು ಹಣ ಸಹಾಯ ಮಾಡುತ್ತಿದ್ದುದಲ್ಲದೆ, ಮನೆಗೆ ಬೇಕಾಗುವ ಸಾಮಾನು ಸರಂಜಾಮುಗಳನ್ನೂ ತುಮಕೂರಿನಿಂದ ಕಳಿಸಿಕೊಡುತ್ತಿದ್ದರು.

ಪಾರ್ವತಿ ಒಂದು ಶುಕ್ರವಾರ ಗಂಡು ಮಗುವನ್ನು ಪ್ರಸವಿಸಿದಳು. ಮನೆಯವರೆಲ್ಲಾ ಒಮ್ಮತದಿಂದ ಮಗುವಿಗೆ ನಾರಾಯಣಮೂರ್ತಿ ಎಂದು ನಾಮಕರಣ ಮಾಡಿದರು.

## ೨೯

ತುಮಕೂರು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಪ್ರಭಾಕರ ಉತ್ತಮ ಕಾಲ್ಚೆಂಡು ಆಟಗಾರ (Football player) ಎಂದು ಪ್ರಸಿದ್ಧನಾಗಿದ್ದ. ಬೆಂಗಳೂರು ಇಂಟರ್‌ಮಿಾಡಿಯೇಟ್ ಕಾಲೇಜ್ ಅವನ ಆಟಗಾರಿಕೆಗೆ ಹೆಚ್ಚು ಪ್ರಾಶಸ್ತ್ಯಕೊಟ್ಟು, ಅವನನ್ನೇ ಟೇಮಿನ ಕ್ಯಾಪ್ಟನ್ ಆಗಿ ಚುನಾಯಿಸಿತು. ಸಂಜೀವರೆಡ್ಡಿ, ನರಸಿಂಹನಾಯಕ, ಗೋಪಾಲಕೃಷ್ಣ, ಸಿದ್ದಬಸವಯ್ಯ, ಹಬೀಬರನ್ನೊಳಗೊಂಡಿದ್ದ ಪ್ರಭಾಕರನ ಟೇಮು ಬೆಂಗಳೂರಿನ ಇತರ ಶಾಲೆ, ಕಾಲೇಜುಗಳ ಟೇಮುಗಳನ್ನು ಸೋಲಿಸಿ ಕೀರ್ತಿಗಳಿಸಲಾರಂಭಿಸಿತು.

ಒಮ್ಮೆ ಬೆಂಗಳೂರಿಗೆ ಬಂದ ಆದಿಶೇಷಯ್ಯನವರು ಚಂದ್ರಶೇಖರನ ಜತೆ ಮಾತನಾಡುತ್ತಾ

"ನಿನ್ನ ತಮ್ಮನ್ನ ಸ್ವಲ್ಪ ವಿಚಾರಿಸಿಕೊಳ್ಳಪ್ಪ. ಬೆಳಿಗ್ಗೆಯಿಂದ ಸಂಜೆಯವರೆಗೆ ಅವನು ಫುಟ್‌ಬಾಲ್ ಫುಟ್‌ಬಾಲ್ ಎಂದು ಓಡಾಡುತ್ತಿದ್ದರೆ ವಿದ್ಯೆ ನೈವೇದ್ಯವಾಗುತ್ತದೆ."

"ಹಾಗೇನಿಲ್ಲಣ್ಣ. ಅವನು ಕಾಲೇಜ್ ಪಾಠಗಳನ್ನು ನಿರ್ಲಕ್ಷಿಸುತ್ತಿಲ್ಲ. ವಯೋಧರ್ಮಕ್ಕನುಗುಣವಾಗಿ ಆಟದಲ್ಲಿ ಅವನಿಗೆ ಆಸಕ್ತಿಯಿರುವುದು ಒಳ್ಳೆಯದೆ ಅಲ್ಲವೇ?"

"ಮೊದಲು ಸಂಪಾದನೆ ಕಡೆ ಲಕ್ಷ್ಯಕೊಡಬೇಕಪ್ಪ. ಈ ಕಾಲದಲ್ಲಿ ಎಷ್ಟು ಕೀರ್ತಿ, ಯಶಸ್ಸು ಸಂಪಾದಿಸಿದರೂ ಕೈಯಲ್ಲಿ ಕಾಸಿಲ್ಲದಿದ್ದರೆ ಎಲ್ಲವೂ ನೀರಿನಲ್ಲಿ ಹೋಮಮಾಡಿದಂತಾಗುತ್ತದೆ. ನಾನು ಸಾಯುವುದರೊಳಗಾಗಿ

ನಿನ್ನ ತಮ್ಮ ಒಂದು ಬಿ.ಎಸ್‌ಸಿ ಮಾಡಿಕೊಂಡರೆ ಅವರಿವರ ಕಾಲುಕಟ್ಟಿ ಅವನಿಗೊಂದು ಹೈಸ್ಕೂಲಿನಲ್ಲಿ ಕೆಲಸಮಾಡಿಸಿ ಕೊಡಬಹುದು."

"ಬಿ.ಎಸ್‌ಸಿ ಏಕೆ–ಅವನು ಎಮ್.ಎಸ್‌ಸಿ ಮಾಡಲಿ. ಕಾಲ ಯಾವಾಗಲೂ ಹೀಗೇ ಇರುವುದಿಲ್ಲ. ಒಂದಲ್ಲ ಒಂದುದಿನ ದೇವರು ನನಗೂ ಅನುಕೂಲ ಮಾಡುತ್ತಾನೆ ಪ್ರಭಾಕರ ಓದುವಷ್ಟು ಅವನನ್ನು ಓದಿಸ ಬೇಕೆಂದು ನನಗೂ ಆಸೆಯಿದೆ."

"ನಿನ್ನ ತಾಯಿಗೂ ನನಗೂ ಇದೇ ಒಂದು ಸಂತೋಷ ಚಂದ್ರೂ– ಅಣ್ಣ ತಮ್ಮ ನೀವು ಇಷ್ಟು ಅನ್ಯೋನ್ಯವಾಗಿದ್ದೀರಲ್ಲಾ ಅಷ್ಟೇ ಸಾಕು. ನನ್ನ ಕಾಲ ಮುಗಿಯುತ್ತಾ ಬಂತಪ್ಪ. ನಮ್ಮೆಲ್ಲರಿಗಾಗಿ ಜೀವ ತೇದೂ ತೇದೂ ನಿಮ್ಮ ತಾಯಿಯೂ ಹಣ್ಣಾಗಿದ್ದಾಳೆ. ಇನ್ನು ಮೇಲೆ ಸಂಸಾರದ ಜವಾಬ್ದಾರಿಯೆಲ್ಲಾ ನೀನೇ ಹೊತ್ತುಕೊಳ್ಳಬೇಕು. ಪ್ರಭಾಕರನ ಮದುವೆ ಯನ್ನೂ ನೀನೇ ಮಾಡಬೇಕಾಗುತ್ತದೊ ಏನೋ?"

"ನೀನು ಹೀಗೆ ಮಾತನಾಡಿದರೆ ನನಗೆ ದುಃಖವಾಗುತ್ತದಣ್ಣ. ನಾನು ಹತ್ತುಕಾಸು ಸಂಪಾದಿಸಿ, ಗೌರವವಾಗಿ ಬಾಳುವುದನ್ನ ನೀನೂ ಅಮ್ಮ ನೋಡದಿದ್ದರೆ ನನಗೆ ನೆಮ್ಮದಿಯಿರುತ್ತದೆಯೇ?"

ಮಗನ ನಿಷ್ಕಲ್ಮಷಚಿತ್ತ ಕಂಡು ತಂದೆ ತಲೆದೂಗಿ

"ನಿಮ್ಮ ತಾಯಿ ಮಾತು ನಿಜ ಚಂದ್ರೂ. ಹಣಕಾಸಿನ ಕೊರತೆ ಯಿಂದ ನಾನು ಮುಜುಗರ ಪಟ್ಟುಕೊಂಡರೆ 'ರಾಮಲಕ್ಷ್ಮಣರಂಥ ಮಕ್ಕಳಿ ದ್ದಾರೆ. ಶಾಂತನಂಥ ಮಗಳಿದ್ದಾಳೆ. ಇದಕ್ಕಿಂತ ಭಾಗ್ಯಬೇಕೇ? ಈ ಸಂಪತ್ತು ಎಷ್ಟು ಜನಕ್ಕಿದೆ ಯೋಚನೆಮಾಡಿ ಎಂದು ಹೇಳುತ್ತಾಳೆ' ಎಂದರು.

ಪ್ರಭಾಕರ ಬೆಂಗಳೂರಿಗೆ ಬಂದಮೇಲೆ ಅನಿರೀಕ್ಷಿತವಾಗಿ ಚಂದ್ರ ಶೇಖರನ ಖರ್ಚುವೆಚ್ಚಗಳೂ ಹೆಚ್ಚಿದವು. ಹುಡುಗ ಕಾಲೇಜಿನಲ್ಲಿ ಓದು ತ್ತಿದ್ದ. ನಾಲ್ಕು ಜನ ಸರೀಕರೆದುರು ಅವನು ಬಾಳ್ವೆಮಾಡಬೇಕಾಗಿತ್ತು. ಶ್ರೀನಿವಾಸರಾಯರ ದಯೆಯಿಂದ ಶಿಕ್ಷಣ ಶುಲ್ಕಕ್ಕೆ ಅರ್ಧ ವಿನಾಯಿತಿ ಸಿಕ್ಕಿ ದ್ದರೂ ಬಟ್ಟೆಬರೆ, ತಿಂಡಿ ತೀರ್ಥ, ಟೀಮಿನ ಪಾರ್ಟಿಗಳು, ಕಾಲೇಜಿನ ಸಮಾ ರಂಭಗಳೆಲ್ಲಕ್ಕೂ ಖರ್ಚು ಪೂರೈಸಬೇಕಾಗುತ್ತಿತ್ತು.

ದೇವರ ಮೇಲೆ ಭಾರಹಾಕಿ ಸ್ವತಂತ್ರ ಕಛೇರಿ ತೆರೆದು ತನ್ನ ಬಾಳ ಬಟ್ಟೆಯನ್ನರಸಬೇಕೆಂದು ಚಂದ್ರಶೇಖರ ನಿರ್ಧರಿಸಿದ. ಅವನ ಸಂಕಲ್ಪ ಸಿದ್ಧಿಸುವುದಕ್ಕೆ ಸುಬ್ಬಾಶಾಸ್ತ್ರಿಯು ಕಾರಣನಾದ.

ಶ್ರೀನಿವಾಸರಾಯರ ಆಫೀಸ್ ಗುಮಾಸ್ತೆ ಗೋವಿಂದಯ್ಯ ನೆಮ್ಮದಿಯ ಕುಳವಾಗಿದ್ದ. ಊರಿನಲ್ಲಿ ಅವನಿಗೆ ಹೊಲ, ಗದ್ದೆ, ಮನೆ ಎಲ್ಲಾ ಇತ್ತು. ಬೆಂಗಳೂರಿಗೆ ಬಂದವನು ಶ್ರೀನಿವಾಸರಾಯರ ಗುಮಾಸ್ತನಾದಮೇಲೆ ಸಣ್ಣ ಪ್ರಮಾಣದಲ್ಲಿ ಲೇವಾದೇವಿ ಆರಂಭಿಸಿ ಪುಡಿಕಾಸು ಕೂಡಿಹಾಕಲಾರಂಭಿಸಿದ. ನಂದಗೋಕುಲದ ಹಾಗಿದ್ದ ರಾಯರ ಆಫೀಸಿನಲ್ಲಿ ಗೋವಿಂದಯ್ಯನ ಕೈಗೆ ತಡೆಯೇ ಇರಲಿಲ್ಲ. ನಾಲ್ಕಾರು ವರ್ಷಗಳಲ್ಲಿ ಗೋವಿಂದಯ್ಯ ಸಾಕಷ್ಟು ಅನುಕೂಲ ಮಾಡಿಕೊಂಡು ಅಲಸೂರುಪೇಟೆಯಲ್ಲಿ ಒಂದು ಮನೆಯನ್ನು ಕೊಂಡುಕೊಂಡ.

ರಾಯರ ಆಫೀಸಿನ ಜೂನಿಯರುಗಳಿಗೆ ಗೋವಿಂದಯ್ಯ ಕಲ್ಪವೃಕ್ಷ ವಾಗಿದ್ದ. ಅವರಿಗೆ 'ಶಾಕಾಯ ಲವಣಾಯ' ಮುಟ್ಟಿಸುತ್ತಿದ್ದವನೂ ಅವನೇ; ನೂರು ಇನ್ನೂರು ಸಾಲ ಕೊಡುತ್ತಿದ್ದವನೂ ಅವನೇ.

ಗೋವಿಂದಯ್ಯನಿಂದ ಉಪಕಾರ ಪಡೆದಿದ್ದವರಲ್ಲಿ ಚಂದ್ರಶೇಖರನೂ ಒಬ್ಬ. ಚಂದ್ರಶೇಖರನ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದಿದ್ದ ಗೋವಿಂದಯ್ಯ ಅವನ ಮನೆಯಲ್ಲಿ ನಾಮಕರಣದ ಊಟಮಾಡಿ ಬಂದ ಮೇಲೆ ಹೆಚ್ಚು ಸಹಾನುಭೂತಿ ತೋರಿಸಲಾರಂಭಿಸಿದ.

ಒಂದು ದಿನ ಯಥಾಕ್ರಮದಂತೆ ಇಪ್ಪತ್ತು ರೂಪಾಯಿ ಸಾಲ ಕೇಳಿದ ಚಂದ್ರಶೇಖರನಿಗೆ ಹಣಕೊಟ್ಟು ಗೋವಿಂದಯ್ಯ

"ರಾಯರ ಹತ್ತಿರ ಮಾತಾಡಿ ಸ್ವಾಮಿ. ಹೋದಷ್ಟು ದಿವಸ ಹೀಗೆ ಬಿಟ್ಟುಕೊಂಡಿದ್ದರೆ ಹೇಗಾಗುತ್ತೆ. ನಿಮ್ಮ ಸಂಸಾರವೂ ಬೆಳೆಯಿತು. ಬೆಂಗಳೂರು ಪೇಟೆಯಲ್ಲಿ ಸಂಸಾರಮಾಡುವುದೆಂದರೆ ತಮಾಷೆಯಾಯಿತೇ?"

"ಹೇಗೆ ಕೇಳಲಿ ಗೋವಿಂದಯ್ಯನವರೇ. ಕೇಶವಯ್ಯಂಗಾರ್ ಸ್ವತಂತ್ರ ಕಛೇರಿ ಮಾಡಿಕೊಂಡು ಹೋಗುತ್ತಾರೆ-ಅವರು ಹೋದಮೇಲೆ ಏನಾದರೂ ಕೊಡುತ್ತೇನೆಂದು ರಾಯರು ಹೇಳಿದರು. ಕೇಶವಯ್ಯಂಗಾರ್ರು ಹೋಗಲಿಲ್ಲ. ರಾಯರು ಹಲವು ಬಗೆಯಲ್ಲಿ ನನಗೆ ಉಪಕಾರಮಾಡಿದ್ದಾರೆ-ನನ್ನ ತಮ್ಮನಿಗೆ

ಹಾಫ್ ಫ್ರೀಷಿಪ್ (half-freeship) ಮಾಡಿಸಿಕೊಟ್ಟರು. ಹಣಕ್ಕಾಗಿ ಅವರನ್ನು ಹೇಗೆ ಪೀಡಿಸಲಿ?"

"ಹಾಗಾದರೆ ಏನು ಮಾಡಬೇಕೆಂದಿದ್ದೀರಿ?"

"ನಾನೇ ಸ್ವತಂತ್ರ ಆಫೀಸ್ ತೆಗೆಯಬೇಕೆಂದಿದ್ದೇನೆ."

"ಅದನ್ನಾದರೂ ಮಾಡಿ-ರಾಯರ ಹತ್ತಿರ ಈ ವಿಷಯ ಪ್ರಸ್ತಾಪಿಸಿದಿರಾ?"

"ಪ್ರಸ್ತಾಪಿಸಿದೆ. 'ಹಾಗೇಮಾಡಿ, ದೇವರು ಒಳ್ಳೆಯದು ಮಾಡಲಿ, ಎಂದು ಅವರು ಹರಸಿದರು. ಕೈಯಲ್ಲಿ ನೂರಾರು ರೂಪಾಯಿಯಿಟ್ಟುಕೊಳ್ಳದೆ ಸ್ವತಂತ್ರ ಕಛೇರಿ ತೆರೆಯುವುದಕ್ಕಾಗುತ್ತದೆಯೇ?"

"ನೀವು ಆಫೀಸ್ ಮಾಡುವುದು ನಿಜವಷ್ಟೆ!"

"ತಂದೆಯವರಿಗೆ ಯಾವದೋ ಸ್ವಲ್ಪ ದುಡ್ಡು ಬರುವುದಿದೆ. ಅದು ಬರಲಿ ಎಂದು ಕಾದಿದ್ದೇನೆ."

"ನೂರು ಇನ್ನೂರು ಬೇಕಾದರೆ ನಾನು ಕೊಡುತ್ತೇನೆ-ಬಿಡಿಸ್ವಾಮಿ. ಯಾವ ದೊಡ್ಡ ವಿಷಯ."

"ನೀವು ನನಗೆ ಬಹಳ ಉಪಕಾರ ಮಾಡಿದ್ದೀರಿ ಗೋವಿಂದಯ್ಯ. ನಿಮ್ಮ ಉಪಕಾರದ ಋಣ ಹೇಗೆ ತೀರಿಸಬೇಕೋ ತಿಳಿಯದಾಗಿದೆ."

"ನಾನು ಒಂದು ಮಾತು ಹೇಳುತ್ತೇನೆ-ಕೇಳುತ್ತೀರೊ?"

"ಹೇಳಿ."

"ಆಫೀಸ್ ಆರಂಭಮಾಡಿ. ಅದಕ್ಕೇನು ಅನುಕೂಲಬೇಕೋ ನಾನು ಒದಗಿಸುತ್ತೇನೆ. ಸುಬ್ಬಾಶಾಸ್ತ್ರಿ ನಿರುದ್ಯೋಗಿಯಾಗಿದ್ದಾನೆ-ಅವನನ್ನೇ ಗುಮಾಸ್ತನನ್ನಾಗಿಟ್ಟುಕೊಳ್ಳಿ. ಎಲ್ಲಾ ಕೆಲಸಕಾರ್ಯಗಳನ್ನೂ ಅವನು ದಕ್ಷತೆಯಿಂದ ನಿರ್ವಹಿಸಬಲ್ಲ. ಕಕ್ಷಿಗಾರರನ್ನೂ ಅವನೇ ಹಿಡಿದುಕೊಂಡು ಬರುತ್ತಾನೆ. ಶಾಸ್ತ್ರಿ ಖದೀಮ, ಬೆರಳು ತೋರಿಸಿದರೆ ಹಸ್ತ ನುಂಗುತ್ತಾನೆ. ನಿಮ್ಮ ಎಚ್ಚರಿಕೆಯಲ್ಲಿ ನೀವಿರಬೇಕು. ನೀವು ಆಗಬಹುದು ಎಂದರೆ ಮುಂದಿನ ವ್ಯವಸ್ಥೆ ನಾನು ಮಾಡುತ್ತೇನೆ-ನನಗೆ ಇದರಲ್ಲೇನೂ ಸ್ವಾರ್ಥವಿಲ್ಲ ಸ್ವಾಮಿ. ನಾನೂ ಮಕ್ಕಳೊಂದಿಗ. ಚಿಕ್ಕಪುಟ್ಟವರು, ನೀವೂ ಚೆನ್ನಾಗಿರಬೇಕೂಂತಷ್ಟೇ ನನ್ನ ಆಸೆ."

ಅನಿರೀಕ್ಷಿತವಾಗಿ ಒದಗಿದ ಈ ಸಹಾಯ ಕಂಡು ಚಂದ್ರಶೇಖರ ತನ್ನ ಕಣ್ಣನ್ನು ತಾನೇ ನಂಬದಾದ.

"ನೀವೇ ನನ್ನ ಭಾಗದ ದೇವರು ಗೋವಿಂದಯ್ಯನವರೇ" ಎಂಬ ಮಾತು ಚಂದ್ರಶೇಖರನ ಹೃದಯದಿಂದುಕ್ಕಿಬಂತು.

ಬಳೇಪೇಟೆಯಲ್ಲಿ ಚಂದ್ರಶೇಖರನ ಸ್ವತಂತ್ರ ಕಛೇರಿ ಆರಂಭವಾಯಿತು. ಕಛೇರಿಗೆ ಬೇಕಾದ ಕುರ್ಚಿ, ಮೇಜು, ಬೆಂಚು, ಅಲ್ಮೇರಾಗಳು, ಲಾ ಜರ್ನಲ್ ಸಂಪುಟಗಳು, ಕಾಯಿದೆ ಗ್ರಂಥಗಳನ್ನೂ ಗೋವಿಂದಯ್ಯನೇ ಒದಗಿಸಿದ.

ಕಛೇರಿಯ ಬಾಗಿಲು ಬದಿಗೆ, ಕೈಮೇಜು ಮುಂದಿಟ್ಟುಕೊಂಡು, ಅದರ ಮೇಲೆ ತನ್ನ ಕೊಳಕು ರುಮಾಲನ್ನಿಟ್ಟು, ಬೆಳ್ಳಿಕಟ್ಟಿನ ಕನ್ನಡಕ ಹಣೆಯ ಮೇಲೇರಿಸಿ ಗುಮಾಸ್ತೆ ಸುಬ್ಬಾಶಾಸ್ತ್ರಿ ಕುಳಿತ.

# ೩೦

ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದವರಿಗೆ ಅಮಲ್ದಾರ್ ಸುಬ್ಬ ರಾಯಪ್ಪನವರ ಕಾಟ ಅಸಹನೀಯವಾಗುತ್ತ ಬಂತು. ದಿನಕಳೆದಂತೆ ಅಮಲ್ದಾರರ ಕೋಪ ತಾಪ ಹೆಚ್ಚುತ್ತಿತ್ತು. ಬೆಂಗಳೂರಿನಲ್ಲಿ ಏರುತ್ತಿದ್ದ ಮನೆಬಾಡಿಗೆಯ ಪ್ರಮಾಣಕ್ಕನುಸರಿಸಿ ಅಮಲ್ದಾರರು ತಮ್ಮ ಉಪಗೃಹಗಳ ಬಾಡಿಗೆಯನ್ನು ಏರಿಸಲು ನಿಶ್ಚಯಿಸಿದರು.

ಸುಬ್ಬರಾಯಪ್ಪನವರ ಮನೆ ಆವರಣ ಮೊದಲು ಬಿಟ್ಟವರು ರಾಘವೇಂದ್ರರಾಯರು. ಚಾಮರಾಜಪೇಟೆ ಮೂರನೆಯ ರಸ್ತೆಯಲ್ಲಿದ್ದ ಒಂದು ಮನೆ ಕೊಂಡು ಅವರು ಹೊರಟುಹೋದರು.

ಹನುಮಂತರಾಯನ ಕಷ್ಟ ನೋಡಲಾರದೆ ಅವನ ಧಣಿಗಳಾದ ಪಯೋನಿರ್ ಡಿಸ್ಟ್ರಿಬ್ಯೂಷನ್ ಆಫೀಸಿನವರು ತಮ್ಮ ಕಛೇರಿಯ ಕೆಳಗಿದ್ದ ಎರಡು ಗಾಡಿಖಾನೆಗಳನ್ನೇ ಮನೆಯಾಗಿ ಪರಿವರ್ತಿಸಿ ಅವನಿಗಿತ್ತರು.

ಕುಮುದಮ್ಮ ಜಪ್ಪಯ್ಯ ಎನ್ನಲಿಲ್ಲ. 'ಮನೆಯವರ ಹತ್ತಿರ ನಿತ್ಯ ಜಗಳವೇಕೆ. ಬೇರೆ ಕಡೆ ಮನೆ ಸಿಕ್ಕುತ್ತದೆ. ನಾವೂ ಹೋಗಿಬಿಡೋಣ' ಎಂದು ಈಶ್ವರಮೂರ್ತಿ ಹೇಳಿದರೂ ಕುಮುದಮ್ಮ ಒಪ್ಪದೆ 'ಮನೆಯವನ ಹಟವೇ ನಡೆಯಬೇಕೇನು. ನಮ್ಮನ್ನು ಹೇಗೆ ಮನೆ ಬಿಡಿಸುತ್ತಾನೋ ನೋಡಿಯೇ ಬಿಡೋಣ' ಎಂದಳು.

ಅಮಲ್ದಾರರ ದರ್ಪ ಕುಮುದಮ್ಮನ ಸಾಲಗೆಯ ಮುಂದೆ ನಿರರ್ಥಕ ವಾಯಿತು.

ಹೆಚ್ಚು ಬಾಡಿಗೆ ಕೊಡಕೂಡದೆಂದು ಪಾರ್ವತಿಗೂ ಕುಮುದಮ್ಮ

ಹೆಚ್ಚಿಕೊಟ್ಟಿದ್ದಳು. ಒಂದು ಬಿಡಿಗಾಸೂ ಹೆಚ್ಚುಕೊಡಕೂಡದೆಂದು ಪಾರ್ವತಿ ಗಂಡನಿಗೆ ಕಟ್ಟಾಜ್ಞೆ ವಿಧಿಸಿದಳು.

ನರಸಮ್ಮನ ಶಾಂತಿಸಂಧಾನವೂ ನಿಷ್ಪ್ರಯೋಜಕವಾಯಿತು.

ಅಮಲ್ದಾರರ ಅಪಶಬ್ದಾಘಾತವನ್ನು ನರಸಮ್ಮ ಅನುಭವಿಸಬೇಕಾಯಿತು. ಒಂದು ದಿನ ಅಮಲ್ದಾರರ ಪರಶುವಾಕ್ಕುಗಳನ್ನು ಕೇಳಿ ಕೇಳಿ ಕೆರಳಿದ ಪ್ರಭಾಕರ ಅವರ ಎದುರು ನಿಲ್ಲಲು ನರಸಮ್ಮ ಒಳ್ಳೆಯ ಮಾತಿನಲ್ಲಿ ಅವನನ್ನು ಒಳಕ್ಕೆ ಕರೆತಂದು

"ಹೋಗಲಿ ಬಿಡಪ್ಪ. ಕೊಚ್ಚೆಯ ಮೇಲೆ ಕಲ್ಲೆಸೆದರೆ ನಮ್ಮ ಮುಖಕ್ಕೇ ಸಿಡಿಯುತ್ತದೆ. ಈ ರಾಮಾಯಣ ಬೇಡ, ಬೇರೆ ಮನೆಗೆ ಹೋಗೋಣಾಂದ್ರೆ ನಿಮ್ಮ ಅತ್ತಿಗೆ ಹಟಮಾಡುತ್ತಾಳೆ. ನೀನು ಯಾವ ವ್ಯಾಜ್ಯಕ್ಕೂ ಹೋಗಬೇಡಪ್ಪಾ—ನೆರೆಹೊರೆಯವರಲ್ಲಿ ನಗೆಪಾಟಲಾದೀತು. ಎಲ್ಲಾ ನನಗೆ ಬಿಟ್ಟುಬಿಡು—ನಾನು ಸರಿಪಡಿಸುತ್ತೀನೆ" ಎಂದು ಸಮಾಧಾನ ಹೇಳಿದಳು.

ಪಾರ್ವತಿಯ ಬಾಣಂತನ ಮುಗಿಯುತ್ತ ಬಂದಿತ್ತು. ಅವಳು ತಣ್ಣೀರು ಮುಟ್ಟುವುದಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಮಗಳು ಮನೆಯ ಜವಾಬ್ದಾರಿ ವಹಿಸಿಕೊಳ್ಳಲು ಸಮರ್ಥಳಾಗಿದ್ದಾಳೆಂಬುದನ್ನು ಖಚಿತಪಡಿಸಿಕೊಂಡ ಮೇಲೆ ನರಸಮ್ಮ ಒಂದು ದಿನ

"ಪಾತೂ, ನಾಲ್ಕು ದಿವಸ ಹಳ್ಳಿಕಡೆ ಹೋಗಿಬಿಟ್ಟು ಬರ್ತೀನಿ ಕಣೇ—ಹೊಲಗದ್ದೆ ಏನಾಗಿದೆಯೋ ನೋಡಿಕೊಂಡು ಬರ್ತೀನಿ" ಎಂದಳು.

"ಕೆಲಸವಿಲ್ಲ ಕಾರ್ಯವಿಲ್ಲ. ಈಗೇಕಮ್ಮ ನೀನು ಹೋಗಬೇಕು."

"ಕೆಲಸವಿದೆ. ಗುತ್ತಿಗೆ ಕಾಗದ ಹೊಸದಾಗಿ ಮಾಡಿಸಬೇಕಾಗಿದೆ. ನಾನು ಬರುವಾಗಲೇ ಮನೆ ಸೋರುತ್ತಿತ್ತು. ಈ ಸಲದ ಮಳೆಗಾಲದಲ್ಲಿ ಮನೆ ಏನಾಗಿದೆಯೋ—ಹರೋಡಾಗದ ಹಾಗೆ ನೋಡಿಕೊಳ್ಳಬೇಡವೇ?"

"ನೀನು ಹೋದರೆ ಬರುವುದು?"

"ಎಂಟು ಹತ್ತು ದಿವಸದಲ್ಲಿ ಬಂದುಬಿಡುತ್ತೇನೆ."

"ಸಣ್ಣ ಮಗೂನೂ ಕಟ್ಟಿಕೊಂಡು ನಾನು ಹೇಗಿರಲಮ್ಮ. ಅವರು

ಬೆಳಿಗ್ಗೆ ಹೋಗುವ ಹೊತ್ತಿಗೆ ತಿಂಡಿಯಾಗಬೇಕು—ಪ್ರಭಾಕರ ಕಾಲೇಜಿಗೆ ಹೋಗುವ ಹೊತ್ತಿಗೆ ಅಡಿಗೆಯಾಗಬೇಕು."

"ಎಂಟು ಹತ್ತು ದಿವಸ ಹೇಗಾದರೂ ಸುದಾರಿಸಿಕೊಳ್ಳೇ—ನಾನು ಒಂದು ದಿನವೂ ಹೆಚ್ಚು ನಿಲ್ಲುವುದಿಲ್ಲ—ಬೇಗ ಬಂದು ಬಿಡುತ್ತೇನೆ."

ಎಂದು ಮಗಳನ್ನು ಒಪ್ಪಿಸಿ ರುದ್ರಾಕ್ಷಿಪುರಕ್ಕೆ ಪ್ರಯಾಣ ಬೆಳಸಿದಳು.

ಎಂಟು ಹತ್ತು ದಿನ ಕಳೆಯುವುದು ಪಾರ್ವತಿಗೆ ಎಂಟು ಹತ್ತು ಯುಗಗಳನ್ನು ಕಳೆದಂತಾಯಿತು. ನಾರಾಯಣ ತಾಯಿಯ ತೊಡೆ ಬಿಟ್ಟಿಳಿಯುತ್ತಿರಲಿಲ್ಲ.

ಅತ್ತಿಗೆಯ ತಾಪತ್ರಯ ನೋಡಲಾರದೆ ಪ್ರಭಾಕರ ಕಾಲೇಜ್ ಮುಗಿದ ಕೂಡಲೆ ಮನೆಗೆ ಬಂದು ಮಗುವನ್ನು ನೋಡಿಕೊಳ್ಳುತಿದ್ದ. ಪ್ರಭಾಕರನ ಲಾಲನೆ ಪಾಲನೆಗೂ ದಕ್ಕದೆ ಮಗು ಅತ್ತರೆ ಪಾರ್ವತಿ ನಿರ್ದಾಕ್ಷಿಣ್ಯವಾಗಿ 'ಮಗೂನ ಅಳಿಸಬೇಡವೋ ಪ್ರಭಾಕರ' ಎಂದು ಗದರಿ ಕೊಳ್ಳುತ್ತಿದ್ದಳು. ಅತ್ತಿಗೆಯ ವರ್ತನೆ ಕಂಡು ಪ್ರಭಾಕರನಿಗೆ ಒಮ್ಮೊಮ್ಮೆ ತಲೆಬೇಸರವುಂಟಾಗುತ್ತಿತ್ತು. ಅತ್ತಿಗೆಗೆ ಅರ್ಥವಾಗುವ ಭಾಷೆಯಲ್ಲಿಯೇ ಉತ್ತರಿಸಿ ಅವಳಿಗೆ ಬುದ್ಧಿಗಲಿಸಬೇಕೆಂದು ಪ್ರಭಾಕರ ಎಷ್ಟೋ ಬಾರಿ ಯೋಚಿಸುತ್ತಿದ್ದ. ದುಡಿದು ದುಡಿದು ಹಣ್ಣಾಗಿ ರಾತ್ರಿ ಹತ್ತು ಗಂಟೆಗೆ ಮನೆ ಸೇರುತ್ತಿದ್ದ ಅಣ್ಣನ ನೊಂದ ದೇಹ, ಸೋತಮುಖ ಕಂಡೊಡನೆಯೇ ಪ್ರಭಾಕರನ ಕೋಪ ಮಂಜಿನಂತೆ ಕರಗಿ ಹೋಗುತ್ತಿತ್ತು.

ಚಂದ್ರಶೇಖರ ಮನೆಗೆ ಬಂದೊಡನೆಯೇ

"ಊಟವಾಯಿತೇಪ್ಪ, ಪ್ರಭಾಕರ" ಎಂದು ಕೇಳುತ್ತಿದ್ದ.

"ಇಲ್ಲಣ್ಣಾ—ನೀನೂ ಬರಲಿ ಎಂದು ಕಾದಿದ್ದೇನೆ"

"ನನಗೆ ಏಕಪ್ಪಾ ಕಾಯುತ್ತೀ—ಬೆಳಿಗ್ಗೆ ಊಟಮಾಡಿ ಹೋದವನು, ಹಸಿವಾಗುವುದಿಲ್ಲವೇ? ಸಾಯಂಕಾಲ ಫುಟ್ ಬಾಲ್ ಬೇರೆ ಅಡಿ ದಣಿಯುತ್ತಿ!"

"ಇವತ್ತು ಆಟಕ್ಕೆ ಹೋಗಲಿಲ್ಲಣ್ಣಾ-ಬೇಗ ಮನೆಗೆ ಬಂದು ಬಿಟ್ಟೆ."

"ಅತ್ತೆಮ್ಮನವರು ಬರುವವರೆಗಾದರೂ ಬೇಗ ಮನೆಗೆ ಬರೋಣವೆಂವು ಪ್ರಯತ್ನಿಸುತ್ತೇನೆ. ಸಾಧ್ಯವಾಗುವುದಿಲ್ಲ. ಭಗವಂತನ ದಯೆಯಿಂದ

ಆಫೀಸಿಗೆ ಕೇಸುಗಳು ಬರುತ್ತಿವೆ. ಈಗ ನಾನು ಉಪೇಕ್ಷೆಮಾಡಿದರೆ, ಎಣ್ಣೆ ಬಂದಾಗ ಕಣ್ಣುಮುಚ್ಚಿದಂತಾಗುತ್ತದೆ."

"ನಿನ್ನ ಕೆಲಸ ನೀನು ನೋಡಿಕೋ ಚಂದ್ರಣ್ಣ. ನರಸಮ್ಮನವರು ಬರುವವರೆಗೆ ನಾರಾಯಣನ್ನ ನಾನು ನೋಡಿಕೊಳ್ಳುತ್ತೇನೆ—ಈ ಪಟಿಂಗ ನಮ್ಮನ್ನೆಲ್ಲಾ ಅಡ್ಡಡ್ಡಾಗಿ ನುಂಗಿಬಿಡುತ್ತಾನೆ. ಈಗಲೇ ನನ್ನ ನೋಡಿ ಕಿಲಕಿಲಾಂತ ನಗುತ್ತಾನೆ."

"ನೀನು ಒಳ್ಳೆಯ ಸ್ಪೋರ್ಟ್ಸ್‌ಮನ್ (Sportsman) ಎಂದು ತಿಳಿದು ಅವನು ನಿನ್ನನ್ನು ಈಗಿನಿಂದಲೇ ಆಶ್ರಯಿಸುತ್ತಿದ್ದಾನೆ ನೋಡು."

ಅಣ್ಣ ತಮ್ಮ ಇಬ್ಬರೂ ನಾರಾಯಣನನ್ನಾಡಿಸುತ್ತ ಲೋಕವನ್ನೇ ಮರೆಯುತ್ತಿದ್ದರು.

ತಕ್ಷಣವೇ ಪಾರ್ವತಿಯ ವಾಣಿ ಮಿಂಚಿನಂತೆ ಬಂದೆರಗುತ್ತಿತ್ತು.

"ಇನ್ನೂ ಊಟಕ್ಕೆ ಹೊತ್ತಾಗಿಲ್ಲವೇನು? ಹೀಗೆ ದುಡಿದು ನಾನು ನಿತ್ಯ ನಿದ್ದೆಗೆಟ್ಟರೆ ಹಾಸಿಗೆ ಹಿಡಿದು ಮಲಗಿ ಬಿಡುತ್ತೇನೆ."

ಅಣ್ಣ ತಮ್ಮ ಪರಸ್ಪರ ಮುಖನೋಡಿಕೊಂಡು ಊಟಕ್ಕೇಳುತ್ತಿದ್ದರು.

## ೩೧

ನರಸಮ್ಮ ಬರುತ್ತೇನೆಂದು ಹೇಳಿದ ದಿವಸ ಬರಲಿಲ್ಲ. ರುದ್ರಾಕ್ಷಿಪುರದ ಕೆಲಸಕಾರ್ಯಗಳೇ ಅವಳನ್ನಲ್ಲಿ ನಾಲ್ಕುದಿನ ಹೆಚ್ಚಾಗಿ ಕೊಳೆಹಾಕಿದವು. ಬೀಗರನ್ನು ಕಂಡು ಬರಲು ತುಮಕೂರಿಗೆ ಅವಳು ಹೋಗಲು ನಾಗಮ್ಮ ಬಿಡದೆ ಬೀಗಿತ್ತಿಯನ್ನು ಎರಡು ದಿವಸ ಉಳಿಸಿಕೊಂಡಳು.

ತನ್ನ ಕೃಷ್ಣಾಜಿನದ ಮಡಿಚೀಲದೊಂದಿಗೆ ಬೀಗಿತ್ತಿ ಕೊಟ್ಟ ಹಪ್ಪಳ, ಸಂಡಿಗೆ, ಬಾಳಕ, ಚಕ್ಕುಲಿ ಹಿಟ್ಟು, ಅವಲಕ್ಕಿ ಹೊತ್ತುಕೊಂಡು ನರಸಮ್ಮ ಬೆಂಗಳೂರಿಗೆ ಬಂದಿಳಿದಳು.

ಮನೆಗೆ ಕಾಲಿಟ್ಟೊಡನೆಯೇ ಮಗಳು ಸ್ವಾಗತ ಬಯಸುತ್ತಾ

"ಹೇಳಿದ ದಿವಸ ಚೆನ್ನಾಗಿ ಬಂದೆ" ಎಂದಳು.

ನರಸಮ್ಮ ನಕ್ಕು

"ಪಾತೂ ನಿನ್ನ ಎಳೇಮಗೂತನ ಬಿಡೋದೇ ಇಲ್ವಲ್ಲೇ ? ನಾನೇನು ಆಟ ಆಡೋದಿಕ್ಕೆ ಹೋಗಿದ್ದೆ ಎಂದು ತಿಳಿದುಕೊಂಡೆಯಾ ? ಊರಿನಲ್ಲಿಯೇ ನಾಲ್ಕು ದಿವಸವಾಯ್ತು. ಹಿಂದಿರುಗುವಾಗ ನಾಗಮ್ನೋರ್ನ ಕಂಡು ಬರೋಣಾಂತ ಹೋದೆ—ಅವರು ಎರಡು ದಿನ ಉಳಿಸಿಕೊಂಡರು."

"ಹೋಗಲಿ ಊರಿನಿಂದ ಏನು ತಂದೆ ?"

"ಹಪ್ಪಳ, ಸಂಡಿಗೆ, ಚಕ್ಕುಲಿ ಹಿಟ್ಟು."

"ಅಪರೂಪಕ್ಕೆ ಹುಟ್ಟಿರೋ ಮಗನಿಗೆ ಅವನ ಅಜ್ಜ ಅಜ್ಜಿ ಏನು ಕಳಿಸಿದರು ?"

"ಆಶೀರ್ವಾದ."

"ಅವರ ಹತ್ತಿರ ಇರೋದು ಅದೊಂದೇ! ಆಶಿರ್ವಾದಕ್ಕೇನು ದುಡ್ಡು ಖರ್ಚಾಗಬೇಕಿಲ್ಲ, ದುಗ್ಗಾಣಿ ಖರ್ಚಾಗಬೇಕಾಗಿಲ್ಲ."

"ಇನ್ನೇನು ಕಳಿಸಬೇಕಾಗಿತ್ತು."

"ಮಗೂ ಕೈಗೆ ಚಿನ್ನದ ಬಳೆಮಾಡಿಸಿ ಕಳಿಸೋಕೆ ತಿಳಿಯಲಿಲ್ಲವೇನೋ ಪಾಪ!"

"ಹಿರಿಯರು—ಅವರ ಆಶೀರ್ವಾದಕ್ಕಿಂತ ಚಿನ್ನದಬಳೆ ದೊಡ್ಡದೇನೇ ಪಾತೂ. ಸಾವಿರಜತೆ ಬಳೆ ನಿನ್ನ ಯಜಮಾನರೇ ಮಾಡಿಸಿಕೊಡುತ್ತಾರೆ."

"ತಲೆಯಿಂದ ಕಾಲಿನವರೆಗೆ ಜವಾಹಿರಿ ಹೇರಿ ನನ್ನ ಮೆರೆಸುತ್ತಾ ಇದ್ದಾರಲ್ಲಾ."

"ನೀನು ತಿಳಿದವಳೂ ಅಲ್ಲ—ತಿಳೀದೇ ಇದ್ದವಳೂ ಅಲ್ಲ. ಇದೆಲ್ಲಾ ಆ ಕುಮುದಮ್ಮನ ಪಾಠಾಂತ ಕಾಣತ್ತೆ."

"ನೀನು ಕುಮುದಕ್ಕನ್ನ ಏನೂ ಅನ್ನಬೇಡಮ್ಮ."

"ತಪ್ಪಾಯಿತುಕಣೇ ಮಹಾರಾಯಿತಿ. ನಿನ್ನ ಮುಚ್ಚಟೆ ಕುಮುದಕ್ಕನ್ನ ನಾನೇಕೆ ಅನ್ನೋಕೆ ಹೋಗಲಿ ಸದ್ಯ!"

ಬಸ್ಸಿನಲ್ಲಿ ದಣಿದು ಬಂದಿದ್ದ ನರಸಮ್ಮ ರಾತ್ರಿ ಅಡಿಗೆ ಮಾಡಲು ಹೋಗಲಿಲ್ಲ. ಮೊಮ್ಮಗನನ್ನೆತ್ತಿಕೊಂಡು ಹಜಾರದಲ್ಲಿ ಕುಳಿತಳು. ಪಾರ್ವತಿಯೇ ಧುಮುಗುಟ್ಟಿಕೊಂಡು ಅನ್ನ ಸಾರು ಮಾಡಿ ಹಪ್ಪಳ ಸಂಡಿಗೆ ಕರಿದಿಟ್ಟಳು.

ಚಂದ್ರಶೇಖರ ಮನೆಗೆ ಬಂದವನೇ ಅತ್ತೆಯನ್ನು ಮಾತನಾಡಿಸಿ, ಅವಳ ಯೋಗಕ್ಷೇಮ, ಊರಿನಲ್ಲಿ ತಾಯಿತಂದೆಯ ಯೋಗಕ್ಷೇಮ ವಿಚಾರಿಸಿದ. ಅಡಿಗೆಯ ಮನೆ ಕೆಲಸ ಮುಗಿದಿದ್ದುದರಿಂದ ಪಾರ್ವತಿಯೂ ಬಂದು ನಿಂತುಕೊಂಡಳು. ನರಸಮ್ಮ ಮೆಲ್ಲನೆ ಮಗಳನ್ನು ಪ್ರಶ್ನಿಸುವ ವ್ಯಾಜದಲ್ಲಿ

"ಮನೆ ಬಿಡಬೇಕೂಂತ ಅಮಲ್ದಾರರು ತಿರುಗಿ ಗಲಾಟೆ ಮಾಡಿದರೇ?"

"ಸರಿ, ಅವರದು ಇದ್ದೇ ಇದೆ ನಿತ್ಯರಾಮಾಯಣ."

"ನಿತ್ಯ ರಾಮಾಯಣ ಅನ್ನುತ್ತೀ—ಮನೆ ಬಿಟ್ಟುಬಿಡೋಣವೆಂದರೆ ಅದಕ್ಕೂ ಒಪ್ಪಲೊಲ್ಲೆ" ಎಂದು ಚಂದ್ರಶೇಖರ ನುಡಿದ.

"ಅಮಲ್ದಾರರ ಬಾಯಿಗೆ ಹೆದರಿಕೊಂಡು ಮನೆ ಬಿಟ್ಟರೆ ನಮ್ಮ ಯೋಗ್ಯತೆ ಕಸಕ್ಕಿಂತ ಕಡೆಯಾಗುತ್ತದೆ."

"ಅರಸನ ಅಂಕೆ ಬೇಡ, ಅಗಸನ ಚಿಂತೆ ಬೇಡ—ಸ್ವಂತ ಮನೆ ಮಾಡಿ ಕೊಂಡು ಹೋದರೆ ಈ ರಾಮಾಯಣ, ಮಹಾಭಾರತ ತಾನೇ ನಿಂತು ಹೋಗುತ್ತದೆ"

"ನಿನಗೇನು ಹುಚ್ಚು ಹಿಡೀತೇನಮ್ಮಾ. ಮನೆ ಬಾಡಿಗೆ ಕೊಡೋ ದಿಕ್ಕೇ ಇಷ್ಟು ಕಷ್ಟವಾಗಿರುವಾಗ ಮನೆಕೊಳ್ಳುವ ಮಾತು ಎಲ್ಲಿಂದ ಬಂತು ?"

ನರಸಮ್ಮ ಮೆಲ್ಲನೆದ್ದು ಮಗುವನ್ನು ಪಾರ್ವತಿಯ ಕೈಗೆ ಕೊಟ್ಟು ತನ್ನ ಕೃಷ್ಣಾಜಿನದ ಮಡಿಚೀಲದೊಳಗಿದ್ದ ಚಿನಡಿಸೀರೆಯ ಗಂಟನ್ನು ಕೈಗೆತ್ತಿಕೊಂಡು, ಚಂದ್ರಶೇಖರನ ಮುಂದಿಟ್ಟು

"ಎಣಿಸಿನೋಡಿ—ಎಷ್ಟಿದೆ" ಎಂದಳು.

ವಿಸ್ಮಯಗೊಂಡ ಪಾರ್ವತಿಯ ಎರಡು ಕಣ್ಣುಗಳೂ ಗಂಟಿನ ಮೇಲೆ ನೆಟ್ಟವು.

ಚಂದ್ರಶೇಖರ ಚಿನಡಿಸೀರೆಯ ಬ್ರಹ್ಮಗಂಟುಗಳನ್ನು ಬಿಚ್ಚಿ ಅದರೊಳ ಗಿದ್ದ ನೋಟುಗಳನ್ನೆಣಿಸಿ

"ಎಂಟು ಸಾವಿರ ರೂಪಾಯಿ ಇದೆ" ಎಂದ.

"ಎಂಟು ಸಾವಿರವೇ" ಎಂದಳು ಪಾರ್ವತಿ.

"ಒಳಗೆ ಭದ್ರವಾಗಿಟ್ಟುಕೊಳ್ಳಿ. ಸರಿಯಾದವರು ಯಾರಿಗಾದರೂ ಹೇಳಿ, ಒಳ್ಳೆಸ್ಥಳದಲ್ಲಿ ಮನೆ ತೆಗೆದುಕೊಳ್ಳಿ."

"ಇದಕ್ಕೇನೇ ಅಮ್ಮಾ—ನೀನು ಇಷ್ಟು ದಿವಸ ಹೋಗಿದ್ದದ್ದು-ಎಲ್ಲಿ ತ್ತಮ್ಮ ಇಷ್ಟೊಂದು ದುಡ್ಡು"

ಎಂದು ಆಶ್ಚರ್ಯದಿಂದ ಪಾರ್ವತಿ ಕೇಳಲು ನರಸಮ್ಮ ನಗುತ್ತ

"ಕದ್ದುಕೊಂಡು ಬಂದೆ ಕಣೇ ಪಾತೂ"

ಎಂದು ನುಡಿದು ಒಳಕ್ಕೆ ಹೋದಳು.

ಎರಡು ದಿನಗಳ ತರುವಾಯ ಪಾರ್ವತಿ ತಾಯಿಗೆ ಗಂಟುಬಿದ್ದು ಹಣದ ಮೂಲವನ್ನು ಹೊರಡಿಸಿಯೇ ಬಿಟ್ಟಳು.

"ಗದ್ದೆ ಮಾರಿಬಿಟ್ಟೆ ಕಣೇ ಪಾತೂ. ಹೊಲ ಒಂದು ಉಳಿಸಿಕೊಂಡಿದ್ದೀನಿ. ನಿಮಗೆ ಮನೆ ಬೇಕಾಗಿರುವಾಗ ಗದ್ದೆಯಿಟ್ಟುಕೊಂಡು ಏನು ಮಾಡಲಿ ?—ಅದಾದರೂ ನಿನಗೇ ಸೇರಬೇಕಾಗಿತ್ತು."

ಪಾರ್ವತಿ ಹೌದು, ಹೌದು ಎಂದಳು.

ಅತ್ತೆ ಕೊಟ್ಟ ಹಣವನ್ನು ಚಂದ್ರಶೇಖರ ಭದ್ರವಾಗಿ ಒಳಗೆ ಮುಚ್ಚಿಟ್ಟರೂ ಅದರಲ್ಲಿ ಒಂದು ಬಿಡಿಕಾಸನ್ನು ಮುಟ್ಟಲಿಲ್ಲ. ನರಸಮ್ಮನೇ ಅಳಿಯನನ್ನು

"ಮನೆ ವಿಚಾರಿಸಿದಿರಾ" ಎಂದು ಕೇಳಿದಳು.

"ಇಲ್ಲ."

"ಹತ್ತಿರ ದುಡ್ಡಿದ್ದರೆ ಖರ್ಚಾಗಿಹೋಗುತ್ತದೆ. ಮೊದಲು ಮನೆ ವಿಚಾರಿಸಿ ಖರೀದಿಮಾಡಿ."

"ಇದು ಯಾವ ನ್ಯಾಯ ?"

"ಯಾವದು ?"

"ನಿಮ್ಮನ್ನು ಸುಲಿಯುವುದು. ಈಗಾಗಲೇ ನೀವು ಮಾಡಿರುವ ಉಪಕಾರ ಎಷ್ಟು ಜನ್ಮವೆತ್ತಿ ನಾನು ತೀರಿಸಬೇಕು— ಅದರ ಮೇಲೆ ಈ ಹೊರೆಯನ್ನೂ ಹೇಗೆ ಹೊರಲಿ."

"ನನಗೆ ಪಾತೂ, ನೀವಲ್ಲದೆ ಇನ್ನು ಯಾರಿದ್ದಾರೆ ದಿಕ್ಕು. ಪಾತೂ ತಂದೆ ಸಂಪಾದಿಸಿದ್ದು ಅವಳಿಗೆ ಸೇರಬೇಕಾದುದೇ ನ್ಯಾಯವಲ್ಲವೇ ? ಇರುವ ತನಕ ನನಗೆ ಅನ್ನಹಾಕುತ್ತೀರಿ, ಬಟ್ಟೆ ತೆಗೆದು ಕೊಡುತ್ತೀರಿ. ಸತ್ತಮೇಲೆ ಸುಟ್ಟು ಕರ್ಮ ಮಾಡುತ್ತೀರಿ. ನಿಮಗೆ ಪ್ರಯೋಜನವಿಲ್ಲದ ಆಸ್ತಿಯಿಟ್ಟು ಕೊಂಡು ನಾನೇನು ಮಾಡಲಿ."

ಚಂದ್ರಶೇಖರನ ಬಾಯಿಂದ ಮಾತು ಹೊರಡಲಿಲ್ಲ. ನರಸಮ್ಮನ ಎರಡು ಪಾದಗಳನ್ನೂ ಹಿಡಿದು ನಮಸ್ಕರಿಸಿ

"ಅಮ್ಮಾ— ಊರಿನಲ್ಲಿರುವ ಆ ನನ್ನ ತಾಯಿ, ಇಲ್ಲಿರುವ ನೀವು— ಇಬ್ಬರೂ ನನ್ನ ಭಾಗ್ಯದೇವತೆಗಳು–ನನ್ನ ಧರ್ಮದೇವತೆಗಳು" ಎಂದ.

ಚಂದ್ರಶೇಖರ ಮನೆಹುಡುಕುವ ಕೆಲಸ ಗೋವಿಂದಯ್ಯನಿಗೆ ಒಪ್ಪಿಸಿ ನಿರಾತಂಕವಾಗಿದ್ದ.

ಗೋವಿಂದಯ್ಯ ಊರು ಶೋಧಿಸಿ ನಾಲ್ಕುಮನೆ ನೋಡಿ ಪಾರ್ವತಿ ಯನ್ನೂ ನರಸಮ್ಮನನ್ನೂ ಕರೆದುಕೊಂಡು ಹೋಗಿ ತೋರಿಸಿದ.

ನರಸಮ್ಮ ಒಪ್ಪಿದ ಬಸವನಗುಡಿಮನೆಯನ್ನು ಪಾರ್ವತಿ ಒಪ್ಪಲಿಲ್ಲ.

"ಆ ಮನೆ ಚೆನ್ನಿಲ್ಲಮ್ಮ—ಕಿಷ್ಕಿಂದಾಕಾಂಡವಿದ್ದ ಹಾಗಿದೆ. ರೂಮು ಗಳೆಲ್ಲಾ ಪುಟ್ಟ ಪುಟ್ಟವು" ಎಂದಳು.

"ಸುತ್ತ ಎಷ್ಟು ಭೂಮಿಯಿದೆ ನೋಡೇ ಪಾತೂ. ನಾಲ್ಕು ತೆಂಗಿನ ಸಸಿ ಹಾಕಿದರೆ ಮನೆಪೂರ್ತಕ್ಕೆ ಕಾಯಾಗುತ್ತದೆ. ತುಂಬ ಹೂವಿನಗಿಡ ಗಳನ್ನು ಹಾಕಬಹುದು."

"ನನಗೇನೋ ಶಂಕರಪುರದ ಮನೆ ಚೆನ್ನಾಗಿದೆ" ಎಂದಳು ಪಾರ್ವತಿ.

ಚಂದ್ರಶೇಖರ, ಪ್ರಭಾಕರನೂ ಹೋಗಿ ಮನೆ ನೋಡಿ ಬಂದರು.

ಶಂಕರಮಠದ ಮುಂದಿನ ಮೈದಾನದ ಬದಿಗೆ ಒಂದು ಸಾಲು ಮನೆ ಗಳಿದ್ದುವು. ಅವುಗಳಲ್ಲಿ ಒಂದನ್ನೇ ಪಾರ್ವತಿ ಒಪ್ಪಿದ್ದುದು.

ನರಸಮ್ಮ ಒಪ್ಪಿಕೊಂಡಿದ್ದ ಮನೆಯ ಸುತ್ತವಿದ್ದಷ್ಟು ಭೂಮಿ ಯಿಲ್ಲದಿದ್ದರೂ ಇಪ್ಪತ್ತು ಅಡಿ ಖಾಲಿ ನಿವೇಶನವಿತ್ತು. ಮನೆ ವಿಶಾಲವಾಗಿ ಅಚ್ಚುಗಟ್ಟಾಗಿ ಕಟ್ಟಲ್ಪಟ್ಟಿತ್ತು. ಮನೆ ಪ್ರವೇಶಮಾಡಿದ ಕೂಡಲೆ ಸಣ್ಣ ವೆರಂಡಾ; ಅತ್ತಿತ್ತ ಎರಡು ವಿಶಾಲವಾದ ರೂಮುಗಳು. ವೆರಾಂಡದಲ್ಲಿಯೇ ನೇರವಾಗಿ ಹೋದರೆ ವಿಶಾಲ ಹಜಾರ; ಹಜಾರದ ಎಡಗಡೆ ಮತ್ತೊಂದು ರೂಮು; ಹಜಾರದೊಳಗೆ ಪ್ರವೇಶಿಸಿದರೆ ಎಡಕ್ಕೆ ಉಗ್ರಾಣ; ಬಲಕ್ಕೆ ಅಡಿಗೆಯ ಮನೆ, ಊಟದ ಮನೆ. ಉಗ್ರಾಣದ ಪಕ್ಕಕ್ಕೆ ಸ್ನಾನಗೃಹದ ಮುಂದೊಂದು ಸಣ್ಣವೆರಾಂಡ.

ಮನೆ ಅನುಕೂಲ್ಯ, ಅಭಿರುಚಿಗಳೆರಡರ ಪ್ರತೀಕವಾಗಿತ್ತು. ಎಲ್ಲರಿಗೂ ಒಪ್ಪಿಗೆಯಾಗುವಂಥ ಮನೆಯನ್ನು ಗೊತ್ತುಮಾಡಿಕೊಟ್ಟಿದ್ದಕ್ಕೆ ಗೋವಿಂದಯ್ಯನಿಗೆ ಕೃತಜ್ಞತೆ ಸೂಚಿಸಿದರು. ರಿಜಿಸ್ಟ್ರೇಷನ್ ಅಳಿ ಮಯ್ಯಂದಿರ ಹೆಸರಿಗೇ ಆಗಲಿ ಎಂದು ನರಸಮ್ಮ ಸೂಚಿಸಿದಳು. ಚಂದ್ರ ಶೇಖರ ಅತ್ತೆಯ ಸಲಹೆಯನ್ನು ಸುತರಾಂ ಒಪ್ಪಲಿಲ್ಲ. ಪಾತೂ ಹೆಸರಿ ನಲ್ಲಿಯೇ ಮನೆಯಿರಬೇಕು ಎಂದವನು ಹಟಹಿಡಿದ.

ಚಂದ್ರಶೇಖರನಿಗೆ ಸ್ವಂತ ಮನೆಯಾದ ವಿಷಯ ಕೇಳಿ ನಾಗಮ್ಮ ಹಿಗ್ಗಿ ಹೋದಳು.

"ನನ್ನ ಮೊಮ್ಮಗ ಒಳ್ಳೆಯ ಅದೃಷ್ಟಶಾಲಿ. ಪ್ರಪಂಚಕ್ಕೆ ಅವನು ಬಂದ ಕೂಡಲೆ ತಂದೆಗೆ ಸ್ವಂತ ಮನೆ ಮಾಡಿ ಕೊಟ್ಟ" ಎಂದು ಹಿಗ್ಗಿದಳು.

ಚಂದ್ರಶೇಖರ ಮನೆಕೊಳ್ಳುವುದಕ್ಕೆ ನರಸಮ್ಮ ಹಣಕೊಟ್ಟಿರುವ ಸಂಗತಿ ಕೇಳಿದೊಡನೆಯೇ ಆದಿಶೇಷಯ್ಯ ಭೂಮಿಗಿಳಿದುಹೋದರು. ತಮ್ಮ ಅಸಹಾಯಕ ಸ್ಥಿತಿಯನ್ನು ನೆನೆದು ಅವರು ಗೋಳಿಟ್ಟರು.

## ೩೨

ಹೊಸಮನೆಯನ್ನು ತಮ್ಮ ಪಾದಧೂಳಿಯಿಂದ ಭಟ್ಟರು ಪವಿತ್ರಮಾಡ ಬೇಕೆನ್ನುವುದು ನರಸಮ್ಮನ ಮಹದಾಕಾಂಕ್ಷೆಯಿತ್ತು.

ಭಟ್ಟರು ಶೃಂಗೇರಿ ಬಿಡುವಂತಿರಲಿಲ್ಲ.

ಸೀತಾರಾಮನ ಪೂರ್ಣ ಜವಾಬ್ದಾರಿ ಭಟ್ಟರ ಮೇಲೆ ಬಿದ್ದಿತ್ತು.

ಶ್ರೀಗುರುಗಳ ಆರೋಗ್ಯಸ್ಥಿತಿ ಎಲ್ಲರಿಗೂ ಪ್ರಬಲ ಚಿಂತೆಯನ್ನುಂಟು ಮಾಡಿತ್ತು. ಗುರುಗಳಿಗೆ ಹುಚ್ಚು ಹಿಡಿದಿದೆಯೆನ್ನುವ ವಾರ್ತೆ ದೇಶದ ಅಷ್ಟಮೂಲೆಗಳಿಗೂ ಹಬ್ಬಿತ್ತು.

ಒಂದು ದಿನ ಭಟ್ಟರು ನದೀತೀರದಲ್ಲಿ ಸೀತಾರಾಮನೊಂದಿಗೆ ತಿರುಗಾಡು ತ್ತಿದ್ದರು. ಮ್ಲಾನವದನನಾಗಿದ್ದ ಸೀತಾರಾಮನನ್ನು ನೋಡಿ ಅಂತಃಕರಣದಿಂದ

"ಏಕೆ ಸೀತಾರಾಮು–ಈಚೆಗೆ ಬಹಳ ಖಿನ್ನನಾಗಿದ್ದೀ?" ಎಂದು ಕೇಳಿದರು.

ಸೀತಾರಾಮು ಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳುವುದಕ್ಕುಪಕ್ರಮಿಸಿದ. ಭಟ್ಟರು ಅವನನ್ನು ಸಂತೈಸುತ್ತಾ

"ಏನಾಯಿತಪ್ಪಾ ಹೇಳು ದುಃಖಿಸಬೇಡ."

"ದೊಡ್ಡಗುರುಗಳಿಗೆ ಹುಚ್ಚು ಹಿಡಿದಿರುವುದು ನಿಜವೇ?"

ಭಟ್ಟರು ಗಹಗಹಿಸಿ ನಗುತ್ತಾ

"ನಿಜ ಸೀತಾರಾಮು–ನಿಜ."

"ನೀವೂ ಹೀಗೆನ್ನುವಿರಾ ಗುರುಗಳೇ?"

"ಜನ ತಿಳಿದುಕೊಂಡಿರುವ ಹುಚ್ಚಲ್ಲ ಸೀತಾರಾಮು. ಅತ್ಯಾಸೆ–ಆಶಾ

ಭಂಗ ಎರಡು ಹುಚ್ಚಿನ ಕಾರಣಗಳು; ಅತ್ಯಾನಂದ ಅನಿರೀಕ್ಷಿತ ಸಂಘಟನೆಗಳೂ ಹುಚ್ಚಿನ ಕಾರಣಗಳಾಗುತ್ತವೆ-ಗುರುಗಳ ಹುಚ್ಚು ಈ ವರ್ಗಗಳಿಗೆ ಸೇರಿದವುಗಳಲ್ಲ."

"ಇದೊಂದು ಹೊಸಬಗೆಯ ಹುಚ್ಚೇ?"

"ಊ! ಹೊಸಬಗೆಯದು ಎಂದು ಹೇಳಬಹುದು; ಆದರೆ ಆಳವಾಗಿ ವಿಚಾರ ಮಾಡಿದರೆ ಇದು ಹಳೆಯದೇ. ನೋಡು ಸೀತಾರಾಮು. ಈಗ್ಗೆ ಹಲವು ವರ್ಷಗಳ ಹಿಂದೆ ದಕ್ಷಿಣೇಶ್ವರದಲ್ಲಿ ಶ್ರೀ ರಾಮಕೃಷ್ಣಪರಮಹಂಸರು ಎನ್ನುವ ಹುಚ್ಚರೊಬ್ಬರಿದ್ದರಂತೆ. ಮನಸ್ಸು ಬಂದಹಾಗೆ ಅಳುತ್ತಿದ್ದರಂತೆ, ನಗುತ್ತಿದ್ದರಂತೆ. ಭವತಾರಿಣಿಯ ಪಾದಗಳಿಗೆ ತಲೆಚಚ್ಚಿಕೊಂಡು 'ಈ ದಿನವೂ ನಿರರ್ಥಕವಾಗಿ ಹೋಯಿತಲ್ಲಾ' ಎಂದು ಪ್ರಲಾಪಿಸುತ್ತಿದ್ದರಂತೆ! ಕ್ಷಣಭಂಗುರವಾದ ಕೀರ್ತಿ, ಐಶ್ವರ್ಯ, ಅಧಿಕಾರ, ಪದವಿಗಳನ್ನು ಬಯಸುವವರೇ ಹಗಲಿರುಳೂ ಅವುಗಳಿಗಾಗಿ ಚಿಂತಿಸುವಾಗ, ಬ್ರಹ್ಮಸಾಕ್ಷಾತ್ಕಾರ ಬಯಸುವವರು ಇನ್ನೆಷ್ಟು ಧಾವತಿಪಡಬೇಕು - ಇನ್ನೆಷ್ಟು ಬವಣೆಗೊಳ್ಳಬೇಕು. ತಮ್ಮ ಅಲ್ಪ ಬುದ್ಧಿ, ಅಲ್ಪ ವಿಚಾರದ ಮಾನದಂಡದಿಂದಲೇ ಎಲ್ಲರನ್ನೂ ಅಳೆಯುವುದು ಮಾನವರ ಲಕ್ಷಣ. ಶ್ರೀಗಳು ಮಾನವರಲ್ಲ. ಭಗವಂತನ ಚಿದಂಶವೇ ಶ್ರೀ ಚಂದ್ರಶೇಖರ ಗುರುಗಳಾಗಿ ಅವತರಿಸಿದೆ. ಶ್ರೀಗಳವರ ಹುಚ್ಚನ್ನು ಅರ್ಥಮಾಡಿಕೊಳ್ಳುವುದು ನಮ್ಮ ಶಕ್ತಿಯೇ ಸೀತಾರಾಮು."

"ಶ್ರೀ ಗುರುದೇವರಿಗೆ ಯಾವ ತೊಂದರೆಯಾಗುವುದಿಲ್ಲವಷ್ಟೆ!"

"ತೊಂದರೆ!—ನಮ್ಮೆಲ್ಲರನ್ನೂ ತೊಂದರೆ, ದುಃಖ, ಮನೋವಿಕಲ್ಪ, ಶತ್ರುಬಾಧೆಯಿಂದ ಮುಕ್ತರನ್ನಾಗಿ ಮಾಡಬೇಕೆಂದಲ್ಲವೇ ಶ್ರೀಗುರುಗಳು ಇಷ್ಟು ಆಂಹತಿಗೊಳಗಾಗಿರುವುದು. ಗುರುಸ್ವಾಮಿ ಸಾಧನಯೋಗದ ಒಂದು ಮಹತ್ತ್ವದ ಘಟ್ಟದಲ್ಲಿದ್ದಾರೆ ಸೀತಾರಾಮು. ನೀನೇ ನೋಡುತ್ತಿರು-ಪರೆಕಳೆದ ಹಾವಿನಂತೆ ಅವರು ಈ ಸ್ಥಿತಿ ದಾಟಿ ಪರಿಶುದ್ಧರಾಗಿ, ಪರಿಪೂರ್ಣರಾಗಿ ಪ್ರಜ್ಞಾಪರಂಜ್ಯೋತಿಗಳಾಗಿ ವಿರಾಜಿಸುತ್ತಾರೆನ್ನುವುದನ್ನು ಜಗತ್ತು ನೋಡುವುದು. ಆ ಮಹಾದಿನ ಲೋಕದ ಭಾಗ್ಯದ ಬಾಗಿಲು ತೆಗೆಯುತ್ತದೆ-ಶೃಂಗೇರಿಯಲ್ಲಿ ಹುಟ್ಟಿದ ಬೆಳಕು ವಿಶ್ವವನ್ನೇ ಬೆಳಗಿಸುತ್ತದೆ."

"ಅನುಗ್ರಹೀತನಾದೆ ಗುರುಗಳೇ."

"ನರಸಮ್ಮ ಅಳಿಯ ಮಗಳಿಗೆ ಮನೆಮಾಡಿಕೊಟ್ಟಿದ್ದಾಳೆ ಸೀತಾರಾಮು. ರುದ್ರಾಕ್ಷಿಪುರದ ಗದ್ದೆ ಮಾರಿಬಿಟ್ಟಳಂತೆ. ತ್ಯಾಗ-ವೈರಾಗ್ಯ ಎಂದು ನಾವು ದೊಡ್ಡ ದೊಡ್ಡ ಮಾತುಗಳನ್ನಾಡುತ್ತೇವೆ. ನೋಡು—ನಿರಕ್ಷರಕುಕ್ಷಿಯಾದ ಈ ಹೆಣ್ಣುಮಗಳಲ್ಲಿ ತ್ಯಾಗ, ವೈರಾಗ್ಯ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿದೆ."

"ತ್ಯಾಗ, ವೈರಾಗ್ಯ ಸಾಧಿಸುವುದಕ್ಕೆ ಉದ್ಬೋಧೆ, ಗುರುಕರುಣೆ ಅವಶ್ಯಕವಲ್ಲವೇ ?"

"ಅವಶ್ಯಕ—ಕರ್ಮಜೀವಿಗಳಿಗೆ, ನರಸಮ್ಮನಂಥವರು ಜೀವನ್ಮುಕ್ತರು. ಕರ್ಮದ ಕಸರೆಯನ್ನು ಅವರು ಕಳೆದುಕೊಂಡೇ ಹುಟ್ಟಿರುತ್ತಾರೆ. ಯೋಗ ಜೀವನ ಕೆಲವರಿಗೆ ಸಾಧಿಸಿದರೆ—ಜೀವನಯೋಗ ಕೆಲವರಿಗೆ ಸಾಧಿಸುತ್ತದೆ."

"ಸಂಪ್ರದಾಯ ಕಲಿಕೆಗೆ ಕೊಡುವ ಬೆಲೆಯನ್ನು ನೀವು ಕೊಡುವುದಿಲ್ಲವಲ್ಲವೇ ಗುರುಗಳೇ ?"

"ಹೇಗೆ ಕೊಡಲಿ ? ಸುಪ್ತಜ್ಞಾನವನ್ನು ಕಲಿಕೆ ಪ್ರಚೋದಿಸಬಹುದಲ್ಲದೆ, ಜ್ಞಾನಶೂನ್ಯತೆಯ ಲೋಪವನ್ನು ನಿವಾರಿಸಲಾರದು. ವೃತ್ತಿ-ಪ್ರವೃತ್ತಿಯ ಶಿಶು. ಬೀಜವೇ ಇಲ್ಲದಿದ್ದರೆ ಗಿಡಬೆಳಸುವುದು ಸಾಧ್ಯವೇ ?"

"ಪ್ರವೃತ್ತಿ ಎಲ್ಲರಲ್ಲಿಯೂ ಇರುತ್ತದೆಯೋ—ಇದು ಕೇವಲ ಕೆಲವರ ಸೊತ್ತೋ ?"

"ಒಂದೇ ಉಗ್ರಾಣದಿಂದ ಹಲವರು ಬೀಜದ ಭತ್ತ ತಂದು ನೆಡುತ್ತಾರೆ. ಒಬ್ಬೊಬ್ಬನ ಭೂಮಿಯಲ್ಲಿ ಒಂದೊಂದು ಬಗೆಯ ಭತ್ತ, ಬೇರೆಬೇರೆ ಪ್ರಮಾಣಗಳಲ್ಲಿ ಬೆಳೆಯುವುದಕ್ಕೇನು ಕಾರಣ ? ಭತ್ತದ ಬೆಳೆ ಹೇಗೆ ಕೃಷಿಯ ಗುಣಾವಗುಣಗಳನ್ನೂ, ಶ್ರದ್ಧಾಶ್ರದ್ಧೆಗಳನ್ನವಲಂಬಿಸುವುದೋ ಹಾಗೆ ಪ್ರವೃತ್ತಿಯ ಬೆಳೆ ಕೂಡ."

ಭಟ್ಟರ ಮಾತು ಸೀತಾರಾಮನ ಮನಸ್ಸಿನಲ್ಲಿ ಮೊರೆಯುತೊಡಗಿತು. 'ವೃತ್ತಿ ಪ್ರವೃತ್ತಿಯ ಶಿಶು—ಕೃಷಿಯಿಂದಲೇ ಪ್ರವೃತ್ತಿಯ ವಿಕಾಸ' ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡ.

## ೩೩

ಪ್ರಭಾಕರನಿಗೆ ಅವನ ಸಹಪಾಠಿಗಳೆಲ್ಲರೂ ವಿಶ್ವಾಸಿಗಳಾಗಿದ್ದರೂ ಅವನ ಗೆಳೆಯರ ಬಳಗಕ್ಕೆ ಸೇರಿದವರು ಸಂಜೀವರೆಡ್ಡಿ, ನರಸಿಂಹನಾಯಕ, ಗೋಪಾಲಕೃಷ್ಣ, ಸಿದ್ದಬಸವಯ್ಯ ಮತ್ತು ಹಬೀಬ್. ಅವರಲ್ಲಿ ನರಸಿಂಹ ನಾಯಕನಿಗೂ ಪ್ರಭಾಕರನಿಗೂ ಹಾರ್ದಿಕಸ್ನೇಹ ಬೆಳೆದಿತ್ತು.

ಚಿತ್ರದುರ್ಗದ ಮಹಾಕಲಿ ಮದಕರಿನಾಯಕನ ವಂಶಕ್ಕೆ ಸೇರಿದ್ದ ನರಸಿಂಹನಾಯಕನಲ್ಲಿ ವಂಶಪಾರಂಪರ್ಯವಾದ ಕ್ಷಾತ್ರ ಸಜೀವವಾಗಿ ನೆಲಸಿತ್ತು. ನರಸಿಂಹನಾಯಕ ಮದಕರಿನಾಯಕನ ವಂಶೋದ್ಭವನೆನ್ನುವುದಕ್ಕೆ ಅವನ ಸೈಂಧವ ನಿಲುವು, ಕಬ್ಬಿಣದ ಕಂಬಗಳಂತಿದ್ದ ಕೈಕಾಲುಗಳು ಸಾಕ್ಷ್ಯ ಹೇಳು ತ್ತಿದ್ದವು. ಅಚ್ಚಕಪ್ಪು ಬಣ್ಣದ ನಾಯಕನನ್ನು ಅವನ ಗೆಳೆಯರು ವಿನೋದಕ್ಕೆ 'ಕರಿನಾಯಕ'ನೆಂದು ಕರೆಯುತ್ತಿದ್ದರು.

ನಾಯಕ ಐಶ್ವರ್ಯಸುಖದ ಸುಪ್ಪತ್ತಿಗೆಯ ಮೇಲೇ ಬೆಳೆದಿದ್ದರೂ ಬಡತನವನ್ನು ತುಚ್ಛವಾಗಿ ಕಾಣುವ ಮನೋವೃತ್ತಿ ಪಡೆದಿರಲಿಲ್ಲ.

ಕಾಲೇಜು ಮುಗಿಸಿಕೊಂಡು ರಜೆಗೆ ಊರಿಗೆ ಹೋಗುತ್ತಿದ್ದ ನಾಯಕ ತನ್ನ ಹೆಚ್ಚು ಸಮಯವನ್ನು ದುರ್ಗದಕೋಟೆ ಕೊತ್ತಳಗಳಲ್ಲಿಯೇ ಕಳೆಯು ತ್ತಿದ್ದ. ತನ್ನ ಮನೆತನದ ಪೂರ್ವೇತಿಹಾಸ–ಅವರ ವೈಭವಯುತ ಜೀವನ–ಅವರ ವೀರಧೀರ ಮನೋವೃತ್ತಿ–ಸ್ವಾತಂತ್ರ್ಯಾಭಿಲಾಷೆಗಳನ್ನು ಸ್ಮರಿಸಿಕೊಳ್ಳು ತ್ತಿದ್ದ ನಾಯಕನ ನರನಾಡಿಗಳಲ್ಲಿ ವಿದ್ಯುದ್ವೇಗದಲ್ಲಿ ರಕ್ತಸಂಚಾರವಾಗು ತ್ತಿತ್ತು. ನಾಯಕರನ್ನು ಮೋಸದಿಂದ ಗೆದ್ದು ಟಿಪ್ಪುಸುಲ್ತಾನ್ ನಾಯಕ ಸಾಮ್ರಾಜ್ಯವನ್ನು ಮಣ್ಣುಗೂಡಿಸಿದ್ದ; ಟಿಪ್ಪೂಸುಲ್ತಾನನನ್ನು ಮೋಸದಿಂದ

ಗೆದ್ದು ಬ್ರಿಟಿಷರು ಶ್ರೀರಂಗಪಟ್ಟಣವನ್ನು ನಾಯಿ, ನರಿ, ಹದ್ದುಗಳಿಗೆ ಒಪ್ಪಿಸಿದ್ದರು.

ಪ್ರಭಾಕರನಿಗೆ ಹಿಂದಿನ ಇತಿಹಾಸ ನಿರೂಪಿಸುತ್ತಾ ನಾಯಕನ ಮಾಂಸಖಂಡಗಳು ಬಿಗಿದು, ನರಗಳು ಕಂಚಿಹುರಿಯಂತಾಗುತ್ತಿದ್ದವು. ಅವನ ಶಾಮಲವರ್ಣ ರೂಪಾಂತರಗೊಂಡು ರಕ್ತರಾಗ ತಳೆಯುತ್ತಿತ್ತು.

"ನಮ್ಮ ದೇಶ ಟಿಪ್ಪೂವಂಶದವರ ಕೈಯಲ್ಲಿದ್ದರೂ ಚಿಂತೆಯಿರಲಿಲ್ಲ. ಬ್ರಿಟಿಷರ ವಶವಾಗಬಾರದಾಗಿತ್ತು !" ಎಂದು ಹಿಡುಗಚ್ಚಿ ನುಡಿಯುತ್ತಿದ್ದ.

"ನಿಮ್ಮ ವಂಶವನ್ನು ನಾಶಮಾಡಿದವನೇ ಈ ಟಿಪ್ಪುವಲ್ಲವೇ ನಾಯಕ ?"

"ಹೌದು. ಟಿಪ್ಪುವೆಷ್ಟಾದರೂ ಭಾರತೀಯ. ಅವನ ಕೈಯಿಂದ ರಾಜ್ಯ ಕಸುಗೊಳ್ಳುವುದು ನಮಗೇನೂ ಕಷ್ಟದ ಸಂಗತಿಯಾಗಿರಲಿಲ್ಲ—ಬ್ರಿಟಿಷರು ನಮ್ಮೆಲ್ಲರನ್ನೂ ಏಕಾಪ್ರೋಶನ ತೆಗೆದುಕೊಂಡು ದೇಶವನ್ನು ಶಾಶ್ವತ ದಾಸ್ಯದಲ್ಲಿ ಕೆಡಹಿಬಿಟ್ಟರು."

"ಇದಕ್ಕೇನು ಮಾಡಬೇಕೆನ್ನುವೆ ?"

"ಬ್ರಿಟಿಷರನ್ನು ನಮ್ಮ ದೇಶದಿಂದ ಹೊಡೆದಟ್ಟಬೇಕು. ಭಾರತದಲ್ಲಿರುವ ಬ್ರಿಟಿಷರನ್ನು ನಾಶಮಾಡಬೇಕು-ಅವರ ಸಂಸ್ಥೆಗಳನ್ನು ಮುರಿಯಬೇಕು- ಅವರ ಸೈನ್ಯವೇ ಅವರ ಮೇಲೆ ತಿರುಗಿ ಬೀಳುವಂತೆ ಮಾಡಬೇಕು-ಭಾರತದಲ್ಲಿ ಅವರ ಅಧಿಕಾರ ಕುಸಿದು ಬಿದ್ದು ಅವರು ಆ ದೇಶ ಬಿಟ್ಟು ಓಡಿಹೋಗು ವಂತೆ ಮಾಡಬೇಕು."

"ಈ ಕೆಲಸ ನಿರ್ವಹಿಸುವವರು ಯಾರು ?"

"ನೀನು—ನಾನು.... ಇಡಿಯ ಭಾರತ ಜನಸಮೂಹ!"

"ಇಂಗ್ಲಿಷರು ಬಿಟ್ಟುಹೋದರೆ ದೇಶ ಅನಾಯಕವಾಗುತ್ತದೆ. ಸಣ್ಣ ಪುಟ್ಟ ರಾಜರು, ಪಾಳೆಯಗಾರರು ತಲೆಯೆತ್ತಿಕೊಂಡು ಜನರನ್ನು ಕಾಡಲಾರಂಭಿಸುತ್ತಾರೆ."

"ಬಾಪೂಜಿ ಹೇಳಿರುವಂತೆ ದೇಶ ಅನಾಯಕವಾದರೂ ಚಿಂತೆಯಿಲ್ಲ— ದಾಸ್ಯ ಕೊನೆಗಾಣಬೇಕು."

"ಈ ಗೊಂದಲಕ್ಕೆ ನಾವು ಬಿದ್ದರೆ ನಮ್ಮ ವಿದ್ಯಾಭ್ಯಾಸದ ಗತಿ ?"

"ಬ್ರಿಟಿಷರ ಶಾಲೆ ಕಾಲೇಜುಗಳೂ ಹೋಗಬೇಕು."

"ನೀನೇಕೆ ಕಾಲೇಜಿಗೆ ಬಂದೆ ನಾಯಕ?"

"ಮತ್ತೇನೂ ಮಾಡುವುದಕ್ಕೆ ತೋರದೆ—"

"ನೀನು...."

"ಅನುಕೂಲಸ್ಥ–ಬೇಕಾದ್ದು ಮಾಡಬಲ್ಲೆ ಎಂದಲ್ಲವೇ ನಿನ್ನ ವಾದ."

"ಹೌದು."

"ನನ್ನ ಅನುಕೂಲವನ್ನೆಲ್ಲಾ ಈ ಮಹತ್ಕಾರ್ಯಕ್ಕೆ ಮೀಸಲಿಡಬೇಕೆಂದಿದ್ದೇನೆ. ಸ್ವಾತಂತ್ರಸಂಪಾದನೆಯ ಮಹತ್ಕಾರ್ಯ ಕೇವಲ ಅನುಕೂಲಸ್ಥರಿಂದಲೇ ಸಾಧಿಸುವುದಿಲ್ಲ. ವಿದ್ಯಾರ್ಥಿಗಳು, ರೈತರು, ಕಾರ್ಮಿಕರು, ಸರ್ಕಾರಿ ನೌಕರರು, ಪೋಲೀಸ್, ಮಿಲ್ಟ್ರಿ ದಳದವರು ಇದರಲ್ಲಿ ಭಾಗವಹಿಸಬೇಕು. ಇದು ನಾಲ್ಕು ಜನಕ್ಕೆ ಸಂಬಂಧಪಟ್ಟ ಪಶ್ನೆಯಲ್ಲ--ಇಡಿಯ ರಾಷ್ಟ್ರದ ಭವಿಷ್ಯವನ್ನವಲಂಬಿಸಿರುವ ಸಮಸ್ಯೆ."

ನಾಯಕನ ಮಾತಿನಲ್ಲಡಕವಾಗಿದ್ದ ತೀಕ್ಷ್ಣತೆ, ಆತ್ಮಸ್ಥೈರ್ಯ, ಆತ್ಮಾರ್ಪಣ, ಭವ್ಯಧ್ಯೇಯ ಪ್ರಭಾಕರನ ಮನಸ್ಸನ್ನು ಮುತ್ತಿದರೂ, ಆರ್ಥಿಕ ಪರಿಸ್ಥಿತಿಯ ಚಿಂತೆ, ಪರಾವಲಂಬನ ಅವನನ್ನು ಕಾಡುತ್ತಲೇ ಇದ್ದವು.

ಎಲ್ಲರ ಶಂಕೆ ಸಂಶಯಗಳನ್ನು, ಆಂದೋಲನ ಡೋಲಾಯಮಾನಗಳನ್ನು ಸಾವಿರದ ಒಂಭೈನೂರ ನಲವತ್ತೆರಡರ ಆಗಸ್ಟ್ ಹದಿನೈದು ಕೊನೆಗಾಣಿಸಿತು.

ಸಾವಿರದ ಒಂಭೈನೂರು ನಲವತ್ತೆರಡು ಆಗಸ್ಟ್ ಎಂಟನೆಯ ತಾರೀಖು ಸೇರಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿ 'ಭಾರತ ಬಿಟ್ಟು ತೊಲಗಿ' (Quit India) ಸಂದೇಶ ಸಾರಿತು. ಮಾರನೆಯ ರಾತ್ರಿ ಗಾಂಧೀಜಿ, ನೆಹ್ರೂ, ಆಜಾದ್ ಮತ್ತಿತರ ರಾಷ್ಟ್ರನಾಯಕರನ್ನು ಬ್ರಿಟಿಷ್ ಸರ್ಕಾರ ಬಂಧಿಸಿತು.

'ಕ್ವಿಟ್ ಇಂಡಿಯಾ' ಕಹಳೆನಾದ ಭಾರತದ ದಶದಿಕ್ಕುಗಳಿಗೂ ಕಾಳ್ಗಿಚ್ಚಿನಂತೆ ವ್ಯಾಪಿಸಿ ಮಹಾಕ್ರಾಂತಿಗೆ ಬುನಾದಿ ಹಾಕಿತು.

ಭಾರತ ದ್ರೋಹಿಗಳಾದ ಕಮ್ಯುನಿಸ್ಟರು, ಬ್ರಿಟಿಷರ ಬಾಲಬಡುಕರಾದ

ಮಿತವಾದಿಗಳನ್ನುಳಿದು (Moderates) ಇಡಿಯ ರಾಷ್ಟ್ರವೇ ಈ ಅಗ್ನಿ ಕುಂಡಕ್ಕೆ ಆತ್ಮಾರ್ಪಣೆ ಮಾಡಿಕೊಂಡಿತು.

ಸಣ್ಣವರು, ದೊಡ್ಡವರು; ಹೆಂಗಸರು, ಮಕ್ಕಳು; ಹಿಂದುಗಳು, ಮುಸಲ್ಮಾನರು; ಪಟ್ಟಣಿಗರು, ಹಳ್ಳಿಯವರು ಸ್ವಾತಂತ್ರ್ಯಮಹಾಸಮರದ ಸೇನಾನಿಗಳಾಗಿ ಮುನ್ನುಗ್ಗಿದರು.

ಸಾಮ್ರಾಜ್ಯ ಸರ್ಕಾರದ ದಬ್ಬಾಳಿಕೆಗೆ ಕೊನೆಮೊದಲಿಲ್ಲವಾಯಿತು. ಬ್ರಿಟಿಷರ ಮೆಷಿನ್ ಗನ್ನುಗಳು (Machine Guns) ಭಾರತ ಜನತೆಯನ್ನು ನಾಶಮಾಡಲಾರಂಭಿಸಿತು.

ಬೀದಿ ಬೀದಿಗಳಲ್ಲಿ ದೇಶದ ಜನತೆ ಪೋಲೀಸರ ಬೇಟನ್ನುಗಳು (Baton) ಮಿಲ್ಟ್ರಿಯವರ ಬೇಯನೆಟ್ಸ್‌ಗಳಿಗೆ (Bayonets) ಸಿಕ್ಕಿ ಸಾಯುತ್ತಿದ್ದರು.

ರಾಷ್ಟ್ರದ ಪ್ರಾತಿನಿಧಿಕ ವ್ಯಕ್ತಿಗಳು ಬ್ರಿಟಿಷರ ಕಾರಾಗೃಹಗಳಲ್ಲಿ ಅನ್ನ ನೀರು ಕಾಣದೆ ಚಿತ್ರಹಿಂಸೆಗೊಳಗಾಗಿದ್ದರು.

ಅಖಂಡ ಭಾರತ ಯುದ್ಧಜ್ವರದಲ್ಲಿ ತಪ್ತವಾಗಿದ್ದಾಗ ನವೆಂಬರ್ ಹದಿನೈದನೆಯ ತಾರೀಖು ಪತ್ರಿಕೆಗಳಲ್ಲಿ ಬಂದ ವಾರ್ತೆ ಎಲ್ಲರನ್ನೂ ಚಕಿತರನ್ನಾಗಿ ಮಾಡಿತು.

ಬೆಂಗಳೂರು ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು–ನರಸಿಂಹನಾಯಕ, ಪ್ರಭಾಕರ – ಕಾಲೇಜಿನ ಲ್ಯಾಬೋರೇಟರಿಯನ್ನು (Laboratory) ನಾಟಿ ಬಾಂಬುಗಳಿಂದ ಹಾರಿಸಿ ಬಿಡುವ ಪ್ರಯತ್ನ ಮಾಡಿದುದಕ್ಕೆ ಬಂಧಿಸಲ್ಪಟ್ಟಿದ್ದರು.

ಪತ್ರಿಕೆಯಲ್ಲಿ ಸುದ್ದಿ ಓದಿದ ಆದಿಶೇಷಯ್ಯನವರು ಕೂಡಲೆ ಬೆಂಗಳೂರಿಗೆ ಹೊರಟು ಬಂದರು.

ಆದಿಶೇಷಯ್ಯ, ಚಂದ್ರಶೇಖರ ಅಪಾದಿತರನ್ನು ಜೈಲಿನಲ್ಲಿ ನೋಡಲೆತ್ನಿಸಿ ವಿಫಲರಾದರು.

ತಲೆಯಮೇಲೆ ಕೈಹೊತ್ತು ಕುಳಿತ ತಂದೆಯವರನ್ನು ಚಂದ್ರಶೇಖರ ಸಮಾಧಾನಪಡಿಸಲೆತ್ನಿಸಿದ.

"ಪ್ರಭಾಕರನಿಗೂ ಅವನ ಸ್ನೇಹಿತರಿಗೂ ಸರ್ಕಾರ ಮರಣದಂಡನೆ ವಿಧಿಸಿದರೇನು ಗತಿ ಚಂದ್ರಶೇಖರಾ" ಎಂದು ಆದಿಶೇಷಯ್ಯ ಕೇಳಿದರು.

"ಕಲ್ಕತ್ತೆ, ಮುಂಬಯಿ, ನಾಗಪುರ, ಡಿಲ್ಲಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಇದೇ ಕೆಲಸ ಮಾಡಿದ್ದಾರೆ. ಎಲ್ಲರಿಗೂ ಸರ್ಕಾರ ಮರಣದಂಡನೆ ವಿಧಿಸಲು ಸಾಧ್ಯವೇ ? ಆರುತಿಂಗಳು ಒಂದು ವರ್ಷ ಜೈಲಿನಲ್ಲಿಟ್ಟುಕೊಂಡು ಹೊರಗೆ ಬಿಡುತ್ತಾರೆ."

"ಪ್ರಭಾಕರ ಶುದ್ಧ ಅವಿವೇಕಿಯಪ್ಪ ! ಇವನಿಗೆ ಏಕೆ ಬೇಕಿತ್ತು ಈ ಕರ್ಮ. ನಿಮ್ಮ ತಾಯಿ ಅನ್ನ ನೀರು ಬಿಟ್ಟು ಒಂದೇ ಸಮನೆ ಅಳುತ್ತ ಕುಳಿತಿದ್ದಾಳೆ. ಅವಳನ್ನು ಹೇಗೆ ಸಮಾಧಾನಪಡಿಸುವುದು.

ತಂದೆ ಮಗ ಮಾತಾನಾಡುತ್ತಿರುವಂತೆ ಪಾರ್ವತಿ ಮಧ್ಯೆ ಬಾಯಿಹಾಕಿ

"ನರಸಿಂಹನಾಯಕನ ಸಹವಾಸ ಬೇಡವೆಂದು ನಾನು ಪ್ರಭಾಕರನಿಗೆ ಎಷ್ಟೋಸಲ ಹೇಳಿದೆ. ಅವನು ನನ್ನ ಮಾತು ಕೇಳಲಿಲ್ಲ. ತಮ್ಮ ಏನಾದರೂ ಮಾಡಿಕೊಳ್ಳಲಿ ಎಂದು ನಿಮ್ಮ .ದೊಡ್ಡ ಮಕ್ಕಳು ಸಲಿಗೆ ಕೊಟ್ಟುಕೊಂಡು ಬಂದರು—ನನ್ನ ಮಾತು ಕೇಳಿದ್ದರೆ ಈ ಹಗರಣಕ್ಕೆ ಅವಕಾಶವೇ ಆಗುತ್ತಿರಲಿಲ್ಲ" ಎಂದು ಉರಿಯುವ ಕೊಳ್ಳಿಗೆ ತುಪ್ಪ ಸುರಿದಳು.

ಹೇಗಾದರೂ ಮಾಡಿ ಪ್ರಭಾಕರನನ್ನು ಸೆರೆಮನೆಯಿಂದ ಪಾರುಮಾಡಬೇಕೆಂದು ಆದಿಶೇಷಯ್ಯನವರು ವಿಶ್ವಸಾಹಸ ಮಾಡಿದರು. ಅಧಿಕಾರಿಗಳ ಮನೆ ಕಾದರು – ಅಮಾತ್ಯರಿಗೆ ಹೆಜ್ಜೆ ನಮಸ್ಕಾರ ಹಾಕಿದರು—ಕಂಡಕಂಡ ದೇವರುಗಳಿಗೆಲ್ಲಾ ಕೈಮುಗಿದರು. ಡಿಫೆನ್ಸ್ ಆಫ್ ಇಂಡಿಯಾ (Defence of India) ಕಾಯಿದೆ ಕೆಳಗೆ ಬಂಧಿಸಲ್ಪಟ್ಟಿದ್ದ ಪ್ರಭಾಕರನಿಗೂ, ಅವನ ಗೆಳೆಯನಿಗೂ ಯಾರೂ ನೆರವಾಗಲು ಸಾಧ್ಯವಾಗಲಿಲ್ಲ.

## ೩೪

ಆದಿಶೇಷಯ್ಯನವರ ಕಾಗದವನ್ನು ಪುನಃಪುನಃ ಓದಿಕೊಂಡ ಭಟ್ಟರಿಗೆ ಅದರ ಸಾರಾಂಶ ಮನವರಿಕೆಯಾಗಲಿಲ್ಲ. ಕಾಗದವನ್ನು ಸೀತಾರಾಮನ ಕೈಗೆ ಕೊಟ್ಟು ಪ್ರಭಾಕರ ಬಂಧಿತನಾಗಿರುವ ಕಾರಣವೇನೆಂದು ಕೇಳಿದರು. ಲೌಕಿಕ ಪ್ರಪಂಚವನ್ನೇ ಅರಿಯದ ಸೀತಾರಾಮ 'ನನಗೊಂದೂ ಅರ್ಥವಾವುದಿಲ್ಲವಲ್ಲ ಗುರುಗಳೇ' ಎಂದು ಹೇಳಿದ. ಆದಿಶೇಷಯ್ಯನವರ ಕಾಗದದಲ್ಲಿ ಸೂಚಿತವಾಗಿದ್ದ ಇನ್ನೊಂದು ಅಂಶ ಭಟ್ಟರ ಮನಸ್ಸಿಗೆ ವ್ಯಥೆಯನ್ನುಂಟು ಮಾಡಿತ್ತು. 'ಚಂದ್ರಶೇಖರ ಸ್ವಲ್ಪವೂ ಸುಖಿಯಾಗಿಲ್ಲ. ಅವನ ಕೈ ಹಿಡಿದಿರುವವಳು ಒಬ್ಬ ಹೆಂಗಸೋ, ಹೆಣ್ಣುರೂಪಿನ ಮ್ಯಾಜಿಸ್ಟ್ರೇಟೋ ಎಂದು ನಾನು ವಿಚಾರಮಾಡುತ್ತಿದ್ದೇನೆ.' ಪಾರ್ವತಿಯ ಬಗ್ಗೆ ನರಸಮ್ಮ ಹೇಳಿದ್ದ ಮಾತುಗಳು ಭಟ್ಟರ ಸ್ಮೃತಿಪಟಲದ ಮೇಲೆ ಸುಳಿದವು. 'ಪಾರ್ವತಿ, ಅನನುಭವಿಕಳು–ಮೊಂಡು–ಹಟವಾದಿ–ಆದರೆ ಕೆಟ್ಟವಳಲ್ಲ. ಗಂಡನ ಬಗ್ಗೆ ಅವಳು ನಿರಭಿಮಾನಿಯೇ' ಎಂಬ ಚಿಂತೆ ಭಟ್ಟರನ್ನು ಕಾಡತೊಡಗಿತು.

ಒಂದು ದಿನ ಭಟ್ಟರು ಶ್ರೀಶ್ರೀಗಳವರ ಜತೆಯಲ್ಲಿ ಮಾತನಾಡುತ್ತಾ ಕುಳಿತಿದ್ದಾಗ ಶ್ರೀಶ್ರೀಗಳವರೇ

"ಊರಿನಲ್ಲಿ ಎಲ್ಲರೂ ಕುಶಲವೇ ಶಾಸ್ತ್ರಿಗಳೇ" ಎಂದು ಕೇಳಿದರು.

"ಇಲ್ಲ—ಊರಿನಲ್ಲಿ ಕೋಲಾಹಲವಾಗಿದೆ."

"ಏನಾಗಿದೆ."

"ಆದಿಶೇಷಯ್ಯನವರ ಮಗ ಚಂದ್ರಶೇಖರನಿಗೆ ನಾನು ಪಾರ್ವತಿಯನ್ನು ಕೊಡಿಸಿ ಲಗ್ನಮಾಡಿಸಿದುದು ತಮಗೆ ವೇದ್ಯವಾಗಿದೆ. ಚಂದ್ರಶೇಖರ ಬೆಂಗಳೂರಿನಲ್ಲಿ ಮನೆಮಾಡಿದ ಮೇಲೆ ಅವನ ತಮ್ಮ ಪ್ರಭಾಕರನೂ ಅಲ್ಲಿಯೇ

ಬಂದಿದ್ದ-ಕಾಲೇಜಿನಲ್ಲಿ ಓದುತ್ತಿದ್ದ—ಮೊನ್ನೆ ಈ ಹುಡುಗ ಪ್ರಭಾಕರ ಕಾಲೇಜಿನ ಪ್ರಯೋಗಶಾಲೆಗೆ ನಾಟಿ ಬಾಂಬುಗಳನ್ನು ಹಾಕಲು ಪ್ರಯತ್ನಿಸಿದನಂತೆ—ಅವನನ್ನು ದಸ್ತಗಿರಿಮಾಡಿ ಕಾರಾಗೃಹದಲ್ಲಿಟ್ಟಿದ್ದಾರೆ."

"ಹೌದು ಹೌದು-ಈಚೆಗೆ ನಮ್ಮ ದೇಶದ ನಾನಾಕಡೆಗಳಲ್ಲಿ ಇಂತಹ ಸಂಘಟನೆಗಳಾಗಿವೆ."

"ಪ್ರಭಾಕರ ಬಹಳ ಒಳ್ಳೆಯ ಹುಡುಗ—ಸಂಭಾವಿತ. ಯಾರೋ ದುಷ್ಟರ ಪ್ರೇರಣೆಗೊಳಗಾಗಿ ಅವನು ಇಂಥ ನೀಚಕೆಲಸಕ್ಕೆ ಕೈಹಾಕಿರ ಬೇಕೆಂದು ನನ್ನ ತರ್ಕ."

ಶ್ರೀಶ್ರೀಗಳವರು ನಕ್ಕು

"ಶಾಸ್ತ್ರಿಗಳೇ, ಇದು ಇಪ್ಪತ್ತನೆಯ ಶತಮಾನ. ನೀವಿನ್ನೂ ಯಾಜ್ಞವಲ್ಕ್ಯರ ಆಶ್ರಮದಲ್ಲಿಯೇ ಕುಳಿತಿರುವಿರಲ್ಲಾ. ಈ ದೇಶ ಈಗ್ಗೆ ಸುಮಾರು ಇನ್ನೂರು ವರ್ಷಗಳ ಕೆಳಗೆ ಬ್ರಿಟಿಷರ ಅಧೀನವಾಯಿತು. ಅವರ ವಜ್ರಮುಷ್ಟಿಯಿಂದ ದೇಶವನ್ನು ಬಿಡುಗಡೆ ಮಾಡಿಸಬೇಕೆಂಬ ಪ್ರಯತ್ನ ೧೮೨೪ರಿಂದ ನಡೆಯುತ್ತಿದೆ. ಉತ್ತರ ಕರ್ನಾಟಕದ ಸಣ್ಣ ಸಂಸ್ಥಾನವಾದ ಕಿತ್ತೂರಿನ ರಾಣಿ ಚೆನ್ನಮ್ಮ ೧೮೨೪ ರಲ್ಲಿ ಮೊಟ್ಟಮೊದಲನೆಯ ಪ್ರಯತ್ನಮಾಡಿ ವಿಫಲಳಾದಳು; ೧೮೫೭ ರಲ್ಲಿ ಉತ್ತರದ ಝಾನ್ಸಿ ಸಂಸ್ಥಾನದ ರಾಣಿ ಲಕ್ಷ್ಮೀಬಾಯಿ ಎರಡನೆಯ ಪ್ರಯತ್ನಮಾಡಿ ರಣರಂಗದಲ್ಲಿ ಸಾವಿಗೀಡಾದಳು; ೧೮೮೫ ರಲ್ಲಿ ದೇಶಭಕ್ತರು ಕಾಂಗ್ರೆಸ್ ಸಂಸ್ಥೆ ಸ್ಥಾಪಿಸಿದರು. ೧೯೨೧ ರಲ್ಲಿ ಮಹಾತ್ಮ ಗಾಂಧಿಯವರು ಕಾಂಗ್ರೆಸ್ಸಿನ ನಾಯಕತ್ವ ವಹಿಸಿಕೊಂಡು ಅದಕ್ಕೆ ವೀರ ಮುಖವನ್ನು ಕಲ್ಪಿಸಿದರು. ಈ ವರ್ಷ ಆಗಸ್ಟ್ ತಿಂಗಳಲ್ಲಿ ಗಾಂಧೀಜಿ ಮತ್ತು ಇತರ ದೇಶಭಕ್ತರನ್ನು ಬ್ರಿಟಿಷ್ ಸರ್ಕಾರ ಬಂಧಿಸಿದ ವಿಷಯ ನಿಮಗೆ ಗೊತ್ತಿರಬಹುದು. 'ಭಾರತ ಬಿಟ್ಟು ತೊಲಗಿ' ಎಂಬ ಪಾಂಚಜನ್ಯವನ್ನು ಗಾಂಧೀಜಿ ಊದಿ ಅಹಿಂಸಾ ಮಾರ್ಗದಲ್ಲಿ ದೇಶೀಯರು ಸ್ವಾತಂತ್ರ್ಯ ಸಾಧಿಸಬೇಕೆಂದು ಉಪದೇಶಿಸಿದರು. ಅವರ ಬಂಧನವಾದ ಮೇಲೆ ದೇಶದ ಉಗ್ರಶಕ್ತಿಗಳು ಸಿಡಿದೆದ್ದವು—ಬ್ರಿಟಿಷರ ದಬ್ಬಾಳಿಕೆಯಿಂದ ಹಿಂಸಾಚರಣೆಯೂ ಆಯಿತು. ಪ್ರಭಾಕರನ ಪ್ರಕರಣ ಇದರ ಉಪಷ್ಟಂಬಕ ಮಾತ್ರ."

"ಇದರ ಪರ್ಯವಸಾನ."

"ನಿಮ್ಮ ಪ್ರಭಾಕರನಿಗೆ ಪ್ರಾಣಭಯವಿಲ್ಲ ಹೆದರಬೇಡಿ—ಗಾಂಧೀಜಿ, ಮತ್ತಿತರ ನಾಯಕರು ಕೆಲಕಾಲಾನಂತರ ಬಿಡುಗಡೆ ಹೊಂದುತ್ತಾರೆ—ಗಾಂಧೀಜಿ ಯವರ ಮಹಾತಪಸ್ಸಿನ ಫಲವಾಗಿ ನಮ್ಮ ದೇಶ ಬ್ರಿಟಿಷರ ದಾಸ್ಯ ದಿಂದ ಮುಕ್ತಿ ಪಡೆಯುತ್ತದೆ."

"ಹಾಗಾದರೆ ಪ್ರಭಾಕರ ಅವಿವೇಕಿಯಲ್ಲ—ಮಹಾವೀರ."

"ನಿಸ್ಸಂದೇಹವಾಗಿ. ಅವನು ಅಧುನಿಕ ಅಭಿಮನ್ಯು."

"ಈ ಚಿರಂಜೀವಿಯನ್ನು ತಾವು ಹರಸಬೇಕೆಂದು ಕೈಜೋಡಿಸಿ ಬೇಡಿ ಕೊಳ್ಳುತ್ತೇನೆ,"

"ಹರಕೆಯೋ! ದೇಶಭಕ್ತರ ಪ್ರಯತ್ನ ಸಫಲವಾಗಲೆಂದು ನಾನು ನಿತ್ಯ ಶ್ರೀಮಾತೆಯನ್ನು ಪ್ರಾರ್ಥಿಸುತ್ತಿದ್ದೇನೆ."

ಭಟ್ಟರ ಮನಸ್ಸು ಹಗುರವಾಯಿತು. ಪರ್ಣಕುಟಿಗೆ ಹಿಂತಿರುಗಿ ದೊಡನೆಯೇ ಸೀತಾರಾಮುನನ್ನು ಕರೆದು ಆದಿಶೇಷಯ್ಯನವರಿಗೆ ಕಾಗದ ಬರೆಸಿದರು. ಚಂದ್ರಶೇಖರನಿಗೂ ಕಾಗದ ಬರೆಸಿ ಧೈರ್ಯ ಹೇಳಿದರು.

ಭಟ್ಟರ ಕಾಗದ ಓದಿಕೊಂಡ ಆದಿಶೇಷಯ್ಯನವರು ನಾಗಮ್ಮನಿಗೆ

"ಶ್ರೀಶ್ರೀಗಳವರು ದೊಡ್ಡವರು-ತಪಸ್ವಿಗಳು, ಅಧ್ಯಾತ್ಮ ಚಕ್ರವರ್ತಿ ಗಳು. ಇದು ರಾಜಕೀಯದ ಪ್ರಶ್ನೆ—ಅವರಿಗೆ ಈ ವಿಷಯ ಏನು ಅರ್ಥ ವಾಗುತ್ತದೆ. ಭಟ್ಟರನ್ನು ಸಮಾಧಾನಪಡಿಸಲು ಒಂದು ಒಳ್ಳೆಯ ಮಾತು ಹೇಳಿದ್ದಾರೆ." ಎಂದರು.

ನಾಗಮ್ಮ ಗಲ್ಲ ಬಡಿದುಕೊಂಡು

"ಬಿಟ್ಟಿತು ಎನ್ನಿ—ತ್ರಿಕಾಲಜ್ಞಾನಿಗಳಾದ ಶ್ರೀಶ್ರೀಗಳವರಿಗೆ ಅರ್ಥ ವಾಗದಿರುವ ವಿಷಯವೂ ಇದೆಯೇ. ಅವರ ಮಾತಿನಲ್ಲಿ ಅಪನಂಬಿಕೆ ತಳೆದು ಶ್ರೀಮಾತೆಯ ಆಗ್ರಹಕ್ಕೆ ಗುರಿಯಾಗೋಣವೇ? ಮಹಾನುಭಾವ ರಾದ ಶ್ರೀಶ್ರೀಗಳವರ ಕರುಣದಿಂದ ನನ್ನ ಮಗ ಮನೆಗೆ ಬಂದರೆ ಸಾಕು." ಎಂದಳು.

ತಾವು ಸಾಕಷ್ಟು ವಿಚಾರಮಾಡದೆ ಆಡಿದ ಮಾತಿಗಾಗಿ ಆದಿಶೇಷಯ್ಯ ಪಶ್ಚಾತ್ತಾಪಪಟ್ಟುಕೊಂಡರು.

## ೩೫

ಖದೀಮ ಸುಬ್ಬಾಶಾಸ್ತ್ರಿಯ ಸಹಾಯದಿಂದ ಚಂದ್ರಶೇಖರಯ್ಯನ ಆರ್ಥಿಕ ಸ್ಥಿತಿಯೂ ಕುದುರುತ್ತ ಬಂತು. ಈಗ ಆದಿಶೇಷಯ್ಯನವರು ಮಗನ ಸಂಸಾರ ನಿರ್ವಹಣಕ್ಕಾಗಿ ಹಣಕಳಿಸಬೇಕಾಗಿರಲಿಲ್ಲ; ಮಗನೇ ಆಗಾಗ್ಗೆ ತಂದೆಗೆ ನೂರು, ಇನ್ನೂರು ರೂಪಾಯಿ ಕಳಿಸಿಕೊಡುತ್ತಿದ್ದ.

ಪಾರ್ವತಿ ಮೈಮೇಲೆ ಚೂರೂಪಾರೂ ಒಡವೆಗಳು ಮೆರೆಯಲಾರಂಭಿಸಿದವು.

ಹಣವಿಲ್ಲದ ಕಾಲದಲ್ಲಿ ನಿರ್ಯೋಚನೆಯಿಂದಿದ್ದ ಪಾರ್ವತಿಯಲ್ಲಿ ತಕ್ಷಣವೇ ಹಣದ ದಾಹ ಆರಂಭವಾಗಿತ್ತು. ಗಂಡ ಮನೆಗೆ ಬಂದೊಡನೆಯೇ ಅವನ ಕೋಟಿನ ಜೇಬುಗಳನ್ನು ಶೋಧಿಸುವುದು, ಕೈತುಂಬ ಹಣಸಿಕ್ಕಿದರೆ ಪ್ರಸನ್ನಳಾಗುವುದು, ಹಣವಿಲ್ಲದಿದ್ದರೆ ಮುಖ ಗಂಟಿಕ್ಕಿಕೊಳ್ಳುವುದು ನಿತ್ಯ ವಿಧಿಯಾಗುತ್ತ ಬಂದಿತು.

ದಿನಕಳೆದಂತೆ ಪಾರ್ವತಿ ಶೀಘ್ರಕೋಪಿಯಾಗುತ್ತಿದ್ದುದು ಚಂದ್ರಶೇಖರನಿಗೆ ತುಂಬ ಕಳವಳವನ್ನುಂಟುಮಾಡಿತ್ತು. ಗಂಡನ ಮೇಲೆ ಸ್ವಲ್ಪ ಕೋಪಬಂದರೆ ಸಾಕು–ಆವಳ ನಾಲಗೆ ಕಡಾಣಿ ಕಳಚಿಕೊಂಡ ಚಕ್ರದಂತೆ ಮನಸ್ಸುಬಂದತ್ತ ಓಡುತ್ತಿತ್ತು. ಚಂದ್ರಶೇಖರನ ತಾಯಿ, ತಂದೆ, ತಮ್ಮ ಇವರ ಭರ್ತ್ಸನೆಯಾಗಿ ಕೊನೆಗೆ

"ನೀವು ತಾನೆ ಏನು, ನನ್ನ ತಲೆಯಮೇಲೆ ಚಿನ್ನದ ಕಿರೀಟ ಇಟ್ಟಿರೋದು. ಮದುವೆಯಾಗಿ ಇಷ್ಟು ವರ್ಷವಾದರೂ ಒಂದು ಜತೆ ವಜ್ರದೋಲೆ ತೆಗೆದುಕೊಡುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ. ನಮ್ಮಮ್ಮ ಮನಸ್ಸು ಮಾಡದಿದ್ದರೆ ನಾವು ಮರದಕೆಳಗೆ ಸಂಸಾರ ಮಾಡಬೇಕಾಗುತ್ತಿತ್ತು."

ಪಾರ್ವತಿಯ ತಾಯಿ ಮನೆ ತೆಗೆದುಕೊಟ್ಟಿರುವ ವಿಷಯ ನಿರ್ವಿವಾದವಾಗಿತ್ತು. ಆದರೆ ಆ ಮಾತನ್ನು ಪಾರ್ವತಿ ನೂರು ಸಲ ಆಡಿ ಆಡಿ, ಚಂದ್ರಶೇಖರನ ಮುಖಕ್ಕೆ ಮಸಿಯನ್ನು ತಿಕ್ಕಿದ್ದಳು.

"ಈ ಮನೆ ಋಣದಿಂದ ನಾನು ಪಾರಾದರೆ ಸಾಕು. ಭಗವಂತಾ—ಬೇಗ ಬೇಗ ನನಗೆ ಕೈತುಂಬ ಹಣಕೊಡಪ್ಪಾ" ಎಂದು ಚಂದ್ರಶೇಖರ ಪ್ರಾರ್ಥಿಸುತ್ತಿದ್ದ.

'ವಕೀಲಿ ವೃತ್ತಿಯಲ್ಲಿಯೂ ಸತ್ಯ, ಧರ್ಮಕ್ಕೆ ಸ್ಥಾನವಿದೆ. ಪರರ ಕ್ಷೋಪ ಜೀವಿಯಾಗದೆ ನನ್ನ ಜೀವನ ನಾನು ಮರ್ಯಾದೆಯಾಗಿ ಸಾಗಿಸಬಹುದು' ಎಂದು ನಂಬಿದ್ದ ಚಂದ್ರಶೇಖರನ ಜೀವನಕ್ಕೆ ಬರಸಿಡಿಲು ಬಂದೆರಗಿದಂತಾಯಿತು.

ಸುಬ್ಬಾಶಾಸ್ತ್ರಿ ಒಂದು ವಿಷಯ ಚಂದ್ರಶೇಖರನಿಗೆ ಮನವಟ್ಟು ಮಾಡಿದ.

"ಈ ಕೇಸು ನ್ಯಾಯ, ಆ ಕೇಸು ಅನ್ಯಾಯ ಎಂತಾ ನೀವು ಧರ್ಮದ ತಕ್ಕಡಿ ಹಿಡಿದು ಕುಳಿತರೆ ನಾವು ಆಫೀಸ್ ಬಾಗಿಲು ಹಾಕಿ ಮನೆಗೆ ಹೋಗಿ ಮೂಗು ಹಿಡಿದು ಕುಳಿತುಕೊಳ್ಳಬೇಕಾಗುತ್ತದೆ ಸ್ವಾಮಿ."

"ಅದಕ್ಕೇನು ಮಾಡಬೇಕು ಶಾಸ್ತ್ರಿಗಳೇ."

"ಬಂದದ್ದು ಬಿಡಬಾರದು. ನ್ಯಾಯಾನ್ಯಾಯದ ವಿಮರ್ಶನ ಮಾಡುತ್ತ ಕುಳಿತರೆ ಜಡ್ಜಿಗಳೂ, ಮ್ಯಾಜಿಸ್ಟ್ರೇಟರೂ ಇರುವುದೇಕೆ? ಕಕ್ಷಿಗಾರ ತಂದುಕೊಡುವ ಕೇಸು, ಅವನಿಗನುಕೂಲವಾಗುವಂತೆ ಮಾಡುವುದಷ್ಟೇ ನಮ್ಮ ಕೆಲಸ ನ್ಯಾಯಸ್ಥಳ ಧರ್ಮಸ್ಥಳವಲ್ಲ. !"

"ನ್ಯಾಯಕ್ಕೂ ಧರ್ಮಕ್ಕೂ ಷಷ್ಟಾಷ್ಟಕವೇ ?"

"ಹಾಗೇನಿಲ್ಲ—ಒಮ್ಮೊಮ್ಮೆ ಗ್ರಹಗತಿ ಕೂಡುವುದೂ ಉಂಟು. ಅದಕ್ಕೇ ನಾವು ಕಾಯುತ್ತ ಕುಳಿತರೆ ಗಣಪತಿ ವಿವಾಹಕ್ಕೆ ಲಗ್ನ ಕಟ್ಟಿಸಿದಂತಾಗುತ್ತದೆ. ದೇವರು ಕೊಡುವ ಕಾಲದಲ್ಲಿ ಸಂಪಾದನೆ ಮಾಡಿ ಮಕ್ಕಳು ಮರಿಗೆ ಆಸ್ತಿ ಮಾಡುವುದು ಜಾಣತನದ ಲಕ್ಷಣ."

"ಆಸ್ತಿ ಮಾಡುವುದಕ್ಕೆ ಮುಂಚೆ ನಾನು ಸಾಲ ತೀರಿಸಬೇಕಾಗಿದೆ ಶಾಸ್ತ್ರಿಗಳೇ."

"ಸಾಲ ಎಷ್ಟಿದೆ ಸ್ವಾಮಿ."

"ಎಂಟು ಸಾವಿರ ರೂಪಾಯಿಗಳು."

"ನಿಮ್ಮ ಹೆಸರಿನಲ್ಲಿ ನಾನು ಬೇರೆ ಬ್ಯಾಂಕ್ ಅಕೌಂಟ್ ಓಪನ್ ಮಾಡಿಸಿ ಹಣ ಜಮಾಯಿಸುತ್ತೇನೆ. ಎರಡು ಮೂರು ವರ್ಷದಲ್ಲಿ ಸಾಲ ತೀರಿಸಿ ಬಿಡುವಿರಂತೆ—ಈ ಜವಾಬ್ದಾರಿ ನನಗಿರಲಿ. ಆದರೆ ನಾನು ತರುವ ಕೇಸುಗಳ ಬಗ್ಗೆ ನೀವು ತಕರಾರು ಮಾಡಕೂಡದು."

"ಆಗಲಿ."

"ನಾಳೆ ರೆವಿನ್ಯೂ ಕಮಿಷನರ್ ಸಾಹೇಬರ ಮುಂದೆ ಅಪೀಲ್ ತೆಗೆದುಕೊಂಡು ಹೋಗುವಿರಾ?"

"ನಮ್ಮ ಪಕ್ಷದಲ್ಲಿ ನ್ಯಾಯವಿಲ್ಲವೆಂದು ತಿಳಿದರೆ ಅವರು ಸಹಾಯ ಮಾಡುವುದಿಲ್ಲ."

"ಸದ್ಯಕ್ಕೆ ಸ್ಟೇ ಆರ್ಡರ್ (Stay order) ಕೊಟ್ಟರೆ ಸಾಕು—ಉಳಿದ ವಿಷಯ ನನಗಿರಲಿ."

"ಏನು ಮಾಡುತ್ತೀರೋ ಮಾಡಿಯಪ್ಪ"

ಎಂದು ಚಂದ್ರಶೇಖರ ನಿರಾಶೆಯಿಂದ ನುಡಿದ.

ಸುಬ್ಬಾಶಾಸ್ತ್ರಿ ಇಡುಗಂಟನ್ನಿಡುವ ವಿಷಯ ಚಂದ್ರಶೇಖರ ಹೆಂಡತಿಗೆ ಉದ್ದೇಶಪೂರ್ವಕವಾಗಿಯೇ ತಿಳಿಸಲಿಲ್ಲ.

ಪೂರ್ಣ ಗರ್ಭಿಣಿಯಾಗಿದ್ದ ಪಾರ್ವತಿ ಯಾವ ವಿಷಯಕ್ಕೂ ಚಿಂತೆ ಮಾಡಬಾರದು—ಯಾವುದಕ್ಕೂ ಕೊರತೆ ಪಡಬಾರದು ಎನ್ನುವುದೇ ಚಂದ್ರಶೇಖರನ ವಾಂಛಿತವಾಗಿತ್ತು.

ಪಾರ್ವತಿ ಪ್ರಸನ್ನಳಾಗಿ ಒಂದು ಸವಿ ಮಾತು ಆಡಿದ ದಿನ ಚಂದ್ರಶೇಖರ ಸ್ವರ್ಗೀಯ ಆನಂದ ಪಡೆಯುತ್ತಿದ್ದ. 'ಪಾಪ! ಅವಳದ್ದಾದರೂ ಏನು ತಪ್ಪು. ಶೈಶವ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡಳು. ತಾಯಿ ಹೊಟ್ಟೆ ಕಟ್ಟಿ ಬಟ್ಟೆ ಕಟ್ಟಿ ಸಾಕಿದರು. ಪಾರ್ವತಿ ಕಾರ್ಪಣ್ಯದಲ್ಲಿಯೇ ಬೆಳೆದಳು. ಇಲ್ಲಿಗೆ ಬಂದಮೇಲಾದರೂ ಅವಳಿಗೆ ಸುಖವಾಯಿತೇ ? ಇಲ್ಲಿಯೂ ಕಾರ್ಪಣ್ಯ-ಅಹನ್ಯಹನಿ ಕಾಲಕ್ಷೇಪ—ಓರಗೆಯ ಹೆಣ್ಣುಮಕ್ಕಳು ಸೀರೆ, ಕುಪ್ಪಸ, ಒಡವೆಗಳನ್ನಿಟ್ಟುಕೊಂಡು ಮೆರೆದಾಡುವುದನ್ನು ನೋಡುತ್ತಿದ್ದಳು.

ಸ್ತ್ರೀಸಹಜವಾದ ಆಕಾಂಕ್ಷೆ ಪಾರ್ವತಿಯ ಮನಸ್ಸಿನಲ್ಲಿಯೂ ಮೊಳೆಯುವುದು ಸ್ವಾಭಾವಿಕ. ನಾನು ಪಾರ್ವತಿಯ ಯಾವ ಆಶೆ—ಬಯಕೆಯನ್ನೂ ಪೂರೈಸಲಿಲ್ಲ—ಈಗವಳನ್ನು ಆಕ್ಷೇಪಿಸಲೇ? ನನ್ನೊಂದಿಗೂ ಕಷ್ಟ ಸೋಸಿದ್ದಾಳೆ. ಗರ್ಭಿಣಿಯಾಗಿರುವ ಅವಳನ್ನು ನೋಯಿಸಬಾರದು' ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತಿದ್ದ.

ಪಾರ್ವತಿಯ ಮರುಚಲು ಬಾಣಂತನವನ್ನು ನರಸಮ್ಮನೇ ಮಾಡಿದಳು. ಪಾರ್ವತಿಯ ಮಗುವಿಗೆ ಅಜ್ಜಿಯೇ ಪ್ರೀತಿಯಿಂದ 'ಗೌರಿ' ಎಂದು ಹೆಸರಿಟ್ಟಳು.

'ಸಾಕ್ಷಾತ್ ಗೌರಿಯೇ ನನ್ನ ಮನೆಯಲ್ಲಿ ಹುಟ್ಟಿದ್ದಾಳೆ. ಅವಳ ಕೃಪೆಯಿಂದ ನನ್ನ ಸಕಲ ಕಷ್ಟ, ದುಃಖ, ಚಿಂತೆಯೂ ಮಾಯವಾಗುತ್ತದೆ' ಎಂದು ಚಂದ್ರಶೇಖರ ದೃಢವಾಗಿ ನಂಬಿದ.

## ೩೬

ಪಾರ್ವತಿ ಹೊಲೆಮನೆಯಿಂದ ಹೊರಬಂದಿದ್ದಳು. 'ಬೀಗರು, ಬೀಗಿತ್ತಿ ಬಂದು ಮಗುವನ್ನು ನೋಡಿ ಆಶೀರ್ವಾದ ಮಾಡಲಿಲ್ಲವಲ್ಲಾ' ಎಂದು ನರಸಮ್ಮ ದುಃಖಿಸಿದಳು.

ಇದ್ದಕ್ಕಿದ್ದಂತೆ ಆದಿಶೇಷಯ್ಯನವರಿಗೆ ಕಾಲಿನಲ್ಲಿ ಬೇನೆ ತೋರಿ, ಕಾಲು ಬಾತುಕೊಂಡುದರಿಂದ ಅವರಾಗಲಿ, ನಾಗಮ್ಮನಾಗಲಿ ಬೆಂಗಳೂರಿಗೆ ಬರಲು ಸಾಧ್ಯವಾಗಲಿಲ್ಲ. ಬೀಗರು, ಬೀಗಿತ್ತಿ ಬರಲಿಲ್ಲವೆಂಬ ತನ್ನ ದುಃಖ ನರಸಮ್ಮ ವ್ಯಕ್ತಪಡಿಸಿದಾಗ ಪಾರ್ವತಿ ಕಟುವಾಗಿ 'ಸರಿ, ಅವರೇಕೆ ಬರ್ತಾರೆ ಹೇಳು. ಬಂದರೆ ಮಗೂ ಕೈಗೆ ಏನಾದರೂ ಕುಕ್ಕಬೇಕಾಗುತ್ತೆ' ಎಂದಳು. ನರಸಮ್ಮ ತಡೆಯಲಾರದೆ 'ಹಾಗನ್ನಬಾರದು ಕಣೇ ಪಾತೂ, ನಿನ್ನತ್ತೆ ಮಾವ ಚಿನ್ನದಂಥ ಜನ. ದೇವರು ಅವರಿಗೆ ಅನುಕೂಲ ಮಾಡಿದ್ದರೆ ನಿನ್ನ ಚಿನ್ನದ ಮಂದಾಸನದಲ್ಲಿ ಕೂಡಿಸುತ್ತಿದ್ದರು.' ಪಾರ್ವತಿ ತಾಯಿಯ ಮೇಲೆ ರೇಗಿ 'ಸಾಕು ಸುಮ್ಮನಿರಮ್ಮ—ನಿನ್ನ ಬೀಗರ ಯೋಗ್ಯತೆ ನೀನೇ ಹೊಗಳಿಕೊಳ್ಳಬೇಕು' ಎಂದು ಬಾಯಿ ಮುಚ್ಚಿಸುತ್ತಿದ್ದಳು.

ಅನಿರೀಕ್ಷಿತವಾಗಿ ಕೆಂಗೇಗೌಡರು, ದೊಡ್ಡಮ್ಮ ಬಂದುದನ್ನು ಕಂಡು ನರಸಮ್ಮ ಬೆಕ್ಕಸಬೆರಗಾಗಿ

"ಇದೇನು ಗೌಡರೇ!" ಎಂದಳು.

ದೊಡ್ಡಮ್ಮ ನರಸಮ್ಮನ ಮುಂದೆ ಒಂದು ಬುಟ್ಟಿಯಿಟ್ಟು

"ಒಳಕ್ಕೆ ಮಡಿಕ್ಕೊಳ್ರವ್ವಾ" ಎಂದಳು.

ಹಜಾರದಲ್ಲಿ ಆನೆ, ಕುದುರೆ ಆಟವಾಡುತ್ತಾ ಕುಳಿತಿದ್ದ ನಾರಾಯಣನನ್ನು ನೋಡಿ ಗೌಡರು

"ನಮ್ಮ ಚಂದ್ರಶೇಖರಪ್ಪನ ಮಗ ಅಲ್ಲವೇ " ಎಂದು ಕೇಳಿದರು.

"ಇವನೇ ಮಗ-ಮಗಳನ್ನು ನೋಡುವಿರಂತೆ ಒಳಕ್ಕೆ ಬನ್ನಿ ಗೌಡರೇ" ಎಂದು ಒಳಕ್ಕೆ ಕರೆದೊಯ್ದು ಗೌಡರಿಗೆ ಮಗು ತೋರಿಸಿ, ದೊಡ್ಡಮ್ಮನ ಕೈಗಿತ್ತಳು.

ಗೌಡರು ಮೃದುವಾಗಿ

"ಚಂದಾಕಿದ್ದೀಯಾ ಪಾತವ್ವಾ" ಎಂದರು.

"ಇದ್ದೀನಿ ಗೌಡರೇ."

"ಯಜಮಾನ್ರು ಮನೇಲಿಲ್ವಾ ?"

"ಇಲ್ಲ—ಕೋರ್ಟಿಗೆ ಹೋಗಿದ್ದಾರೆ."

"ಎಲ್ಲಿಂದ ಬರುತ್ತಿದ್ದೀರಿ ಗೌಡರೇ " ಎಂದು ನರಸಮ್ಮ ಕೇಳಿದಳು.

"ಅದೊಂದು ದೊಡ್ಡ ಕಥೆ ಕಣವ್ವಾ. ಒಂದು ದಿನ ಗೌಡಿತಿ ಕನಸಿನಾಗೆ ಸೋಮಿಗಳು ಬಂದು 'ದೊಡ್ಡವ್ವಾ, ಗೌಡನ್ನೂ ಕರ್ಕೊಂಡು ಯಾತ್ರೆ ಮಾಡು' ಎಂತಾ ಅಪ್ಪಣೆ ಮಾಡಿದರು. ಮುಗೀತಲ್ಲ—ಬುದ್ಯೋರ ಮಾತೂಂದರೆ ಗೌಡತೀಗೆ ವೇದವಾಕ್ಯ. 'ಊ—ಹೊಂಡಿ' ಎಂತಾ ನನ್ನ ಎಬ್ಬಿಸಿದಳು. ತಿರುಪತಿ, ಧರ್ಮಸ್ಥಳ, ಉಡುಪಿ, ಸುಬ್ರಹ್ಮಣ್ಯ ನೋಡಿ ಕೊಂಡು ಶೃಂಗೇರಿಯಲ್ಲಿ ಅವ್ನೋರ ಪಾದಕ್ಕೆ ಅಡ್ಡಬಿದ್ದು, ಗುರುಗಳ ದರ್ಶನ ಮಾಡಿಕೊಂಡು ಇತ್ತ ಬಂದೆವವ್ವಾ."

"ನೀವೇ ಧನ್ಯರಪ್ಪಾ. ದೊಡ್ಡವ್ವಾ-ನೀನು ಬಲು ಭಾಗ್ಯವಂತೆ ಕಣೇ ನನ್ನವ್ವ, ನಿನ್ನ ತುಂಬಿದ ಮನೆ, ಮನಸ್ಸು ಎರಡೂ ಸಮುದ್ರದ ಹಾಗಿದೆ."

"ಬಿಡ್ರವ್ವಾ—ಊರ್ನ, ನಮ್ಮನ್ನ ಎಲ್ಲಾ ನೀವು ಮರೆತೇಬಿಟ್ಟರಿ."

"ನಿನ್ನ ಕೈಯಲ್ಲಿದೆಯಲ್ಲಾ ಏನೂ ಅರಿಯದ ಕಂದ-ಮುಗ್ಧ ಮಾದೇವಿ —ಅದನ್ನು ಕೇಳು ನಾನು ಮರೆತಿನೇ ಎನ್ನೋದ—ಶೃಂಗೇರಿಯಲ್ಲಿ ಭಟ್ಟರು ಚೆನ್ನಾಗಿದ್ದಾರೆಯೇ ?"

"ಈಚೆಗೆ ಭೌ ಸೊರಗೋಗವ್ರವ್ವಾ ! ಆದ್ರೆ ಒಂದು ಚೋಜಿಗ ಏನು ಏಳಲಿ—ಆ ನಮ್ಮಪ್ಪನ ಮುಕ ನೋಡಾಕಾಕಿಲ್ರವ್ವಾ—ಉರಿಯೋ ಸೂರ್ಯನ ಆಗೆ ಝುಗಝುಗಾಂತ ಇರ್‍ತೈತೆ. ಆ ನನ್ನ ದೇವ್ರದ್ದು ಅದೇನು ಪಿರೀತಿ, ವಿಶ್ವಾಸಾನ್ರವ್ವಾ-ನನ್ನೋಡಿ 'ಬಾ ನನ್ನ ತಾಯಿ-ಬಾ ನನ್ನವ್ವಾ-' ಎಂತಾ

ಮಾತಾಡಿಸಿ, ಒಳಗಿಂದ ಉಗ್ಗಿ ತಂದು ಉಂಡೆ ಮಾಡಿ ನಂಗೂ, ಗೌಡರಿಗೂ ಕೊಟ್ಟರು. ನಾನಿದ್ದೋಳು 'ಸೋಮಿ, ಇದು ನಿಮ್ಮೂಟ ಅಲ್ವಾ' ಎಂದೆ. ಸೋಮಿಗೋಳು ನಾನೊಪ್ಪಿಸಿದ ಫಲ ತಗೊಂಡು 'ಇದು ನನ್ನೂಟ ತಾಯಿ–ಅದು ನಿನ್ನೂಟ. ನನ್ನ ಪ್ರೀತಿ ಮಗಳು, ಮಗ ಬರ್ತಾರೆ. ಅವರಿಗೆ ಹುಗ್ಗಿ ಮಾಡಿಡು ' ಎಂತಾ ಅಮ್ಮ ಅಪ್ಪಣೆ ಮಾಡಿದಳು. ಮಾಡಿಟ್ಟೆ. ಅಮ್ಮನೇ ಬಂದು ಸ್ವೀಕರಿಸಿದಳು ' ಎಂದ್ರವ್ವಾ!"

"ಊರಿಗೆ ಬಂದುಬಿಡಿ ಎಂದು ಹೇಳಲಿಲ್ಲವೇ ದೊಡ್ಡವ್ವಾ."

"ಹೇಳದೆ ಇರ್ತೀನಾ ತಾಯಿ–ಬರೋ ಕಾಲಕ್ಕೆ ನಾನೇ ಬರ್ತಿನವ್ವಾ" ಎಂದರು.

ದೊಡ್ಡಮ್ಮ ಪಾರ್ವತಿಯ ಕಡೆ ತಿರುಗಿ

"ನಿನ್ನ ಭೋ ಕೇಳಿದರು ಪಾತವ್ವಾ" ಎಂದಳು.

ಗೌಡರು, ಗೌಡತಿ ಅಂದು ಅಲ್ಲಿಯೇ ಉಳಿದುಕೊಂಡು ಊಟ ಉಪಚಾರ ತೀರಿಸಿಕೊಂಡು ಬರಬೇಕೆಂದು ನರಸಮ್ಮ ಹಟ ಹಿಡಿದಳು.

"ಊರು ಬಿಟ್ಟು ಭೋ ದಿವಸವಾಯ್ತು ನರಸಮ್ಮ–ಇನ್ನೊಂದು ಸಲಿ ಬತ್ತೀವಿ " ಎಂದು ಗೌಡರು ಸಮಾಧಾನ ಹೇಳಿದರು.

ದೊಡ್ಡಮ್ಮ ಹೊರಡುವ ಮುನ್ನ ಗೌರಿಯ ಪುಟ್ಟ ಕೈಬಿಡಿಸಿ ಅದರಲ್ಲಿ ಒಂದು ಸವರನ್ ಇಟ್ಟು 'ಗೌರಮ್ಮನ್ಹಂಗೆ ಉಟ್ಟಿದ ಮನೆ, ಸೇರಿದ ಮನೆ ಎಲ್ಲಕ್ಕೂ ಕೀರ್ತಿ ತಾರವ್ವಾ' ಎಂದು ಹರಸಿ ಪಾರ್ವತಿಯ ಮಗ್ಗುಲಲ್ಲಿ ಮಗುವನ್ನು ಮಲಗಿಸಿದಳು.

ಗೌಡರು ನಾರಾಯಣನ ಕೈಯಲ್ಲಿ ಒಂದು ಹತ್ತು ರೂಪಾಯಿ ನೋಟನ್ನಿಟ್ಟರು.

ಒಂದೇ ಸಮನೆ ಅಳುತ್ತ ನಿಂತಿದ್ದ ನರಸಮ್ಮನ ಬಳಿ ಬಂದು ಗೌಡರು

"ಸಂತೋಸವಾಗಿ ಕಳಿಸಿಕೊಡು ನರಸವ್ವಾ–ನೀನು ಅತ್ತಗೋತ ನಿಂತರೆ ನನ್ನ ಕಾಲೇ ಸೋತು ಹೋಗ್ತೈತೆ " ಎಂದರು.

ಬಾಗಿಲಲ್ಲೇ ನಿಂತು ಕಂಬನಿಗರೆಯುತ್ತಿದ್ದ ನರಸಮ್ಮನನ್ನು ನೋಡುತ್ತ ನೋಡುತ್ತ ಗೌಡರು, ಗೌಡಿತಿ ಮುಂದಡಿಯಿಟ್ಟರು. ಗೌಡಿತಿಯ ಕಣ್ಣಲ್ಲಿಯೂ ನೀರು ಧುಮುಕುತ್ತಿತ್ತು.

ದಾರಿಯಲ್ಲಿ ಬರುತ್ತಾ ಗೌಡಿತಿ ವಿಚಾರಪರವಶೆಯಾಗಿ

“ಯಾತ್ರೆ ಮಾಡಿದ್ರೂ-ಮೋಹ ಓಗಲಿಲ್ಲವಲ್ಲಾ ಗೌಡರೇ” ಎಂದಳು.

“ಅದು ಹೋಗಬಾರದು ದೊಡ್ಡಾ-ಮೋಹದಲ್ಲೂ ಸಾತ್ವಿಕ, ತಾಮಸ ಎಂತಾ ಎರಡು ಬಗೆಯೈತೆ. ತಾಮಸ ಮೋಹ ಹೋಗಬೇಕು—ಸಾತ್ವಿಕ ಮೋಹ ಉಳೀಬೇಕು” ಎಂದರು.

ಚಂದ್ರಶೇಖರ ಮನೆಗೆ ಬಂದೊಡನೆಯೇ ಗೌಡಿತಿ ಕೊಟ್ಟಿದ್ದ ಸವರನ್ ತೋರಿಸಿ ಪಾರ್ವತಿ

“ನೋಡಿ—ಹಳ್ಳಿಯ ಹೆಂಗಸು ಗೌಡಿತಿ—ಅವಳಿಗೆ ತಿಳಿಯೋಷ್ಟು ನಿಮ್ಮ ತಾಯಿಗೆ ತಿಳಿಯಲಿಲ್ಲವಲ್ಲಾ!” ಎಂದಳು.

ಚಂದ್ರಶೇಖರ ಮರುಮಾತನಾಡದೆ ತನ್ನ ಕೋಟು ಕಳಚಿ ಗೂಟಕ್ಕೆ ಹಾಕಿದ.

# ೩೭

ರಾತ್ರಿ ದುಸ್ಸ್ವಪ್ನಗಳನ್ನನುಭವಿಸಿ ಮೇಲಕ್ಕೆದ್ದ ಚಂದ್ರಶೇಖರನಿಗೆ ಪುಂಖಾನುಪುಂಖವಾಗಿ ದುಶ್ಶಕುನಗಳಾದವು. 'ನನಗೆ ಯಾವ ಅನಿಷ್ಟ ಕಾದಿದೆಯೋ' ಎಂದುಕೊಂಡೇ ತನ್ನ ಮನಸ್ಸಿನ ಭಯವನ್ನು ಹೆಂಡತಿಗೆ ಹೇಳಿದ. 'ಸರಿ-ನಿಮಗೆಲ್ಲೋ ಭ್ರಾಂತಿ-ಏನಾಗಿದೆ' ಎಂದವಳು ಮಾತು ಹಾರಿಸಿಬಿಟ್ಟಳು. ನರಸಮ್ಮ ಸುಮ್ಮನಿರದೆ ದೇವರಿಗೆ ತುಪ್ಪದ ದೀಪ ಹಚ್ಚಿಟ್ಟು ಸ್ವಪ್ನದೋಷ ನಿವಾರಣೆಯಾಗಲಿ ಎಂದು ಪ್ರಾರ್ಥಿಸಿಕೊಂಡಳು.

ಅಂದು ಕಛೇರಿಗೆ ಹೋಗುವುದಕ್ಕೆ ಚಂದ್ರಶೇಖರನಿಗೆ ಮನಸ್ಸಾಗಲಿಲ್ಲ. ಹನ್ನೊಂದು ಗಂಟೆಗೆ ಮನೆಗೆ ಬಂದ ಸುಬ್ಬಾಶಾಸ್ತ್ರಿ 'ಕೋರ್ಟಿನ ಕೆಲಸ ನಾನು ನೋಡಿಕೊಳ್ಳುತ್ತೇನೆ ನೀವು ಮನೆಯಲ್ಲಿಯೇ ವಿಶ್ರಮಿಸಿಕೊಳ್ಳಿ' ಎಂದು ಹೇಳಿ ಹೋದ.

ಹನ್ನೆರಡು ಗಂಟೆಗೆ ಚಂದ್ರಶೇಖರ ಊಟದ ಶಾಸ್ತ್ರ ಮುಗಿಸಿ ಕುಳಿತ. ಅವನ ಚಿತ್ತಕ್ಕೆ ಸ್ವಲ್ಪವೂ ಶಾಂತಿಯಿರಲಿಲ್ಲ. 'ಅಪ್ಪ, ಅಮ್ಮನಿಗೇನಾದರೂ.... ....ಛೆ! ಛೆ! ಅಂಥ ಯೋಚನೆಯೇ ಮಾಡಬಾರದು' ಎಂದು ಮನಸ್ಸನ್ನು ಬಿಗಿಹಿಡಿಯಲೆತ್ನಿಸಿದ.

ಸುಮಾರು ಒಂದೂವರೆ ಗಂಟೆಗೆ ಅವನ ಕೈಸೇರಿದ ತಂತ್ರೀವರ್ತಮಾನ ಅವನ ಅನುಮಾನವನ್ನು ಪರಿಹರಿಸಿ, ದುಗುಡವನ್ನು ಹೆಚ್ಚಿಸಿತು. ಆದಿಶೇಷಯ್ಯನವರು ಪಾರ್ಶ್ವವಾಯುವಿನ ಬಾಧೆಯಿಂದ ಮಲಗಿದ್ದಾರೆಂದು ಅವರ ಗುಮಾಸ್ತರು ತಾರು ಮಾಡಿದ್ದರು. ನಿಶ್ಚೇಷ್ಟಿತನಾಗಿ ಕುಳಿತ ಅಳಿಯನ ಸ್ಥಿತಿ ನೋಡಿ ನರಸಮ್ಮನಿಗೆ ಗಾಬರಿಯಾಯಿತು. ಅವನ ಸಮೀಪಕ್ಕೆ ಬಂದು

"ಏನಾಯಿತು ? ಏಕೆ ಹೀಗೆ ಕುಳಿತಿರಿ ?" ಎಂದು ಕೇಳಿದಳು.

ಚಂದ್ರಶೇಖರ ಸಾವಕಾಶವಾಗಿ ಚೇತರಿಸಿಕೊಳ್ಳುತ್ತ

"ತಂದೆಯವರಿಗೆ ಪಾರ್ಶ್ವವಾಯುವಾಗಿದೆ – ಊರಿನಿಂದ ತಂತೀ ಬಂದಿದೆ"

"ಅಯ್ಯೋ ! ಇಂಥ ಸಮಯದಲ್ಲಿ ನೀವು ಹೀಗೆ ಕುಳಿತರಾಗುತ್ತದೆಯೇ ? ತುಮಕೂರಿಗೆ ಹೋಗಿ ಅವರನ್ನು ಕರೆದುಕೊಂಡು ಬನ್ನಿ."

"ನಿಮಗೆ ......."

"ನನ್ನ ಮಾತಿರಲಿ—ನೀವು ಮೊದಲು ತುಮಕೂರಿಗೆ ಹೋಗಿ ಬನ್ನಿ. ನಾಗಮ್ಮ ಒಬ್ಬಂಟಿಗರು–ಪಾಪ ! ಅವರೇನು ಮಾಡಬಲ್ಲರು. ನೀವು ಕೂಡಲೇ ಹೋದರೆ ಅವರಿಗೆ ಸ್ವಲ್ಪ ಧೈರ್ಯಬರುತ್ತದೆ."

ಚಂದ್ರಶೇಖರ ಎದ್ದು ಪಾರ್ವತಿ ಬಳಿಗೆ ಹೋಗಿ

"ವಿಷಯ ತಿಳಿಯಿತೇ ಪಾರ್ವತಿ" ಎಂದು ಕೇಳಿದ.

"ಅಮ್ಮ ನೀವೂ ಮಾತನಾಡುತ್ತಿದ್ದುದು ಕೇಳಿಸಿತು."

"ನಾನು ಹೋಗಿ ಬರುತ್ತೇನೆ."

"..................."

"ತುಂಬ ಸೀರಿಯಸ್ (Serious) ಆಗಿದ್ದರೆ ಜತೆಯಲ್ಲಿಯೇ ಕರೆದುಕೊಂಡು ಬರುತ್ತೇನೆ."

"..................."

"ಅತ್ತೆಮ್ಮನವರೂ ಹಾಗೇ ಹೇಳಿದರು."

"ಕೇಳಿಸಿತು."

"ತಂದೆಯವರನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆಮಾಡಿಸುತ್ತೇನೆ ಪಾರ್ವತಿ."

"ನಿಮಗೆ ತೋರಿದಂತೆ ಮಾಡಿ."

ಚಂದ್ರಶೇಖರ ಹೋದ ಕೂಡಲೆ ಪಾರ್ವತಿ ವ್ಯಾಘ್ರಿಯಂತೆ ತಾಯಿಯ ಕಡೆ ತಿರುಗಿ

"ನಿನಗೆ ಸ್ವಲ್ಪವೂ ಬುದ್ಧಿಯಿಲ್ಲಮ್ಮ. ಇಲ್ಲೇಕೆ ಕರೆದುಕೊಂಡು ಬನ್ನಿ ಎಂದು ಹೇಳಿದೆ" ಎಂದು ಕೇಳಿದಳು.

ನರಸಮ್ಮನ ಸಹನೆಗೂ ಮಿತಿಯಿತ್ತು. ಬೀಗರಿಗೆ ಆಪತ್ತು ಒದಗಿದ ಸಮಯದಲ್ಲಿ ಮಗಳು ತೋರುತ್ತಿದ್ದ ನಿಷ್ಕರುಣೆ ಅವಳಿಗೆ ಬೇಸರವನ್ನುಂಟು ಮಾಡಿತು.

"ಸಾಕು ಸುಮ್ಮನಿರೇ ಪಾತೂ–ನಿನ್ನ ಮಾತು ಕೇಳಲಾರೆ. ನಾವೇನು ದನಗಳೋ ಮನುಷ್ಯರೋ? ಒಬ್ಬರ ಕಷ್ಟಕ್ಕಾಗದ ನಮ್ಮ ಬಾಳು ಎಂಥಾ ಬಾಳು! ನಿನ್ನ ನಡತೆ ಸ್ವಲ್ಪವೂ ಚೆನ್ನಿಲ್ಲಮ್ಮ" ಎಂದು ಹೇಳಿಯೇ ಬಿಟ್ಟಳು. ಪಾರ್ವತಿ ದೊಡ್ಡರಾಗ ತೆಗೆದು ಅಳುತ್ತಾ

"ಎಲ್ಲರಿಗೂ ನಾನೇ ಕೆಟ್ಟವಳು. ಈ ಮನೆಯಲ್ಲಿ ನಾನು ಯಾರು—ಕಾಲುಕಸ. ಅಮ್ಮನಿಗೆ ಕಷ್ಟವಾಗುತ್ತದಲ್ಲಾ ಎಂತಾ ನಾನು ಒಂದು ಮಾತು ಆಡಿದರೆ ಅದೂ ತಪ್ಪಾಯಿತು" ಎಂದು ಉದ್ಗಾರ ತೆಗೆದಳು.

ನರಸಮ್ಮ ಮಗಳನ್ನು ಸಂತೈಸಲೆತ್ನಿಸಲಿಲ್ಲ.

ಮನೆಬಿಟ್ಟ ಚಂದ್ರಶೇಖರ ನೇರವಾಗಿ ಕೋರ್ಟಿನ ಬಳಿಗೆ ಬಂದ. ಮುನಸೀಫ್ ಕೋರ್ಟಿನಲ್ಲಿ ಕುಳಿತಿದ್ದ ಸುಬ್ಬಾಶಾಸ್ತ್ರಿಯನ್ನು ಹೊರಗೆ ಕರೆದು ತನ್ನ ಪರಿಸ್ಥಿತಿ ವಿವರಿಸಿದ. ಸುಬ್ಬಾಶಾಸ್ತ್ರಿ ಕೋರ್ಟಿಗೆ ಹೋಗಿ ಮುನ್‌ಸೀಫರ ಅಪ್ಪಣೆಪಡೆದು ಬಂದು 'ನಡೀರಿ ಸ್ವಾಮಿ. ಒಂದು ಟ್ಯಾಕ್ಸಿ ಗೊತ್ತು ಮಾಡಿಕೊಡುತ್ತೇನೆ. ಕೂಡಲೇ ಹೋಗಿ ಯಜಮಾನರನ್ನು ಕರೆದುಕೊಂಡು ಬನ್ನಿ—ನಾನು ತಮ್ಮ ಮನೆಯಲ್ಲಿ ಕಾದಿರುತ್ತೇನೆ' ಎಂದ.

ಟ್ಯಾಕ್ಸಿ ವ್ಯವಸ್ಥೆಯಾಗಿ ಚಂದ್ರಶೇಖರ ಬೆಂಗಳೂರು ಬಿಡುವವೇಳೆಗೆ ನಾಲ್ಕು ಗಂಟೆಯಾಯಿತು. ಐದೂವರೆಗೆ ತುಮಕೂರು ಸೇರಿದ ಟ್ಯಾಕ್ಸಿ ನೇರವಾಗಿ ಅದಿಶೇಷಯ್ಯನವರ ಮನೆ ಮುಂದೆ ನಿಂತಿತು.

ಕಳಾಹೀನವಾಗಿದ್ದ ಮನೆ ನೋಡಿ ಚಂದ್ರಶೇಖರನ ಎದೆ ಧಸಕ್ಕೆಂದಿತು. ಅಂಜುತ್ತ ಅಳುಕುತ್ತಲೇ ಅವನು ಮನೆ ಪ್ರವೇಶಿಸಿದ. ಚಂದ್ರಶೇಖರನನ್ನು ನೋಡಿದ ಕೂಡಲೇ ನಾಗಮ್ಮ ಹೊರಗೆದ್ದು ಬಂದು ಅವನ ಕುತ್ತಿಗೆಯಪ್ಪಿ ಕಂಬನಿಗರೆಯಲಾರಂಭಿಸಿದಳು.

"ನನ್ನ ಮಾಂಗಲ್ಯ ಉಳಿಸಿಕೊಡು ಚಂದ್ರೂ."

"ಸಮಾಧಾನ ತಂದುಕೊಳ್ಳಮ್ಮ. ಅಣ್ಣನಿಗೆ ಏನಾಯಿತು."

"ಬಲಗಾಲು ಊದಿತ್ತು—ನೋವು ಬರುತ್ತಿತ್ತು. ಬೆಳಿಗ್ಗೆ ಎದ್ದವರೇ 'ಇವತ್ತು ಏಕೋ ನಿಶ್ಯಕ್ತಿ ಕಣೇ—ನೀನೇ ಸ್ನಾನಮಾಡಿಸು' ಎಂದರು. ಅವರನ್ನು ಬಚ್ಚಲಲ್ಲಿ ಕೂಡಿಸಿ ನೀರು ಹಾಕುತ್ತಿದ್ದೆ-ಇದ್ದಕ್ಕಿದ್ದಂತೆ ವಿಕಾರ ವಾಗಿ ಚೀರಿದರು—ಚೆಂಬು ಕೆಳಗಿಟ್ಟು ನಾನು ನೋಡುವಲ್ಲಿ ಅವರ ಬಲಭಾಗ ಸಂಪೂರ್ಣವಾಗಿ ಕುಸಿದು ಬಿದ್ದಿತ್ತು. ಅಕ್ಕಪಕ್ಕದವರನ್ನು ಬರಮಾಡಿ, ಅವರನ್ನು ಹಾಸಿಗೆಯಮೇಲೆ ತಂದು ಮಲಗಿಸಿದೆ."

"ದೇವರು ದೊಡ್ಡವನಮ್ಮ-ಬಲಗಡೆಗಾಗುವುದು ಎಡಗಡೆಗಾಗಿದ್ದರೆ..."

"ಈಗೇನು ಮಾಡೋಣಪ್ಪ."

"ಟ್ಯಾಕ್ಸಿ ತಂದಿದ್ದೇನೆ. ಅಣ್ಣನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಆಸ್ಪತ್ರೆ ಸೇರಿಸೋಣ."

ನಾಗಮ್ಮ ಕೈಗೆ ಸಿಕ್ಕಿದ ನಾಲ್ಕುಬಟ್ಟೆಗಳನ್ನು ಗಂಟುಕಟ್ಟಿಕೊಂಡು ಹೊರಡಲು ಸಿದ್ಧವಾದಳು.

"ಮನೆ ಬಾಗಿಲು ಹಾಕಲ್ಲವೇನಮ್ಮ."

"ಮನೆ ಯಾರಿಗೆ ಬೇಕಪ್ಪಾ."

ಚಂದ್ರಶೇಖರ, ಡ್ರೈವರ್ ಸಹಾಯ ತೆಗೆದುಕೊಂಡು ತಂದೆಯನ್ನು ಮೆಲ್ಲನೆ ಕರೆದೊಯ್ದು ಕಾರಿನ ಹಿಂದಿನ ಸೀಟಿನಲ್ಲಿ ಮಲಗಿಸಿದ. ನಾಗಮ್ಮ ಗಂಡನ ಪಾದದ ಬಳಿ ಕುಳಿತಳು.

ಟ್ಯಾಕ್ಸಿ ಬೆಂಗಳೂರು ತಲಪುವವೇಳೆಗೆ ಒಂಭತ್ತು ಗಂಟೆಯಾಗಿತ್ತು. ಸುಬ್ಬಾಶಾಸ್ತ್ರಿ, ನರಸಮ್ಮ ಇಬ್ಬರೂ ಹೊರಗೇ ಟ್ಯಾಕ್ಸಿಯ ದಾರಿ ಎದುರು ನೋಡುತ್ತ ನಿಂತಿದ್ದರು.

ನರಸಮ್ಮನನ್ನು ಕಂಡೊಡನೆಯೇ ನಾಗಮ್ಮ ತೆಕ್ಕೆಬಿದ್ದು ಅಳಲುಪಕ್ರ ಮಿಸಿದಳು. ನರಸಮ್ಮ ಅವಳನ್ನು ಸಮಾಧಾನಪಡಿಸುತ್ತಾ

"ಧೈರ್ಯಕೆಡಬೇಡಿ-ದೇವರು ಎಲ್ಲಾ ಒಳ್ಳೆಯದನ್ನೇ ಮಾಡುತ್ತಾನೆ. ಪೂರ್ವಜನ್ಮದಲ್ಲಿ ದೇವರನ್ನು ಒಳ್ಳೆಯ ಸಂಪಿಗೆಹೂವಿನಲ್ಲಿ ಪೂಜಿಸಿದ್ದೀರಿ. ಅವನು ನಿಮಗೆ ವಂಚನೆಮಾಡುವುದಿಲ್ಲ.

"ನಿಜವೇ ನರಸಮ್ಮ-ನನ್ನ ಕುಂಕುಮಭಾಗ್ಯಕ್ಕೆ ಕುಂದಿಲ್ಲವೇ ?"

ನಿರಾಶ್ರಿತ ಮಗುವಿನಂತೆ ತನಗೆ ತೆಕ್ಕೆಬಿದ್ದ ನಾಗಮ್ಮನನ್ನು ನೋಡಿ ನರಸಮ್ಮನ ದುಃಖವುಕ್ಕಿಬಂತು.

"ನಿಮಗೆ ಆ ದೇವರು ಅನ್ಯಾಯಮಾಡಿದರೆ ಅವನ ಮುಖದರ್ಶನ ನಾನು ಮಾಡಲ್ಲ ನಾಗಮ್ಮ" ಎಂದಳು.

ತಂದೆಯನ್ನು ಮನೆಯೊಳಗೆ ಕರೆದೊಯ್ಯಬೇಕೆಂದು ಚಂದ್ರಶೇಖರ ಆಶಿಸಿದ. ಸುಬ್ಬಾಶಾಸ್ತ್ರಿ ಅಡ್ಡ ಬಂದು

"ಬೇಡಿ-ನನ್ನ ಮಾತು ಕೇಳಿ. ಇದು ಮನೆಯಲ್ಲಿ ನೋಡಿಕೊಳ್ಳುವ ಕೇಸಲ್ಲ. ಆಸ್ಪತ್ರೆಗೆ ಹೋಗೋಣ ನಡೆಯಿರಿ."

"ಈ ಹೊತ್ತಿನಲ್ಲಿ ಬೆಡ್ (Bed) ಎಲ್ಲಿ ಸಿಕ್ಕುತ್ತದೆ ಶಾಸ್ತ್ರಿಗಳೇ."

"ನಾನು ಎಲ್ಲಾ ವ್ಯವಸ್ಥೆಮಾಡಿದ್ದೇನೆ ಸ್ವಾಮಿ. ಸ್ಪೆಷಲ್ ವಾರ್ಡಿನಲ್ಲಿ ಒಂದು ಬೆಡ್ ರಿಸರ್ವ್ ಮಾಡಿಸಿದ್ದೇನೆ."

ನರಸಮ್ಮನ ಜತೆಯಲ್ಲಿ ನಾಗಮ್ಮನೂ ಹೊರಟು ನಿಂತಳು.

ಸುಬ್ಬಾಶಾಸ್ತ್ರಿಯ ದಕ್ಷತೆಯಿಂದ ಸ್ಪೆಷಲ್ ವಾರ್ಡಿನಲ್ಲಿ ಬೆಡ್ ರಿಸರ್ವ್ ಆಗಿತ್ತು. ಡ್ಯೂಟಿ ಡಾಕ್ಟರ್ ರೋಗಿಯನ್ನು ಪರೀಕ್ಷಿಸಿ ಒಂದು ಇಂಜಕ್ಷನ್ ಚುಚ್ಚಿ

"ಬೆಳಿಗ್ಗೆ ದೊಡ್ಡ ಡಾಕ್ಟರು ಪರೀಕ್ಷೆಮಾಡುತ್ತಾರೆ" ಎಂದರು

ಚಂದ್ರಶೇಖರ ಆರ್ತನಾಗಿ

"ಪ್ರಾಣಭಯವಿಲ್ಲವಷ್ಟೇ?" ಎಂದ.

"ಪ್ರಾಣಭಯವಿಲ್ಲ-ಚಿಕಿತ್ಸೆ ಸ್ವಲ್ಪ ತಡವಾಗುತ್ತದೆ. ರೋಗಿಗೆ ರೆಸಿಸ್ಟೆನ್ಸ್ (Resistence) ಸಾಲದು. ನೀವು ಚಿಂತೆಮಾಡಬೇಡಿ."

ನಾಗಮ್ಮ ಡಾಕ್ಟರ ಬಳಿಗೆ ಬಂದು

"ಹೇಗಾದರೂ ಮಾಡಿ ಅವರನ್ನು ಉಳಿಸಿಕೊಡಿಯಪ್ಪ" ಎಂದಳು.

"ಚಿಂತೆಮಾಡಬೇಡೀಮ್ಮ-ರೋಗಿಯ ಜನರಲ್ ಕಂಡಿಷನ್ (General-Condition) ಸುಧಾರಿಸಿದರೆ ಬೇಗ ಗುಣವಾಗುತ್ತದೆ. ಮೊದಲಿಗೂ ಈಗ್ಗೂ ವೈದ್ಯಕೀಯ ವಿಜ್ಞಾನ ಬಹಳ ಬೆಳದಿದೆಯಮ್ಮ—ಇಂಥ ಕೇಸುಗಳನ್ನು ನಾವು ಸಾಮಾನ್ಯವೆಂದು ಪರಿಗಣಿಸುತ್ತೇವೆ. ನಿಮ್ಮ ಯಜಮಾನರಿಗೆ ಗುಣವಾಗುತ್ತದೆಂದು ನಾನು ಬರೆದುಕೊಡಲು ಸಿದ್ಧನಾಗಿದ್ದೇನೆ."

"ನಿಮ್ಮ ಹೊಟ್ಟೆ ತಣ್ಣಗಿರಲಿ ಮೂರಾಯರೇ—ನಿಮ್ಮ ಮನೆ ನಂದ ಗೋಕುಲದ ಹಾಗೆ ಬೆಳೆಯಲಿ" ಎಂದು ನಾಗಮ್ಮ ಹರಸಿದಳು.

ರೋಗಿಯ ಬಳಿ ಯಾರೂ ಇರಬೇಕಾದುದಿಲ್ಲವೆಂದು ಡಾಕ್ಟರು ಹೇಳಿದರೂ ನಾಗಮ್ಮ ಕೇಳಲಿಲ್ಲ.

"ಬೆಳಿಗ್ಗೆ ಊಟಮಾಡಿದಿರೋ ಇಲ್ಲವೋ-ಮನೆಗೆ ಬಂದು ಊಟ ಮಾಡಿಕೊಂಡು ಹೋಗಿ" ಎಂದು ನರಸಮ್ಮ ಉಪಚರಿಸಿದಳು.

"ಏನೂ ಬೇಡ ತಾಯಿ, ನೀವು ಬಂದು ಧೈರ್ಯದ ಮಾತು ಹೇಳಿ ನನಗೆ ಅಮೃತ ಕುಡಿಸಿದಿರಿ. ಹೋಗಿ ಬನ್ನಿ-ನಾನು ಇಲ್ಲಿಯೇ ಇರುತ್ತೇನೆ."

ನಾಗಮ್ಮನನ್ನು ಆಸ್ಪತ್ರೆಯಲ್ಲಿ ಬಿಟ್ಟು ಉಳಿದವರು ಹಿಂತಿರುಗಿದರು. ಮನೆ ಸೇರಿದ ಕೂಡಲೇ ನರಸಮ್ಮ ಅಳಿಯನಿಗೆ

"ಬೆಳಿಗ್ಗೆ ಅಷ್ಟು ಹೊತ್ತಿಗೇ ಹೋಗಿ ನಿಮ್ಮ ತಾಯಿಯವರನ್ನು ಕರೆದು ಕೊಂಡು ಬನ್ನಿ. ಸ್ನಾನಮಾಡಿ, ಸ್ವಲ್ಪ ಏನಾದರೂ ಹೊಟ್ಟೆಗೆ ಹಾಕಿಕೊಂಡು ಅವರು ಆಸ್ಪತ್ರೆಗೆ ಹೋಗಲಿ" ಎಂದಳು.

ಚಂದ್ರಶೇಖರ ಸುಬ್ಬಾಶಾಸ್ತ್ರಿಯ ಕೈಹಿಡಿದು ಅಂತಃಕರಣಪೂರ್ವಕವಾಗಿ

"ಶಾಸ್ತ್ರಿಗಳೇ, ನೀವು ಮಾಡಿರುವ ಉಪಕಾರ ನಾನು ಎಂದೆಂದಿಗೂ ಮರೆಯಲಾರೆ" ಎಂದ.

"ನನ್ನ ಉಪಕಾರ ಹಾಗಿರಲಿ—ಸದ್ಯ ಯಜಮಾನರಿಗೆ ಗುಣವಾದರೆ ಸಾಕು ಸ್ವಾಮಿ. ಅಮ್ಮಾವರ ದುಃಖ ಯಾರು ನೋಡಿ ಹೊಟ್ಟೆ ಹಿಡಿದು ಕೊಳ್ಳಬೇಕು."

ಬೆಳಿಗ್ಗೆ ಆರುಗಂಟೆಗೇ ಎದ್ದು ಹೋಗಿ ಚಂದ್ರಶೇಖರ ತಾಯಿಯನ್ನು ಕರೆದುಕೊಂಡು ಬಂದ. ನರಸಮ್ಮ

"ರಾತ್ರಿ ಯಜಮಾನರು ನಿದ್ದೆ ಮಾಡಿದರೇ ?" ಎಂದು ಕೇಳಿದಳು.

"ನಿದ್ದೆಯೆಲ್ಲಿ ಬಂತಮ್ಮ-ಏನೋ ಮಂಪರು" ಎಂದು ಹೇಳಿ

"ರಾತ್ರಿ ನಾನು ಪಾತೂನ, ಮಕ್ಕಳನ್ನ ಮಾತಾಡಿಸಲೇ ಇಲ್ಲ. ನನ್ನ ಬುದ್ಧಿಗೆ ಏನೋ ಮಂಕು ಕವಿದಿದೆ ಕಣ್ರೀ."

ಎಂದು ಪಾರ್ವತಿಯ ಕೋಣೆಗೆ ಹೋಗಿ ಅವಳ ಯೋಗಕ್ಷೇಮ ವಿಚಾರಿಸಿ ಗೌರಿಯ ಗಲ್ಲ ಹಿಡಿದು ಮುದ್ದಿಸಿ

"ನಿನ್ನ ತಾತನ್ನ ಉಳಿಸಿಕೋ ನನ್ನ ಕಂದ" ಎಂದಳು.

ನಾಗಮ್ಮ ಎಷ್ಟು ಒಲ್ಲೆನೆಂದರೂ ಬಿಡದೆ ನರಸಮ್ಮ ಅವಳಿಗೆ ಸ್ನಾನ ಮಾಡಿಸಿ ಅವಳ ಕೈಯಲ್ಲಿ ಪೂಜೆಮಾಡಿಸಿ, ಅಲ್ಪೋಪಹಾರ ನೀಡಿದಳು.

ತಾಯಿ ಹೊರಡಲನುವಾಗಲು ಚಂದ್ರಶೇಖರ ಆಕೆಯನ್ನು ಕರೆದೊಯ್ದು ಆಸ್ಪತ್ರೆಯಲ್ಲಿ ಬಿಟ್ಟು ತಾನೂ ಅಲ್ಲಿಯೇ ನಿಂತ. ದೊಡ್ಡ ಡಾಕ್ಟರು ಬಂದು ಪರೀಕ್ಷೆ ನಡೆಸಿ, ಡ್ಯೂಟಿ ಡಾಕ್ಟರ ಅಭಿಪ್ರಾಯವನ್ನೇ ಸಮರ್ಥಿಸಿದರು.

ಚಂದ್ರಶೇಖರನ ಮನಸ್ಸೂ ಸ್ವಲ್ಪ ಹಗುರವಾಯಿತು. ಕಛೇರಿಯ ಮುಖ ಕಂಡು ಬರಲು ಅವನು ಹೋದ.

ಹನ್ನೆರಡು ಗಂಟೆಗೆ ಸರಿಯಾಗಿ ಉರಿಯುವ ಬಿಸಿಲಿನಲ್ಲಿ ನರಸಮ್ಮ ಆಸ್ಪತ್ರೆಗೆ ಊಟ ಹೊತ್ತುಕೊಂಡು ಬಂದಳು. ನರಸಮ್ಮನನ್ನು ನೋಡಿ ನಾಗಮ್ಮನ ಕರುಳೇ ಕಿತ್ತು ಬಂತು.

"ನಿಮಗಿದು ಯಾವ ಕರ್ಮ ಗಂಟುಬಿದ್ದಿತಮ್ಮ" ಎಂದಳು.

"ಕರ್ಮ ಅನ್ನಬೇಡಿ ನಾಗಮ್ಮ-ಹೀಗಾದರೂ ನನ್ನ ಕರ್ಮ ಸವೆಯಲಿ· ಮುಪ್ಪಿನ ಮುತ್ತೈದೆ ನಿಮ್ಮ ಸೇವೆಮಾಡಿದರೆ ಪುಣ್ಯದಿಂದಲಾದರೂ ನನ್ನ ಮಾಂಗಲ್ಯ ಮುಂದಿನ ಜನ್ಮದಲ್ಲಿ ಗಟ್ಟಿಯಾಗಲಿ" ಎಂದಳು.

ಒಂದು ದಿನವೂ ಬೇಸರಪಟ್ಟುಕೊಳ್ಳದೆ, ಮನೆಕೆಲಸ ಮುಗಿಸಿಕೊಂಡು, ಬಾಣಂತಿ ಮಗುವಿಗೆ ಊಟಕ್ಕಿಟ್ಟು, ಅಳಿಯನಿಗೆ ಅನ್ನ ಮುಚ್ಚಿಟ್ಟು ನಾಗಮ್ಮ ಆಸ್ಪತ್ರೆಗೆ ಅನ್ನಹೊತ್ತುಕೊಂಡು ಹೋಗುತ್ತಿದ್ದಳು.

ನಾಲ್ಕು ತಿಂಗಳು ಕಳೆಯುವಲ್ಲಿ ಪಾರ್ವತಿ ಬಾಣಂತನ ಮುಗಿಸಿಕೊಂಡು ಹೊರಬಂದಳು.

ಆದಿಶೇಷಯ್ಯನವರು ಒಂದೊಂದು ಮಾತು ಕಷ್ಟದಿಂದ ಆಡಲಾರಂಭಿಸಿದರು. ಅವರ ಮೃತ ಕೈಕಾಲುಗಳಿಗೆ ಅಲ್ಪಸ್ವಲ್ಪ ಜೀವ ಬಂದಿತ್ತು.

ಚಂದ್ರಶೇಖರ ನಿರಾತಂಕನಾಗಿ ತನ್ನ ಕಛೇರಿ, ಕೋರ್ಟಿನ ಕೆಲಸ ನೋಡಿಕೊಳ್ಳುತ್ತಿದ್ದ.

ಪ್ರಭಾಕರ ಮಾತ್ರ ಸೆರೆಮನೆಯಲ್ಲಿ ಕೊಳೆಯುತ್ತಲೇ ಇದ್ದ.

# ೩೮

ಆದಿಶೇಷಯ್ಯನವರಿಗೆ ಅಸ್ಪತ್ರೆಯಲ್ಲಿ ಆಗಬಹುದಾದ ಚಿಕಿತ್ಸೆ ಆರು ತಿಂಗಳಿಗೆ ಮುಗಿಯಿತು. 'ವಿಶ್ರಾಂತಿ–ಪುಷ್ಟಿಕರವಾದ ಆಹಾರ–ಟಾನಿಕ್ಕುಗಳು ಕೊಡಿ' ಎಂದು ಡಾಕ್ಟರು ವಿಧಿಸಿದ್ದರು.

ಚಂದ್ರಶೇಖರ ತಂದೆಯನ್ನು ಮನೆಗೆ ಕರೆದುಕೊಂಡು ಬಂದ. ಆದಿಶೇಷಯ್ಯ ಕಾಲೆಳೆದುಕೊಂಡು ಮನೆಯಲ್ಲಿಯೇ ಓಡಿಯಾಡುತ್ತಿದ್ದರು; ಕಷ್ಟಪಟ್ಟುಕೊಂಡು ಅಸ್ಪಷ್ಟವಾಗಿ ಮಾತನಾಡುತ್ತಿದ್ದರು. ನಾರಾಯಣ ಅವರ ಪರಮ ಗೆಳೆಯನಾದ. ಉದುರುತ್ತಿದ್ದ ಹಣ್ಣೆಲೆಗೆ ಚಿಗುರುತ್ತಿದ್ದ ಮೊಗ್ಗು ಹೊಸ ಜೀವವನ್ನಿತ್ತಿತು.

ನಾಗಮ್ಮನಿಗೆ ಹೋದ ಜೀವ ಬಂದಂತಾಗಿತ್ತು. ಪ್ರಭಾಕರನನ್ನು ಸ್ಮರಿಸಿಕೊಂಡು ಕಣ್ಣೀರಿಡುತ್ತಿದ್ದ ತಾಯಿಯನ್ನು ನರಸಮ್ಮನೇ ಸಂತೈಸುತ್ತಿದ್ದಳು.

ಶಿವಮೊಗ್ಗೆಯಿಂದ ಯಶೋಧಾ, ವೆಂಕಟರಾಮಯ್ಯ ಎರಡು ಮೂರು ಬಾರಿ ಬಂದು ಆದಿಶೇಷಯ್ಯನವರನ್ನು ನೋಡಿಕೊಂಡು ಹೋಗಿದ್ದರು.

ಆದಿಶೇಷಯ್ಯನವರಿಗೆ ಕೈಕಾಲು ಸ್ವಾಧೀನಕ್ಕೆ ಬಂದ ಮೇಲೆ ಅವರು ಶಿವಮೊಗ್ಗೆಗೆ ಬಂದು ವಿಶ್ರಾಂತಿ ಪಡೆಯಬೇಕೆಂದು ವೆಂಕಟರಾಮಯ್ಯ ಅತ್ತೆಗೆ ಸೂಚಿಸಿದ. ಅಳಿಯನ ಸೌಜನ್ಯ ಕಂಡು ಸಂತೋಷಗೊಂಡ ನಾಗಮ್ಮ 'ಆಗಲಿ' ಎಂದು ಲೋಕಾಭಿರಾಮವಾಗಿ ಹೇಳಿದಳು.

ಚಂದ್ರಶೇಖರ ಶಂಕರ ಪುರದಲ್ಲಿ ಮನೆ ಕೊಂಡು ವಾಸಕ್ಕೆ ಬಂದ ಮೇಲೆ ಕುಮುದಮ್ಮನ ಕಾಟ ಪಾರ್ವತಿಗೆ ಸ್ವಲ್ಪ ಕಡಿಮೆಯಾಯಿತು. ಗಂಟೆಗೆ ಹತ್ತು ಸಲ ಪಾರ್ವತಿ ಮನೆಗೆ ತುಕ್ಕುವುದು ಕಡಿಮೆಯಾಗಿದ್ದರೂ

ಅವಳ ಪ್ರಭಾವಕ್ಕೆ ಏನೂ ಕುಂದು ಬರಲಿಲ್ಲ. ಅವಳು ಬಂದು ಒಂದು ದಿನ ಆಡಿ ಹೋಗುತ್ತಿದ್ದ ಮಾತುಗಳು ಪಾರ್ವತಿಗೆ ಒಂದು ವಾರದ ಗ್ರಾಸವಾಗುತ್ತಿತ್ತು.

ಆದಿಶೇಷಯ್ಯ, ನಾಗಮ್ಮ ಪಾರ್ವತಿಯ ಮನೆಗೆ ಬಂದ ಮಾರನೆಯ ದಿನವೇ ಕುಮುದಮ್ಮ ಅವತರಿಸಿದಳು. ಪಾರ್ವತಿಯ ರೂಮಿಗೆ ಅವಳನ್ನು ಕರೆದುಕೊಂಡು ಹೋಗಿ ಕೂಡಿಸಿಕೊಂಡು

"ನಿಮ್ಮ ಅತ್ತೆ ಮಾವ ಆಸ್ಪತ್ರೆಯಿಂದ ನೇರವಾಗಿ ತುಮಕೂರಿಗೆ ಹೋಗುತ್ತಾರೆಂದು ಹೇಳಿದಿರಿ."

"ಹೌದು—ನಾನೂ ಹಾಗೆಯೇ ತಿಳಿದಿದ್ದೆ. ಇವರು ಇಲ್ಲಿಯೇ ಒಕ್ಕರಿಸಿ ನನ್ನ ಗಂಟಲಿಗೆ ಗಾಣವಾಗುತ್ತಾರೆಂದು ನಾನು ನಂಬಿರಲಿಲ್ಲ."

"ನಿಮ್ಮ ಯಜಮಾನರಿಗೆ ಸ್ವಲ್ಪವೂ ವಿವೇಕವಿಲ್ರೀ. 'ಅಜ್ಜ ನೂತಿದ್ದು ಮೊಮ್ಮಗನ ಉಡಿದಾರಕ್ಕೆ' ಎಂದು ಗಾದೆಯಿರುವಂತೇ ಆಗಿದೆ. ಕೈನಡೆಯುವ ಕಾಲದಲ್ಲಿ ನಾಲ್ಕು ಕಾಸು ಕೂಡಿಟ್ಟುಕೊಳ್ಳದೆ ಹೀಗೆ ಉಧಾಯಿಸುತ್ತ ಬಂದರೆ ನಾಳೆ ನಿಮ್ಮ ಮಕ್ಕಳು ಮರಿಗೆ ಆಗುವವರು ಯಾರು?"

"ನನ್ನ ಮಾತು ಯಾರು ಕೇಳುತ್ತಾರಮ್ಮಾ—ನಮ್ಮಮ್ಮನೂ ಅವರ ಕಡೆ ಸೇರಿಕೊಂಡು ಬಿಟ್ಟಿದ್ದಾಳೆ. ಧರ್ಮವಂತೆ-ಕರ್ಮವಂತೆ! ಕಂಡವರ ತೊಳ್ಳೆಗೆ ಸುರಿಯುವುದೇ ನಮ್ಮ ಯಜಮಾನರ ಜಾಯಮಾನವಾಯಿತು. ಮಾತಾಡಿದರೆ ನಾನು ಕೆಟ್ಟವಳಾಗುತ್ತೇನೆ-ಉಳಿದವರು ಒಳ್ಳೆಯವರಾಗುತ್ತಾರೆ."

"ಈಗ ನಿಮ್ಮ ಮಾವನವರಿಗೆ ಹೇಗಿದೆ?"

"ಅವರಿಗೇನಾಗಿದೆ ಧಾಡಿ—ಕಲ್ಲುಗುಂಡು ಇದ್ದ ಹಾಗಿದ್ದಾರೆ. ಹೊತ್ತಿಗೆ ಅಚ್ಚೇರು ಅಕ್ಕಿ ಅನ್ನ ಸಲೀಸಾಗಿ ಗಿಟ್ಟಿಸುತ್ತಾರೆ. ನಮ್ಮ ಅತ್ತೇಗೆ ದುಃಖ-ಗಂಡ ಕಾಹಿಲೆ ಬಿದ್ದಿದ್ದಾರೆ. ಮಗ ಜೈಲಿನಲ್ಲಿದ್ದಾನೆ—ಪಾಪ; ಅವರು ಒಂದೂವರೆ ಪಾವಕ್ಕಿ ಅನ್ನವಷ್ಟೇ ಉಣ್ಣುವುದು."

"ನೀವು ಹೀಗೆ ಕುಳಿತಿದ್ದರೆ ಇವರು ನಿಮ್ಮನ್ನೆ ತೊಳೆದು, ನಿಮ್ಮ ಕೈಗೆ, ನಿಮ್ಮ ಮಕ್ಕಳ ಕೈಗೆ ಚಿಕ್ಕನಾಯಕನಹಳ್ಳಿ ಬೆಳ್ಳಿಯ ಬಟ್ಟಲನ್ನು ಕೊಡುತ್ತಾರೆ."

"ನನ್ನ ಏನು ಮಾಡೂಂತೀರಿ ಕುಮುದಮ್ಮ?"

"ಈ ಮನೆಗೆ ಯಾರ್ರೀ ಯಜಮಾನತಿ—ನೀವೋ ನಿಮ್ಮತ್ತೆಯೋ ?"

"ಹೆಸರಿಗೆ ನಾನೇ—ಮನೆಯೂ ನನ್ನ ಹೆಸರಿನಲ್ಲೇ ಇದೆ."

"ತುಮಕೂರಿಗೆ ಹೋಗಿ ಉಪಚಾರ ಮಾಡಿಸಿಕೊಳ್ಳಿ ಎಂದು ನಿರ್ದಾಕ್ಷಿಣ್ಯವಾಗಿ ನಿಮ್ಮ ಅತ್ತೆ ಮಾವನಿಗೆ ನೀವು ಹೇಳಲೇ ಬೇಕು."

"ಎಷ್ಟು ರೀತಿಯಲ್ಲಿ ಹೇಳಬಹುದೋ ನಾನು ಹೇಳಿದೆ ಕಣ್ರೀ—ಅವರು ಶುದ್ಧ ಭಂಡರು. ಜಪ್ಪಯ್ಯಾಂದ್ರೂ ನಮ್ಮನೆ ಬಿಟ್ಟು ಹೋಗುವ ಹಾಗಿಲ್ಲ."

"ಏಕೆ ಹೋಗುತ್ತಾರೆ ಹೇಳಿ. ಇಷ್ಟು ತಂಪಾದ ಸ್ಥಳ ಅವರಿಗೆ ಇನ್ನೆಲ್ಲಿ ಸಿಕ್ಕಬೇಕು."

ಪಾರ್ವತಿ ಅಂದೇ ತಾಯಿಯೊಡನೆ ಪ್ರಸ್ತಾಪಿಸಿ ಅತ್ತೆ ಮಾವನನ್ನು ತುಮಕೂರಿಗೆ ಕಳಿಸುವ ಏರ್ಪಾಟು ಮಾಡಬೇಕೆಂದಳು. ಮಗಳ ಕಲ್ಲು ಮನಸ್ಸು ಕಂಡು ನರಸಮ್ಮನ ಚಿತ್ತಶಾಂತಿ ನಿಪಾತಗೊಂಡಿತು.

"ನಿನಗೆ ಬುದ್ಧಿ ಬರುವುದೂ ನನಗೆ ಪ್ರಾಯ ಬರುವುದೂ ಎರಡೂ ಒಂದೇ ಕಾಲಕ್ಕೆ ಕಣೇ ಪಾರ್ವತಿ. ಆ ಕೆಟ್ಟ ಮುಖದ ಕುಮುದಮ್ಮ ಬಂದು ಹೋದ ದಿನದಿಂದ ನಿನ್ನ ಪಿತ್ಥ ಕೆರಳುತ್ತಿದೆ—ಇನ್ನುಮೇಲೆ ಅವಳು ಈ ಮನೆಗೆ ಕಾಲಿಡಲಿ ಮಾಡುತ್ತೇನೆ. ನಮ್ಮ ಸಂಸಾರದ ಕಷ್ಟಸುಖ ಕಟ್ಟಿಕೊಂಡು ಅವಳಿಗಾಗಬೇಕಾದುದೇನು? ಅವಳ ಮಾತು ಕೇಳಿಕೊಂಡು ನೀನು ಹುಚ್ಚು ಹುಚ್ಚಾಗಿ ಆಡುವುದು ಸ್ವಲ್ಪವೂ ಚೆನ್ನಿಲ್ಲ."

"ನೀನು ಕುಮುದಕ್ಕನ ತಂಟೆಗೆ ಹೋಗಕೂಡದಮ್ಮ."

"ಏಕೆ? ಕಂಡವರ ಸಂಸಾರ ಹಾಳುಮಾಡುವ ಈ ಹೀನ ಮುಂಡೇದಕ್ಕೆ ಯಾರಾದರೂ ಬುದ್ಧಿ ಕಲಿಸಲೇ ಬೇಕು."

"ಅವರು ಹೇಳುವುದರಲ್ಲಿ ತಪ್ಪೇನಿದೆಯಮ್ಮ. ಹೀಗೆ ಇವರು ತಿಂಗಳುಗಟ್ಟಲೆ ಕುಳಿತುಕೊಂಡರೆ ನಮ್ಮ ಗತಿ ಏನು?"

"ನಿನಗೇನು ಕಷ್ಟವಾಗಿರುವುದು! ಅಳಿಮಯ್ಯ ಸಂಪಾದಿಸಿ ತಂದು ಹಾಕುತ್ತಾರೆ. ನಾನು ಮಾಡಿ ಹಾಕುತ್ತೇನೆ - ನೋಡಿ ಸಂತೋಷಪಡುವುದಕ್ಕೂ ನಿನಗೆ ಲಭ್ಯವಿಲ್ಲ."

ಕುಮುದಮ್ಮನಿಗೆಲ್ಲಿ ಬೀಮಾರಿಯಾಗುವುದೋ ಎಂದು ಹೆದರಿ ಪಾರ್ವತಿ ಬಾಯಿ ಬಿಗಿ ಹಿಡಿಯಬೇಕಾಯಿತು. ಅತ್ತೆಯ ಜತೆ ಮಾತು ಕತೆಯಾಡುವುದನ್ನೂ ನಿಲ್ಲಿಸಿ ಪಾರ್ವತಿ ತನ್ನ ಸೇಡನ್ನು ತೀರಿಸಿಕೊಂಡಳು.

ತಾವು ಬೆಂಗಳೂರಿನಲ್ಲಿರುವುದು ಪಾರ್ವತಿಗೆ ಸ್ವಲ್ಪವೂ ಇಷ್ಟವಿಲ್ಲವೆನ್ನುವುದು ನಾಗಮ್ಮನಿಗೆ ಚೆನ್ನಾಗಿ ಗೊತ್ತಿತ್ತು. ಗಂಡನ ಅಸಹಾಯ ಸ್ಥಿತಿ—ಮಗನ ಧಾವಂತ—ಬೀಗಿತ್ತಿ ನರಸಮ್ಮನ ನಿಷ್ಕಲ್ಮಷ ಪ್ರೇಮ ಅವಳನ್ನು ಬೆಂಗಳೂರಿಗೆ ಬಿಗಿದಿತ್ತು.

ಮೂರು ತಿಂಗಳು ಕಳೆಯುವಲ್ಲಿ ಆದಿಶೇಷಯ್ಯನವರ ಸ್ಥಿತಿ ಮತ್ತಷ್ಟು ಸುಧಾರಿಸಿತು. ಕೈಕಾಲುಗಳಿಗೆ ಪೂರ್ವಸ್ಥಿತಿ ಬರದಿದ್ದರೂ, ಹೆಚ್ಚಿನ ಶಕ್ತಿ ಕೂಡಿಬಂತು. ಅಸ್ಪಷ್ಟವಾಗಿದ್ದ ಮಾತು ಸ್ಪಷ್ಟವಾಗುತ್ತ ಬಂದಿತು.

ಚಂದ್ರಶೇಖರ ಮನೆಗೆ ಬರುವುದನ್ನೇ ಕಾಯುತ್ತಿದ್ದ ನಾಗಮ್ಮ ಮಗನನ್ನು ಕಾಂಪೌಂಡಿನಲ್ಲೇ ನಿಲ್ಲಿಸಿಕೊಂಡು

"ನಾವು ನಾಳೆಯೋ ನಾಡಿದ್ದೋ ಊರಿಗೆ ಪ್ರಯಾಣಮಾಡುತ್ತೇವೆ ಚಂದ್ರೂ."

"ಏಕಮ್ಮ ಇಷ್ಟು ಅವಸರ."

"ಅವಸರವೇನು ಬಂತಪ್ಪಾ—ನಾವು ಬಂದು ಎಂಟು ತಿಂಗಳಾಗುತ್ತ ಬಂದಿತು. ಮನೆ ಪಾಡು ಏನಾಯಿತೋ ನೋಡಬೇಡವೇ?"

"ನಿನ್ನ ಬೀಗಿತ್ತಿಗೆ ಈ ಮಾತು ಹೇಳಿದೆಯಾ?"

"ಇನ್ನೂ ಹೇಳಿಲ್ಲ."

"ಅಣ್ಣ ಪೂರ್ಣಗುಣ ಮಾಡಿಕೊಂಡು ಹೋಗುವುದು ಒಳ್ಳೆಯದು."

"ದೇವರು ಇಷ್ಟು ಅನುಕೂಲ ಮಾಡಿಕೊಟ್ಟನಲ್ಲಾ—ಸಾಕು."

"ಅಮ್ಮ..."

"ಏನಪ್ಪಾ?"

"ಪಾರ್ವತಿ ಏನಾದರೂ ಅಂದಳೇ?"

"ಛೆ! ಪಾಪ!! ಇನ್ನೂ ನಾಲ್ಕು ದಿನವಿದ್ದು ಹೋಗಬೇಕೆಂದು ಅವಳೇ ಉಪಚಾರ ಹೇಳಿದರು."

ಮನೆಯಲ್ಲಿ ದೊಡ್ಡ ಜಿಜ್ಞಾಸೆ ಆರಂಭವಾಯಿತು. ನರಸಮ್ಮ ಅಳಿಯನ ಅಭಿಪ್ರಾಯವನ್ನೇ ಸಮರ್ಥಿಸುತ್ತಾ

"ಯಜಮಾನರಿಗೆ ಸಂಪೂರ್ಣವಾಗಿ ಗುಣವಾಗುವವರೆಗೆ ನೀವು ಹೋಗಲೇಕೂಡದು" ಎಂದು ಹಠ ಹಿಡಿದಳು.

ಬೀಗಿತ್ತಿಯರಲ್ಲಿ ವಾದ, ವಿವಾದ ನಡೆಯುತ್ತಿದ್ದಂತೆ ಪಾರ್ವತಿ ಬಂದು

"ಊರಿಗೆ ಹೊರಟಿರುವವರನ್ನು ನೀನೇಕಮ್ಮ ತಡೆಯುತ್ತೀ—ಮನೆ ಮಠ ಬಿಟ್ಟು ಅವರು ಎಷ್ಟು ದಿವಸ ಇಲ್ಲಿ ಕೂಡುವುದಕ್ಕಾಗುತ್ತದೆ" ಎಂದು ಥಟಕ್ಕನೆ ನುಡಿದೇಬಿಟ್ಟಳು.

ಮಾರನೆಯ ದಿನವೇ ಚಂದ್ರಶೇಖರ, ತಂದೆ ತಾಯಿಯನ್ನು ಕರೆದೊಯ್ದು ತುಮಕೂರಲ್ಲಿ ಬಿಟ್ಟು ಬಂದ.

## ೩೯

ಪಶ್ಚಿಮಾಭಿಮುಖವಾಗಿ ಬೀಸುತ್ತಿದ್ದ ದೇಶದ ರಾಜಕೀಯ ಗಾಳಿ ಪೂರ್ವಾಭಿಮುಖವಾಯಿತು. ಭಾರತದ ಸಮಸ್ತ ಪ್ರಜಾಸ್ತೋಮ ಏಕ ಮನಸ್ಸಿನಿಂದ ಸ್ವಾತಂತ್ರ್ಯಸಾಧನೆಗೆ ಹೊರಟಿತ್ತು. ಭಾರತದ ಅಜೇಯ್ಯ ಆತ್ಮ ಶಕ್ತಿಯೊಂದಿಗೆ ಸೆಣಸುವುದು ನಿರರ್ಥಕವೆಂಬ ಭಾವನೆ ಬ್ರಿಟಿಷ ಆಳರಸರ ಮನಸ್ಸಿನಲ್ಲಿ ಹೊಳೆಯಿತು. ಭಾರತವನ್ನೀಗ ಭಾರತೀಯರಿಗೆ ಒಪ್ಪಿಸಿದರೆ ಬ್ರಿಟನ್—ಭಾರತದ ಮೈತ್ರಿ ಶಾಶ್ವತವಾಗಿ ನಿಕಟವಾಗಿ ಉಳಿಯುತ್ತದೆಂಬು ದನ್ನು ಉದಾರಮತಿಗಳಾದ ಕ್ಲೆಮೆಂಟ್ ಅಟ್ಲೆ ಪಾರ್ಲಿಮೆಂಟಿಗೆ ಮನವರಿಕೆ ಮಾಡಿಕೊಟ್ಟರು.

ಅರವಿಂದರು, ತಿಲಕರು, ಬಾಪೂ ಮೊದಲಾದವರ ಅವಿಶ್ರಾಂತ ತಪಸ್ಸು ಅಸಂಖ್ಯಾತ ಭಾರತೀಯ ಹುತಾತ್ಮರ ಬಲಿದಾನ, ಸುಭಾಷ್‌ಚಂದ್ರಬೋಸರ ಐ. ಎನ್. ಎ. ದಳದ ಶೌರ್ಯಪ್ರತಾಪಗಳೆಲ್ಲದರ ಫಲವಾಗಿ ಭಾರತ ಆಗಷ್ಟ ೧೫–೧೯೪೭ ರಂದು ಸ್ವತಂತ್ರವಾಯಿತು.

ಇನ್ನೂರು ವರ್ಷಗಳ ಬ್ರಿಟಿಷ್‌ದಾಸ್ಯದಿಂದ ಮುಕ್ತಿಗೊಂಡು ಭಾರತ ಕೇಸರಿ ಮೈಕೊಡವಿ ನಿಂತಿತು.

ಅದೇರಾತ್ರಿ ಹನ್ನೆರಡು ಗಂಟೆಗೆ ಪಂಡಿತ ಜವಹರಲಾಲ್ ನೆಹ್ರೂ, ಅವರು ಡಿಲ್ಲಿಯಿಂದ ಸ್ವಾತಂತ್ರ್ಯಘೋಷಮಾಡುತ್ತಾ

"ವಿಶ್ವವೇ ಮಲಗಿ ನಿದ್ರಿಸುತ್ತಿರುವಾಗ ಭಾರತ ಎಚ್ಚತ್ತಿದೆ" ಎಂದು ಸಾರಿದರು.

ಹಿಂದೂ ಮುಸಲ್ಮಾನರು, ಬ್ರಾಹ್ಮಣ— ಬ್ರಾಹ್ಮಣೇತರರು, ಕವಿ—

ವಿಮರ್ಶಕರು ಔತ್ತರೇಯ, ದಾಕ್ಷಿಣಾತ್ಯರು ತಮ್ಮ ಬಹುದಿನದ ಕಲಹ, ವೈಮನಸ್ಯಮರೆತು ಅಣ್ಣತಮ್ಮಂದಿರಂತಿರಲು ಶಪಥಮಾಡಿದರು.

ಭಾರತದಲ್ಲಿ ಸ್ವಾತಂತ್ರ್ಯ ಸೂರ್ಯೋದಯವಾದಂದೇ ವಿಶ್ವದಲ್ಲಿ ಶಾಂತಿ ಸೂರ್ಯೋದಯವೂ ಆಯಿತೆಂದು ಜಗತ್ತಿನ ಮಹಾನಾಯಕರು ದೃಢವಾಗಿ ನಂಬಿದರು.

ಇಡಿಯ ರಾಷ್ಟ್ರವೇ ಆನಂದ ಸಾಗರದಲ್ಲಿ ಓಲಾಡಿತು.

ಎಲ್ಲಿ ನೋಡಿದರೂ ಉತ್ಸಾಹ—ಉತ್ಸವ!

ಈ ದೇಶ ಕೈಬಿಟ್ಟುಹೋದುದನ್ನು ಕಂಡಿದ್ದ ಹಿರಿಯರು ಕೆಲವರು ಜೀವಂತವಾಗಿದ್ದರು; ಜಲಿಯನ್‌ವಾಲಾಬಾಗ್ ಹತ್ಯಾಕಾಂಡದಲ್ಲಿ ನೊಂದಿದ್ದವರು ಹಲವರು ಬದುಕಿದ್ದರು. ನಮ್ಮ ಜೀವಮಾನಕಾಲದಲ್ಲಿ ಭಾರತ ಸ್ವತಂತ್ರವಾಯಿತೆನ್ನುವುದು ಅವರು ನಂಬಲಾಗದ ಮಹಾಪವಾಡವಾಗಿತ್ತು.

ಬೆಂಗಳೂರು ಸೆಂಟ್ರಲ್ ಜೈಲಿನಮುಂದೆ ಪ್ರಚಂಡ ಜನಸ್ತೋಮ ನೆರೆದಿತ್ತು. ವ್ಯಾನು, ಕಾರು, ಬಂಡಿಗಳಲ್ಲಿ ಜನ ಬಂದು ಕೂಡುತ್ತಿದ್ದರು. ಸೆರೆಮನೆಯಿಂದ ಹೊರಬರುವ ದೇಶಭಕ್ತರನ್ನು ಸ್ವಾಗತಿಸಲು ಬ್ಯಾಂಡು, ನಾಗಸ್ವರ, ನೂರಾರು ಹಾರಗಳು ಸಿದ್ಧವಾಗಿದ್ದವು.

ದೇಶಭಕ್ತರು, ಒಬ್ಬೊಬ್ಬರಾಗಿ ಹೊರಬಿದ್ದರು. ಜನಸ್ತೋಮ ಗಗನ ಭೇದಿಸುವಂತೆ ಜಯಘೋಷಮಾಡಿತು.

'ಇನ್‌ಕಿಲಾಬ್—ಜಿಂದಾಬಾದ್'

'ಜೈ—ಹಿಂದ್'

'ವಂದೇ—ಮಾತರಂ'

'ಮಹಾತ್ಮಾಗಾಂಧೀಕಿ....ಜೈ'

'ಜವಾಹರಲಾಲ್ ನೆಹ್ರೂಕಿ—ಜೈ'

ಹೂಮಾಲೆಗಳ ಹೊರೆಹೊತ್ತು ನಾಯಕರು ಬಾಜಾಬಜಂತ್ರಿಯೊಡನೆ ನಗರದ ಪ್ರಮುಖಬೀದಿಗಳಲ್ಲಿ ಮೆರವಣಿಗೆ ಹೊರಟರು.

ಜನಸ್ತೋಮವೂ ಜೈಲಿನ ಆವರಣದಿಂದ ಕದಲಿದ ಮೇಲೆ ನರಸಿಂಹ

ನಾಯಕ, ಪ್ರಭಾಕರ, ಗಣೇಶ ಮುಂದಡಿಯಿಟ್ಟರು. ಗಣೇಶ ತನ್ನ ಗೆಳೆಯರ ಕಡೆ ತಿರುಗಿ

"ನಿಮ್ಮನ್ನು ಸ್ವಾಗತಿಸಲು ಯಾರೂ ಬರಲಿಲ್ಲವೇ?" ಎಂದು ಕೇಳಿದ.

"ನಾವು ನಾಯಕರಲ್ಲ-ಕೇವಲ ರ್‍ಯಾಂಕ್ ಅಂಡ್ ಫೈಲ್ (Rank aod file)" ಎಂದು ನಾಯಕ ಉತ್ತರಿಸಿದ.

"ನೀನು ಈಗಲೇ ಊರಿಗೆ ಹೊರಡುವೆಯಾ ನಾಯಕ" ಎಂದು ಪ್ರಭಾಕರ ಕೇಳಲು ನಾಯಕ "ಹೋಗಲೇಬೇಕಪ್ಪಾ" ಎಂದು ಹೇಳಿದ.

ಪ್ರಭಾಕರನ ಕಣ್ಣುಗಳು ಯಾರನ್ನೋ ಹುಡುಕುತ್ತಿದ್ದವು. ಅವನ ಅಸ್ತವ್ಯಸ್ತ ಸ್ಥಿತಿ ಕಂಡ ಗಣೇಶ

"ಯಾರನ್ನಾದರೂ ನಿರೀಕ್ಷಿಸುತ್ತಿರುವಿರಾ?"

"ನಮ್ಮ ಅಣ್ಣಾವರು ಬರಬೇಕಾಗಿತ್ತು."

"ಅವರಿಗೆ ನಿಮ್ಮ ಬಿಡುಗಡೆಯ ಸುದ್ದಿ ಗೊತ್ತೇ?"

"ಗೊತ್ತಿಲ್ಲದೆ ಏನು? ವರ್ತಮಾನ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿದೆಯಲ್ಲ....ನೀವೇನು ಮಾಡುವಿರಿ ಕಾಮ್ರೇಡ್?"

"ಉಡುಪಿ ಹೋಟಲಿಗೆ ಹೋಗುತ್ತೇನೆ."

"ಜೈಲಿನಲ್ಲಿ ಒಂದುಗೂಡಿದ್ದ ಮೂವರು ಗೆಳೆಯರೂ ಮೂರು ದಾರಿ ಹಿಡಿದರು.

ಚಂದ್ರಶೇಖರ ಏಕೆ ಬರಲಿಲ್ಲವೆಂದು ಪ್ರಭಾಕರ ಚಿಂತಿಸುತ್ತಿರುವಲ್ಲಿ ಅವನೇ ಧಾವಿಸಿ ಬರುತ್ತಿದ್ದುದು ಕಂಡು ಬಂತು. ತಮ್ಮನನ್ನು ಅಣ್ಣ ಪ್ರೀತಿಯಿಂದ ಅಪ್ಪಿಕೊಂಡು

"ದಾರಿಯಲ್ಲಿ ಮೆರವಣಿಗೆ ಸಿಕ್ಕಿತು. ನೀನು ಅದರೊಂದಿಗಿರಬಹುದೆಂದು ಹುಡುಕಿದೆ—"

"ಇಲ್ಲ ಚಂದ್ರಣ್ಣ—ಬಸಣ್ಣನವರು ಹೇಳಿರುವಂತೆ ಗೋಪುರದ ಕಳಶವಾಗಿರುವುದಕ್ಕಿಂತ ಶರಣನ ಆವುಗೆಯಾಗಿರುವುದು ಲೇಸು."

"ನನ್ನ ಆಫೀಸು ಹತ್ತಿರದಲ್ಲೇ ಇದೆ—ಅಲ್ಲಿಯೇ ಹೋಗಿ ಕುಳಿತುಕೊಳ್ಳೋಣ."

"ತುಮಕೂರಿಗೆ ಹೋಗುವ ಬಸ್ಸುಗಳು ಮೆಜಸ್ಟಿಕ್ ಬಳಿ ಸಿಕ್ಕುತ್ತವೆ-ನಾನು ಊರಿಗೆ ಹೋಗಿಬಿಡುತ್ತೇನೆ."

"ಮನೆಗೆ ಬಂದು ಹೋಗುವುದಿಲ್ಲವೇ ?"

"ಅಣ್ಣ, ಅಮ್ಮನನ್ನು ನೋಡಿಕೊಂಡು ಬರುತ್ತೇನೆ."

ಕೆಂಪೇಗೌಡ ರಸ್ತೆಯಲ್ಲಿದ್ದ 'ನಿಯೋ ಮೈಸೂರು ಕೆಫೆ'ಗೆ ಚಂದ್ರಶೇಖರ ತಮ್ಮನನ್ನು ಕರೆದುಕೊಂಡು ಹೋಗಿ ತಿಂಡಿ, ಕಾಫಿಗೆ ಆರ್ಡರ್ ಮಾಡಿದ.

"ಮನೆಯಲ್ಲಿ ಎಲ್ಲರೂ ಆರೋಗ್ಯವಷ್ಟೆ ?"

"ಎಲ್ಲರೂ ಆರೋಗ್ಯ."

"ಅತ್ತಿಗೆಮ್ಮ ಮೈಕಳೆದು ಚೆನ್ನಾಗಿದ್ದಾರೆಯೋ ?"

"ಸುಖವಾಗಿದ್ದಾಳೆ."

"ಈ ಸಾರಿಯದು ಹೆಣ್ಣೋ ಗಂಡೋ ?"

"ಹೆಣ್ಣು."

"ಏನು ಹೆಸರಿಟ್ಟಿದ್ದೀರಿ"

"ಗೌರಿ."

"ಹೆಸರು ತುಂಬ ಚೆನ್ನಾಗಿದೆ. ನಾರಾಯಣ ಬೆಳೆದಿದ್ದಾನೆಯೋ ? ಸ್ಕೂಲಿಗೆ ಹೋಗುತ್ತಿದ್ದಾನೆಯೋ ?"

"ಇದೇ ವರ್ಷ ಅವನನ್ನು ಸ್ಕೂಲಿಗೆ ಸೇರಿಸಿದೆ-ನಿನ್ನ ವಿಷಯ ಹೇಳು ಮಾರಾಯ—ಜೈಲುವಾಸ ಹೇಗಿತ್ತು ?"

"ಎಲ್ಲವನ್ನೂ ಸಾವಕಾಶವಾಗಿ ಹೇಳುತ್ತೇನೆ. ಅಣ್ಣ, ಅಮ್ಮನನ್ನು ನೋಡುವವರೆಗೆ ನನಗೆ ಮನಶ್ಶಾಂತಿಯಿಲ್ಲ."

ಚಂದ್ರಶೇಖರ ಧೈರ್ಯ ತಂದುಕೊಂಡು, ಕಾಫಿ ಕುಡಿದು ಗಂಟಲು ಸರಿಮಾಡಿಕೊಂಡು

"ಪ್ರಭಾಕರ—ಅಣ್ಣನಿಗೆ ತುಂಬ ಕಾಯಿಲೆಯಾಗಿತ್ತು" ಎಂದ.

ಕೈಯಲ್ಲಿ ಹಿಡಿದಿದ್ದ ಕಾಫಿ ಲೋಟವನ್ನು ಮೇಜಿನ ಮೇಲಿಟ್ಟು ಪ್ರಭಾಕರ

"ಕಾಹಿಲೆ—ಏನು ಕಾಹಿಲೆ ?"

"ಪಾರ್ಶ್ವವಾಯು !"

"ಪಾರ್ಶ್ವವಾಯು !!— ಈಗ ಹೇಗಿದ್ದಾರೆ."

"ನಾಲ್ಕು ತಿಂಗಳು ವಿಕ್ಟೋರಿಯಾ ಆಸ್ಪತ್ರೆಯಲ್ಲಿಯೇ ಚಿಕಿತ್ಸೆಯಾಯಿತು. ಈಗ ತಕ್ಕಮಟ್ಟಿಗೆ ಗುಣವಾಗಿದೆ."

"ಎದ್ದು ಓಡಿಯಾಡುತ್ತಾರೆಯೇ ?"

"ಸ್ವಲ್ಪ ಪ್ರಯಾಸದಿಂದ ಓಡಿಯಾಡುತ್ತಾರೆ."

"ನನ್ನಿಂದ ಯಾರಿಗೂ ಪ್ರಯೋಜನವಿಲ್ಲ ಚಂದ್ರಣ್ಣ."

"ಹಾಗನ್ನ ಬೇಡಪ್ಪಾ."

"ಕಷ್ಟದ ಭಾರವನ್ನೆಲ್ಲಾ ನಿನ್ನ ಹೆಗಲ ಮೇಲೆ ಹೇರಿ, ನಾನು ನಿಶ್ಚಿಂತನಾಗಿ ಜೈಲಿನಲ್ಲಿ ಕುಳಿತೆ "

"ನೀನು ನಿಶ್ಚಿಂತನಾಗಿದ್ದೆಯಾ ?"

"ನನ್ನನ್ನು ಕ್ಷಮಿಸುವೆಯಾ ಚಂದ್ರಣ್ಣ."

ಉದ್ವೇಗಭರಿತನಾದ ಚಂದ್ರಶೇಖರ ಅಕ್ಕರೆಯಿಂದ ತಮ್ಮನ ಕೈಗಳನ್ನು ಹಿಡಿದ.

ಇಬ್ಬರು ಮೆಜಿಸ್ಟಿಕ್ ಚೌಕಕ್ಕೆ ಬಂದು, ಬಸ್ಸಿನ ದಾರಿನೋಡುತ್ತ ನಿಂತರು. ಚಂದ್ರಶೇಖರ ಕಿಸೆಯಿಂದ ಕೆಲವು ನೋಟುಗಳನ್ನು ತೆಗೆದು ಪ್ರಭಾಕರನ ಕೈಯಲ್ಲಿಟ್ಟು

"ನಿನ್ನ ಖರ್ಚಿಗಿರಲಿ—ಇಟ್ಟುಕೊಂಡಿರು" ಎಂದ.

"ನನಗೇಕೆ ಹಣ."

"ಮೊದಲು ಮೈತುಂಬ ಬಟ್ಟೆ ಹೊಲಸಿಕೋ."

ಪ್ರಭಾಕರ ಬಸ್ಸಿನಲ್ಲಿ ಕುಳಿತು ಹೋಗುವವರೆಗೂ ಚಂದ್ರಶೇಖರ ಅಲ್ಲಿಯೇ ನಿಂತಿದ್ದ. ರಸ್ತೆಯಲ್ಲಿ ಹೋಗುವವರೊಬ್ಬರ ಭುಜತಾಕಲು ಚಂದ್ರಶೇಖರ ಎಚ್ಚರಗೊಂಡು, ತನ್ನ ಕಛೇರಿ ಸೇರಿದ.

ಕಣ್ಣುಗಳು ತನಗೆ ಮೋಸಮಾಡುತ್ತಿವೆಯೇ ಎಂದು ತಿಳಿಯಲು ನಾಗಮ್ಮ ಮಗನ ಮೈದಡವಿ, ನೇವರಿಸಿದರು. ಆದಿಶೇಷಯ್ಯ ಸಂತೋಷದ ಭರದಲ್ಲಿ

"ನೀನು ಇವತ್ತೋ ನಾಳೆಯೊ ಬರುತ್ತೀ ಎಂದು ಹೇಳಿದರೆ ನಿಮ್ಮ ತಾಯಿ ನಂಬಲಿಲ್ಲಪ್ಪಾ" ಎಂದರು.

ಪ್ರಥಮ ದರ್ಶನದ ಉದ್ವೇಗ ಇಳಿಯಲು ನಾಗಮ್ಮ ಮಗನನ್ನು ನೋಡಿ

"ಎಷ್ಟು ಬಡವಾಗಿ ಹೋಗಿದ್ದೀ ಪ್ರಭಾಕರ. ನಿನ್ನ ತಲೆಯಲ್ಲಿ ಒಂದೊಂದು ಬಿಳಿಯ ಕೂದಲೂ ಕಾಣಿಸಿಕೊಂಡಿವೆ."

"ನನ್ನ ವಿಷಯ ಹಾಗಿರಲಿ ಅಣ್ಣ ಚೆನ್ನಾಗಿದ್ದಾರೇನಮ್ಮ."

"ಅವರಿಗೆ ಪುನರ್ಜನ್ಮವಾಯಿತು ಪ್ರಭಾಕರ ಭಗವಂತ ಏಕೆ ನಮ್ಮನ್ನು ಹೀಗೆ ಪರೀಕ್ಷಿಸುತ್ತಿದ್ದಾನೆಯೋ ? ನನ್ನ ಕಷ್ಟಕಾಲದಲ್ಲಿ ಸರಸಮ್ಮ ಹಿರಿಯಕ್ಕನಂತೆ ನೆರವಾದಳು. ಅವಳ ಋಣ ಎಷ್ಟು ಜನ್ಮಕ್ಕೂ ನಾನು ತೀರಿಸಲಾರೆ."

ಮಗ ವಿಶ್ರಾಂತಿಪಡೆಯಲೆಂದು ಒಂದೆರಡು ದಿವಸ ಆದಿಶೇಷಯ್ಯ, ನಾಗಮ್ಮ ಯಾವ ಮಾತಾಡುವುದಕ್ಕೂ ಪ್ರಯತ್ನಿಸಲಿಲ್ಲ.

ಒಂದುಸಂಜೆ ಆದಿಶೇಷಯ್ಯ ಮಗನನ್ನು ಹತ್ತಿರಕರೆದು ಕೂಡಿಸಿಕೊಂಡರು. ನಾಗಮ್ಮನೂ ಬಂದು ಎದುರಿಗೆ ಕುಳಿತಳು. ಆದಿಶೇಷಯ್ಯ ಮಾತನಾಡುತ್ತಾ

"ಪ್ರಭಾಕರ, ನಿಮ್ಮಮ್ಮ ಎಲ್ಲಾ ಹೇಳಿರಬಹುದು."

"ನಿನ್ನ ಕಾಹಿಲೆ ವಿಷಯವೇ ?"

"ಹೂ."

"ಹೇಳಿದ್ದಾಳೆ."

"ನನ್ನ ಶಕ್ತಿ ಉಡಿಗಿಹೋಯಿತು ಪ್ರಭಾಕರ— ಚಂದ್ರೂದು ಹೇಗೋ ಒಂದು ದಾರಿಯಾಯಿತು. ನಿನ್ನದೂ ಎಲ್ಲಾ ನೇರವಾದುದನ್ನು ನೋಡಿ ಕಣ್ಣುಮುಚ್ಚಬೇಕೆಂದಿದ್ದೆ—ಭಗವಂತನಿಗೆ ದಯೆ ಬರಲಿಲ್ಲ."

"ಏತಕ್ಕೆ ಪೇಚಾಡಿಕೊಳ್ಳುವೆ. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ನಿರ್ದಿಷ್ಟವಾಗಿರುವ ಮಾರ್ಗದಲ್ಲಿ ನಡೆಯಲೇಬೇಕು. ನನ್ನ ಕರ್ಮಕ್ಕೆ ಯಾರುಹೊಣೆ."

"ಮುಂದೆ ಏನು ಮಾಡಬೇಕೆಂದಿರುವೆ ಪ್ರಭಾಕರ" ಎಂದು ನಾಗಮ್ಮ ಕೇಳಿದಳು.

"ಒಂದೆರಡು ತಿಂಗಳು ನನಗೆ ವಿಶ್ರಾಂತಿಬೇಕಮ್ಮ. ನರಸಿಂಹನಾಯಕ ದುರ್ಗಕ್ಕೆ ಬಾ ಎಂದು ಹೇಳಿದ್ದಾನೆ. ಅಲ್ಲಿಗೆ ಹೋಗಿಬಂದು ನಿರ್ಧರಿಸುತ್ತೇನೆ."

ಎಂದು ಹೇಳಿ ಎರಡು ದಿವಸ ಊರಿನಲ್ಲಿ ನಿಂತು ಬೆಂಗಳೂರಿಗೆ ಬಂದ.

ಬಸ್ಸಿನಲ್ಲಿ ಇಳಿದವನು ನೇರವಾಗಿ ಬಳೆಯಪೇಟೆಯಲ್ಲಿದ್ದ ಅಣ್ಣನ ಆಫೀಸಿಗೆ ಹೋದ. ಪ್ರಭಾಕರನನ್ನು ಕಂಡಕೂಡಲೆ ಚಂದ್ರಶೇಖರ ತಂದೆ ತಾಯಿಗಳ ಯೋಗಕ್ಷೇಮ ವಿಚಾರಿಸಿ, ತಿಂಡಿ ತರಿಸಿಕೊಟ್ಟು 'ನಡೆ ಹೋಗೋಣ' ಎಂದ.

"ಎಲ್ಲಿಗೆ ಚಂದ್ರಣ್ಣ ?"

"ಇಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ಲಾಲ್‌ಬಾಗ್‌ಗೆ ಹೋಗಿ ಕುಳಿತುಕೊಳ್ಳೋಣ."

ಇಬ್ಬರೂ ಪಾರ್ಕಿಗೆ ಬಂದು ನಿಶ್ಶಬ್ದವಾಗಿದ್ದ ತಾಣ ಹುಡುಕಿ 'ಬ್ಯಾಂಬೂ ಐಲೆಂಡ್' ನಲ್ಲಿ (Banboo-Island) ಕುಳಿತರು.

"ಜೈಲುವಾಸ ಹೇಗಿತ್ತು ಪ್ರಭಾಕರ ?"

"ಜೈಲುವಾಸದಿಂದ ಪ್ರಯೋಜನವೂ ಆಯಿತು–ಅಪರಿಮಿತ ವ್ಯಥೆಯೂ ಆಯಿತು."

"ವ್ಯಥೆಯಾಗದೆ ಉಂಟೇ ?"

"ನನ್ನ ವ್ಯಥೆಯ ಕಾರಣ ಬೇರೆ ಚಂದ್ರಣ್ಣ."

"ನಿನ್ನ ಕಾರಣ ಯಾವದು ?"

"ಮನುಷ್ಯನ ಜೀವನಕ್ಕೆ ಆಹಾರ, ವಸತಿ, ವಸ್ತ್ರ, ವಿಹಾರ ಹೇಗೆ ಅವಶ್ಯಕವೋ ಹಾಗೇ ಕನಸುಗಳೂ ಅವಶ್ಯಕ. ಆಹಾರ ವಿಲ್ಲದೆ ಅವನು ಕೆಲದಿನವಾದರೂ ಬದುಕಬಲ್ಲ—ಕನಸು ನೀಗಿಕೊಂಡು ಅವನು ಬಾಳ್ವೆ ಮಾಡುವುದು ದುಸ್ಸಾಧ್ಯ."

"ನಿನ್ನ ಕನಸು ಭಂಗವಾಯಿತೇ ?"

"ನೆಲಕ್ಕೆ ಬಿದ್ದ ಕನ್ನಡಿಯಂತೆ ಒಡೆದು ಚೂರಾಯಿತು."

"ಯಾವದು ಆ ಕನಸು ?"

"ನಾನೂ ನರಸಿಂಹನಾಯಕ ಜೈಲಿಗೆ ಹೋಗುವುದಕ್ಕೆ ಮುಂಚೆ ದೇಶದ ಇತಿಹಾಸ, ಸ್ಥಿತಿಗತಿ, ಕಾಂಗ್ರೆಸ್ಸಿನ ಚರಿತ್ರೆಗಳನ್ನು ಕುರಿತು ಆಳವಾಗಿ

ವಿಚಾರಮಾಡಿದೆವು. ಯಾವ ವಿಷಯ ನಾವೆತ್ತಿಕೊಂಡು ಚರ್ಚಿಸಿದರೂ ಒಂದೇ ನಿರ್ಧಾರ ಅನಿವಾರ್ಯವಾಗುತ್ತಿತ್ತು. ದೇಶ ಸ್ವತಂತ್ರವಾಗದೆ ಮುಕ್ತಿಯಿಲ್ಲ—ನಮ್ಮ ಸಾಹಿತ್ಯ, ಕಲೆ, ಸಂಸ್ಕೃತಿ, ಉದ್ಯೋಗ, ವಾಣಿಜ್ಯ, ಕೈಗಾರಿಕೆ ಮುತ್ತು ನಾವು ಬೆಳೆಯಬೇಕಾದರೆ 'ಈ ನಾಡು ಪರದಾಸ್ಯದಿಂದ ಬಿಡುಗಡೆ ಹೊಂದಲೇ ಬೇಕು.' ಒಣಮಾತಿನಲ್ಲಿ ತೃಪ್ತಿಪಟ್ಟುಕೊಳ್ಳಲು ಇಷ್ಟಪಡದೆ ನಾನೂ ನಾಯಕ ಕಾರ್ಯರಂಗಕ್ಕೆ ಇಳಿಯಲು ನಿರ್ಧರಿಸಿದೆವು. ಬ್ರಿಟಿಷರ ದಾಸ್ಯದ ಬಳುವಳಿಯಾಗಿ ನಮ್ಮ ಕೈಗೆ ಬಂದಿರುವ ಸಂಸ್ಥೆಗಳಲ್ಲಿ ನಮ್ಮ ಕಾಲೇಜೂ ಒಂದಾಗಿತ್ತು—ಇದರ ಪ್ರಯೋಗಶಾಲೆಯನ್ನು ನಿಪಾತಗೊಳಿಸಿ, ನಮ್ಮ ವಿರೋಧ ವ್ಯಕ್ತಪಡಿಸಲು ನಿರ್ಧರಿಸಿದೆವು. ಆಗ ನಮ್ಮ ಕಣ್ಣೆದುರಿಗಿದ್ದುದು ಚಾಪೇಕರ್ ಸೋದರರು, ಗೋಪೀನಾಥ ಷಾ, ಭಗತ್ ಸಿಂಗ್, ದತ್ ಮೊದಲಾದ ಹುತಾತ್ಮರ ಪವಿತ್ರ ಜೀವನ. ಅವರಂತೆಯೇ ನಾವೂ ದೇಶಕ್ಕೆ ಪ್ರಾಣ ಒಪ್ಪಿಸಲು ಸಿದ್ಧವಾಗಿಯೇ ಪ್ರಯೋಗಶಾಲೆಗೆ ಬಾಂಬ್ ಹಾಕಿದೆವು. ನಮ್ಮನ್ನು ಹಿಡಿದು ಸೆರೆಮನೆ ಸೇರಿಸಿದರು. ಅಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಕಾಯಿದೆ ಭಂಗಮಾಡಿ ಬಂದಿದ್ದ ನೂರಾರು ಕಾಂಗ್ರೆಸ್ ನಾಯಕರು, ಭಕ್ತರು, ಅನುಯಾಯಿಗಳ ಪರಿಚಯವಾಯಿತು. ಕೆಲವು ವರ್ಷ ನಾವೆಲ್ಲಾ ಜತೆಯಲ್ಲಿಯೇ ಇದ್ದೆವಷ್ಟೆ! ಜೈಲಿನಲ್ಲಿ ಕಂಡ ದೃಶ್ಯ–ಆದ ಅನುಭವ ನನ್ನ ಮುತ್ತು ನಾಯಕನ ಕನಸನ್ನು ಒಡೆದು ಚೂರು ಚೂರು ಮಾಡಿಬಿಟ್ಟಿತು."

"ಜೈಲಿನಲ್ಲಿ ಏನಾಯಿತು?"

"ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗಮಾಡಿ ಬಂದಿದ್ದೇವೆಂದು ಕೊಚ್ಚಿಕೊಳ್ಳುತ್ತಿದ್ದ ಕಾಂಗ್ರೆಸ್ ನಾಯಕರ ವೈಯಕ್ತಿಕ ಜೀವನ ಅಸಹ್ಯಕರವಾಗಿತ್ತು. ಅವರೆಲ್ಲಾ 'ಎ' ಕ್ಲಾಸ್ ಖೈದಿಗಳು; ನಾವು 'ಬಿ' ಕ್ಲಾಸ್ ಖೈದಿಗಳು. ಸರ್ಕಾರ ಅವರಿಗೆ ಧಾರಾಳವಾಗಿ ಭತ್ಯ ಕೊಡುತ್ತಿತ್ತು. ಊಟ ತಿಂಡಿಗೆ ಈ ನಾಯಕರು ನಡೆಸುತ್ತಿದ್ದ ಕಾಳಗ, ಕಂಟ್ರ್ಯಾಕ್ಟರ್ ಜತೆಯಲ್ಲಿ ಇವರು ವ್ಯವಹರಿಸುತ್ತಿದ್ದ ರೀತಿ ತಲೆಬೇಸರವನ್ನುಂಟುಮಾಡುತ್ತಿತ್ತು. ಕೆಲವು ನಾಯಕರು ಸೂಪರಿಂಟೆಂಡೆಂಟನ್ನು ಬೆದರಿಸಿಕೊಂಡು ರಾತ್ರಿ ಹೊರಗೆ ಹೋಗಿ ತಮ್ಮ ವಿಲಾಸ ಮುಗಿಸಿಕೊಂಡು ಬೆಳಿಗೆ ಜೈಲಿಗೆ ಬರುತ್ತಿದ್ದರು.

ಕೆಲವು ನಾಯಕರಿಗೆ ಅಲ್ಲಿಯೇ ಇದ್ದ ಒಬ್ಬ ಜೈಲರ್ ಮನೆಯಲ್ಲಿ ಸಕಲ ಸುಖವ್ಯವಸ್ಥೆಯೂ ಆಗುತ್ತಿತ್ತು.

ಇವೆಲ್ಲಾ ಕಾಂಗ್ರೆಸ್ ಹೆಸರಿನಲ್ಲಿ, ಗಾಂಧೀಜಿ ಹೆಸರಿನಲ್ಲಿ ನಡೆಯುತ್ತಿದ್ದ ವ್ಯಾಪಾರ.

ವರ್ಷ ಎರಡು ವರ್ಷದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬರುತ್ತದೆ. ದೇಶದ ಏಕಮಾತ್ರ ಸುಸಂಘಟಿತ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸೇ ಅಧಿಕಾರ ಸೂತ್ರ ವಹಿಸುತ್ತದೆ ಎಂದು ಲೆಕ್ಕಾಹಾಕಿದ್ದ ಈ ದೇಶಭಕ್ತರು ತಮ್ಮ ಗುಂಪುಗಳನ್ನು ಕಟ್ಟುವುದಕ್ಕಾರಂಭಿಸಿದ್ದರು. ಪ್ರತಿಯೊಬ್ಬರಿಗೂ ಮಂತ್ರಿ ಪದವಿಬೇಕಾಗಿತ್ತು. ಜೈಲಿನಲ್ಲಿದ್ದ ಒಬ್ಬಿಬ್ಬ ಜ್ಯೋತಿಷಿಗಳಿಗಂತೂ ಹಬ್ಬ ದೂಟವಾಯಿತು. ಸ್ವಾರ್ಥ, ಅಧಿಕಾರಲಾಲಸೆ, ಕಾಂಗ್ರೆಸ್ಸಿನ ಪವಿತ್ರ ಹೆಸರಿನ ದುರುಪಯೋಗದ ರುದ್ರನಾಟ್ಯ ನಿತ್ಯವೂ ನನ್ನ ಕಣ್ಣಮುಂದೆಯೇ ನಡೆಯುತ್ತಿತ್ತು.

'ಇವರ ಕೈಗೆ ಅಧಿಕಾರ ಹೋದರೆ ದೇಶದ ಗತಿಯೇನು ನಾಯಕ' ಎಂದು ಕೇಳಿದೆ.

'ಇವರ ಕೈಗೆ ಅಧಿಕಾರ ಹೋಗುವುದರಲ್ಲಿ ಸಂದೇಹವೇ ಇಲ್ಲ, ಆದರೆ ನಿರಂಕುಶ ಪ್ರಭುತ್ವ ಎಷ್ಟು ಕಾಲ ಬದುಕಬಲ್ಲದು ?'

'ತಮ್ಮ ಅಧಿಕಾರಾವಧಿಯಲ್ಲಿ ಇವರು ದೇಶವನ್ನು ಹೊರಗಿನವರಿಗೆ ಮಾರದಿದ್ದರೆ ಸಾಕು.'

'ರಾಷ್ಟ್ರ ಜಾಗೃತವಾಗದೆ ಗತ್ಯಂತರವೇ ಇಲ್ಲ.'

'ರಾಷ್ಟ್ರಜಾಗೃತಿ ಸಾಧಿಸುವುದು ಹೇಗೆ ?'

'ನಿಷ್ಕಾಮಕರ್ಮದಿಂದ–ಗಾಂಧೀಜಿ ಹೇಳಿದಂತೆ ಅನಾಸಕ್ತಿಯೋಗ ದಿಂದ.'

ಇದೇ ಸಂದರ್ಭದಲ್ಲಿಯೇ ನಮಗೆ ಗಣೇಶನ ಪರಿಚಯವಾದುದು. ಇಂದಿನ ದೊಡ್ಡದೊಡ್ಡ ಕಾಂಗ್ರೆಸ್ ನಾಯಕರು ಕೋಮುವಾರು ಕೊಳಚೆ ಯಲ್ಲಿ ಬಿದ್ದು ತೊಳಲುತ್ತಿದ್ದಾಗ, ನಿಶ್ಯಬ್ದವಾಗಿ ಕಾಂಗ್ರೆಸ್ ಕಟ್ಟಿದ ಜಮಖಂಡಿ ಭೀಮರಾವ್, ತಗಡೂರು ರಾಮಚಂದ್ರರಾವ್, ಎಚ್. ವಿ. ಸುಬ್ರಹ್ಮಣ್ಯಂ, ಎಸ್. ವೆಂಕಟಪತಯ್ಯ, ಎಂ. ಲಕ್ಷ್ಮೀನಾರಾಯಣರಾವ್,

ಟಿ. ಸಿದ್ದಲಿಂಗಯ್ಯ ಇವರ ಜತೆ ದುಡಿದು ತನ್ನ ಸರ್ವಸ್ವವನ್ನೂ ಕಾಂಗ್ರೆಸ್ಸಿಗೆ ಅರ್ಪಿಸಿದ್ದವನು ಗಣೇಶ. ನೂತನ ನಾಯಕವರ್ಗದ ಮನೋಭಾವ ಕಾಂಗ್ರೆಸ್ ಒಳಗೆ ಬಂದರೂ ಬದಲಾಗಲಿಲ್ಲ. ಅದೇ ಕೋಮುವಾರು ಮನೋಭಾವ—ಅದೇ ಬಂಡವಾಳಶಾಹಿ ಬುದ್ಧಿ—ಇದನ್ನು ಕಂಡು ಬೇಸತ್ತ ಗಣೇಶ ಕಾಂಗ್ರೆಸ್ ಸಂಸ್ಥೆಯಿಂದ ದೂರವಾಗಿ ಕಮ್ಯುನಿಸ್ಟ್ ಪಾರ್ಟಿ ಕಟ್ಟ ಲಾರಂಭಿಸಿದ್ದ-ಕಾಂಗ್ರೆಸ್ ಕಟ್ಟಿದ ಗಣೇಶ ಕಾಂಗ್ರೆಸ್ ವಿರೋಧಿಯೆನಿಸಿ ಕೊಂಡಿದ್ದಂತೆ ಕಮ್ಯುನಿಸ್ಟ್ ಪಾರ್ಟಿ ಕಟ್ಟಿದ ಗಣೇಶ ಕಮ್ಯುನಿಸ್ಟ್ ವಿರೋಧಿ ಯೆನಿಸಿಕೊಂಡಿದ್ದ."

"ಹೇಗೆ?"

"ಕಳೆದ ಮಹಾಯುದ್ಧದಲ್ಲಿ ರಷ್ಯಾ ವಿಚಿತ್ರನಾಟಕವಾಡಿತು. ಸ್ಟಾಲಿನ್ ಒಂದು ಕಾಲದಲ್ಲಿ ಹಿಟ್ಲರ್ ಜತೆಯಲ್ಲಿ ಒಪ್ಪಂದಮಾಡಿಕೊಂಡು, ಜಗತ್ತನ್ನು ಆವನೊಂದಿಗೆ ಹಂಚಿಕೊಳ್ಳುವ ಪ್ರಯತ್ನ ನಡೆಸಿದ. ಈ ಒಪ್ಪಂದ ಮುರಿದು ಬೀಳಲು ಸ್ಟಾಲಿನ್ ಮಿತ್ರವರ್ಗದ ಕಡೆ ಸೇರಿಕೊಂಡ. ಮೊದಲು ಯುದ್ಧ ವಿರೋಧಿಗಳಾಗಿದ್ದ ಭಾರತೀಯ ಕಮ್ಯುನಿಸ್ಟರು ಯುದ್ಧದ ಪಕ್ಷಪಾತಿ ಗಳಾದರು. ರಷ್ಯಾ ಧೋರಣೆಯೇ ಭಾರತೀಯ ಕಮ್ಯುನಿಸ್ಟರ ಧೋರಣೆ. ಇದು 'ಜನತೆಯ ಯುದ್ಧ' (Peoples War)—ಈ ಯುದ್ಧದಲ್ಲಿ ಭಾರತ ಭಾಗವಹಿಸಲೇ ಬೇಕು ಎಂದು ಕಮ್ಯುನಿಸ್ಟರು ಹಟಹಿಡಿದರು. ಗಣೇಶನಂಥ ಕೆಲವು ರಾಷ್ಟ್ರಿಕರು ಈ ಅಭಿಪ್ರಾಯ ಒಪ್ಪಲಿಲ್ಲ. 'ಭಾರತದ ಪರವಾಗಿ ಮಾತನಾಡುವ ಅಧಿಕಾರ ಗಾಂಧೀಜಿ ಒಬ್ಬರಿಗೇ ಇರುವುದು. ಈ ಸಾಮ್ರಾಜ್ಯ ಶಾಹಿ ಯುದ್ಧದಲ್ಲಿ ನಾವು ಭಾಗವಹಿಸಬಾರದೆಂದು ಗಾಂಧೀಜಿ ಅಪ್ಪಣೆ ಮಾಡಿದ್ದಾರೆ. ಅವರ ಧೋರಣೆ ನಮಗೆ ಮಾನ್ಯ' ಎಂದು ಹೇಳಿದ. ಭಾರತದ ಬಿಡುಗಡೆ ಪ್ರಯತ್ನ ನಡೆಸಿದ ಸುಭಾಷ್‌ಬಾಬುಗಳ ವೀರಪ್ರಯತ್ನ ವನ್ನು ಶ್ಲಾಘಿಸಿದ—ಇವೇ ಅವನ ಘೋರಾಪರಾಧಗಳು. ಕಮ್ಯುನಿಸ್ಟ್ ಪಾರ್ಟಿ ಅವನನ್ನು 'ಕ್ವಿಸ್ಲಿಂಗ್' (Quisling) ಎಂದು ಕರೆದು, ಅವನ ಮೇಲೆ ಅಪಪ್ರಚಾರ ಆರಂಭಿಸಿತು."

"ನಿನ್ನ ರಾಜಕೀಯ ಜ್ಞಾನ ಇಷ್ಟು ವಿಕಾಸವಾಗಿರುವುದನ್ನು ಕಂಡು ನನಗೆ ಆಶ್ಚರ್ಯವಾಗುತ್ತದೆ ಪ್ರಭಾಕರ."

"ಆ ಕೀರ್ತಿ ಗಣೇಶನಿಗೆ ಸೇರಬೇಕು. ನನಗೂ ನಾಯಕನಿಗೂ ಅವನು ಕ್ರಮಾಗತವಾದ ರಾಜಕೀಯ ವಿಜ್ಞಾನದ ಪಾಠ ಹೇಳಿ ಉಪಕಾರ ಮಾಡಿದ್ದಾನೆ."

"ನೀನು ಇನ್ನಾದರೂ ರಾಜಕೀಯ ಮರೆತು ನಿನ್ನ ಭವಿಷ್ಯದ ಕಡೆ ಲಕ್ಷ್ಯಕೊಡಬೇಕು."

"ನನ್ನ ಭವಿಷ್ಯ ಈ ದೇಶದ ಭವಿಷ್ಯದೊಂದಿಗೆ ನಿಕಟವಾಗಿ ಹೊಂದಿಕೊಂಡಿದೆ."

"ಅಣ್ಣ ನಿನ್ನ ಮದುವೆಮಾಡಬೇಕೆಂದಿದ್ದಾರೆ."

"ಮದುವೆಮಾಡಿಕೊಂಡು ನೀನು ಪಡುತ್ತಿರುವ ಸುಖನೋಡುತ್ತಿರುವೆನಲ್ಲಾ!"

"ಕಟ್ಟಿದ ಒಂದು ಮನೆ ಕುಸಿದುಬಿದ್ದರೆ ಮನೆ ಕಟ್ಟಲೇ ಬಾರದೆಂದು ಹೇಳುವುದು ನ್ಯಾಯವೇ ?"

"ಜೌಗುಭೂಮಿಯಲ್ಲಿ ಮನೆ ಕಟ್ಟಲೇ ಬಾರದು."

"ಸದ್ಯ ಈ ಮಾತಾಡಿ ಪ್ರಯೋಜನವಿಲ್ಲ ಪ್ರಭಾಕರ. ನಿನ್ನ ಮನಸ್ಸೂ ವಿಕ್ಷಿಪ್ತವಾಗಿದೆ. ದುರ್ಗಕ್ಕೆ ಹೋಗಿ ಬಾ—ವಿಚಾರಮಾಡೋಣ. ನೀನು ಪುನಃ ಕಾಲೇಜ್ ಸೇರಿ ಓದುವುದಾದರೆ ಓದಿಸುವುದಕ್ಕೆ ನಾನು ಸಿದ್ಧವಾಗಿದ್ದೇನೆ–ನನ್ನ ಆರ್ಥಿಕ ಸ್ಥಿತಿ ಸುಧಾರಿಸಿದೆ—ಮೊದಲಿನ ಹಾಗೆ ನಾನು ಕಾಸು ಕಾಸಿಗೆ ಪಡುಪಾಟಲು ಅನುಭವಿಸಬೇಕಾಗಿಲ್ಲ."

"ಓದುವ ಕಾಲ ಮುಗಿದುಹೋಯಿತಣ್ಣ—ಈ ಜನ್ಮ ಹೇಗೆ ಸಾರ್ಥಕ ಪಡಿಸಿಕೊಳ್ಳುವುದೆನ್ನುವುದೇ ನನ್ನನ್ನು ಮುತ್ತಿರುವ ಚಿಂತೆ—ನಡೀ ಮನೆಗೆ ಹೋಗೋಣ." ಎಂದು ಹೇಳಿದ.

ಮನೆಯಲ್ಲಿ ಪ್ರಭಾಕರನಿಗೆ ಸ್ವಾಗತ ಬಯಸಿದವಳು ನರಸಮ್ಮ. ಪ್ರಭಾಕರನ ಮುಖ ಕಂಡಕೂಡಲೇ ಕೃತಕ ಸೌಜನ್ಯದಿಂದ ಅವನನ್ನು ಮಾತನಾಡಿಸಿದ ಪಾರ್ವತಿ ಮನಸ್ಸಿನಲ್ಲಿ 'ಹೋದೆಯಾ ಪಿಶಾಚಿ ಎಂದರೆ, ಬಂದೆ ಗವಾಕ್ಷಿಯಲ್ಲಿ ಎಂದಿತಂತೆ' ಎಂದುಕೊಂಡಳು.

## ೪೦

ಪ್ರಭಾಕರ ಹೆಚ್ಚುದಿನ ಅಣ್ಣನ ಮನೆಯಲ್ಲಿ ನಿಲ್ಲದೆ, ದುರ್ಗಕ್ಕೆ ಹೋದರೂ ಪಾರ್ವತಿಯ ಕೋಪ ಶಾಂತವಾಗಲಿಲ್ಲ.

'ಪ್ರಭಾಕರ ನಿರುದ್ಯೋಗಿ. ತಿಂಗಳು ತಿಂಗಳಿಗೂ ಇವರು ಹಣ ಕುಕ್ಕದಿದ್ದರೆ ಅವನ ಜೀವನ ಸಾಗುವುದು ಹೇಗೆ?'

'ಮಾವನವರು ಮನೆಹಿಡಿದು ಕುಳಿತು ಬಿಟ್ಟಿದ್ದಾರೆ. ಇನ್ನವರು ಕೋರ್ಟಿಗೆ ಹೋಗುವುದು ದುಸ್ಸಾಧ್ಯ. ಅವರ ಸಂಸಾರ ಸಾಗುವುದಕ್ಕೂ ಇವರೇ ಹಣ ಒದಗಿಸುತ್ತಾರೆ.'

ಎಂದು ತರ್ಕಮಾಡಿಕೊಂಡ ಪಾರ್ವತಿ ಗಂಡ ಮನೆಗೆ ಬಂದೊಡನೆಯೇ ಪಾಟೀಸವಾಲನ್ನಾರಂಭಿಸುತ್ತಿದ್ದಳು. ಗಂಡ ಸುಳ್ಳು ಹೇಳುತ್ತಿರುವನೋ ನಿಜ ಹೇಳುತ್ತಿರುವನೋ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸುಬ್ಬಾಶಾಸ್ತ್ರಿಗೂ ಪಾಟೀ ಸವಾಲಾಗುತ್ತಿತ್ತು. ಅಮ್ಮಾವರ 'ಭೈರಿಗೆ ಕೊರತ'ದಿಂದ ಪಾರಾಗಲು ಸುಬ್ಬಾಶಾಸ್ತ್ರಿ ಶಂಕರಪುರಕ್ಕೇ ಸುಳಿಯುತ್ತಿರಲಿಲ್ಲ.

ಪಾರ್ವತಿಯ ಪ್ರಶ್ನೆಮಾಲಿಕೆಗಳಿಗೆ ಉತ್ತರ ಹೇಳಿ ಹೇಳಿ ಬೇಸತ್ತಿದ್ದ ಚಂದ್ರಶೇಖರ ಒಂದು ದಿನ ಕೆರಳಿ

"ನಿನಗೆ ಯಾವದಕ್ಕೆ ಕೊರತೆಯಾಗಿದೆ ಪಾತೂ" ಎಂದು ಕೇಳಿದ.

"ಹಾಗೆಂದರೇನು ?"

"ನೀನು ಕೇಳಿದ್ದಕ್ಕೆಲ್ಲಾ ನಾನು ಹಣಕೊಡುತ್ತಿರುವೆನೋ ಇಲ್ಲವೋ ?"

"ಕೊಟ್ಟರೆ...."

"ಉಳಿದ ವಿಷಯಗಳಿಗೆ ನೀನೇಕೆ ಬಾಯಿ ಹಾಕಬೇಕು."

"ಯಾವ ವಿಷಯ."

"ತುಮಕೂರಿಗೆ ಹಣಕಳಿಸುವ ವಿಷಯ—ಪ್ರಭಾಕರನಿಗೆ ಸಹಾಯ ಮಾಡುವ ವಿಷಯ."

"ನನ್ನನ್ನು ಕೇಳದೆ ನೀವು ಯಾರಿಗೂ ಹಣಕಳಿಸಕೂಡದು."

"ತುಮಕೂರಿನಲ್ಲಿರುವವರು ನನ್ನ ತಾಯಿ ತಂದೆ—ಪ್ರಭಾಕರ ನನ್ನ ಸ್ವಂತ ತಮ್ಮ."

"ನಿಮ್ಮ ತಂದೆತಾಯಿಯ ಹಂಗು ನಮಗೇನೂ ಇಲ್ಲ."

"ನೀನು ಆಡುತ್ತಿರುವ ಮಾತಿನ ಅರ್ಥ ನಿನಗೇ ಗೊತ್ತಿಲ್ಲ ಪಾರ್ವತಿ."

"ಚೆನ್ನಾಗಿ ಗೊತ್ತಿದೆ. ನಿಮ್ಮ ತಂದೆತಾಯಿಯಿಂದ ನಿಮಗೆಷ್ಟು ಪ್ರಯೋಜನವಾಗಿದೆಯೆಂಬುದನ್ನು ನಾನು ಚೆನ್ನಾಗಿ ಬಲ್ಲೆ."

"ತಂದೆ ತಾಯಿಯಿಂದ ಮಕ್ಕಳು ನಿರೀಕ್ಷಿಸುವುದು ಪ್ರಯೋಜನವನ್ನಲ್ಲ-ಮಮತೆಯನ್ನು !"

"ಕಾಸು ಖರ್ಚಿಲ್ಲದೆ ಮಮತೆಯನ್ನು ಯಾರು ಬೇಕಾದರೂ ಕೊಡ ಬಲ್ಲರು !"

"ಕೊಡಬಲ್ಲರೇ ? ತಾಯಿಯ ಒಂದು ನುಡಿಗೆ ಕೋಟಿರೂಪಾಯಿ ಸಾಟಿ ಯಾಗಬಲ್ಲದೇ ?"

"ಈಚೆಗೆ ಬಹಳ ಸಿನೀಮಾ ನೋಡುತ್ತಿರುವಿರಾ ?"

"ಏಕೆ ?"

"ನೀವು ಆಡುವ ಮಾತುಗಳೆಲ್ಲಾ ಸಿನೀಮ ಮಾತುಗಳಂತಿವೆ."

"ಪಾರ್ವತಿ—ನೀನೂ ತಾಯಿ, ನಿನಗೂ ಮಕ್ಕಳಿದ್ದಾರೆ."

"ನಿಮ್ಮ ತಾಯಿಯಂತೆ ನಾನು ನನ್ನ ಮಕ್ಕಳನ್ನು ಕಂಗಾಳಿಗಳನ್ನಾಗಿ ಮಾಡುವುದಿಲ್ಲ."

"**ಪಾರ್ವತಿ** !"

"ನೀವು ಧ್ವನಿಯೆತ್ತರಿಸಿದರೆ ನಾನು ಹೆದರುವುದಿಲ್ಲ."

"ಮನೆಯ ಮರ್ಯಾದೆಗಾಗಿ ನಾನು ಹೆದರುತ್ತೇನೆ."

"ಹೆದರಬಾರದುದಕ್ಕೆ ಹೆದರುವುದೇ ನಿಮ್ಮ ಜಾಯಮಾನ."

"ಇನ್ನು ಯಾವದಕ್ಕೆ ಹೆದರಬೇಕಾಗಿತ್ತು."

"ನನಗೆ–ನನ್ನ-ಮಾತಿಗೆ–ನನ್ನ ಕಷ್ಟಸುಖಕ್ಕೆ."

"ನೀನು-ನೀನು-ನೀನು; ಪ್ರಪಂಚದಲ್ಲಿ ನೀನೊಬ್ಬಳೇ ಇರುವುದೆಂದು ಭಾವಿಸಿರುವೆಯಾ ?"

"ಪ್ರಪಂಚ ಕಟ್ಟಿಕೊಂಡು ನನಗೆ ಆಗಬೇಕಾದುದೇನು ? ಅಮಲ್ದಾರ್ ಸುಬ್ಬರಾಯಪ್ಪನವರು ಮನೆ ಬಿಡಿರೆಂದು ಹಿಂಸೆಮಾಡುತ್ತಿದ್ದಾಗ ಯಾವ ಪ್ರಪಂಚ ನಿಮಗೆ ಸಹಾಯಮಾಡಿತು."

"ನಿಮ್ಮ ತಾಯಿ ಮಾಡಿದ ಉಪಕಾರಕ್ಕೆ ನಾನು ಋಣಿಯಾಗಿದ್ದೇನಲ್ಲಾ !"

"ತಾಯಿ ಉಪಕಾರಮಾಡಿದಳೆಂದು ಮಗಳನ್ನು ಹೀಗೆ ಹಿಂಸೆ ಮಾಡುತ್ತಿರುವಿರೇನೋ ?"

"ಏಕೆ ಪಾರ್ವತಿ ನನ್ನನ್ನು ಹೀಗೆ ಗೋಳಾಡಿಸುತ್ತಿರುವೆ ?"

"ನಾನು ಗೋಳಾಡಿಸುತ್ತಿದ್ದೇನೆಯೇ—ನಿಮ್ಮ ಕೈಹಿಡಿದು ಹತ್ತುವರ್ಷಗಳಾದವು—ನಿತ್ಯ ಗೋಳು ಅನುಭವಿಸುವುದೇ ನನ್ನ ಹಣೆಯಬರೆಹವಾಯಿತಲ್ಲಾ! ನಿಮ್ಮ ಕೈಹಿಡಿದು ನಾನು ಯಾವ ಸುಖ ಅನುಭವಿಸಿದೆ."

"................"

"ಏಕೆ ಸುಮ್ಮನೆ ಕುಳಿತಿರಿ—ಬಾಯಿ ಕಟ್ಟಿಹೋಯಿತೇನು ? ನನ್ನ ಆಕ್ಷೇಪಣೆಮಾಡುವಾಗ ಉದ್ದವಾದ ನಾಲಗೆ ಈಗೆಲ್ಲಿ ಹೋಯಿತು."

"ನಿನ್ನ ಜತೆ ವಾದಮಾಡಿ ಪ್ರಯೋಜನವಿಲ್ಲ" ಎಂದು ಹೇಳಿ ಚಂದ್ರಶೇಖರ ಎದ್ದುಹೋದ.

ಶತಾಯು ಗತಾಯು ಗಂಡನನ್ನು ತನ್ನ ಅಭಿಮತಕ್ಕೆ ಅಧೀನಮಾಡಿಕೊಳ್ಳಬೇಕೆಂದು ಪಾರ್ವತಿ ನಿರ್ಧರಿಸಿದಳು.

ಮನೆಯೆಂದರೆ ಚಂದ್ರಶೇಖರನಿಗೆ ವೈಸಡುಕ ಬರುತ್ತಿತ್ತು. ಬೆಳಿಗ್ಗೆ ಕಛೇರಿ—ಮಧ್ಯಾಹ್ನ ಕೋರ್ಟು—ಸಂಜೆ ಮತ್ತೆ ಕಛೇರಿಯಲ್ಲಿ ಬೆಂದು, ಬಸವಳಿದು, ಬೆಂಡಾಗಿ ಮನೆ ಸೇರಿದರೆ ಅಲ್ಲಿ ಕಾದಿರುತ್ತಿದ್ದುದು ಪಾರ್ವತಿಯ ಕರ್ಣಕಠೋರ ಕಟುಮಾತಿನ ಮಾಲೆ.

ಬೆಳಿಗ್ಗೆ ಅಲ್ಪ ಉಪಾಹಾರಮಾಡಿಕೊಂಡು ಮನೆ ಬಿಡುತ್ತಿದ್ದ ಚಂದ್ರಶೇಖರ ಹತ್ತು, ಹನ್ನೊಂದು ಗಂಟೆಯ ಒಳಗೆ ಮನೆಗೆ ಬಂದು ಊಟ ಮುಗಿಸಿಕೊಂಡು ಕೋರ್ಟಿಗೆ ಹೋಗುತ್ತಿದ್ದ. ಅವನು ಊಟಕ್ಕೆ ಬಂದ

ವೇಳೆಯಲ್ಲಿಯೋ ಯಾವದಾದರೂ ಪ್ರಕರಣ ನಡೆಯುತ್ತಿತ್ತು. ಚಂದ್ರಶೇಖರ ಚಿತ್ತಶಾಂತಿಯನ್ನು ನೀಗಿಕೊಂಡು ಕೋರ್ಟಿಗೆ ಹೋಗುತ್ತಿದ್ದ. ಅಂಥ ದಿನ ಗಳಲ್ಲೇ ಕೋರ್ಟಿನಲ್ಲಿಯೂ ವಾಗ್ಯುದ್ಧವಾಗಿ ಅವನ ಅಸಂತೋಷ ಹೆಚ್ಚುತ್ತಿತ್ತು.

ಮಧ್ಯಾಹ್ನ ಮನೆಗೆ ಊಟಕ್ಕೆ ಹೋಗಿಬರುವುದನ್ನು ನಿಲ್ಲಿಸಿಬಿಡಲು ಚಂದ್ರಶೇಖರ ನಿರ್ಧರಿಸಿ, ಮನೆಯಿಂದ ಊಟ ತರಲು ಒಬ್ಬ ಹುಡುಗನನ್ನು ಗೊತ್ತುಮಾಡಿದ. ಕಛೇರಿ ಮುಗಿಸಿಕೊಂಡು ನೇರವಾಗಿ ಕೋರ್ಟಿಗೆ ಹೋಗುವುದು ಅವನಿಗೆ ಅಭ್ಯಾಸವಾಗುತ್ತಾ ಬಂತು.

ಒಂದೊಂದು ದಿನ ಕೋರ್ಟಿನ ಕೆಲಸ ಮೂರುಗಂಟೆ, ನಾಲ್ಕುಗಂಟೆಗೇ ಮುಗಿದುಹೋಗುತ್ತಿತ್ತು. ಮನೆಗೆ ಬಂದು, ಬಟ್ಟೆ ಬದಲಾಯಿಸಿಕೊಂಡು, ಉಪಹಾರ ಸ್ವೀಕರಿಸಿ ಏಳು ಗಂಟೆಯ ವೇಳೆಗೆ ಚಂದ್ರಶೇಖರ ಕಛೇರಿಗೆ ಹೋಗುತ್ತಿದ್ದ.

ಸಂಜೆ ಮನೆಗೆ ಬಂದು ಹೋಗುವುದೂ ಅನಗತ್ಯವೆಂದು ಚಂದ್ರ ಶೇಖರನಿಗೆ ತೋರಿತು. ಚಂದ್ರಶೇಖರ ಮನಸ್ಸನ್ನರಿತಿದ್ದ ಸುಬ್ಬಾಶಾಸ್ತ್ರಿ

"ಬರೀ ಕಛೇರಿ, ಕೋರ್ಟು ಎಂದು ಕುಳಿತರೆ ಬೇಸರವಾಗುತ್ತದೆ. ಬೇಸರವಾದರೆ ಕೆಲಸಕ್ಕೆ ಹುಮ್ಮಸ್ಸು ಇಲ್ಲದಂತಾಗುತ್ತದೆ. ಯಾವದಾದರೂ ಕ್ಲಬ್ ಸೇರಿ ಒಂದೆರಡು ಗಂಟೆಗಳಾದರೂ ಸಂತೋಷವಾಗಿ ನೀವು ಕಾಲ ಕಳೆಯಬೇಕು" ಎಂದು ಸಲಹೆಯಿತ್ತ.

"ಒಳ್ಳೆಯ ಕ್ಲಬ್ಬು ಯಾವದಿದೆ ಶಾಸ್ತ್ರಿಗಳೇ ?"

"ನಿಮ್ಮ ಸಹೋದ್ಯೋಗಿಗಳು ಬಹುಮಂದಿ ಸದಸ್ಯರಾಗಿರುವ ಸಿಟಿ ಕ್ಲಬ್ ಸೇರಬಹುದಲ್ಲ! ಖರ್ಚೂ ಬಹಳ ಬರುವುದಿಲ್ಲ."

"ನನಗೆ ಇಸ್ಪೇಟು-ಟೆನಿಸ್ ಒಂದೂ ಬರುವುದಿಲ್ಲವಲ್ಲಾ ಶಾಸ್ತ್ರಿಗಳೇ."

"ಯಾವ ಘನವಾದ ವಿದ್ಯೆ ಸ್ವಾಮಿ. ಅಭ್ಯಾಸಮಾಡಿಕೊಳ್ಳುವುದು ಎಷ್ಟರಲ್ಲಿದೆ ?" ಎಂದ.

'ಸಿಟಿಕ್ಲಬ್' ಚಂದ್ರಶೇಖರನ ಮತ್ತೊಂದು ಸಮಸ್ಯೆಯನ್ನು ಬಗೆಹರಿಸಿತು.

ಬೆಳಿಗ್ಗೆ ಮನೆ ಬಿಡುತ್ತಿದ್ದ ಚಂದ್ರಶೇಖರ ರಾತ್ರಿ ಹತ್ತು ಗಂಟೆಗೇ ಮನೆಗೆ ಹೋಗಲಾರಂಭಿಸಿದ.

## ೪೧

ದುರ್ಗಕ್ಕೆ ಹೋದ ಪ್ರಭಾಕರ ಹಿಂದಿರುಗಿ ಬರಲಿಲ್ಲ. ನರಸಿಂಹನಾಯಕ ಆರಂಭಿಸಿದ್ದ 'ಖಾದೀಕೇಂದ್ರ'ದಲ್ಲಿ ನಿಂತು ಗ್ರಾಮಸೇವೆ ಮಾಡಲು ಅವನು ನಿರ್ಧರಿಸಿದ್ದ. ಪ್ರಭಾಕರನ ಭವಿಷ್ಯ ಮುರಿದು ಹೋದುದಕ್ಕೆ ಆದಿಶೇಷಯ್ಯ ಪರಿತಪಿಸಿದರು. 'ಯಾರ ಕರ್ಮಕ್ಕೆ ಯಾರು ಹೊಣೆ. ಭಗವಂತ ಅವನ ಅನ್ನವನ್ನು ದುರ್ಗದಲ್ಲಿ ಇಟ್ಟಿದ್ದಾನೆಯೋ ಏನೋ' ಎಂದು ನಾಗಮ್ಮ ಸಮಾಧಾನ ಹೇಳಿದಳು.

ಶೃಂಗೇರಿಯಲ್ಲಿದ್ದ ಭಟ್ಟರಿಗೆ ಎಲ್ಲವೂ ಕಾಲಕಾಲಕ್ಕೆ ವರದಿಯಾದವು.

ಆದಿಶೇಷಯ್ಯನವರು ಕಾಹಿಲೆಬಿದ್ದುದು–ಬೆಂಗಳೂರಿಗೆ ಬಂದು ಚಿಕಿತ್ಸೆಗೆ ನಿಂತದ್ದು–ಪಾರ್ವತಿಯ ಚುಚ್ಚುಮಾತು ಕೇಳಲಾಗದೆ ಊರಿಗೆ ಹಿಂದಿರುಗಿದುದು—ಪ್ರಭಾಕರ ಸೆರೆಮನೆಯಿಂದ ಬಂದುದು—ಅಣ್ಣನ ಮನೆಯಲ್ಲಿ ನೆಲಸಲು ನಿರಾಕರಿಸಿದುದು—ದುರ್ಗಕ್ಕೆ ಹೋಗಿ ನರಸಿಂಹನಾಯಕನ ಖಾದಿ ಕೇಂದ್ರ ಸೇರಿದ್ದು—

ಚಂದ್ರಶೇಖರ ಮನೆಯಿಂದ ಆದಷ್ಟು ದೂರವಿರುತ್ತಿದ್ದುದು—ಸಂಜೆ ಹೊತ್ತುಗಳೆಯಲು ಸಿಟಿ ಕ್ಲಬ್ಬು ಸೇರಿದುದು—

ಎಲ್ಲವೂ ಭಟ್ಟರಿಗೆ ಗೊತ್ತಾಗಿತ್ತು.

"ನಾವು ಬೆಂಗಳೂರು, ತುಮಕೂರು ಪ್ರಾಂತ್ಯ ಹೋಗಿ ಎರಡು ಮೂರು ವರ್ಷವಾಗಲಿಲ್ಲವೇ ಸೀತಾರಾಮು."

"ಮೂರು ವರ್ಷವಾಯಿತು ಗುರುಗಳೇ."

"ಕಾಲಚಕ್ರ ಎಷ್ಟು ಬೇಗಬೇಗ ಉರುಳುತ್ತದೆ ನೋಡು–ಪಾರ್ವತಿ

ಯನ್ನು ನಿನ್ನೆಮೊನ್ನೆ ಆಡಿಸಿದಂತೆ–ಈಗವಳಿಗೇ ಹತ್ತುವರ್ಷದ ಮಗ ನಿದ್ದಾನೆ, ಎಂಟು ವರ್ಷದ ಮಗಳಿದ್ದಾಳೆ."

"ಬೆಂಗಳೂರಿಗೆ ಹೋಗಿಬರಬೇಕೇ ಗುರುಗಳೇ ?"

"ಅದೇ ವಿಚಾರಮಾಡುತ್ತಿದ್ದೇನೆ. ನಾನು ಹೋಗಿ ಮಾಡುವುದಾದರೂ ಏನು–ರುದ್ರಾಕ್ಷಿಪುರದ ಎರಡು ಬಣಗಳಿಗೆ, ಎರಡು ಜಾತಿಗಳಿಗೆ ಹುಟ್ಟಿದ್ದ ವೈಷಮ್ಯ ನಿವಾರಿಸಿ ಸೌಹಾರ್ದ ಬೆಳಸಿದೆ ಎಂಬ ಅಹಂಕಾರ ನನ್ನಲ್ಲಿತ್ತು ಸೀತಾರಾಮು—ಭಗವಂತ ಅದನ್ನು ಮಟ್ಟಿ ಹಾಕಿದ."

"ಏನಾಯಿತು ಗುರುಗಳೇ ?"

"ಚಂದ್ರಶೇಖರನ ಮನೆಯಲ್ಲಿ ಸೌಹಾರ್ದ ಸ್ಥಾಪಿಸುವುದಕ್ಕೇ ನನ್ನಿಂದ ಸಾಧ್ಯವಾಗಲಿಲ್ಲ."

"ಇದರಲ್ಲಿ ನಿಮ್ಮದೇನು ತಪ್ಪು ? ನಿಮ್ಮಿಂದ ಬುದ್ಧಿ ವಿವೇಕ ಕಲಿಯ ದಿದ್ದವರು ಯಾರಿಂದಲೂ ಕಲಿಯಲು ಸಾಧ್ಯವಿಲ್ಲ."

"ಶ್ರೀಶ್ರೀಗಳವರಲ್ಲಿ ವಿಷಯ ಅರಿಕೆಮಾಡಿಕೊಳ್ಳಲೂ ಸಾಧ್ಯ ವಿಲ್ಲವಾಗಿದೆ."

"ಶ್ರೀಶ್ರೀಗಳವರು ಯಾವಾಗ ಬಹಿರ್ಮುಖರಾಗುತ್ತಾರೆ ?"

"ಅದನ್ನು ಯಾರು ಹೇಳಲು ಸಾಧ್ಯ ಸೀತಾರಾಮು. ಅವರು ಧ್ಯಾನ ಯೋಗರೂಢರಾಗಿ ಕುಳಿತು ಇಂದಿಗೆ ಹದಿನೆಂಟು ದಿವಸಗಳಾದುವು–ಈ ಸಾರಿ ಅವರು ಬೇಗ ಬಹಿರ್ಮುಖವಾಗಲಾರರು."

"ಹಾಗೆಂದರೆ ?"

"ಅವರ ಧ್ಯಾನಸಮಾಧಿ ಸಾಂಕೇತಿಕವಾಗಿದೆ ಸೀತಾರಾಮು."

"ನನಗೆ ಭಯವಾಗುತ್ತದೆ ಗುರುಗಳೇ."

"ಶ್ರೀಶ್ರೀಗಳವರ ಜೀವಜ್ಯೋತಿ ಪರಂಜ್ಯೋತಿಯ ಬಳಿಗೆ ಸಾರುತ್ತಿದೆ ಸೀತಾರಾಮು—ಈಗ ನೀನು ನೋಡುತ್ತಿರುವುದು ಮಹಾಸಮಾಧಿಯ ಪೂರ್ವ ಪೀಠಿಕೆ. ಇಂಥ ಸನ್ನಿವೇಶದಲ್ಲಿ ನಾನು ಶೃಂಗೇರಿ ಹೇಗೆ ಬಿಡಲಿ."

"ಚಂದ್ರಶೇಖರಯ್ಯನವರಿಗೆ ಕಾಗದ ಬರೆಯಬಹುದಲ್ಲಾ."

"ಭಗವಂತ ಬಹುಮೋಸಗಾರ ಸೀತಾರಾಮು."

"ಇದೇನು ಗುರುಗಳೇ–ನೀವೂ ನಾಸ್ತಿಕರಾಗುತ್ತಿರುವಿರಾ ?"

"ನೋಡು ಕರ್ಮಪಂಕದಿಂದ ನನ್ನನ್ನು ಮೇಲಕ್ಕೆತ್ತಿ, ಅದೇ ಕರ್ಮದ ಮಹಾಸಾಗರದಲ್ಲಿ ನನ್ನನ್ನು ಮುಳುಗಿಸಿದ್ದಾನೆ. ನನ್ನ ಜವಾಬ್ದಾರಿ ಕಳೆಯಿ ತೆಂದುಕೊಂಡು ತೃಪ್ತನಾಗಿ ಇಲ್ಲಿ ನಿಂತೆ. ದಿನಗಳೆದಂತೆ ಜವಾಬ್ದಾರಿ ಹೆಚ್ಚುತ್ತಿದೆ–ಆದಿಶಕ್ತಿ ತನ್ನ ಮಾಯಾಜಾಲ ಬೀಸಿ ಹಲವೆಡೆಗಳಿಗೆ ನನ್ನನ್ನು ಸೆಳೆಯುತ್ತಿದ್ದಾಳೆ."

"ತನ್ನ ಲೋಕಸಂಗ್ರಹಕಾರ್ಯ ಯಾರಿಂದ ನೆರವೇರುತ್ತದೆಂಬುದನ್ನು ಆದಿಶಕ್ತಿ ಚೆನ್ನಾಗಿ ಬಲ್ಲಳು."

"ಅವಳ ಕೈಗೆ ನೀನು ಸಿಕ್ಕಬೇಡ ಸೀತಾರಾಮು."

"ನಿಮ್ಮನ್ನೇ ಹಣ್ಣುಮಾಡಿದ ಅವಳಿಗೆ ನಾನೊಂದು ಈಡೇ ?"

"ನಾನು ಕರ್ಮಜೀವಿ–ನೀನು ಕರ್ಮನಿರ್ಲಿಪ್ತ."

"ಇದೇನು ಮಾತು ಗುರುಗಳೆ !"

"ಹೌದು ಸೀತಾರಾಮು-ಉದಯರವಿಯ ಕರೆಗೆ ಓ ಗೊಡುವ ಕಮಲ ದಂತೆ ನಿನ್ನ ಹೃದಯ ಪರಿಶುದ್ಧ ವಿಚಾರ, ಆಚಾರಗಳಿಗೆ ಮಾನಸಲಾಗಿದೆ. ಒಂದು ಜೀವಮಾನದಲ್ಲಿ ನಾನು ಸಾಧಿಸಲಾಗದುದನ್ನು ನೀನು ಒಂದು ಘಳಿಗೆಯಲ್ಲಿ ಸಾಧಿಸಬಲ್ಲೆ."

"ಗುರುಕಟಾಕ್ಷದಿಂದ ತೃಣವೂ ಮಹಾಸ್ತ್ರವಾಗುತ್ತದೆ. ಕೀರ್ತಿ ಸೇರ ಬೇಕಾದುದು ಹುಲ್ಲಿಗಲ್ಲ—ಗುರುದೇವನಿಗೆ"

ಎಂದು ಸೀತಾರಾಮು ಪರಮಭಕ್ತಿಯಿಂದ ನಿವೇದಿಸಿದ.

ಕರ್ಮಸಾಗರದಲ್ಲಿ ಬಿದ್ದಿದ್ದರೂ ಸಾಧಕ ಕೆಸರಿನ ಕಮಲದಂತೆ ಕರ್ಮ ನಿರ್ಲಿಪ್ತನಾಗಿರಬೇಕೆಂದು ಭಟ್ಟರು ಹಲವುಸಾರಿ ಸೀತಾರಾಮೂಗೆ ಹೇಳಿದ್ದರು. ಬೆಂಗಳೂರು, ತುಮಕೂರು, ರುದ್ರಾಕ್ಷಿಪುರದಿಂದ ಕಾಗದ ಬಂದರೆ ಭಟ್ಟರ ಮನಸ್ಸು ವ್ಯಗ್ರವಾಗುತ್ತಿದ್ದುದನ್ನು ಸೀತಾರಾಮು ನೋಡಿದ್ದ. 'ನಾನು ಕರ್ಮಜೀವಿ' ಎಂದು ಭಟ್ಟರೇ ಹಲವು ಸಲ ಒಪ್ಪಿಕೊಂಡಿದ್ದರು. ಭಟ್ಟರನ್ನು ಬಾಧಿಸುತ್ತಿದ್ದ ಕರ್ಮವೆಂಥದೆಂಬುದನ್ನರಿಯಲು ಸೀತಾರಾಮು ಕುತೂಹಲಗೊಂಡ.

"ಲೋಕದಲ್ಲಿದ್ದೂ ಲೋಕಾತೀತನಾಗಿರುವುದು ಹೇಗೆ ಗುರುಗಳೇ ?" ಎಂದೊಮ್ಮೆ ಸೀತಾರಾಮು ಭಟ್ಟರನ್ನು ಕೇಳಿದ.

"ಅನುಭವ ವೇದ್ಯವಾದ, ವಿಷಯಗಳನ್ನು ಶಬ್ದಗಳಿಂದ ವರ್ಣಿಸುವುದು ದುಸ್ಸಾಧ್ಯ ಸೀತಾರಾಮು. ಹಲವರ ಮನಸ್ಸಿನಲ್ಲಿ ಮಿಡಿಯುತ್ತಿರುವ ಪ್ರಶ್ನೆಯನ್ನೇ ನೀನೂ ಕೇಳಿರುವೆ. ಉತ್ತರಿಸುವ ಸಾಮರ್ಥ್ಯ ನನಗಿದೆಯೋ ಇಲ್ಲವೋ ಕಾಣೆ—ಪ್ರಯತ್ನಿಸುತ್ತೇನೆ. ರಾಮಾಯಣದಲ್ಲಿ ಕವಿಕೋಕಿಲ ಈ ಸಮಸ್ಯೆಯನ್ನು ಬಿಡಿಸಿದ್ದಾನೆ. ರಾಮಲಕ್ಷ್ಮಣರು ಪರ್ಣಕುಟಿಯಲ್ಲಿಲ್ಲದ ವೇಳೆ ನೋಡಿ, ಮಾಯಾಸ್ವರ್ಣಮೃಗದ ವ್ಯಾಜ ಹೂಡಿ ರಾವಣ ಸೀತಾ ಮಾತೆಯನ್ನು ಕದ್ದೊಯ್ಯುತ್ತಾನೆ. ಸೀತಾಪಹರಣದ ಸುದ್ದಿ ಕೇಳಿದ ಶ್ರೀ ರಾಮಚಂದ್ರ ಸಹಾಯಶೂನ್ಯನಂತೆ, ದುರ್ಬಲನಂತೆ ಅಳಲುಪಕ್ರಮಿಸುತ್ತಾನೆ. ಶ್ರೀ ರಾಮಚಂದ್ರ ಭಗವದವತಾರಿಯಾಗಿದ್ದರೆ ಅಳಲೇನು ಕಾರಣ ?—ದುಃಖ ನಿರೋಧಿಸುವ ಸಂಯಮ ಅವನಲ್ಲಿ ಇರಲಿಲ್ಲವೇ? ಸೀತಾದೇವಿಯನ್ನು ಮರಳಿ ಪಡೆಯಲಾರನೆಂಬ ಅಳಕು ಶ್ರೀ ರಾಮಚಂದ್ರನ ಮನಸ್ಸಿನಲ್ಲಿ ಮೂಡಿರಬಹುದೇ ?–ಇತ್ಯಾದಿ ಪ್ರಶ್ನೆಗಳೇಳುತ್ತವೆ. ಈ ಸನ್ನಿವೇಶದಲ್ಲಿ ಕವಿ ವಾಲ್ಮೀಕಿ ಶ್ರೀ ರಾಮನನ್ನು ಕ್ಷತ್ರಿಯಕುಲ ಮಾರ್ತಾಂಡನನ್ನಾಗಿ ಚಿತ್ರಿಸ ಬೇಕಾಗಿತ್ತೇ ವಿನಾ ದುರ್ಬಲ ಮಾನವನನ್ನಾಗಿ ಚಿತ್ರಿಸಬಾರದಾಗಿತ್ತೆಂದೂ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಧ್ವನಿರಾಜನಾದ ವಾಲ್ಮೀಕಿ ಅಷ್ಟು ಸುಲಭವಾಗಿ ನಮ್ಮ ಕೈಗೆ ಸಿಕ್ಕುವನೇ ?— ಶ್ರೀ ರಾಮಚಂದ್ರನ ಕಣ್ಣೀರಿನಿಂದ ರೂಪುಗೊಂಡ ಮೌಕ್ತಿಕಗಳಿಂದ ವಾಗ್ದೇವಿಯ ಬೈತಲೆಯನ್ನಲಂಕರಿಸಿದ್ದಾನೆ ಕಾವ್ಯರ್ಷಿ. ತನ್ನ ಅಸೀಮ ಮಂತ್ರಬಲದಿಂದ ಶ್ರೀ ರಾಮಚಂದ್ರ ಕ್ಷಣಾರ್ಧ ದಲ್ಲಿ ರಾವಣನನ್ನು ತಾನಿದ್ದಲ್ಲಿಗೆ ಬರಮಾಡಿ, ಅವನನ್ನು ನಾಶಮಾಡಬಹು ದಾಗಿತ್ತು. ಆದರೆ ರಾಮಾಯಣದಲ್ಲಿ ಬರುವ ಶ್ರೀ ರಾಮಚಂದ್ರ ಪ್ರತ್ಯಕ್ಷ ನಾರಾಯಣನಲ್ಲ; ಮಾನವರೂಪೀ ನಾರಾಯಣ. ಮಾನವಾವತಾರ ತಳೆದಿರುವ ಭಗವಂತ ಮಾನವನ ಸಮಸ್ತ ಕಷ್ಟ ಸುಖಗಳನ್ನೂ ಅನುಭವಿಸಲು ಸಿದ್ಧನಾಗಿದ್ದಾನೆ. ಹೆಂಡತಿ ಕಳೆದುಕೊಂಡ ಸಾಮಾನ್ಯ ಅಳುವಂತೆ ಶ್ರೀ ರಾಮಚಂದ್ರನೂ ಅಳುತ್ತಾನೆ. ಶ್ರೀ ರಾಮನ ಶೋಕಕ್ಕೆ ಲೋಭ, ಸ್ತ್ರೀ ಮೋಹವೇ ಕಾರಣನೆಂದು ನಾವು ತರ್ಕಿಸಿದರೆ ಮಹಾಕವಿಗೆ ತುಂಬ ಅಪಚಾರ ಮಾಡಿದಂತಾಗುತ್ತದೆ. ಸೀತಾದೇವಿ **ಜನಕರಾಜನ** ಮಗಳು **ದಶರಥ ಚಕ್ರವರ್ತಿಯ** ಸೊಸೆ. ರಾಜೋಪಭೋಗದಲ್ಲಿಯೇ ಹುಟ್ಟಿ ಬೆಳೆದಿದ್ದ

ಈ ತಾಯಿ, ರಾಜೋಪಭೋಗವನ್ನೇ ಕಂಡರಿಯಳು. ಅಯೋಧ್ಯೆಯ ಅರಮನೆಯ ಭವ್ಯಜೀವನವನ್ನು ನಿರಾಕರಿಸಿ, ಗೆಡ್ಡೆ ಗೆಣಸುಗಳನ್ನು ತಿನ್ನಲು ಶ್ರೀ ರಾಮನೊಡನೆ ಅರಣ್ಯಕ್ಕೆ ಬಂದಿದ್ದಳು. ಇಂಥ ಸಾಧ್ವಿಗೆ ನಾನು ರಕ್ಷಣೆಯನ್ನು ಕೊಡಲಾರದೆ ಹೋದೆನಲ್ಲಾ ಎಂಬುದೂ ಶ್ರೀ ರಾಮನ ಶೋಕಕ್ಕೆ ಕಾರಣವಾಯಿತು. ರಾಜ್ಯದ ದೃಷ್ಟಿಯಲ್ಲಿ ಸೀತಾದೇವಿ ಮಹಾ ರಾಜ್ಞಿ; ಧರ್ಮದ ದೃಷ್ಟಿಯಲ್ಲಿ ಅವಳೇ ಧರ್ಮದೇವತೆ. ಸೀತೆಯ ನಿರ್ಗಮನ ಕೇವಲ ಒಬ್ಬ ಹೆಣ್ಣಿನ ನಿರ್ಗಮನವಾಗಿರಲಿಲ್ಲ; ಸಾಕ್ಷಾತ್ ಧರ್ಮ ದೇವತೆಯ ನಿರ್ಗಮನವಾಗಿತ್ತು. ಪರಾಕ್ರಮಿಯಾದ ರಾವಣ ಶ್ರೀ ರಾಮ ಚಂದ್ರನ ಪರಾಕ್ರಮ ಪ್ರತಿಭಟಿಸಲು ಸಮರ್ಥನಾಗಿದ್ದ—ಆದರೆ ಶ್ರೀ ರಾಮನ ಬೆನ್ನು ಕಾಯುತ್ತಿದ್ದುದು ಧರ್ಮ. ಧರ್ಮದ ಅಜೇಯ್ಯ ಶಕ್ತಿಯ ಮುಂದೆ ಪೌಲಸ್ತ್ಯನ ಪರಾಕ್ರಮ ತೃಣಪ್ರಾಯವಾಗಿತ್ತು. ಧರ್ಮದ ಬಲದಿಂದಲೇ ಶ್ರೀ ರಾಮ ಇಷ್ಟು ಬಲಿಷ್ಠನಾಗಿರುವುದು–ಧರ್ಮವನ್ನೇ ಕದ್ದೊಯ್ದರೆ ಶ್ರೀ ರಾಮ ನಿರ್ವೀರ್ಯನಾಗುತ್ತಾನೆ ಎಂದು ರಾವಣ ವಿಚಾರ ಮಾಡಿಯೇ ಧರ್ಮ ದೇವತೆಯಾದ ಸೀತಾದೇವಿಯನ್ನು ಕರೆದೊಯ್ದುದು. ಪ್ರಾಯಶಃ ವಾಲ್ಮೀಕಿ ಯಿಂದ ಸ್ಫೂರ್ತಿಗೊಂಡ ವ್ಯಾಸ ಇದೇ ತತ್ವವನ್ನು ಮಹಾಭಾರತದಲ್ಲಿ ಪ್ರತಿ ಪಾದಿಸಿದ್ದಾನೆ. ಶ್ರೀ ಕೃಷ್ಣನ ಸಹಾಯವನ್ನಪೇಕ್ಷಿಸಿದ ಪಾರ್ಥ, ಸುಯೋಧನ ರಿಗೆ ಭಗವಂತ ತನ್ನ ಸಮಸ್ತ ಸೇನೆ, ತಾನು ಎರಡನ್ನೂ ಹಂಚಿಕೊಡುತ್ತಾನೆ. ಒಬ್ಬ ವ್ಯಕ್ತಿಗಾಗಿ ಇಡಿಯ ದ್ವಾರಕಾ ಸೈನ್ಯಬಲವನ್ನು ವಿನಿಮಯ ಮಾಡಿ ಕೊಂಡ ಪಾರ್ಥ ಮೂಢನೇ—ಅವ್ಯವಹಾರಿಯೇ? ದೈವ ಬಲದ ಮುಂದೆ, ಧರ್ಮ ಬಲದ ಮುಂದೆ ಯಾವ ಬಲವೂ ಇಲ್ಲ ಎಂದು ಪಾರ್ಥ ಬಲ್ಲ; ತಾಮಸ ಮನಃಪ್ರವೃತ್ತಿಯುಳ್ಳ ಸುಯೋಧನ ವಿಶ್ವಮೂರ್ತಿಯಾದ ಶ್ರೀ ಕೃಷ್ಣನನ್ನು ಒಬ್ಬ ಸಾಮಾನ್ಯ ಮಾನವನೆಂದು ಭಾವಿಸಿ ಕೆಟ್ಟ.

ಲೋಕದಲ್ಲಿರುವವನು ಭಗವಂತನಾಗಿರಲಿ, ಭಕ್ತನಾಗಿರಲಿ ಅವನು ಕರ್ಮದ ಗತಿಗನುಸಾರವಾಗಿ ಹೆಜ್ಜೆ ಹಾಕಲೇ ಬೇಕು. ಆದರೆ ಅವನ ದೃಷ್ಟಿ ಬೇರೆ ಕಡೆಗಿರಬೇಕು. ನಿಜಗುಣಶಿವಯೋಗಿ ಹೇಳುವಂತೆ "ತರುಣಿಯ ಮೊಲೆಯೊಂದನುಣುತಲಣುಗ ನನ್ನ ಕರದೊಳುಳಿದ ಕುಚಾಗ್ರವ ನೋವು ವಂತೆ" ಎಂದರು.

## ೪೨

ಮನೆಯಲ್ಲಿ ಸರ್ವಾಧಿಕಾರ ಸ್ಥಾಪಿಸುವ ಪಾರ್ವತಿಯ ಪ್ರಯತ್ನ ಯಶಸ್ವಿಯಾಗಿರಲಿಲ್ಲ. ಹೆಂಡತಿಯ ಮನಮೆಚ್ಚಿಸುವುದಕ್ಕೆ ಚಂದ್ರಶೇಖರ ತಂದೆ ತಾಯಿಯ ಕೈಬಿಡಲು ಸಿದ್ಧವಾಗಿರಲಿಲ್ಲ. ನರಸಮ್ಮ ಅಳಿಯನ ಪಕ್ಷ ವಹಿಸಿ ಮಾತನಾಡುತ್ತಿದ್ದುದು ಪಾರ್ವತಿಗೆ ಮತ್ತಷ್ಟು ಉದ್ರೇಕವನ್ನುಂಟು ಮಾಡಿತ್ತು.

ನಾರಾಯಣನ ಒಲವು ತಾಯಿಯ ಕಡೆಗಿದ್ದಂತೆ ಗೌರಿಯ ಒಲವು ತಂದೆಯ ಕಡೆಗಿತ್ತು. ತಂದೆ ಮನೆಗೆ ಬರುವವರೆಗೆ ಗೌರಿ ಮಲಗುತ್ತಿರಲಿಲ್ಲ.

ಕ್ಲಬ್ಬಿನಲ್ಲಿ ಇಸ್ಪೇಟ್ ಆಡುತ್ತ ಕುಳಿತಿದ್ದಂತೆ ಚಂದ್ರಶೇಖರನಿಗೆ ಥಟ್ಟನೆ ಗೌರಿಯ ನೆನಪು ಬರುತ್ತಿತ್ತು. ತನ್ನ ಕೈಯಲ್ಲಿದ್ದ ಎಲೆಗಳನ್ನು ಪಕ್ಕದಲ್ಲಿ ಕುಳಿತು, ಆಟ ನೋಡುತ್ತಿದ್ದವರ ಕೈಗೆ ಸರಿಸಿ ತಾನು ಮನೆಗೆ ಬರುತ್ತಿದ್ದ. 'ಅಣ್ಣಾ ಬಂತೂ' ಎಂದು ಕುಣಿದು ಕುಪ್ಪಳಿಸಿ ಗೌರಿ ಚಿಗುರಿಯಂತೆ ಚಂದ್ರ ಶೇಖರನನ್ನಪ್ಪಿಕೊಳ್ಳುತ್ತಿದ್ದಳು.

"ಮಗೂ ಏನು ಮಾಡುತ್ತಿತ್ತು" ಎಂದು ಬಾಲ ಭಾಷೆಯಲ್ಲಿ ಚಂದ್ರ ಶೇಖರ ಮಗಳನ್ನು ಮಾತನಾಡಿಸುತ್ತಿದ್ದ.

"ಬೊಂಬೆ ಪುಸ್ತಕ ನೋಡ್ತಾ ಇದ್ದೆ."

"ಊಟಮಾಡಿದೆಯಾ ?"

"ಇಲ್ಲ."

"ಏಕೆ ?"

"ನಿನ್ನ ಜತೇನೇ ನಾನು ಊಟ ಮಾಡೋದು."

"ಅಮ್ಮ ಏನಂದಳು ?"

"ಬಯ್ದಳು."

"ಏಕೆ ?"

"ಊಟಮಾಡಿ ಮಲಗಲಿಲ್ಲಾ ಎಂದು."

"ಒಳ್ಳೆಯ ಮಕ್ಕಳು ಅಮ್ಮನ ಮಾತು ಕೇಳಬೇಕು."

ತನ್ನ ಮನಸ್ಸಿನಲ್ಲಿ ಅಡಕವಾಗಿದ್ದ ಭಾವನೆಗಳನ್ನು ವಿವರಿಸಲು ಗೌರಿ ಅಸಮರ್ಥಳಾಗಿದ್ದಳು.

"ನೀನು ಬೇಗ ಬಾಣ್ಣ."

'ಬೇಗ ಬಾ'—ಎರಡೇ ಶಬ್ದಗಳಲ್ಲಿ ಗೌರಿ ತನ್ನ ಮನಸ್ಸನ್ನೇ ಬಿಚ್ಚಿಟ್ಟಿದ್ದಳು.

'ಬೇಗ ಬರಬೇಕು-ಮಗುವಿಗಾಗಿಯಾದರೂ ಬೇಗ ಬರಬೇಕು-ಆದರೆ ಪಾರ್ವತಿಯ ತನಿಖೆ, ಟೀಕೆ, ಭರ್ತ್ಸನೆಗಳಿಂದ ಪಾರಾಗುವ ಬಗೆ ಹೇಗೆ' ಎಂಬ ಚಿಂತೆ ಅವನನ್ನು ಒಂದೇ ಸಮನಾಗಿ ಕೊರೆಯುತ್ತಿತ್ತು.

ಚಂದ್ರಶೇಖರ ರೂಮಿನಲ್ಲಿ ಕೋಟು ಬಿಚ್ಚಿಟ್ಟು, ಸ್ನಾನಗೃಹಕ್ಕೆ ಹೋದ ಕೂಡಲೆ, ಕೋಟಿನ ಜೇಬುಗಳನ್ನು ಝಡ್ತಿಮಾಡಿ ನಾರಾಯಣ ತಾಯಿಗೆ ವರದಿ ಒಪ್ಪಿಸುತ್ತಿದ್ದ. ಚಂದ್ರಶೇಖರ ಒಳಕ್ಕೆ ಬಂದಕೂಡಲೆ ಪಾರ್ವತಿ ಮುಖ ಕೆಂಪಗೆಮಾಡಿಕೊಂಡು

"ಇವತ್ತು ಇಸ್ಪೀಟಿನಲ್ಲಿ ಎಷ್ಟು ಕಳೆದಿರಿ ?" ಎಂದು ಕೇಳುತ್ತಿದ್ದಳು.

"ಏಳು ಎಂಟಾಣೆ ಹೋಗಿರಬಹುದು."

"ಪಾಪ ! ಸಂಪಾದನೆ ವಿಪರೀತ ಹೆಚ್ಚು ! ಹಣ ಹುಳಿತುಹೋಗುತ್ತಿದೆ. ಇಸ್ಪೀಟಿನಲ್ಲಾದರೂ ಕಳೆದು ಭಾರ ಕಡಿಮೆಮಾಡಿಕೊಳ್ಳುತ್ತಿರುವಿರೇನೋ ?"

"ನಾನು ಮನುಷ್ಯ-ಬೆಳಿಗ್ಗೆಯಿಂದ ಸಂಜೆಯವರೆಗೆ ದುಡಿಯುತ್ತೇನೆ-ನನಗೂ ಸ್ವಲ್ಪ ವಿಶ್ರಾಂತಿ, ವಿಹಾರಬೇಕು."

"ಮನೆಯಲ್ಲಿ ಕುಳಿತುಕೊಂಡು ನಾವು ಬೆರಳು ಚೀಪುತ್ತಿರುತ್ತೇವಲ್ಲವೇ ?

"ಹಾಗೆ ನಾನು ಹೇಳಿದೆನೇ ?"

"ನಿಮ್ಮ ವಿಹಾರ, ವಿಶ್ರಾಂತಿಯೇ ನಿಮಗೆ ಹೆಚ್ಚು."

"ಮಾತು ಮಾತಿಗೆ ಹೀಗೆ ಆಕ್ಷೇಪಿಸಿ ಏನು ಪ್ರಯೋಜನ—ನಿನಗೆ ಏನಾಗಬೇಕು ಹೇಳು."

"ನೀವು ಹಣ ದುರ್ವ್ಯಯುಮಾಡಕೂಡದು."

"ನಾನು ದುರ್ವ್ಯಯು ಮಾಡುತ್ತಿಲ್ಲ."

"ನಾನು ನಿಮ್ಮ ಮಾತು ನಂಬುವುದಿಲ್ಲ."

"ನಂಬದಿದ್ದರೆ ಬಿಡಬಹುದು."

"ನೀವು ನಿಮ್ಮ ದಾರಿ ಬಿಡುವುದಿಲ್ಲ."

"ನನಗೆ ಸ್ವತಂತ್ರದಾರಿಯೇ ಇಲ್ಲ-ನಾನೊಂದು ದುಡಿಯುವ ಎತ್ತು."

"ಏನೋ ಬಹಳ ಕಷ್ಟಪಡುತ್ತಿರುವವರ ಹಾಗೆ ಮಾತನಾಡುತ್ತಿರುವಿರಲ್ಲಾ!"

"ನನ್ನ ಕಷ್ಟ ಕಟ್ಟಿಕೊಂಡು ನಿನಗಾಗಬೇಕಾದ್ದೇನು?-ನಾನು ನಿನ್ನ ದುಡ್ಡಿನದಾಹ ತೀರಿಸುವ ಯಂತ್ರ."

"ನನ್ನ ಕೆಟ್ಟಮಾತಾಡಿದರೆ ನಿಮಗೆ ಒಳ್ಳೆಯದಾಗುವುದಿಲ್ಲ."

"ಈಗಾಗಿರುವ ಒಳ್ಳೆಯದನ್ನು ಜೀರ್ಣಿಸಿಕೊಂಡರೆ ಸಾಕಾಗಿದೆ."

"ನಿಮಗೆ ಯಾರೋ ನನ್ನ ಮೇಲೆ ಚಾಡಿ ಹೇಳುತ್ತಿದ್ದಾರೆ."

"ಯಾವ ಕುಮುದಮ್ಮನನ್ನೂ ನಾನು ಕಂಡರಿಯೆ."

"ಕುಮುದಕ್ಕನನ್ನು ಆಕ್ಷೇಪಿಸಬೇಡಿ."

"ಆಕೆಯನ್ನೇಕೆ ಆಕ್ಷೇಪಿಸಲಿ—ನನ್ನ ಅದೃಷ್ಟವನ್ನು ಆಕ್ಷೇಪಿಸುತ್ತೇನೆ."

"ನಿಮ್ಮ ಅದೃಷ್ಟಕ್ಕೇನು ಕೊರತೆ ಬಂದಿರುವುದು."

"ಕೊನೆಮೊದಲಿಲ್ಲದ ಈ ವಾದದಿಂದ ಏನು ಪ್ರಯೋಜನ."

"ಮನಸ್ಸಿನಲ್ಲೇನಿದೆ ಹೇಳಿಬಿಡಿ—ಈ ವಿಷಯ ಇವತ್ತು ಇತ್ಯರ್ಥವಾಗಿ ಹೋಗಲಿ."

"ಇತ್ಯರ್ಥ ಅನರ್ಥವನ್ನೆಲ್ಲಾ ನಿನಗೇ ಬಿಟ್ಟಿದ್ದೇನೆ"

ಎಂದವನು ಹೇಳಿದೊಡನೆಯೇ ಪಾರ್ವತಿ ರಾಗತೆಗೆದು ದೊಡ್ಡದಾಗಿ ಅಳುವುದಕ್ಕಾರಂಭಿಸುತ್ತಿದ್ದಳು. ನರಸಮ್ಮ ಹೊರಬಾಗಿಲಿನಲ್ಲಿ ನಿಂತುಕೊಂಡು 'ಸಾಕು ಬಾರೇ-ಪಾತೂ, ಮಕ್ಕಳು ಹಸಿದುಕೊಂಡಿವೆ' ಎಂದು ಕರೆಯುತ್ತಿದ್ದಳು.

ತಂದೆ ತಾಯಿಗೆ ನಡೆಯುತಿದ್ದ ವಾಗ್ಯುದ್ಧ ನೋಡಿ ಗೌರಿ ಸ್ತಬ್ಧಳಾಗುತ್ತಿದ್ದಳು. ಒಮ್ಮೊಮ್ಮೆ ಹಸಿವಿನಿಂದ ಕಂಗೆಟ್ಟು ಮಗು ಕುಳಿತಲ್ಲಿಯೇ ನಿದ್ರಿ

ಸುತ್ತಿತ್ತು. ನಾಟಕ ಬೇಗ ಮುಗಿದು ಹೋಯಿತಲ್ಲಾ ಎಂದು ನಾರಾಯಣ ಪರಿತಪಿಸುತ್ತಿದ್ದ.

ಮನೆಯಲ್ಲಿ ಪಸರಿಸಿದ ಅಶಾಂತಿ ನಾರಾಯಣನ ಸ್ವೈರವರ್ತನೆಗೆ ಇಂಬು ಗೊಟ್ಟಿತು. ತಾನು ಏನು ಮಾಡಿದರೂ—ಏನು ಆಡಿದರೂ ತಾಯಿ ರಕ್ಷಿಸುತ್ತಾಳೆಂಬ ಮೊಂಡು ಧೈರ್ಯ ಅವನ ಮನಸ್ಸಿನಲ್ಲಿ ಹುಟ್ಟಿತು. ನರಸಮ್ಮ ಸಾಸವೆ ಡಬ್ಬದಲ್ಲಿಯೋ, ಉಪ್ಪಿನಕಾಯಿ ಜಾಡಿ ಹಿಂದೆಯೋ ಮುಚ್ಚಿಡುತ್ತಿದ್ದ ಚಿಲ್ಲರೆ ಹಣ ಕಾಣೆಯಾಗುತ್ತಿದ್ದವು. ನರಸಮ್ಮನ ಲಕ್ಷ್ಯ ಅತ್ತ ಬಹಳ ದಿನ ಹೋಗಲಿಲ್ಲ.

ಒಂದು ದಿನ ಮನೆಯಮುಂದೆ ಸೇಬಿನ ಹಣ್ಣಿನ ಬುಟ್ಟಿಹೊತ್ತು ಒಬ್ಬ ಮಾರಾಟಮಾಡುವುದಕ್ಕೆ ಬಂದ. ಕಾಶ್ಮೀರದ ಕುಂಕುಮವರ್ಣದ ಸೇಬಿನ ಹಣ್ಣು ಕಂಡ ಗೌರಿ ತಾಯಿಯ ಬಳಿಗೆ ಓಡಿಬಂದು

"ಅಮ್ಮ—ನನಗೆ—ಸೇಬು" ಎಂದಳು.

"ನಿಮ್ಮಪ್ಪ ಇಲ್ಲಿ ಗೆಪ್ಪೆ ಇಟ್ಟಿದ್ದಾರೇನೇ—ಹೋಗು"

ಎಂದು ಪಾರ್ವತಿ ಗದರಿಸಿಕೊಂಡಳು. ಅಳುತ್ತ ನಿಂತಿದ್ದ ಗೌರಿಯ ಕಂದಿದಮುಖ ಕಂಡು ನರಸಮ್ಮನ ಕರುಳು 'ಚುರ್' ಎಂದಿತು. 'ತಡೀ ಕಂದಾ, ನಾನು ತೆಗೆದುಕೊಡುತ್ತೇನೆ' ಎಂದು ಹೇಳಿ ಅಡಿಗೆ ಮನೆ ಶೋಧಿಸಿ ನೋಡಿದಳು. ಬೆಳಿಗ್ಗೆ ಸಕ್ಕರೆ ತರಿಸಿದ ಮೇಲೆ ಮಿಕ್ಕಿದ್ದ ಹತ್ತಾಣೆ ಚಿಲ್ಲರೆಯನ್ನು ನರಸಮ್ಮ ಕಾಫಿಪುಡಿ ಡಬ್ಬದ ಹಿಂದೆ ಇಟ್ಟಿದ್ದಳು. ಹತ್ತಾಣೆಯೂ ಮಾಯವಾಗಿತ್ತು. ನರಸಮ್ಮ ಮಂದಾಸನದ ಅಮ್ಮಿನಕಂದಲಿನಲ್ಲಿ ಮುಚ್ಚಿಟ್ಟಿದ್ದ ರೂಪಾಯಿ ತೆಗೆದು ಮುರಿಸಿ ಗೌರಿಗೆ ಸೇಬಿನಹಣ್ಣು ಕೊಂಡುಕೊಟ್ಟಳು. 'ಚಿಲ್ಲರೆ ಏನಾಯಿತು' ಎಂಬ ಯೋಚನೆ ಆರಂಭವಾಯಿತು. 'ಬೆಳಿಗ್ಗೆಯಿಂದ ಅಡಿಗೆಮನೆಗೆ ಬಂದಿದ್ದವರು ಪಾರ್ವತಿ—ನಾರಾಯಣ. ಪಾರ್ವತಿ ಕೇಳದೆ ಕಾಸು ಮುಟ್ಟುವವಳಲ್ಲ—ಇದು ನಾರಾಯಣನ ಕೆಲಸವೇ ಇರಬೇಕು' ಎಂದು ನಿರ್ಧರಿಸಿದಳು. ಸಂಜೆ ನಾರಾಯಣ ಶಾಲೆಯಿಂದ ಬಂದಕೂಡಲೆ

"ನಾಣಿ, ಬೆಳಿಗ್ಗೆ ಏನಾದರೂ ಚಿಲ್ಲರೆ ಹಣ ತೆಗೆದುಕೊಂಡೆಯೇನಪ್ಪ" ಎಂದು ನಯವಾಗಿಯೇ ಕೇಳಿದಳು.

"ಯಾವ ಚಿಲ್ಲರೆ ಹಣ ಅಜ್ಜಿ."

"ನೀನೇ ಸಕ್ಕರೆ ತಂದು ಚಿಲ್ಲರೆಯನ್ನು ಕಾಫಿಪುಡಿ ಡಬ್ಬದ ಹಿಂದೆ ಇಡಲಿಲ್ಲವೇ ?"

"ನೀನು ಹೇಳಿದ ಕಡೆ ನಿನ್ನೆದುರಿಗೆ ಚಿಲ್ಲರೆ ಇಟ್ಟೆನಲ್ಲಾ ಅಜ್ಜಿ."

"ಹೋಗಲಿ ಬಿಡು–ಮರೆತು ನಾನೇ ಎಲ್ಲೋ ಇಟ್ಟಿರಬೇಕು " ಎಂದರೂ ಅವಳ ಮನಸ್ಸಿಗೆ ಸಮಾಧಾನವಾಗಲಿಲ್ಲ. ನಾರಾಯಣನನ್ನು ಪರೀಕ್ಷಿಸಲು ನಿರ್ಧರಿಸಿ ನಾಲ್ಕಾರು ಬಾರಿ ಅವನ ಕಣ್ಣಿಗೆ ಬೀಳುವಂತೆ ಹಣ ಮುಚ್ಚಿಟ್ಟಳು. ಸ್ವಲ್ಪವೂ ಅನುಮಾನಿಸದೆ ನಾರಾಯಣ ಅವುಗಳನ್ನೂ ಸ್ವಾಹಾಮಾಡಿದ್ದ.

ಹಣ ಹೋದುದಕ್ಕೆ ನರಸಮ್ಮ ಚಿಂತೆಮಾಡಲಿಲ್ಲ. ನಾರಾಯಣನ ವರ್ತನೆ, ಅವನು ಹೇಳುತ್ತಿದ್ದ ಸುಳ್ಳು ಅವಳ ಮನಸ್ಸಿಗೆ ಅಪಾರವ್ಯಥೆಯನ್ನುಂಟುಮಾಡಿತು. ಒಂದುದಿನ ಈ ವಿಷಯ ಸಾದ್ಯಂತವಾಗಿ ವಿವರಿಸಿ

"ಈ ಕೆಟ್ಟಚಾಳೀನ ಈಗಲೇ ಮುರಿಯದಿದ್ದರೆ ನಾಳೆ ಒಂದು ಹೋಗಿ ಒಂದಾಗುತ್ತದೆ ಪಾರ್ವತಿ."

"ನಾರಾಯಣ ಅಂಥವನೆಂಬುದನ್ನು ನಾನು ನಂಬುವುದಿಲ್ಲಮ್ಮ."

"ನಾನು ಸುಳ್ಳು ಹೇಳುತ್ತಿರುವೆನೇ—ನಾನು ಎತ್ತಿ ಆಡಿಸಿದ ಮಗುವಿನ ಮೇಲೆ ಚಾಡಿ ಹೇಳುತ್ತಿರುವೆನೇ ?"

"ಇಲ್ಲ—ನೀನೇ ಮರೆತಿರಬಹುದು."

"ಹಾಗಂದೇ ನಾನೂ ಭಾವಿಸಿಕೊಂಡು ನಾಲ್ಕಾರು ಬಾರಿ ಪರೀಕ್ಷಿಸಿ ನೋಡಿ ಮನಸ್ಸಿಗೆ ಖಾತ್ರಿಮಾಡಿಕೊಂಡಿದ್ದೇನೆ."

"............................"

"ನಿನ್ನ ಸಂಸಾರ ನಗೆಗೀಡಾಗುತ್ತಿದೆ ಪಾತೂ."

"ಆ ಮಾತು ನೀನು ಹೇಳುವುದು ಬಾಕಿಯಿತ್ತು."

"ನೀನು ಸಸೇಮಿರಾರಳಾಗಿದ್ದಿ. ನಿನಗೆ ಹೇಳುವವರು ಕೇಳುವವರು ಯಾರಿದ್ದಾರೆ ಹೇಳು. ನಿನ್ನ ಗಂಡನ ಅವಸ್ಥೆಯಾರು ನೋಡಲು ಸಾಧ್ಯ—ಅತ್ತೆಮಾವನ ಹೊಟ್ಟೆ ಉರಿಸಿ ಮನೆ ಬಿಟ್ಟು ಆಚೆಗೆ ಕಳಿಸಿದೆ—ಈಗ ತಾಯಿ ಮೇಲೂ ತಿರುಗಿ ಬಿದ್ದಿರುವೆ."

"ನನ್ನ ತಾಯಿಯೇ ನನ್ನ ಶತ್ರುವಾಗುತ್ತಾಳೆಂದು ನಾನು ಭಾವಿಸಿರಲಿಲ್ಲ."

"ಇದಕ್ಕೆ ನಿನ್ನ ವರ್ತನೆಯೇ ಕಾರಣವೆಂಬುದು ನಿನಗೆ ತಿಳಿಯುವುದು ಯಾವಾಗ ?"

"ತಿಳಿಯದಿದ್ದರೆ ಹೋಗಲಿ—ಯಾರೂ ನನಗೆ ತಿಳಿಸಬೇಕಾಗಿಲ್ಲ."

"ನಿನ್ನ ಬಾಯಿಂದ ಈ ಮಾತು ಕೇಳಿದ ಮೇಲೆ ನಾನು ಇಲ್ಲಿರುವುದು ಗೌರವವಲ್ಲ."

"ನಿನಗೆ ತಿಳಿದಂತೆ ಮಾಡಬಹುದಲ್ಲಮ್ಮ"

ಎಂದು ಹೇಳಿದವಳೇ ಛಟ್ಟನೆ ಎದ್ದು ಒಳಕ್ಕೆ ಹೋದಳು.

ನರಸಮ್ಮನ ಮನಸ್ಸಿನಲ್ಲಿ ತುಮುಲಯುದ್ಧವಾರಂಭವಾಯಿತು.

'ನಾಲ್ಕುದಿನ ಇಲ್ಲಿಯೇ ಇರಲೋ ಊರಿಗೆ ಹೋಗಲೋ ?'

'ನಾನು ಊರಿಗೆ ಹೋದರೆ ಪಾತೂ ಸಂಸಾರ ತೀರಾ ದಿಕ್ಕಾಪಾಲಾಗುತ್ತದೆ.

'ಅಳಿಯಮಯ್ಯ ಸಂಭಾವಿತರು—ಅವರ ಕಷ್ಟಕ್ಕೆ ಕೊನೆ ಮೊದಲಿಲ್ಲವಾಗುತ್ತದೆ.

'ಭಗವಂತಾ ! ಪಾತೂಗೆ ಈ ದುರ್ಬುದ್ಧಿ ಏಕೆ ಕೊಟ್ಟೆಯಪ್ಪಾ'

ಎಂದು ನರಸಮ್ಮ ಗೋಳಾಡಿದಳು.

ಒಂದು ವಾರ ಕಳೆಯುವವರೆಗೆ ನರಸಮ್ಮ ಉಸಿರೆತ್ತಲಿಲ್ಲ.

ಒಂದು ಬೆಳಿಗ್ಗೆ ಚಂದ್ರಶೇಖರ ಕಛೇರಿಗೆ ಹೊರಟದ್ದಾಗ ನರಸಮ್ಮ ಎದುರಿಗೆ ಬಂದು

"ನೀವು ಮನೆಗೆ ಬರುವ ವೇಳೆಗೆ ನಾನಿರುವುದಿಲ್ಲ—ಈಗಲೇ ಹೇಳಿ ಹೋಗೋಣಾಂತ ಬಂದೆ" ಎಂದಳು.

"ಎಲ್ಲಿಗಾದರೂ ಪ್ರಯಾಣವೇ ?"

"ಹೂ ! ಊರಕಡೆ ಹೋಗಿ ಬರುತ್ತೇನೆ."

"ಯಾವಾಗ ಬರುವಿರಿ ?"

"ಎಂಟು ಹತ್ತು ದಿವಸವಾಗಬಹುದು."

"ಹೋಗಿ ಬನ್ನಿ" ಎಂದು ಹೇಳಿದ.

ಅಂದೇ ನರಸಮ್ಮ ಊರಿಗೆ ಪ್ರಯಾಣ ಮಾಡುವ ಮುನ್ನ ಮಗಳಿಗೆ "ನಾನು ಹೋಗಿಬಿಟ್ಟು ಬರ್ತೀನಿ ಪಾತೂ" ಎಂದಳು.

"ಈಗೇನಮ್ಮ ಊರಿನಲ್ಲಿ ಕೆಲಸ ?"

"ರಾಗಿ ಕುಯ್ಲಿಗೆ ಬಂದಿದೆ—ನೋಡಿಕೊಂಡುಬರುತ್ತೇನೆ."

"ಬರುವುದು ನಿಜವಷ್ಟೆ ?"

"ಯಾರಿಗಾಗಿ ನಾನು ಬರಬೇಕು ಪಾತೂ...."

"............................"

"ನನ್ನ ನೋಡಬೇಕೆಂದು ಬಯಸಿದಾಗ ಬರಿ—ಬರುತ್ತೇನೆ."

'ಎಲ್ಲಿ ಹೋಗುತ್ತಾಳೆ—ನಾಲ್ಕುದಿನ ಊರಿನಲ್ಲಿದ್ದು ಇಲ್ಲಿಗೆ ಬಂದೇ ಬರುತ್ತಾಳೆ' ಎನ್ನುವ ಹುಲುಧೈರ್ಯ ಪಾರ್ವತಿಯ ಮನಸ್ಸಿನಲ್ಲಿ ಮನೆ ಮಾಡಿಕೊಂಡಿತ್ತು. ತಾನು ಈಗ ಸ್ವಲ್ಪ ಬಿಗಿಯಾಗಿದ್ದರೆ ಅಮ್ಮನಿಗೂ ವಿವೇಕ ಬರುತ್ತದೆ ಎಂದು ಭಾವಿಸಿಕೊಂಡು ತಾಯಿಯನ್ನು ಬೆಂಗಳೂರಿನಲ್ಲೇ ಉಳಿಸಿಕೊಳ್ಳಲು ಪ್ರಯತ್ನಿಸಲಿಲ್ಲ.

ಗೌರಿಯನ್ನಪ್ಪಿ ಮುದ್ದಾಡಿ ನರಸಮ್ಮ ಹೊರಟುಬಿಟ್ಟಳು. ಕಂಬನಿ ಗರೆದು ತನ್ನ ದುಃಖವನ್ನು ಹೊರಚೆಲ್ಲುವುದಕ್ಕೂ ಅವಳಲ್ಲಿ ಚೈತನ್ಯವುಳಿದಿರ ಲಿಲ್ಲ.

ತುಮಕೂರಿನಲ್ಲಿಳಿದು ಆದಿಶೇಷಯ್ಯ, ನಾಗಮ್ಮನನ್ನು ನೋಡಿಕೊಂಡು ಹೋಗಬೇಕೆಂದು ಯೋಚನೆಮಾಡಿದ್ದಳು—'ಈಗ ನಾನು ಅವರಮನೆಗೆ ಹೋಗುವುದು ಅನುಚಿತ. ಬಾಯಿ ತಪ್ಪಿ ಬೆಂಗಳೂರು ಮನೆಯ ಪರಿಸ್ಥಿತಿ ನಾನು ಹೇಳಿಬಿಟ್ಟರೆ ಅನರ್ಥವಾಗುತ್ತದೆ. ಸದ್ಯಕ್ಕೆ ಅವರನ್ನು ನೋಡುವುದೇ ಬೇಡ' ಎಂದು ನೇರವಾಗಿ ರುದ್ರಾಕ್ಷಿಪುರಕ್ಕೆ ಹೊರಟುಬಿಟ್ಟಳು.

## ೪೩

ನರಸಮ್ಮನ ಕಡೆ ಬೀಸಿದ್ದ ಗಾಳಿ ಕ್ರಮಕ್ರಮೇಣ ಚಂದ್ರಶೇಖರನ ಕಡೆ ಬೀಸಲಾರಂಭಿಸಿತು. ಮೊದಮೊದಲು ಅವನ ಜೇಬಿನಿಂದ ಎರಡಾಣೆ, ನಾಲ್ಕಾಣೆ, ಎಂಟಾಣೆ ಬಿಲ್ಲೆಗಳು ಮಾಯವಾಗುತ್ತಿದ್ದರೆ ಈಗ ರೂಪಾಯಿಗಳೇ ಕಾಣೆಯಾಗುತ್ತಿದ್ದವು. ಚಂದ್ರಶೇಖರ ಅತ್ತ ಹೆಚ್ಚು ಲಕ್ಷ್ಯಕೊಡಲಿಲ್ಲ.

ನರಸಮ್ಮ ಊರಿಗೆ ಹೋಗಿ ನಾಲ್ಕು ತಿಂಗಳಾಗಿತ್ತು. ಹೆಂಡತಿಯನ್ನು ಕೇಳಿದಾಗಲೆಲ್ಲಾ

"ಬರುತ್ತಾಳೆ – ಒಂದು ದಿನ ಹೆಚ್ಚುಕಡಿಮೆ" ಎಂದು ಉತ್ತರ ಬರುತ್ತಿತ್ತು.

ಚಿಂತಾಗ್ರಸ್ತನಾದ ಚಂದ್ರಶೇಖರ ಒಂದುದಿನ ನಿಜಸಂಗತಿಯನ್ನರಿಯಲು ನಿರ್ಧರಿಸಿ

"ನಿಮ್ಮ ತಾಯಿ ಕಾಗದ ಬರೆದಿದ್ದರೇ ಪಾತೂ" ಎಂದು ಕೇಳಿದ.

"ಬರೆದಿದ್ದಳು."

"ಯಾವಾಗ ಬರುತ್ತಾರಂತೆ!"

"ಗೊತ್ತಿಲ್ಲ."

"ಎಂಟು ಹತ್ತು ದಿವಸಗಳಲ್ಲಿ ಬರುತ್ತೇನೆಂದು ಹೇಳಿ ಹೋದರು."

"ನನಗೂ ಹಾಗೆಯೇ ಅವಳು ಹೇಳಿದ್ದು."

"ಪಾತೂ ನಿಜಹೇಳು. ನಿಮ್ಮ ತಾಯಿ ಬೇಸರಪಟ್ಟುಕೊಂಡು ಹೋದರೇ?"

"ಏಕೆ! ಅವಳಿಗೇನಾಯಿತು?"

"ಅದನ್ನು ನೀನು ಹೇಳಬೇಕು."

"ಅವಳಿಗೆ ಬೇಸರವಾಗುವಂಥ ಯಾವ ಕೆಲಸವನ್ನೂ ನಾನು ಮಾಡಿಲ್ಲ."

"ನಿಮ್ಮಿಬ್ಬರಿಗೂ ಏನೋ ನಡೆದಿದೆ-ನೀನು ಮುಚ್ಚಿಡುತ್ತಿರುವೆ."

"ಏನೂ ನಡೆದಿಲ್ಲ. ನಾರಾಯಣನ ವಿಷಯ ಕೆಟ್ಟಮಾತು ಆಡಿದಳು-ನನಗೆ ಸಹನೆಯಾಗಲಿಲ್ಲ. ನಾನೂ ಒಂದು ಮಾತು ಆಡಿದೆ."

"ನಾರಾಯಣ ನಿನ್ನ ಮಗನಾಗಿರುವಂತೆ ನನ್ನ ಮಗನೂ ಹೌದು—ಅವನ ಮೇಲೆ ಇಲ್ಲದ ಆರೋಪಮಾಡುವುದಕ್ಕೆ ನನಗಿಷ್ಟವಿಲ್ಲ. ಅವನು ಅಂಕೆ ಶಿಕ್ಷೆಯಿಲ್ಲದೆ ಬೆಳೆಯುತ್ತಿದ್ದಾನೆ. ನನ್ನ ಮಾತು ಅವನಿಗೆ ಸ್ವಲ್ಪವೂ ಲಕ್ಷ್ಯವಿಲ್ಲ."

"ತಪ್ಪು ಯಾರದು ?"

"ಯಾರದು ?"

"ಮನೆಯ ಯಜಮಾನರು ಎನಿಸಿಕೊಂಡವರು ನೀವು ಸರಿಯಾಗಿದ್ದರೆ ತಾನೆ ಮನೆಮಕ್ಕಳು ಸರಿಯಾಗಿರುವುದು."

"ನಾನು ಕಂಡವರ ಜೇಬಿಗೆ ಕೈಬಿಡುತ್ತಿಲ್ಲ."

"ಅಮ್ಮನ ಗಾಳಿ ನಿಮಗೂ ಬೀಸಿದಂತೆ ಕಾಣುತ್ತದೆ."

"ಓಹೋ! ಈಗ ತಿಳಿಯಿತು—ಅವರಿಗೂ ಈ ಅನುಭವವಾಯಿತೋ ? ಯಥಾಪ್ರಕಾರ ನೀನು ಮಗನನ್ನು ವಹಿಸಿಕೊಂಡು ಮಾತನಾಡಿರಬೇಕು."

"ಅರಿಯದ ಮಗುವನ್ನು ಎಲ್ಲರೂ ದೂರಿದರೆ ತಾಯಿಯಾದವಳು ನಾನು ಕೇಳಿಕೊಂಡು ತೆಪ್ಪಗಿರಬೇಕು."

"ಬೇಡ-ಮಗನನ್ನು ಮುದ್ದಿಸಿ ಪ್ರೋತ್ಸಾಹಕೊಡು. ನಾಳೆ ಅವನು ಜೈಲಿಗೆ ಹೋದರೆ ನೀನೇ ಸಂತೋಷಪಡುವೆಯಂತೆ!"

ಎಂದು ಬಿರುಸಾಗಿಯೇ ನುಡಿದ.

ಗಂಡನ ಖಂಡತುಂಡ ಮಾತು ಕೇಳಿ ಪಾರ್ವತಿ ಬೆಚ್ಚಿದಳು.

ಒಂದು ವಾರ ಚಂದ್ರಶೇಖರನ ಕಿಸೆಯಲ್ಲಿದ್ದ ಹಣಕ್ಕೆ ಯಾವ ಆಪೋಹವೂ ಬರಲಿಲ್ಲ.

ಒಂದು ದಿನ ಸ್ನಾನವುಗಿಸಿಕೊಂಡು ಚಂದ್ರಶೇಖರ ರೂಮಿಗೆ ಬರುವ ವೇಳೆಗೆ ನಾರಾಯಣ ಜೇಬು ತಡಕುತ್ತಿದ್ದುದು ಕಂಡು ಬಂದಿತು. ಸ್ವಲ್ಪ ಹೊತ್ತು ಮರೆಯಲ್ಲಿ ನಿಂತಿದ್ದ ಚಂದ್ರಶೇಖರ, ಹೊರಗೆ ನುಸುಳುತ್ತಿದ್ದ ನಾರಾಯಣನ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು

"ಇಲ್ಲಿ ಏನು ಮಾಡುತ್ತಿದ್ದೆಯೋ ಭಡವಾ" ಎಂದು ಕೇಳಿದ.

ನಾರಾಯಣ ಭಯಗ್ರಸ್ತನಾಗಿ

"ಏ—ನೂ—ಇಲ್ಲ" ಎಂದ.

ಚಂದ್ರಶೇಖರ ಅವನ ಜೇಬನ್ನು ಶೋಧಿಸಿದಾಗ ಮೂರು ರೂಪಾಯಿ, ಆರಾಣೆ ಚಿಲ್ಲರೆ ಕೈಗ ಸಿಕ್ಕಿತು.

"ಈ ಹಣ ಎಲ್ಲಿತ್ತು ಹೇಳು" ಎಂದು ಗದರಿದ.

"ಅಮ್ಮ ಕೊಟ್ಟಳು."

"ನನ್ನ ಜೇಬು ಏಕೆ ಹುಡುಕುತ್ತಿದ್ದೆ. ?"

"ಗಂಟೆಯೆಷ್ಟಾಗಿದೆ ಎಂತಾ ನೋಡುವುದಕ್ಕೆ."

"ಗಂಟೆ ನೋಡುತ್ತಿದ್ದೆಯಾ" ಎಂದವನೇ ಚಂದ್ರಶೇಖರ ನಾರಾಯಣನ ಕಪಾಲಕ್ಕೆ, ಬೆನ್ನಿಗೆ ನಾಲ್ಕು ಏಟು ಬಿಗಿದ. ನಾರಾಯಣ ಭಯಂಕರವಾಗಿ ಅರಚಿಕೊಳ್ಳುತ್ತಾ

"ಅಮ್ಮ—ಅಮ್ಮ—ನಾನು ಸತ್ತೆ" ಎಂದು ಕೂಗಿಕೊಂಡ.

ಅಡಿಗೆಯ ಮನೆಯಲ್ಲಿದ್ದ ಪಾರ್ವತಿ ಓಡಿಬಂದು

"ಇದೇನೊಂದ್ರೆ ರಗಳೆ" ಎಂದು ಕೇಳಿದಳು.

"ನಿನ್ನ ಮಗನನ್ನೇ ಕೇಳು."

"ಏನಾಯ್ತಪ್ಪಾ ನಾರಾಯಣ ?"

"ಏನೂ ಇಲ್ಲಮ್ಮ—ಅಣ್ಣನ ಜೇಬಿನಲ್ಲಿದ್ದ ಗಡಿಯಾರದಲ್ಲಿ ಗಂಟೆ ನೋಡಿದ್ದಕ್ಕೆ ಅಣ್ಣ ಕೋಪಮಾಡಿಕೊಂಡು ಹೊಡೆದರು,"

"ಗಂಟೆ ನೋಡಿದೆಯಾ—ನಿನ್ನಹತ್ತಿರ ಮೂರು ರೂಪಾಯಿ ಆರಾಣೆ ಹೇಗೆ ಬಂತು ?"

ನಾರಾಯಣ ಕಕ್ಕಾಬಿಕ್ಕಿಯಾದ.

ಪಾರ್ವತಿಯ ಮುಖ ವಿವರ್ಣವಾಯಿತು.

ಚಂದ್ರಶೇಖರನಿಗೆ ಕೋಪ ತಡೆಯಲಾಗಲಿಲ್ಲ. ಮತ್ತೆ ಮಗನನ್ನು ಥಳಿಸಲು ಪಾರ್ವತಿ ಅಡ್ಡ ಬಂದು

"ಹಣ ನಾನೇ ಕೊಟ್ಟಿದ್ದೆ" ಎಂದಳು.

ಚಂದ್ರಶೇಖರ ನಾರಾಯಣನ ಕೈಬಿಟ್ಟು ನೆಲದಮೇಲೆ ಕುಕ್ಕರಿಸಿಬಿಟ್ಟ. ಮಾತನಾಡುವುದಕ್ಕೂ ಅವನಿಗೆ ತ್ರಾಣವಿಲ್ಲವಾಯಿತು.

ಪಾರ್ವತಿ ಮೆಲ್ಲನೆ ನಾರಾಯಣನನ್ನು ಆಚೆಗಟ್ಟಿ

"ಮಕ್ಕಳನ್ನು ಹೊಡೆಯುವುದು ಬರುತ್ತಿರಲಿಲ್ಲ—ಈಗದೂ ನಿಮಗೆ ಅಭ್ಯಾಸವಾಯಿತು. ಚೆನ್ನಾಗಿದೆ—ನನ್ನ ಪ್ರಾಣ ಹಿಂಡಿ ಹಿಂಡಿ ನನ್ನ ಮೆತ್ತಗೆ ಮಾಡಿದಿರಿ-ಈಗ ಮಕ್ಕಳ ಮೇಲೆ ಆಕ್ರೋಶ ತೋರಿಸುತ್ತಿರುವಿರಿ." ಎಂದು ಒಂದೇ ಸಮನೆ ಬಡಬಡಿಸಿದಳು.

ಚಂದ್ರಶೇಖರ ಚಕಾರ ಶಬ್ದವನ್ನೆತ್ತಲಿಲ್ಲ. ಹೆಂಡತಿ ಮಕ್ಕಳಿಗೂ ತನಗೂ ಇದ್ದ ಋಣಾನುಬಂಧ ಅಂದೇ ಕೊನೆಗಂಡಿತೆಂಬ ಭಾವನೆ ಅವನ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯಿತು.

ನಾಲ್ಕುದಿವಸ ಚಂದ್ರಶೇಖರ ಹೆಂಡತಿ, ಮಕ್ಕಳನ್ನು ಮಾತನಾಡಿಸುವ ಗೋಜಿಗೇ ಹೋಗಲಿಲ್ಲ. ನಾರಾಯಣನನ್ನು ಅವನು ಕಣ್ಣೆತ್ತಿಯೂ ನೋಡಲಿಲ್ಲ.

ಐದನೆಯ ದಿನ ಬೆಳಗ್ಗೆ ಕಛೇರಿಯಲ್ಲಿ ಕುಳಿತಿದ್ದ. ಬಂದಿದ್ದ ಕಕ್ಷಿಗಾರರ ಗುಂಪು ಚೆದುರಿತ್ತು. ಶಾಸ್ತ್ರಿಯ ಕಡೆ ತಿರುಗಿ

"ಶಾಸ್ತ್ರಿಗಳೇ, ಕೆಲಸಮುಗಿದಿದ್ದರೆ ಇಲ್ಲಿ ಸ್ವಲ್ಪ ಬನ್ನಿ."

ಶಾಸ್ತ್ರಿಬಂದು ಚಂದ್ರಶೇಖರನ ಮೇಜಿನ ಮುಂದೆ ಕುಳಿತ.

"ನಾನು ತುಮಕೂರಿಗೆ ಹೋಗಿಬರಬೇಕಾಗಿದೆ."

"ಯಜಮಾನರ ಆರೋಗ್ಯ........"

"ಯಜಮಾನರು ಚೆನ್ನಾಗಿದ್ದಾರೆ. ನನಗೆ ಬೇರೆ ಕೆಲಸವಿದೆ."

"ಹೋಗಿಬನ್ನಿ ಸ್ವಾಮಿ."

"ಲಕ್ಷ್ಮಣರಾಯರ ಮಗ ಆನಂದಮೂರ್ತಿ ಈಚೆಗೆ ಬಂದಿದ್ದರೇ ?"

"ನನಗೇಕೆ ಜ್ಯೂನಿಯರ್ (Junior) ಎಂದು ತಾವೇ ಅಪ್ಪಣೆ ಕೊಡಿಸಿದಿರಿ."

"ಅವರನ್ನು ಇವತ್ತೇ ಬರಮಾಡಿ."

"ಆಗಬಹುದು."

"ನಾನು ಹಿಂದಿರುಗುವುದಕ್ಕೆ ನಾಲ್ಕಾರು ತಿಂಗಳಾಗಬಹುದು. ಆಫೀಸ್ ಆನಂದಮೂರ್ತಿಯೇ ನೋಡಿಕೊಂಡು ಹೋಗಲಿ."

"ತಾವು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ."

"ನಾನು ತುಮಕೂರಿನಲ್ಲಿಯೇ ನೆಲಸಿ ಪ್ರ್ಯಾಕ್ಟೀಸ್ (Practice) ಮಾಡುವ ವಿಚಾರದಲ್ಲಿದ್ದೇನೆ."

"ಎಲ್ಲಿಯಾದರೂ ಉಂಟೇ ಸ್ವಾಮಿ. ಇಷ್ಟು ಚೆನ್ನಾಗಿ ಕುದುರಿರುವ ಆಫೀಸ್ ಬಿಟ್ಟು ......."

"ಬೆಂಗಳೂರಿನ ವಾಸವೇಕೋ ನನ್ನ ಮೈಗಂಟಲಿಲ್ಲ ಶಾಸ್ತ್ರಿಗಳೇ—ತಾಯಿತಂದೆಗೆ ವಯಸ್ಸಾಗಿದೆ. ನಾನು ಅವರ ಸಮೀಪದಲ್ಲಿರಬೇಕಾದು ದಗತ್ಯ."

"ಅವರನ್ನೇ ಇಲ್ಲಿ......."

ಎಂದು ಆರಂಭಿಸಿದ ಶಾಸ್ತ್ರಿ ತನ್ನ ಮಾತನ್ನು ಅರ್ಧಕ್ಕೇ ನಿಲ್ಲಿಸಿ

"ತಮ್ಮ ಗೃಹಕೃತ್ಯಕ್ಕೆ ಬಾಯಿಹಾಕುವುದು ನನ್ನ ಉದ್ದೇಶವಲ್ಲ. ಮನೆಯಲ್ಲಿ ಬೇಸರವಾಯಿತೇ ?"

"ಜೀವನವೇ ಬೇಸರವಾಗಿದೆ ಶಾಸ್ತ್ರಿಗಳೇ—ಹೃದಯ ನೀಗಿಕೊಂಡು, ಕರ್ತವ್ಯಪರಾಙ್ಮುಖನಾಗಿ ಕೇವಲ ಧನ ಬೆಳಸುತ್ತಿರುವವನ ಬಾಳು ಒಂದು ಬಾಳೇ-ಜನ್ಮ ಒಂದು ಜನ್ಮವೇ ?"

"ಆತುರದಿಂದ ದುಡುಕುವುದು ನ್ಯಾಯವಲ್ಲ ಸ್ವಾಮಿ—ಸಾವಕಾಶವಾಗಿ ಯೋಚನೆ ಮಾಡಿ. ನಾಲ್ಕುದಿನ ಕಳೆದರೆ ಮನಸ್ಸು ಸ್ಥಿಮಿತಕ್ಕೆ ಬರುತ್ತದೆ."

"ನಾಲ್ಕುದಿನವಲ್ಲ-ನಾಲ್ಕಾರು ವರ್ಷಗಳಿಂದ ಈ ವಿಷಯವನ್ನೇ ಕುರಿತು ನಾನು ಆಲೋಚಿಸುತ್ತಿದ್ದೇನೆ ಶಾಸ್ತ್ರಿಗಳೇ. ಮೈತ್ರಿಯಿಲ್ಲದ ದಾಂಪತ್ಯ, ಶಾಂತಿಯಿಲ್ಲದ ಮನೆ, ಸಾಂತಃಕರಣವಿಲ್ಲದ ಸ್ನೇಹ ಸ್ಮಶಾನಪುಷ್ಪಗಳಲ್ಲವೇ ?"

"ಪೂರ್ವಪಕ್ಷ—ಉತ್ತರ ಪಕ್ಷಗಳ ವಾದ ತೂಗಿನೋಡುವುದು ನನ್ನ ಕೆಲಸವಲ್ಲ. ನಾನದಕ್ಕೆ ಅಧಿಕಾರಿಯೂ ಇಲ್ಲ. ಈಗಲೂ ತಾವು ಬೆಂಗಳೂರು

ತೊರೆಯುವ ಅಭಿಪ್ರಾಯ ಬಿಡುವುದೊಳ್ಳೆಯದು. ಹೆಚ್ಚಿಗೆ ಹೇಳಲು ನಾನು ಸಮರ್ಥನಲ್ಲ."

"ನಾನು ಬಹಳ ವಿಚಾರಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಅದನ್ನು ಬದಲಿಸಲಾರೆ ಶಾಸ್ತ್ರಿಗಳೇ."

"ಸ್ವಾಮಿಯ ಚಿತ್ತ"

ಎಂದು ಶಾಸ್ತ್ರಿ ಖಿನ್ನನಾಗಿ ನುಡಿದ.

ಅಂದೇ ಚಂದ್ರಶೇಖರ ತನ್ನ ಸೇವಿಂಗ್ಸ್ ಬ್ಯಾಂಕ್ ಅಕೌಂಟಿನಲ್ಲಿದ್ದ (Saving bank account) ಹನ್ನೊಂದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ನಿಯತ ಕಾಲಕ್ಕಿಂತಲೂ ಮುಂಚಿತವಾಗಿಯೇ ಮನೆಗೆ ಹೋದ.

ಪಾರ್ವತಿ ಆಶ್ಚರ್ಯದಿಂದ

"ಇಷ್ಟು ಬೇಗ ಕೋರ್ಟು ಮುಗಿಯಿತೇನು" ಎಂದು ಕೇಳಿದಳು.

"ಇವತ್ತು ಕೋರ್ಟಿಗೆ ಹೋಗಲಿಲ್ಲ."

"ಇದ್ದಕ್ಕಿದ್ದಂತೆ ಮನೆಯ ಮೇಲೆ ಬಹಳ ವಿಶ್ವಾಸ ಬಂದ ಹಾಗಿದೆಯಲ್ಲಾ!"

"ಹೌದು ಬಂದಿದೆ"

ಎಂದು ಪಾರ್ವತಿಯ ಕೈಗೆ ನೋಟಿನ ಕಂತೆಯನ್ನಿತ್ತು

"ಎಷ್ಟಿದೆ ಎಣಿಸು ಪಾರ್ವತಿ."

ಪಾರ್ವತಿ ಎಣಿಸಿ

"ಹತ್ತು ಸಾವಿರ ರೂಪಾಯಿ."

"ಮನೆ ಕೊಳ್ಳುವುದಕ್ಕೆ ನಿಮ್ಮ ತಾಯಿ ಕೊಟ್ಟಿದ್ದ ಎಂಟು ಸಾವಿರ, ಅದರ ಬಡ್ಡಿ ಎರಡು ಸಾವಿರ."

"ಇಷ್ಟು ಹಣ ಎಲ್ಲಿಂದ ಬಂತು?"

"ಕದಿಯಲಿಲ್ಲ—ಕಷ್ಟಾರ್ಜಿತ ಸ್ವತ್ತು."

"ಇವತ್ತೇಕೆ ವಿಚಿತ್ರವಾಗಿ ಮಾತನಾಡುತ್ತಿರುವಿರಿ?"

"ಪಾರ್ವತಿ ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ."

"ಏನದು?"

"ಈ ಮನೆ ಮಾರಿಬಿಡಬೇಕು."

"ಮನೆ ಮಾರಿಬಿಡಬೇಕೆ ! !—ಏಕೆ ?"

"ನನ್ನ ಆಫೀಸನ್ನೂ ಬೇರೆಯವರಿಗೆ ವಹಿಸಿದ್ದೇನೆ. ಇನ್ನು ಮೇಲೆ ನಾವು ತುಮಕೂರಿಗೇ ಹೋಗಿರಬೇಕು. ನಾನು ಅಲ್ಲಿಯೇ ಪ್ರಾಕ್ಟೀಸ್ ಮಾಡುತ್ತೇನೆ."

"ಅಲ್ಲಿ ನಾನು ನಿಮ್ಮ ತಾಯಿತಂದೆಯ ಚಾಕರಿಮಾಡಿಕೊಂಡು ಬಿದ್ದಿರಬೇಕೋ ?"

"ಹೌದು."

"ನಾನು ತುಮಕೂರಿಗೆ ಬರುವುದಿಲ್ಲವೆಂದರೆ !"

"ಬಾ ಎಂದು ನಿನ್ನನ್ನು ಬಲವಂತಪಡಿಸುತ್ತಿಲ್ಲ."

"ಬೆಂಗಳೂರು ಏಕೆ ಬಿಡಬೇಕು."

"ನನ್ನ ಮಕ್ಕಳು ಇನ್ನುಮೇಲೆ ನನ್ನ ತಾಯಿಯ ಆಶ್ರಯದಲ್ಲಿ ಬೆಳೆಯ ಬೇಕು-ಹೆಚ್ಚುದಿನ ನಾರಾಯಣ ನಿನ್ನ ಆಶ್ರಯದಲ್ಲಿದ್ದರೆ ಸೆರೆಮನೆಯೇ ಅವನಿಗೆ ಅರಮನೆಯಾಗುತ್ತದೆ."

"ನನ್ನ ಮಗನಿಗೆ ಕಳ್ಳತನ ಕಲಿಸಿಕೊಡುತ್ತಿರುವೆನೇ ?"

"ಇಲ್ಲ—ಪ್ರೋತ್ಸಾಹಕೊಡುತ್ತಿರುವೆ."

"ನನ್ನ ಮಗ ಕಳ್ಳನಾದರೂ ಚಿಂತೆಯಿಲ್ಲ-ನಿಮ್ಮ ತಂದೆತಾಯಿ ಆಶ್ರಯಕ್ಕೆ ಅವನನ್ನು ತಳ್ಳಲಾರೆ."

"ನಿನ್ನಿಷ್ಟ !"

"ನೀವು."

"ನಾನು ಇಲ್ಲಿರಲು ಸಾಧ್ಯವಿಲ್ಲವೆಂದು ಮೊದಲೇ ತಿಳಿಸಿರುವೆನಲ್ಲಾ !"

"ನನ್ನ ಮೇಲೆ ಗೂಬೆಕೂರಿಸಿ ಹೋಗಲು ನಿರ್ಧರಿಸಿರುವಿರಿ."

"ನಿನ್ನ ಮೇಲೆ ಗೂಬೆ ಕೂರಿಸುವುದಕ್ಕೆ ನಿಮ್ಮ ತಾಯಿ ಹೊರಟು ಹೋದರೇ ?"

"ನನ್ನ ಗತಿ—ಮಕ್ಕಳಗತಿ."

"ಕೈತುಂಬ ಹಣಕೊಟ್ಟಿದ್ದೇನೆ. ನಿನ್ನ ಕೈಹಿಡಿದ ಅಪರಾಧಕ್ಕೆ ತಿಂಗಳು

ತಿಂಗಳೂ ಹಣ ಕಳಿಸಿಕೊಡುತ್ತೇನೆ-ಈಗಲೂ ನನ್ನ ಮಾತು ಕೇಳು ಪಾರ್ವತಿ ನನ್ನ ಜತೆಗೆ ತುಮಕೂರಿಗೆ ಬಂದುಬಿಡು."

"ನಾನು ಬರುವದಿಲ್ಲ.- ನಿಮಗೆ ಇಷ್ಟಬಂದಂತೆ ಮಾಡಬಹುದು,"

"ಇದೇ ನಿನ್ನ ಕೊನೆಯ ನಿರ್ಧಾರವೋ ?"

"ಹೌದು—ಇದೇ ನನ್ನ ಕೊನೆಯ ನಿರ್ಧಾರ."

ಚಂದ್ರಶೇಖರ ತನ್ನ ಬಟ್ಟೆಬರೆಗಳನ್ನು ಹೊಲ್ಡಾಲಿಗೆ (Hold-all) ತುಂಬಿಕೊಂಡು ಹೊರಡಲನುವಾದ. ಗೌರಿ ಬಂದು ಅಣ್ಣನ ಕುತ್ತಿಗೆಯನ್ನಪ್ಪಿದಳು. ಚಂದ್ರಶೇಖರನ ಕಣ್ಣಿನಿಂದ ಧುಮುಕುತ್ತಿದ್ದ ತಡಸಲು ಕಂಡು ಗೌರಿ

"ಏಕಣ್ಣಾ ಅಳುತ್ತಿರುವೆ-ಅಮ್ಮ ಬಯ್ದಳೇ."

"ಇಲ್ಲ ಗೌರಾ—ಅಮ್ಮ ತುಂಬ ಒಳ್ಳೆಯಳು—ಅವಳು ಯಾರನ್ನೂ ಬಯ್ಯುವುದಿಲ್ಲ."

"ನಾಣಿಯನ್ನು ಮಾತ್ರ ಬಯ್ಯುವುದಿಲ್ಲ. ನಿನ್ನನನ್ನ ಬಯ್ಯದೆ ಅಮ್ಮ ಸುಮ್ಮನೆ ಇರುವುದೇ ಇಲ್ಲ."

"ನೀನು ಹೀಗೆ ಮಾತಾಡಿದರೆ ನನಗೆ ಕೋಪ ಬರುತ್ತದೆ."

"ನೀನೂ ಬಯ್ಯುತ್ತೀಯಾ ಅಣ್ಣಾ."

"ಇಲ್ಲ—ಇಲ್ಲ—ಬಯ್ಯುವುದಿಲ್ಲ—ನನ್ನ ಕಂದಾ—ನನ್ನ ಚಿನ್ನ—ಬಯ್ಯುವುದಿಲ್ಲಮ್ಮ"

ಎಂದು ಮಗಳನ್ನು ಕೆಳಗಿಳಿಸಿ, ಹೋಲ್ಡಾಲನ್ನು ಹೊತ್ತುಕೊಂಡು ಹೊರಟುಬಿಟ್ಟ.

ಒಳಗೆ ಬಂದ ಪಾರ್ವತಿ, ಕೈಯಲ್ಲಿದ್ದ ನೋಟಿನ ಕಂತೆಯನ್ನು ಪೆಟ್ಟಿಗೆಯಲ್ಲಿ ಭದ್ರವಾಗಿ ಮುಚ್ಚಿಟ್ಟಳು.

## ೪೪

ಭಟ್ಟರು ಆಹ್ನೀಕಮಾಡುತ್ತಾ ಕುಳಿತ್ತಿದ್ದರು. ಸೀತಾರಾಮು ಮಾಡಿದ ಅಡಿಗೆ ಕೆಳಗಿಟ್ಟು, ಒಗ್ಗರಣೆ ಕೊಡುವುದರಲ್ಲಿದ್ದ.

ಒಗ್ಗರಣೆ ಕೊಡುವುದು ಮುಗಿಯುವುದರಲ್ಲಿ ಭಟ್ಟರ ಆಹ್ನೀಕವೂ ಮುಗಿದಿತ್ತು. ಸೀತಾರಾಮು ಹೊರಗೆ ಬಂದು

"ಎಲೆ ಹಾಕಲೇ ಗುರುಗಳೇ" ಎಂದ.

"ಸ್ವಲ್ಪ ತಡೀ ಸೀತಾರಾಮು."

"ಏಕೆ ಗುರುಗಳೇ ಹೀಗಿದ್ದೀರಿ."

"ಆಹ್ನೀಕ ಅಪೂರ್ಣವಾಯಿತು ಸೀತಾರಾಮು."

"ಮನಸ್ಸಿಗೇನಾದರೂ ಚಿಂತೆಯಾಗಿದೆಯೋ ?"

"ನಿನ್ನೆಯಿಂದ ಒಂದೇ ಸಮನೆ ಚಂದ್ರಶೇಖರನ ನೆನಪು ಬರುತ್ತಿದೆ— ಹುಡುಗ ಕಾಹಿಲೆಯೇನಾದರೂ ಮಲಗಿದ್ದಾನೋ! ಅವನೆಲ್ಲೋ ನನ್ನ ಚಿಂತೆ ಮಾಡುತ್ತಿರಬೇಕು."

"ಊಟಮಾಡಿ ಸ್ವಲ್ಪ ವಿಶ್ರಮಿಸಿಕೊಳ್ಳಿ ಗುರುಗಳೇ."

"ಸ್ವಲ್ಪ ತಡಿ–ಅತಿಥಿಗಳು ಯಾರಾದರೂ ಬರಬಹುದು" ಎಂದರು.

ಸೀತಾರಾಮು ಬ್ರಹ್ಮಸೂತ್ರ ಹಿಡಿದು ಕಂಠಪಾಠ ಮಾಡುತ್ತ ಕುಳಿತ. ಭಟ್ಟರು ಅವನ ನ್ಯಾಸದಲ್ಲಾಗುತ್ತಿದ್ದ ಹೆಚ್ಚು ಕಡಿಮೆ ತಿದ್ದುತ್ತಿದ್ದರು.

ಸುಮಾರು ಒಂದು ಗಂಟೆಯಿರಬಹುದು. ಮಲೆನಾಡಿನ ಬಿಸಿಲು ನೆತ್ತಿ ಸೀಳುವಂತೆ ಸುಡುತ್ತಿದೆ. ಚಂದ್ರಶೇಖರ ತನ್ನ ಹೋಲ್ಡಾಲ್ ಹೊತ್ತು ಕೊಂಡು 'ಪರ್ಣಕುಟಿ'ಯ ಬಳಿಗೆ ಬಂದು 'ಭಟ್ಟರೇ ಎಂದು ಕೂಗಿದ.

ಭಟ್ಟರು, ಸೀತಾರಾಮು ಇಬ್ಬರೂ ಎದ್ದು ಬಂದರು. ಚಂದ್ರಶೇಖರ ಹೊಲ್ಡಾಲ್ ಕೆಳಗಿಟ್ಟು ಭಟ್ಟರಿಗೆ ದೀರ್ಘದಂಡ ಪ್ರಣಾಮಮಾಡಿದ.

"ಒಳಗೆ ಬಾಪ್ಪ-ಸೀತಾರಾಮು, ಹಾಸಿಗೆಯ ಸುರುಳಿ ಒಳಗಿಡು" ಎಂದರು ಭಟ್ಟರು.

ಅವರನ್ನು ನೋಡಿದೊಡನೆಯೇ ಚಂದ್ರಶೇಖರನ ದುಃಖದ ಕಟ್ಟೆ ಯೊಡೆದು ಬಂತು. ಬಿಕ್ಕಳಿಸಿ ಅಳಲಾರಂಭಿಸಿದ್ದ ಚಂದ್ರಶೇಖರನನ್ನು ಭಟ್ಟರು ಮೃದುವಾಗಿ ನೇವರಿಸುತ್ತಾ

"ಏಳು ಚಂದ್ರಶೇಖರ—ಮೊದಲು ಸ್ನಾನಮಾಡು—ಊಟಮಾಡಿ ಸಾವಕಾಶವಾಗಿ ಮಾತನಾಡೋಣ."

"ನನಗೆ ನೀವೇ ಮಾರ್ಗತೋರಿಸಬೇಕು-ನಾನು ನಿರ್ಭಾಗ್ಯ!"

"ಎಲ್ಲರಿಗೂ ಮಾರ್ಗತೋರಿಸುವ ತಾಯಿ ನಿನಗೂ ಮಾರ್ಗ ತೋರಿಸು ತ್ತಾಳೆ ಏಳು"

ಎಂದು ಭಟ್ಟರು ಉಪಚರಿಸಿದರು.

ಸ್ನಾನಕ್ಕೆ ಸಿದ್ಧವಾದ ಚಂದ್ರಶೇಖರನಿಗೆ ಸೀತಾರಾಮುವೇ ನೀರು ಸೇದಿ ಹುಯಿದ. ಶುಭ್ರಶೀತಲ ಜಲಸ್ನಾನವಾದಮೇಲೆ ಚಂದ್ರಶೇಖರನ ಮಾರ್ಗಾಯಾಸ ಸ್ವಲ್ಪ ಪರಿಹಾರವಾಯಿತು.

ಭಟ್ಟರಿಗೂ, ಚಂದ್ರಶೇಖರನಿಗೂ ಎಲೆ ಹಾಕಿ ಸೀತಾರಾಮು ಬಡಿಸಿದ. ಭಟ್ಟರು ಚಂದ್ರಶೇಖರನನ್ನು ಪಚರಿಸಿ ಅವನು ನಾಲ್ಕು ತುತ್ತು ತಿನ್ನುವಂತೆ ಮಾಡಿದರು.

ಊಟ ಮುಗಿದ ಮೇಲೆ ಸೀತಾರಾಮುಗೆ ತಾವೇ ಎಲೆ ಹಾಕಿ ಬಡಿಸುವುದು ಭಟ್ಟರ ಪದ್ಧತಿ.

ಸೀತಾರಾಮು ಆಪೋಶನ ತೆಗೆದುಕೊಂಡ ಮೇಲೆ ಭಟ್ಟರು ಬಂದು ಹೊರಗೆ ಕುಳಿತು

"ಬೆಂಗಳೂರಿನಿಂದ ಬಂದೆಯಾ" ಎಂದು ಕೇಳಿದರು.

"ಹೂ."

"ತುಮಕೂರಿಗೆ ಹೋಗಿ ಬರಲಿಲ್ಲವೇ?"

"ಇಲ್ಲ-ಮೊದಲು ನಿಮ್ಮನ್ನು ನೋಡಬೇಕಾಗಿತ್ತು" ಎಂದು ಸಾದ್ಯಂತ ವಾಗಿ ತನ್ನ ಮನೆಯ ಕಥೆಯನ್ನು ನಿರೂಪಿಸಿ

"ನಾಲ್ಕು ದಿವಸ ನನಗೆ ಅನ್ನ ಹಾಕುವಿರಾ ಭಟ್ಟರೇ!" ಎಂದು ಕೇಳಿದ.

"ಎಂಥ ಪ್ರಶ್ನೆಯಿದು ಚಂದ್ರಶೇಖರ. ನಿನಗೂ ನನಗೂ ಸಮಸ್ತ ಪ್ರಾಣಿಗಳಿಗೂ ಅನ್ನ ಹಾಕುವ ಹೊಣೆ ಹೊತ್ತಿರುವ ತಾಯಿಯ ಮನೆ ಯಲ್ಲಿಯೋ ಈ ಪ್ರಶ್ನೆಯೋ?!"

"ನಾನು ಏನು ಮಾಡಲಿ?"

"ನಾಲ್ಕು ದಿನ ನಿಶ್ಚಿಂತೆಯಿಂದಿರು. ಅಮ್ನೋರ ದರ್ಶನ ತೆಗೆದುಕೋ-ತರುವಾಯ ಅವಳೇ ವಿವೇಕ ಹೇಳುತ್ತಾಳೆ-ಗುರುಗಳ ದರ್ಶನ ಅಲಭ್ಯ-ಸಂಜೆಗೆ ನರಸಿಂಹವನಕ್ಕೆ ಹೋಗಿ ಗುರುಮನೆಗೆ ಅಭಿವಂದಿಸಿ ಬಾ."

ನಾಲ್ಕು ದಿನ ಚಂದ್ರಶೇಖರ ಯಾವ ಮಾತಾಡುವುದಕ್ಕೂ ಭಟ್ಟರು ಅವಕಾಶ ಕೊಡಲಿಲ್ಲ. ಪ್ರಸಂಗತ್ವೇನ ಅವನಿಗೆ ಭಗವದ್ಗೀತೆ, ರಾಮಾಯಣದ ಕೆಲವು ಭಾಗಗಳನ್ನು ವಿವರಿಸಿ ಅವನ ಮನಸ್ಸಿಗೆ ಶಾಂತಿಯೊದಗಿಸುವ ಪ್ರಯತ್ನ ಮಾಡಿದರು.

ಐದನೆಯ ದಿನ ಚಂದ್ರಶೇಖರನೇ

"ನಿಮಗೆ ಹೊರೆಯಾಗಿ ಹೀಗೆ ಎಷ್ಟು ದಿವಸ ಕುಳಿತಿರಲಿ—ಅಪ್ಪಣೆ ಯಾದರೆ ನಾನು ಪ್ರಯಾಣ ಮಾಡುತ್ತೇನೆ."

"ಎಲ್ಲಿಗೆ?"

"ತುಮಕೂರಿಗೆ."

"ಬೆಂಗಳೂರಿಗೆ ಹೋಗುವುದಿಲ್ಲವೇ?"

"ಇಲ್ಲ—ಇನ್ನು ಆ ಕೊಂಪೆಗೆ ಕಾಲಿಡುವುದಿಲ್ಲ."

"ಪಾರ್ವತಿ ಮಾಡಿರುವ ಅಪರಾಧಕ್ಕೆ ಶಿಕ್ಷೆ ಸ್ವಲ್ಪ ಹೆಚ್ಚಾಯಿತು."

"ತಪ್ಪು ನನ್ನದೇ ಭಟ್ಟರೇ."

"ಯಾರದೂ ತಪ್ಪಿಲ್ಲ ಚಂದ್ರಶೇಖರ. ಇದು ಕರ್ಮದುರ್ವಿಪಾಕ-ನಿನ್ನ ಬೆಂಗಳೂರು ಕಛೇರಿ ಬೇರೆಯವರಿಗೆ ಒಪ್ಪಿಸಿಯಾಯಿತೇ?"

"ಸುಬ್ಬಾಶಾಸ್ತ್ರಿ ವಶದಲ್ಲಿದೆ."

"ಈಗ ನೀನು ತುಮಕೂರಿಗೆ ಹೋಗಲು ನನ್ನಡ್ಡಿಯಿಲ್ಲ ಆದರೆ...."

"ಕಠಾರು ವಿಧಿಸುತ್ತಿರುವಂತಿದೆ."

"ಹೌದು ವಿಧಿಸುತ್ತಿದ್ದೇನೆ—ನೀನು ನನ್ನ ಮಾತಿಗೆ ಪ್ರತಿ ಹೇಳುವುದಿಲ್ಲವಷ್ಟೆ!"

"ಇಲ್ಲ."

"ಬೆಂಗಳೂರಿಗೆ ಹೋಗು ಎಂದು ನಾನು ಹೇಳಿದ ದಿನವೇ ನೀನು ಹೋಗಬೇಕು."

"ಪುನಃ ನನ್ನನ್ನು ಆ ನರಕಕ್ಕೆ ತಳ್ಳುವಿರಾ?"

"ತಳ್ಳುತ್ತೇನೆ—ನರಕವನ್ನು ನಾಕವನ್ನಾಗಿ ಮಾಡಿ."

"ಎಂದಿಗಾದರೂ ಪಾರ್ವತಿಗೆ ವಿವೇಕ ಬರುತ್ತದೆಯೋ?"

"ಅದು ನಾನು ಎತ್ತಿ ಆಡಿಸಿದ ಮಗೂ ಚಂದ್ರಶೇಖರ."

"ಈಗ ನೀವು ವಿಧಿಸುತ್ತಿರುವ ಶಿಕ್ಷೆ ಯಾರಿಗೆ ಗೊತ್ತೇ?"

"ಯಾರಿಗೆ?"

"ಪಾರ್ವತಿಗಲ್ಲ—ನನಗೆ."

"ಕ್ಷಮಿಸಿ ಭಟ್ಟರೆ—ಕಾಯಾ ವಾಚಾ ಮನಸಾ ನಾನು ನಿಮ್ಮ ವಿಷಯದಲ್ಲಿ ತಪ್ಪು ನಡೆದಿಲ್ಲ."

"ಹಾಗಲ್ಲ ಚಂದ್ರಶೇಖರಾ, ನಿನ್ನ ಮನೆ ಬೆಳೆದು ನಂದಗೋಕುಲವಾದುದನ್ನು ನಾನೇ ಕಣ್ಣಾರೆ ಕಂಡು ಸಂತೋಷಿಸಿದೆ. ಆ ತೃಪ್ತಿಯಿಂದಲೇ ನಾನು ಶೃಂಗೇರಿಗೆ ಬಂದುದು. ನನ್ನ ಕೆಲಸ ಅಪೂರ್ಣವಾಯಿತು. ಅದನ್ನು ಪೂರ್ಣಗೊಳಿಸಲು ನಾನು ಮತ್ತೆ ಬೆಂಗಳೂರಿಗೆ ಹೋಗುತ್ತೇನೆ. ನರಸಮ್ಮ ರುದ್ರಾಕ್ಷಿಪುರದಲ್ಲಿದ್ದಾಳೆಂದು ಹೇಳಿದೆಯಾ?"

"ಹೌದು."

"ನೀನು ಊರಿಗೆ ಹೋದಕೂಡಲೆ ಅವಳನ್ನಿಲ್ಲಿ ಕಳಿಸಿಕೊಡು."

"ಆಗಲಿ."

"ಚಂದ್ರಶೇಖರ, ಜೀವನ ಪೂರ್ಣವಾಗಿ ನಮ್ಮ ಕೈಗೆ ನಿಲುಕುವುದಿಲ್ಲಪ್ಪ. ಅಪೂರ್ಣವಾಗಿ ಅದಿರುತ್ತದೆ. ಅದನ್ನು ಪೂರ್ಣ ಮಾಡುವುದು ನಮ್ಮ ಕೈಯಲ್ಲಿದೆ. ಭಗವಂತ ಪೂರ್ಣ ಜೀವನ ನಮ್ಮ ಕೈಯಲ್ಲಿಟ್ಟರೆ ನಾವು ಸಾಧಿಸುವುದೇನು? ಅಪೂರ್ಣವನ್ನು ಪೂರ್ಣಮಾಡುವುದೇ ಮಾನವನ

ಮಹತ್-ಸಾಧನೆ. ಜೀವನದ ಪೂರ್ಣತೆಯನ್ನು ನಾವು ಕಂಡುಕೊಂಡಾಗಲೇ ಈಶ್ವರನ ಪೂರ್ಣತೆಯ ಪರಿಜ್ಞಾನವಾಗುವುದು.

"ಓಂ ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ಪೂರ್ಣಮುದಚ್ಯತೆ ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಾಮೇವಾವ ಶಿಷ್ಯತೇ ॥

ಪರಾತ್ಪರ ವಸ್ತು ಸರ್ವಸಂಪೂರ್ಣವು. ಇದು ಎಂದರೆ ವ್ಯಕ್ತ ವಿಶ್ವವು ಸರ್ವ ಸಂಪೂರ್ಣವು. ಪೂರ್ಣದಿಂದ ಪೂರ್ಣದ ಉತ್ಪತ್ತಿಯಾಗುತ್ತದೆ, ಪೂರ್ಣದೊಳಗಿಂದ ಪೂರ್ಣವನ್ನು ಕಳೆದರೂ ಪೂರ್ಣವು ಅಚ್ಚಳಿಯದೆ ಉಳಿಯುತ್ತದೆ.

"ನಾನು ತಂದೆತಾಯಿಯನ್ನು ನಿರ್ಲಕ್ಷಿಸಿ ಈ ಹೆಂಡತಿಯೊಡನೆ ಬಾಳ್ವೆ ಮಾಡಲಾರೆ ಭಟ್ಟರೇ."

"ಹಾಗೆ ಮಾಡೆಂದು ನಾನು ಹೇಳಿದೆನೇ?–ಪಾರ್ವತಿಯೇ ತುಮಕೂರಿಗೆ ಬಂದು ನಿನ್ನ ತಂದೆ ತಾಯಿಯನ್ನು ಭಕ್ತಿಯಿಂದ-ಪ್ರೀತಿಯಿಂದ ಬೆಂಗಳೂರಿಗೆ ಕರೆದುಕೊಂಡು ಬರುತ್ತಾಳೆ. ಪ್ರತಿ ವ್ಯಕ್ತಿಗೂ ಒಂದು ಕಾಲದಲ್ಲಿ ಅಂಧಕಾರ ಕವಿದು, ಜ್ಞಾನ ಸೂರ್ಯನಿಗೆ ಅವಕುಂಠನ ಬೀಳುತ್ತದೆ. ವರ್ಷಾಕಾಲ ಮುಗಿದ ಮೇಲೆ ವಸಂತ ಪಲ್ಲವಿಸಲೇ ಬೇಕಲ್ಲವೇ ?"

"ಇಲ್ಲಿಯ ಮಧುರಶಾಂತಿ ನೋಡಿ ಊರಿಗೆ ಹೋಗಲು ನನಗೆ ಮನಸ್ಸೇ ಆಗುತ್ತಿಲ್ಲ."

"ಈ ಶಾಂತಿ ನಿನಗಲ್ಲ ಚಂದ್ರಶೇಖರ-ಇದು ನನಗೆ, ನನ್ನಂಥವರಿಗಾಗಿ ನಿರ್ಮಿತವಾಗಿರುವ ಶಾಂತಿ. ನೀನು ಶಾಂತಿಯನ್ನರಸಬೇಕಾಗಿರುವುದು ನಿನ್ನ ಕರ್ಮಭೂಮಿಯಲ್ಲಿ. ನಾಳೆ ನಮ್ಮ ಸೀತಾರಾಮು 'ಇಲ್ಲಿಯೇ ಸುಸಾಂತ ವಾಗದೆ-ನಾನು ಎಲ್ಲಿಗೂ ಹೋಗುವುದಿಲ್ಲ' ಎಂದು ಹೇಳಿದರೆ ಕೃಷ್ಣಾಜಿನದ ಸುರುಳಿಸುತ್ತಿ ಅವನ ಬೆನ್ನ ಮೇಲೆ ಬಾಸುಂಡೆ ಬರುವಂತೆ ನಾನೇ ಹೊಡೆದು ಅವನನ್ನು ಆಚೆಗಟ್ಟುತ್ತೇನೆ. ಗುರೂಪದೇಶವನ್ನೂ, ಅದ್ವೈತ ಮಕರಂದ ವನ್ನೂ ನೂರಾರು ಸಹಸ್ರಾರು ಜನಗಳಿಗೆ ಹಂಚಿ, ಅವರ ಜೀವನಕ್ಕೆ ಶಾಂತಿ,

ತೃಪ್ತಿ, ಶಾಂತಿಯನ್ನೊದಗಿಸುವ ಕಾರ್ಯಕ್ಕೆ ಸೀತಾರಾಮು ನಿಯೋಜಿತನಾಗಿದ್ದಾನೆ. ಇದು ಈಶ್ವರ ಸಂಕಲ್ಪ—ವಿಶಾಲಭಾರತ ಅವನ ಕಾರ್ಯಕ್ಷೇತ್ರವಾದರೆ, ನಿನ್ನ ಮನೆ ನಿನ್ನ ಕಾರ್ಯಕ್ಷೇತ್ರ-ಉಭಯರೂ ಕರ್ತವ್ಯ ಪರಾಙ್ಮುಖರಾಗಲು ಸಾಧ್ಯವಿಲ್ಲ."

ಚಂದ್ರಶೇಖರನ ಭ್ರಾಂತಿಯಳಿಯಿತು. ಮನಸ್ಸನ್ನು ವ್ಯಗ್ರಗೊಳಿಸಿದ್ದ ಹಲವಾರು ಚಿಂತೆಗಳು ದೂರವಾದವು. ಭಟ್ಟರ ಸಾನ್ನಿಧ್ಯ, ಉಪದೇಶದಿಂದ ಅವನ ಚಿತ್ತಕ್ಕೆ ಸುಭಗ ಶಾಂತಿ ಲಭಿಸಿತು. ಭಟ್ಟರ ಎರಡು ಪಾದಗಳನ್ನೂ ಹಿಡಿದು ನಮಸ್ಕರಿಸಿ

"ಶಿಷ್ಯನನ್ನು ಆಶೀರ್ವದಿಸಿ" ಎಂದು ಬೇಡಿದ.

"ತಾಯಿಯ ಅನುಗ್ರಹವಾಗಲಿ-ಇದೇ ನನ್ನ ಆಶೀರ್ವಾದ" ಎಂದರು.

ಈ ಕಾದಂಬರಿಯ ಉತ್ತರ ಭಾಗ

**ಅ ನು ಗ್ರ ಹ**

ಬೆಲೆ: ರೂ. 1-8-0